ಹತ್ತನೇ ವರ್ಷದಲ್ಲಿ

ಸಂವಾದ

ನವಂಬರ್ ೨೦೧೧ ರೂ. ೨೦

ದಕ್ಕಲಿಗರಿಗೂ
ಸ್ವಾತಂತ್ರ್ಯ ಬಂತು!

ಹೊಸ ಸಾಹಿತ್ಯ
ಚಳವಳಿ ಬೇಕೆ?

ಅಮೆರಿಕಾದಲ್ಲಿ ಸಿಡಿದೆದ್ದ ಬಂಡಾಯ:

ಸಂಪತ್ತಿಗೆ ಸವಾಲ್!

ಸಂವಾದ
ಮಾಸ ಪತ್ರಿಕೆ

ಸಂಪುಟ ೧೦ ಸಂಚಿಕೆ ೧
ನವಂಬರ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಡಾ|| ಕೆ. ಪುಟ್ಟಸ್ವಾಮಿ
ಡಾ|| ಡಿ. ಡೊಮಿನಿಕ್
ಡಾ|| ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080-23480278,
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  - ○ ಸನತ್‌ಕುಮಾರ್ ಬೆಳಗಲಿ ೦೬
  - ○ ಡಾ. ಎನ್ ಜಗದೀಶ್ ಕೊಪ್ಪ ೦೭
  - ○ ವಿ. ಆರ್. ಮೌರ್ಯ ೦೮
- ❑ ಮತ್ತೆ ಬಿಪಿಎಲ್ ಸರ್ವೆ!
  - ○ ಶಾರದಾ ಗೋಪಾಲ ೧೦
- ❑ ಅಮೆರಿಕಾ ನಡೆಸಿದ ಯುದ್ಧಗಳು ನ್ಯಾಯಸಮ್ಮತವೆ?
  - ○ ಸುರೇಶ್ ಭಟ್ ಬಾಕ್ರಬೈಲು ೧೩
- ❑ ಅಮೆರಿಕಾದಲ್ಲಿ ಸಿಡಿದೆದ್ದ ಬಂಡಾಯ: ಸಂಪತ್ತಿಗೆ ಸವಾಲ್!
  - ○ ಹರ್ಷಕುಮಾರ್ ಕುಗ್ವೆ ೧೪
- ❑ ದಕ್ಕಲಿಗರಿಗೂ ಸ್ವಾತಂತ್ರ್ಯ ಬಂತು!
  - ○ ಸುಗತ ಶ್ರೀನಿವಾಸರಾಜು
    ಅನು: ವಡ್ಡಗೆರೆ ನಾಗರಾಜಯ್ಯ ೧೮





- ❑ ಕೋಮುವಾದಿ ಹಿಂಸೆಯನ್ನು ತಡೆಗಟ್ಟುವ ಕಾಯಿದೆ ಬೇಕು-ತಿದ್ದುಪಡಿಗಳೂ ಬೇಕು!
  - ○ ಶಿವಸುಂದರ್ ೨೦
- ❑ ಹೊಸ ಸಾಹಿತ್ಯ ಚಳವಳಿ ಬೇಕೆ?
  - ○ ಎಸ್. ಶಿವಾನಂದ ೨೪
- ❑ ನವ ಉದಾರವಾದಕ್ಕೆ ಮೋದಿಗಳು ಬೇಕಾಗಿದ್ದಾರೆ
  - ○ ನಾ ದಿವಾಕರ್ ೩೦
- ❑ ಈ ಹೊತ್ತಿನ ಕನ್ನಡ ಸಾಹಿತ್ಯ: ಸೃಜನಶೀಲತೆಯ ಬಿಕ್ಕಟ್ಟುಗಳು
  - ○ ಮೇಟಿ ಮಲ್ಲಿಕಾರ್ಜುನ ೩೪
- ❑ ರಮಾಬಾಯಿ: ದಲಿತರ ಸಾಂಸ್ಕೃತಿಕ ಅಸ್ಮಿತೆ
  - ○ ಡಾ. ಅಪ್ಪಗೆರೆ ಸೋಮಶೇಖರ್ ೩೬
- ❑ ನೋಯುವ ಹಲ್ಲಿಗೆ ಹೊರಳುವ ನಾಲಿಗೆ-೧
  - ○ ಡಾ|| ಎಚ್.ಎಸ್ ಅನುಪಮಾ ೩೮
- ❑ ಹಾಗೆ ನೋಡಿದರೆ -೧೧
  - ○ ಡಾ. ಬಂಜಗೆರೆ ಜಯಪ್ರಕಾಶ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
- ❑ ಮುಲ್ಲಾ ನಸ್ರುದ್ದೀನ್ ಕಥೆಗಳು
  - ○ ಸಂಗ್ರಹ-ಅನು: ಡಾ. ಜೆ ಬಾಲಕೃಷ್ಣ ೫೦
- ಕವನ: ಮಹಾಕರುಣೆ ೫೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಕಳಂಕಿತರ ಜನಚೇತನ ಯಾತ್ರೆಗೆ ನೈತಿಕತೆಯಿದೆಯೇ?

ಪ್ರಿಯ ಸಂಪಾದಕರೇ,

ಅದ್ವಾನಿಯವರ ರಥಯಾತ್ರೆ ದೇಶಾದ್ಯಂತ ಮತ್ತೆ ಹೊರಟಿದೆ. ಭಾರತೀಯರಿಗೆ ಮುಂದೆ ಅದೇನು ಕೇಡು ಕಾದಿದೆಯೋ ಎಂಬ ಆತಂಕ ತಳಮಳ ನಮ್ಮನ್ನು ಕಾಡುತ್ತಿದೆ. ಸಂಘಪರಿವಾರಿಗಳು ಈ ತರಹದ ಯಾತ್ರೆಗಳನ್ನು ಹಿಂದೆ ನಡೆಸಿದಾಗಲೆಲ್ಲಾ ಒಂದಲ್ಲಾ ಒಂದು ಅನಾಹುತಕಾರಿ ಘಟನೆಗಳು ಜರುಗಿವೆ. ಆ ಸಂದರ್ಭಗಳಲ್ಲಿ ಜನರ ಮಾರಣಹೋಮ ಜರುಗಿದೆ. ತಮ್ಮ ಗುರಿ ಸಾಧನೆಗೆ ವಿಭಿನ್ನ ಧರ್ಮಿಯರ ನಡುವೆ ವೈಷಮ್ಯ ಬಿತ್ತಿ, ಪರಸ್ಪರ ಹೊಂದಿಕೊಂಡು ಹೋಗುವ ಜನಸಾಮಾನ್ಯರ ಮನೋಧರ್ಮಕ್ಕೆ ಕೊಳ್ಳಿ ಇಟ್ಟದ್ದನ್ನು ಮತ್ತು ಅದು ಇಂದಿಗೂ ಹೊಗೆಯಾಡುತ್ತಲೇ ಇರುವಂತೆ ಕುತಂತ್ರಗಳನ್ನು ಹೆಣೆಯುತ್ತ ಬರುತ್ತಿರುವುದನ್ನು ನಾವು ಮರೆಯಲು ಸಾಧ್ಯವೇ?

ಕೇಂದ್ರದ ಚುಕ್ಕಾಣಿ ಹಿಡಿದಿರುವ ಯುಪಿಎ ಮಿತ್ರರು ನಡೆಸಿರುವ ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಮೂಡಿಸಲು ಜನಚೇತನ ಯಾತ್ರೆ ಕೈಗೊಂಡಿರುವುದಾಗಿ ಹೇಳಿಕೆ ನೀಡುತ್ತಿರುವ ಲಾಲ್‌ಕೃಷ್ಣರು ಕರ್ನಾಟಕದ ಬಿಜೆಪಿಯವರ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ. ಯಡಿಯೂರಪ್ಪನವರ ಬಂಧನದಿಂದ ಪಕ್ಷಕ್ಕೆ ಹಾನಿಯಾಗಿದೆ ಎನ್ನುವ ಅವರು ಯಾವ ಮುಖ ಹೊತ್ತು ಈ ರಾಜ್ಯದಲ್ಲಿ ಯಾತ್ರೆ ಮಾಡುತ್ತಾರೆ.

ಅದ್ವಾನಿ ಅನಿವಾರ್ಯವಾಗಿ ರಾಜ್ಯದಲ್ಲಿನ ಬೆಳವಣಿಗೆಗಳು ತಮಗೆ ಹಾಗೂ ಪಕ್ಷಕೆ ಮುಜುಗರ ತಂದಿದೆ ಎಂದಿದ್ದಾರಾದರೂ ಬಿಜೆಪಿ ವರಿಷ್ಟರು ಈ ಅಪಮಾನದಿಂದ ಹೇಗೆ ತಲೆ ಎತ್ತಿಕೊಂಡು ಓಡಾಡುತ್ತಾರೆ. ಅಲ್ಲದೆ ಜನರಿಗೆ ಏನು ಉತ್ತರ ಕೊಡುತ್ತಾರೆ. ಸಂಸತ್ತಿನಲ್ಲಿ ದೇಶದ ಸಮಸ್ಯೆಗಳನ್ನು ಎತ್ತುವಲ್ಲಿ ವಿರೋಧ ಪಕ್ಷವಾದ ಇದರ ಧ್ವನಿ ಉಡುಗಿದಂತಾಗಿಲ್ಲವೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗುವುದಿಲ್ಲವೆ.

ಪತ್ರಾಗಾರ

ದಕ್ಷಿಣ ಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ನಡೆಸಿರುವ ಅಕ್ರಮಗಳಲ್ಲಿ ರಾಷ್ಟ್ರ ನಾಯಕರ ಪಾತ್ರವೂ ಇದೆ. ಸಂವಿಧಾನದ ಮೂಲ ತತ್ವಗಳಾದ ಜಾತ್ಯತೀತ ಹಾಗೂ ಧರ್ಮಾತೀತ ಮೌಲ್ಯಗಳನ್ನು ಗಾಳಿಗೆ ತೂರಿ ಅರ್ಹರನ್ನು ಕಡೆಗಣಿಸಿ ಸ್ವಜನರಿಗೆ ಉನ್ನತ ಹುದ್ದೆಗಳ ನೀಡಿಕೆ, ಬಂಧುಗಳಿಗೆ ನಿವೇಶನಗಳ ಹಂಚಿಕೆ, ಭೂ ಹಗರಣ, ಮಠಮಾನ್ಯಗಳಿಗೆ ಕೋಟಿಗಟ್ಟಲೆ ಹಣ ಹಂಚಿಕೆ, ಅಲ್ಪಸಂಖ್ಯಾತರ ಧರ್ಮಕೇಂದ್ರಗಳ ಮೇಲಿನ ದಾಳಿ, ಆಪರೇಷನ್ ಕಮಲ, ಉಪಚುನಾವಣೆಗಳಲ್ಲಿ ವಾಮಮಾರ್ಗದ ಜಯ. ಸಾವಿರಾರು ಕೋಟಿ ಲೂಟಿ ಇವಾವುವೂ ಬಿಜೆಪಿ ವರಿಷ್ಠರಿಗೆ ಗೊತ್ತಿಲ್ಲದೆ ನಡೆದವೇನಲ್ಲ. ರಾಷ್ಟ್ರ ನಾಯಕರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗದ್ದಕ್ಕೆ ತಮಗೂ ಪಾಲು ಸಂದಿರುವುದು ಕಾರಣ ಎಂಬುದು ಸುಳ್ಳೇ? ಈ ಹಿನ್ನಲೆಯಲ್ಲೆ ಅಲ್ಲವೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಹೈಕಮಾಂಡ್‌ಗೆ ಸೆಡ್ಡು ಹೊಡೆದು ತಮ್ಮ ತಾಳಕ್ಕೆ ತಕ್ಕಂತೆ ಕುಣಿಸಿದ್ದು.

ಇಡೀ ಭಾರತದಲ್ಲಿ ಪಕ್ಷ ಮುಜುಗರ ಪಡುವ ಸ್ಥಿತಿ ಉಂಟಾಗಿದ್ದರೂ ಉಪಚುನಾವಣೆಗಳ ಗೆಲುವನ್ನು ಮಾನದಂಡವಾಗಿಟ್ಟುಕೊಂಡು ಭ್ರಷ್ಟಾಚಾರವನ್ನು ಸಮರ್ಥಿಸಿಕೊಂಡದ್ದು ಹಾಗೂ ರಾಜ್ಯ ಸರ್ಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಎಲ್ಲವನ್ನು ಸಹಿಸಿಕೊಂಡದ್ದು ಜನತಂತ್ರ ವ್ಯವಸ್ಥೆಯ ಬಗೆಗಿನ ಅಗೌರವವನ್ನು, ಅಸಡ್ಡೆಯನ್ನು ತೋರಿಸುತ್ತದೆ. ಮಾಜಿ ಮುಖ್ಯಮಂತ್ರಿ ಸೇರಿದಂತೆ ಜೈಲು ಪಾಲಾದ ನಾಯಕರನ್ನು ಪ್ರಾಥಮಿಕ ಸದಸ್ಯತ್ವದಿಂದ ಕಿತ್ತುಹಾಕಲಾಗದ ದಯನೀಯ ಸ್ಥಿತಿಯಲ್ಲಿರುವುದು ಬಿಜೆಪಿಯ ದುರಂತ. ಅದು ನೈತಿಕವಾಗಿ ಆಳುವ ಹಕ್ಕನ್ನು ಕಳೆದುಕೊಂಡಿದ್ದರೂ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಿರುವುದು ಅದರ ಸೋಗಲಾಡಿತನವನ್ನು ಬಯಲುಗೊಳಿಸಿದೆ.

ರಾಜ್ಯ ಸರ್ಕಾರದ ಈ ಎಲ್ಲಾ ಬೆಳವಣಿಗೆಗಳಿಂದ ಕೇಂದ್ರದ ಯುಪಿಎ ಸರ್ಕಾರದ ಹಗರಣಗಳನ್ನು ಪ್ರಶ್ನಿಸುವ ನೈತಿಕತೆಯನ್ನು ಕಳೆದುಕೊಂಡಿದೆ. ಆದರೂ ಅದ್ವಾನಿಯವರಿಗೆ ಕೇಂದ್ರ ಸರ್ಕಾರದ ಹಗರಣಗಳನ್ನು ಮುಂದಿಟ್ಟುಕೊಂಡು ಯಾತ್ರೆ ಮಾಡುವ ಉದ್ದೇಶ ಜನಜಾಗೃತಿಯಲ್ಲ. ಬದಲಾಗಿ ಅವರು ಪ್ರಧಾನಮಂತ್ರಿ ಹುದ್ದೆಗೆ ತಾನೇ ಏಕಮೇವ ಅಭ್ಯರ್ಥಿ ಎಂದು ಪಕ್ಷದೊಳಗೆ ಬಿಂಬಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಯಾವಾಗ ಇವರು ಜಿನ್ನಾ ಸಮಾಧಿ ಮುಂದೆ ನಿಂತು ಆತನ ಗುಣಗಾನ ಮಾಡಿದರೊ ಆಗಲೇ ಆರ್‌ಎಸ್‌ಎಸ್ ಇವರ ವಿರುದ್ಧ ಕೆಂಡಕಾರಿತು. ಅವರನ್ನು ಪಕ್ಷ ಕಡೆಗಣಿಸಿತು. ನರೇಂದ್ರ ಮೋದಿ, ಅರುಣ್ ಜೇಟ್ಲಿ, ಸುಷ್ಮಾ, ಮುಂಚೂಣಿಗೆ ಬಂದರು. ಇಂದು ಅವರೆಲ್ಲರೂ ಪ್ರಧಾನಿ ಹುದ್ದೆ ಆಕಾಂಕ್ಷಿಗಳು. ಪ್ರಧಾನಿಯಾಗಲೇ ಬೇಕೆಂಬ ತಮ್ಮ ಬಹುದಿನಗಳ ಬಯಕೆ ಈಡೇರಬೇಕಾದರೆ ಅದ್ವಾನಿ ಹೋರಾಟ ಮಾಡಲೇಬೇಕಾಗಿದೆ. ಯುಪಿಎ ಸರ್ಕಾರದ ಹಗರಣಗಳೂ ಅದಕ್ಕೆ ಪೂರಕ ವಾತಾವರಣ ನಿರ್ಮಿಸಿದ್ದು ಅವರ ಹೋರಾಟದ ಹುಮ್ಮಸ್ಸನ್ನು ಇಮ್ಮಡಿಗೊಳಿಸಿದೆ.

ಆದರೆ, ಅಧಿಕಾರ ದರ್ಪದಿಂದ ಭ್ರಷ್ಟಾತಿಭ್ರಷ್ಟರಾದ ರಾಜ್ಯದ ಬಿಜೆಪಿ ನಾಯಕರ ಯಾತ್ರೆ ಪರಪ್ಪನ ಅಗ್ರಹಾರಕ್ಕೆ ಸಾಗಿರುವ ಈ ಹೊತ್ತಿನಲ್ಲಿ ಲಾಲ್‌ಕೃಷ್ಣರ ಜನಚೇತನ ಯಾತ್ರೆ ಅಧಿಕಾರ ಗ್ರಹಣಕ್ಕೋಸ್ಕರ ದಿಲ್ಲಿಯತ್ತ ಸಾಗಿದೆ. ಎಂಥ ವಿಪರ್ಯಾಸ!

ಬಿ. ಎನ್. ಅಚ್ಚಪ್ಪ
ಭುವನಹಳ್ಳಿ

ಆತ್ಮ ನಿರೀಕ್ಷಣೆಗಿದು ಸಕಾಲ

ಪ್ರಿಯ ಸಂಪಾದಕರೇ,

ಅಕ್ಟೋಬರ್ ತಿಂಗಳ 'ಸಂವಾದ'ದಲ್ಲಿ ಎನ್.ಕೆ. ಮೋಹನ್‌ರಾಂ ಅವರು ಬರೆದಿರುವ 'ಅಣ್ಣಾ ಹಜಾರೆ ಚಳವಳಿ-ದಲಿತರು ಮತ್ತು ಕಮ್ಯುನಿಸ್ಟರು ಕಲಿಯದ ಪಾಠ' ಎಂಬ ಲೇಖನ ವಿಚಾರಯೋಗ್ಯವಾಗಿದೆ. ಈ ನೆಲೆಯಲ್ಲಿ ದಲಿತರು ಮತ್ತು ಕಮ್ಯುನಿಸ್ಟರು ಆತ್ಮ ನಿರೀಕ್ಷಣೆ ಮಾಡಿಕೊಳ್ಳುವುದು ಒಳ್ಳೆಯದು.

ಸ್ವಾತಂತ್ರ್ಯ ಹೋರಾಟದಲ್ಲಿ ಜನತಾ ಚಳವಳಿ ಆರಂಭವಾದ ಮೇಲೆ ಮಧ್ಯಮ ವರ್ಗದ ಜನರೇ ವಿಶೇಷವಾಗಿ ಅದರಲ್ಲಿ ಪಾಲುಗೊಂಡದ್ದು. ಆಗಿನ ಮಧ್ಯಮ ವರ್ಗಕ್ಕೂ ಈಗಿನ ಮಧ್ಯಮವರ್ಗಕ್ಕೂ ಅಜಗಜಾಂತರ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀಮಂತರು ಬಡವರು ಕೂಡಿಕೊಂಡದ್ದು ಕಡಿಮೆ. ಬಡವರಿಗೆ ತಮ್ಮ ಜೀವನ ಸಾಗಿಸುವುದೇ ಒಂದು ಸಮಸ್ಯೆಯಾಗಿತ್ತು. ಆದ್ದರಿಂದ ಅವರು ಭಾಗವಹಿಸಲು ಆಗಲಿಲ್ಲ. ಶ್ರೀಮಂತರು ಎಲ್ಲ ಅನುಕೂಲವನ್ನೂ ಬ್ರಿಟಿಷ್ ರಾಜ್ಯದಲ್ಲಿ ಪಡೆಯುತ್ತಿದ್ದರಾದ್ದರಿಂದ ಅವರಿಗೆ ಸ್ವಾತಂತ್ರ್ಯ ಬೇಕೆಂದೇ ಅನಿಸಲಿಲ್ಲ. ಮಧ್ಯಮವರ್ಗದವರಿಗೆ ಕಡುಬಡತನವೂ ಇರಲಿಲ್ಲ. ಶ್ರೀಮಂತಿಕೆಯೂ ಇರಲಿಲ್ಲ. ಆದ್ದರಿಂದ ಅವರು ಹೋದರೊಂದು ಕಲ್ಲು, ಬಂದರೊಂದು ಹಣ್ಣು ಎಂದುಕೊಂಡು ಬಹು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕಿಳಿದರು. ಸ್ವಾತಂತ್ರ್ಯ ಸಿಕ್ಕಿತು.

ಇಂದು ಮೋಹನ್‌ರಾಂ ಹೇಳುವಂತೆ ಮಧ್ಯಮವರ್ಗ ಹಳೆಯ ಮಧ್ಯಮ ವರ್ಗವಾಗಿ ಉಳಿದಿಲ್ಲ. ಅದರ ಸ್ವರೂಪ ಬದಲಾಗಿದೆ. ಮಧ್ಯಮ ವರ್ಗದ ಈ ಜನಕ್ಕೆ ರಾಜಕೀಯವನ್ನು ರೂಢಮೂಲವಾಗಿ ಬದಲಿಸುವ ಆಕಾಂಕ್ಷೆ ಮೂಡಿದೆ.

ಮಧ್ಯಮ ವರ್ಗದ ಐಟಿ,ಬಿಟಿಯವರ ಜೊತೆಗೆ ಈ ಮಧ್ಯಮ ವರ್ಗವಾಗಿ ಪರಿವರ್ತನೆಯಾಗುತ್ತಿರುವ ದಲಿತರು, ಹರಿಜನರು, ಇತರ ಎಲ್ಲ ಮಧ್ಯಮ ವರ್ಗದವರೂ ಕೈಜೊಡಿಸಿ ಭ್ರಷ್ಟಾಚಾರ, ಜಾತೀಯತೆ, ದಬ್ಬಾಳಿಕೆ ಶೋಷಣೆಗಳಿಂದ ಮುಕ್ತವಾದ ಸರ್ವೋದಯ ಸಮಾಜ ಒಂದನ್ನೂ ಕಟ್ಟಲು ತೊಡಗಬೇಕು.

ಎಚ್. ಎಸ್. ದೊರೆಸ್ವಾಮಿ
ಬೆಂಗಳೂರು



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಹೊಸ ಪುಸ್ತಕ

ಅಣ್ಣಾ ಹಜಾರೆ
ಲೇ: ಗಿರೀಶ್ ಜಕಾಪುರೆ
ಬೆಲೆ: ರೂ. ೧೦೦/-

ಭ್ರಷ್ಟಾಚಾರ ವಿರೋಧಿ ಆಂದೋಲನದಿಂದ ಮನೆಮಾತಾಗಿರುವ ಕ್ರಾಂತಿದೂತ ಅಣ್ಣಾ ಹಜಾರೆರವರ ಲೋಕಸೇವೆ, ತ್ಯಾಗಗುಣ, ಪ್ರಮಾಣಿಕತೆ, ಕರ್ತವ್ಯಪ್ರಜ್ಞೆ, ಸತ್ಯನಿಷ್ಟತೆಗಳನ್ನು ಸೇರಿದಂತೆ ಅವರ ಜೀವನದಲ್ಲಿಯ ಬಹು ಮುಖ್ಯ ಘಟನಾವಳಿಗಳ ವಿವರಗಳನ್ನು ಈ ಕೃತಿ ಒಳಗೊಂಡಿದೆ. ಒಬ್ಬ ಸಾಮಾನ್ಯ ವ್ಯಕ್ತಿ ಈ ರೀತಿ ಬಲಾಢ್ಯ ವ್ಯವಸ್ಥೆಯ ವಿರುದ್ಧ ಹೋರಾಡಿ ಇಷ್ಟೊಂದು ಬದಲಾವಣೆ ತರಲು ಸಾಧ್ಯವೆ ಹಾಗೂ ಒಂದು ಕರೆಯಿಂದ ಇಡೀ ದೇಶದ ತರುಣರನ್ನು ಒಗ್ಗೂಡಿಸಬಹುದೇ ಎಂಬ ಅಚ್ಚರಿ ಇಲ್ಲಿ ದಾಖಲುಗೊಂಡ ಸಂಗತಿಗಳಿಂದ ತಿಳಿದುಬರುತ್ತದೆ.

ಪ್ರ: ಅಭಿನವ, ಬೆಂಗಳೂರು





ಕುರುಡಿಗೆ ಬೆಳಕು ನೆಪವಲ್ಲ
ಲೇ: ರವೀಂದ್ರನಾಥ ಠಾಕೂರ್
ಅನು: ಬಿ. ಮಹೇಶ್ ಹರವೆ
ಬೆಲೆ: ರೂ. ೭೫/-

ಜ್ಞಾನ ಮಾರ್ಗ, ಭಕ್ತಿ ಮಾರ್ಗ ಸಮ್ಮಿಳಿತ ದರ್ಶನವನ್ನು, ಆಧ್ಯಾತ್ಮಿಕ ನೆಲೆಗಟ್ಟನ್ನು ಕಬೀರನ ವಾಣಿಗಳು ನಮ್ಮೆದುರು ತೆರೆದಿಡುತ್ತವೆ. ನಿರ್ಗುಣವಾದಿ ನಾಥ ಪಂಥೀಯ ತಾತ್ವಿಕ ಚಿಂತನೆಗಳು ಅವರ ಅಲೋಚನೆಗಳ ಮಂಡನೆಗೆ ರೂಪಕಗಳಾಗಿ ಬಳಕೆಯಾಗಿರುವುದನ್ನು ನಿರೂಪಿಸುತ್ತವೆ. ಪ್ರೀತಿ, ಸೌಹಾರ್ದ, ಸಮಾನತೆಯ ಆಶಯಗಳನ್ನು ಹಾಗೂ ತತ್ವ ಜಿಜ್ಞಾಸೆಯ ಪ್ರಖರತೆಯನ್ನು ಸಾರುವ ಕಬೀರನ ವಾಣಿಗಳು ಕನ್ನಡಕ್ಕೆ ಬಂದಿರುವುದು ಕಡಿಮೆ. ಆತನ ಚಿಂತನೆಗಳನ್ನು ಕನ್ನಡಕ್ಕೆ ತಂದ ಲೇಖಕರ ಕಾರ್ಯ ಸ್ವಾಗತಾರ್ಹ.

ಪ್ರ: ಜೋಳಿಗೆ ಪ್ರಕಾಶನ ಚಾಮರಾಜನಗರ



ಈತರ್ಕೆ ಈತರ ಬೆಲೆ: ರೂ. ೧೫೦/-
ಲೇ: ಮಂಜುನಾಥ ಅದ್ದೆ

ನಮ್ಮ ನಾಡಿನ ಲೇಖಕರು ಮತ್ತು ಉನ್ನತ ಅಧಿಕಾರಿಗಳ ಪಾಖಂಡೀತನವನ್ನು, ವಾಂಛೆಗಳನ್ನು ಬಯಲಿಗೆಳೆಯುವಲ್ಲಿ ಇಲ್ಲಿನ ಲೇಖನಗಳು ಸಫಲವಾಗಿವೆ. ಅವರ ಬದುಕಿನ ರಸಮಯ ಸನ್ನಿವೇಶಗಳ ಬಗ್ಗೆ ಕಲೆಹಾಕಿರುವ ಮಾಹಿತಿ ಉದ್ಬುತವಾದದ್ದು. ಸಾಹಿತಿಗಳ ಬಗ್ಗೆಯಾಗಲೀ, ಅಧಿಕಾರಿಗಳ ಬಗ್ಗೆಯಾಗಲೀ ಬರೆಯುವಾಗ ಅವರ ಮಾನವೀಯ ಗುಣಗಳನ್ನೂ ಮರೆಮಾಚದೆ ದಾಖಲಿಸಿರುವುದು ಲೇಖಕರ ಆರೋಗ್ಯಕರ ಚಿಂತಾನಾಕ್ರಮಕ್ಕೆ ಸಾಕ್ಷಿಯಾಗಿದೆ. ಗೇಲಿಗೊಳಪಡಿಸಿಯೂ ಅವರ ಬಗ್ಗೆ ಅಗೌರವ ಮೂಡದಂತೆ ಎಚ್ಚರ ವಹಿಸಿರುವುದು ಸಕಾರಾತ್ಮಕ ಗುಣ. ಇಲ್ಲಿನ ಬರಹಗಳು ಈಗಾಗಲೇ 'ಅಗ್ನಿ' ಪತಿಕೆಯಲ್ಲಿ ಪ್ರಕಟಗೊಂಡು ಮೆಚ್ಚುಗೆಗಳಿಸಿವೆ.

ಪ್ರ:ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು

ಪರಕಾಯ
ಲೇ: ಡಾ.ರಾಮಲಿಂಗಪ್ಪ ಟಿ.ಬೇಗೂರು
ಬೆಲೆ: ರೂ. ೧೦೦/-

ಹಲವು ಸಂದರ್ಭಗಳಿಗಾಗಿ ಬರೆದಂಥ ಲೇಖನಗಳ ಸಂಕಲನದ ಈ ಕೃತಿಯಲ್ಲಿ ಸಹಜವಾಗಿಯೇ ಅವು ಸೃಷ್ಟಿಯಾದ ಸಾಂದರ್ಭಿಕತೆಯ ಆಗುಹೋಗುಗಳು ದಾಖಲುಗೊಂಡಿವೆ. ಇಂದಿನ ಭವಣೆಗಳನ್ನೆಲ್ಲಾ ಪ್ರಸ್ತಾಪಿಸಿ, ರೋಷ ಮತ್ತು ವಿಷಾದಗಳನ್ನು ತುಂಬಿಕೊಂಡು ನಾಳಿನ ಹಸನು ಬದುಕಿಗೆ ಹಂಬಲಿಸುವ ಆಶಯ ಹೊಂದಿವೆ. ದುತ್ತನೇ ಎದುರಾಗಿ ಬಾಧಿಸುವ ಪ್ರಶ್ನೆಗಳನ್ನು ವಿಶ್ಲೇಷಿಸಿರುವ ವಿಧಾನ ಕುತೂಹಲಕರವಾಗಿದೆ. ಸಂಸ್ಕೃತಿ ಮತ್ತು ಅದರ ಹಲವು ಮಗ್ಗುಲುಗಳ ಸಮರ್ಥ ಅವಲೋಕನವಿದೆ. ಕ್ರಿಯಾತ್ಮಕ ಮನಸ್ಸು ಶುಷ್ಕ ಬೌದ್ಧಿಕತೆಗೆ ಅಡಿಯಾಳಗಬಾರದೆಂಬ ಇರಾದೆಯಿದೆ. ಸುತ್ತಣ ಸಾಮಾಜ ಮತ್ತು ಸಾಹಿತ್ಯವನ್ನು ಅನುಸಂಧಾನಗೊಳಿಸುವಲ್ಲಿ ಲೇಖಕರ ಪ್ರತಿಭೆ ಎದ್ದುಕಾಣುತ್ತದೆ.

ಪ್ರ: ನವಕರ್ನಾಟಕ ಪ್ರಕಾಶನ ಬೆಂಗಳೂರು



ಸೂರ್ಯಗೀತ
ಲೇ: ಮೋಹನ ನಾಗಮ್ಮನವರ
ಬೆಲೆ: ರೂ. ೧೭೫/-

ಭಾವತೀವ್ರತೆ ಮತ್ತು ಭಾವಸಂಯಮದ ಅನುಸಂಧಾನ ಹಾಗೂ ಅವೆಲ್ಲವುಗಳ ತೀಕ್ಷ್ಣ ಪ್ರತಿಫಲನದ ಇಲ್ಲಿನ ಕವಿತೆಗಳು ಹೊಸ ನೋಟಕ್ಕೆ ಒತ್ತಾಸೆಯಗಿವೆ. ಈಗಾಗಲೇ ಪ್ರಕಟಗೊಂಡ 'ಮಹಾನಿರ್ಗಮನ' 'ಅಗ್ರಹಾರದ ಒಂದು ಸಂಜೆ' 'ವಿಧಾನಸೌಧ' ಕೃತಿಗಳು ಒಳಗೊಂಡಂತೆ ಲೇಖಕರ ಈವರೆಗಿನ ಅಪ್ರಕಟಿತ ಕವಿತೆಗಳ ಸಂಗ್ರಹದ ಈ ಕೃತಿಯಲ್ಲಿ ಸಾಮಾಜಿಕ ಕಾಳಜಿ, ಪ್ರಗತಿಪರ ಚಿಂತನೆ, ಮಾನವೀಯ ತುಡಿತಗಳು ಹಾಸುಹೊಕ್ಕಾಗಿವೆ. ಸಮಕಾಲೀನ ಸಮಾಜಕ್ಕೆ ಸ್ಪಂದಿಸುವ ಅನನ್ಯ ಸಾಧ್ಯತೆಗಳಿಗೆ ಪ್ರಾತಿನಿಧಿಕವಾಗಿದ್ದು ವಿಷಾದ ಮತ್ತು ವಿಪ್ಲವಗಳನ್ನು ಒಟ್ಟೊಟ್ಟಿಗೆ ಕಟ್ಟಿಕೊಡುವಲ್ಲಿ ಸಾಫಲ್ಯತೆ ಪಡೆದಿವೆ.



ನಿನಗೆ ಕೇಡಿಲ್ಲವಾಗಿ
ಲೇ: ವಿಶ್ವಾರಾಧ್ಯ ಸತ್ಯಂಪೇಟೆ
ಬೆಲೆ: ರೂ. ೫೦/-

ಈ ಕೃತಿಯಲ್ಲಿನ ಬರಹಗಳು ಪ್ರಖರ ವೈಚಾರಿಕ ನಿಲುವನ್ನು ಹೊಂದಿದ್ದು ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಜಾಗೃತರಾಗಬೇಕೆಂಬ ಕಳಕಳಿಯಿವೆ. ಜನಪರವಾಗಿ ಹೋರಾಡಿದವರ ವ್ಯಕ್ತಿತ್ವಗಳನ್ನು ಕಟ್ಟಿಕೊಟ್ಟಿರುವುದರ ಜೊತೆಗೆ ಧಾರ್ಮಿಕ ಕ್ಷೇತ್ರದ ಶೋಷಣೆಯನ್ನೂ ಅಜ್ಞಾನ, ಅಂಧಶ್ರದ್ಧೆ, ಮೂಢನಂಬಿಕೆ ಆಷಾಢಭೂತಿತನಗಳನ್ನು ಬಿತ್ತಿ ಜನರನ್ನು ಶೋಷಿಸುತ್ತಿರುವ ಮಠಾಧಿಪತಿಗಳ ಕ್ರೂರತನವನ್ನೂ ನಿರ್ಭಿಡೆಯಿಂದ ಬೆತ್ತಲುಗೊಳಿಸಿವೆ. ಇಲ್ಲಿನ ಸಾತ್ವಿಕ ಸಿಟ್ಟು ಮಾತ್ಸರ್ಯದ್ದಲ್ಲ. ಬೆಳಕನ್ನು ಅರಸುವಂತದ್ದು.

ಪ್ರ: ಅಗ್ನಿ ಅಂಕುರ ಪತ್ರಿಕೆ ಪ್ರಕಾಶನ,

ಸಂಪಾದಕೀಯ

ಅಂತರಂಗ

ಹತ್ತನೇ ವರ್ಷದ ಹೊಸ್ತಿಲಲ್ಲಿ...

ಬಹಳ ದಿನಗಳ ನಂತರ ಮತ್ತೆ 'ಅಂತರಂಗ'ವನ್ನು ಬರೆಯುತ್ತಿದ್ದೇನೆ. ಬರೆಯಲಾಗದಕ್ಕೆ ಕಾರಣಗಳು ಹಲವು. ಬರೆಯಲೇಬೇಕೆಂಬ ತುಡಿತ–ಒತ್ತಾಸೆ ಮತ್ತು 'ಸಂವಾದ' ಹತ್ತನೇ ವರ್ಷಕ್ಕೆ ಕಾಲಿಟ್ಟ ಸಂದರ್ಭ ಈಗ ಮತ್ತೆ 'ಅಂತರಂಗ'ಕ್ಕೆ ನನ್ನನ್ನು ಎಳೆದು ತಂದಿದೆ.

'ಸಂವಾದ'ದಂಥ ಪತ್ರಿಕೆ ಹತ್ತನೇ ವರ್ಷಕ್ಕೆ ಕಾಲಿಟ್ಟದ್ದು ಸಣ್ಣ ಸಾಧನೆ ಏನಲ್ಲ. ಕನ್ನಡದಲ್ಲಿ ಈಗ ವಿರಳವಾಗಿರುವ ವೈಚಾರಿಕ ಹಾಗೂ ಸಂಶೋಧನಾತ್ಮಕ ಬರಹಗಳ ಕೊರತೆಯನ್ನು 'ಸಂವಾದ' ತನ್ನ ಇತಿಮಿತಿಯಲ್ಲಿ ಸಮರ್ಥವಾಗಿ ನಿರ್ವಹಿಸುತ್ತಿರುವ ಸಮಾಧಾನ ನಮಗೆ ಇದೆ. ಪುಟ ತುಂಬಿಸಲು ಯಾವುದೇ ಲೇಖನ ಹಾಕುವ ಕೆಲಸಕ್ಕೆ 'ಸಂವಾದ' ಈವರೆಗೂ ಕೈ ಹಾಕಿಲ್ಲ. ಪ್ರತಿ ಲೇಖನದ ಆಯ್ಕೆಯಲ್ಲಿ 'ಸಂವಾದ' ತನ್ನ ವೈಚಾರಿಕ ಕಾಳಜಿಯನ್ನು ಬಿಟ್ಟುಕೊಟ್ಟಿಲ್ಲ.

ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ನೇತೃತ್ವದ ಚಳವಳಿ ಕೂಡ 'ಸಂವಾದ'ದಲ್ಲಿ ವ್ಯಾಪಕ ಚರ್ಚೆಗೆ ಒಳಗಾಗಿದೆ. ಹಜಾರೆ ಅವರ ಸೀಮಿತ ಅರ್ಥವ್ಯಾಪ್ತಿಯ ಭ್ರಷ್ಟಾಚಾರ ವಿರೋಧಿ ಹೋರಾಟದ ಬಗೆಗೆ 'ಸಂವಾದ'ಕ್ಕೆ ಈಗಲೂ ಹಲವು ಅನುಮಾನಗಳಿವೆ. ಭ್ರಷ್ಟಾಚಾರ ಕೇವಲ ಹಣಕಾಸಿನ ಅವ್ಯವಹಾರವಲ್ಲ. ಅದನ್ನೂ ಮೀರಿದ ಸೈದ್ಧಾಂತಿಕ ಹಾಗೂ ನೈತಿಕ ಭ್ರಷ್ಟಾಚಾರ ಎಷ್ಟು ಅಪಾಯಕಾರಿ ಎನ್ನುವುದು ಬಹಳ ಜನರಿಗೆ ಅರ್ಥವಾಗುವುದಿಲ್ಲ. ನೆರೆಯ ರಾಷ್ಟ್ರ ಪಾಕಿಸ್ತಾನದ ವಿರುದ್ಧ 'ಯುದ್ಧ'ಕ್ಕೆ ಹಾತೊರೆಯುತ್ತಿರುವ ವ್ಯಕ್ತಿಯೊಬ್ಬನಿಂದ ದೇಶದ ಬಹುಮುಖೀ ಸಂಸ್ಕೃತಿಯ ವಿರುದ್ಧ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಸಾಧ್ಯವೇ? ತನ್ನ ಊರಿನ ಅಸ್ಪೃಶ್ಯತೆಯನ್ನು ಸಾಮಾಜಿಕ ಸಾಮರಸ್ಯದ ಹೆಸರಿನಲ್ಲಿ ಪೋಷಿಸುತ್ತಿರುವ ವ್ಯಕ್ತಿ ದೇಶಕ್ಕೆ ಹೇಗೆ ಆದರ್ಶವಾಗಲು ಸಾಧ್ಯ?

'ಸಂವಾದ' ಮುಕ್ತ ಚರ್ಚೆಗೆ ತನ್ನನ್ನು ಸಂಪೂರ್ಣವಾಗಿ ಒಡ್ಡಿಕೊಂಡಿದೆ. ಹಲವು ಸಂದರ್ಭಗಳಲ್ಲಿ ಪತ್ರಿಕೆಯ ಒಲವು–ನಿಲುವುಗಳನ್ನು ವಿರೋಧಿಸುವಂಥ ಲೇಖನಗಳೂ ಪ್ರಕಟವಾಗಿವೆ. ಇವುಗಳಲ್ಲಿ ಬಹಳ ಮುಖ್ಯವಾದದ್ದು ಚಂದ್ರಬಾನ್ ಪ್ರಸಾದ್‌ರ 'ದಲಿತ್ ಡೈರಿ' ಅಂಕಣ. 'ದಲಿತ್ ಡೈರಿ' ಒಂದು ನಿರ್ಭಿಡೆಯ ದಲಿತಪರ ಅಂಕಣ. ಅದರಲ್ಲಿ ವ್ಯಕ್ತವಾಗುವ ಹಲವು ಅಭಿಪ್ರಾಯಗಳು, ಸಿದ್ಧ ಮಾದರಿಯ ಆಲೋಚನಾ ಕ್ರಮವನ್ನು ಬುಡಮೇಲು ಮಾಡಿವೆ. ನನಗೂ ಹಲವು ಬಾರಿ 'ದಲಿತ್ ಡೈರಿ'ಯ ಅಭಿಪ್ರಾಯಗಳನ್ನು ಅರಗಿಸಿಕೊಳ್ಳಲು ಆಗಿಲ್ಲ. ಆಶ್ಚರ್ಯವೆಂದರೆ, ದಲಿತ್ ಡೈರಿಯ ಅಭಿಪ್ರಾಯಗಳನ್ನು ಆಕ್ಷೇಪಿಸುವ ನನ್ನ ಹಲವು ಸಮಾಜವಾದಿ–ಮಾರ್ಕ್ಸ್‌ವಾದಿ ಗೆಳೆಯರಿಗೆ ಪ್ರತಿಕ್ರಿಯೆಗಳನ್ನು ಬರಹ ರೂಪದಲ್ಲಿ ಕೊಡಿ ಎಂದು ಕೇಳಿದಾಗ ಅವರೆಲ್ಲಾ ಹಿಂಜರಿದಿದ್ದಾರೆ. ಯಾಕೆಂದು ಪ್ರಶ್ನಿಸಿದಾಗ ಅವರೆಲ್ಲರ ಉತ್ತರ ಒಂದೇ "ದಲಿತ್ ಡೈರಿ ಅಭಿಪ್ರಾಯವನ್ನು ಒಪ್ಪುವುದು ಕಷ್ಟ, ಹಾಗಂತ ಸಾರಸಗಟಾಗಿ ನಿರಾಕರಿಸುವುದೂ ಕಷ್ಟ!" ಬಹುಷಃ 'ದಲಿತ್ ಡೈರಿ'ಯ ಹೆಗ್ಗಳಿಕೆ ಇದೇ ಇರಬಹುದು.

'ಸಂವಾದ'ದ ಮತ್ತೊಂದು ಅತ್ಯಂತ ಜನಪ್ರಿಯ ಅಂಕಣ ಸಿ.ಎಚ್ ರಾಜಶೇಖರ್ ಅವರ 'ಬುದ್ಧಾಯಣ'. ಕಳೆದ ಹಲವಾರು ವರ್ಷಗಳಿಂದ ಬುದ್ಧಾಯಣ 'ಸಂವಾದ' ಓದುಗರ ಕಾತರದ ಅಂಕಣವಾಗಿತ್ತು. ಬುದ್ಧನ ಜಾತಕ ಕಥೆಗಳಲ್ಲಿ ಬರುವ ಹಲವು ಪ್ರಸಂಗಗಳು ಓದುಗರಿಗೆ ತುಂಬ ಇಷ್ಟವಾಗಿದ್ದವು. ಈ ಸಂಚಿಕೆಯಿಂದ 'ಬುದ್ಧಾಯಣ'ಕ್ಕೆ ಬದಲಾಗಿ ಮುಲ್ಲಾ ನಸ್ರುದ್ದೀನ್‌ನ ಕಥೆಗಳನ್ನು ಪ್ರಕಟಿಸುತ್ತಿದ್ದೇವೆ. ಇದು ಕೇವಲ ಬದಲಾವಣೆಗಾಗಿ ಮಾತ್ರ. ಯಾವ ಕಾರಣಕ್ಕೂ 'ಬುದ್ಧಾಯಣ'ಕ್ಕೆ ಇವು ಪರ್ಯಾಯವಲ್ಲ. ಆದರೆ ನಸ್ರುದ್ದೀನ್‌ನ ಕಥೆಗಳು ಕೂಡ ತಮ್ಮ ಚಿಕಿತ್ಸಕ ಒಳ ನೋಟಗಳಿಂದಾಗಿ 'ಸಂವಾದ' ಓದುಗರಿಗೆ ಹಿಡಿಸಬಲ್ಲವು ಎಂಬ ನಂಬಿಕೆ ನಮ್ಮದು.

ಪ್ರೊ. ಮುಜಾಫ್ಫರ್ ಅಸ್ಸಾದಿ ಅವರ 'ಕಾಲಮಾನ', ಡಾ॥ ಬಂಜಗೆರೆ ಜಯಪ್ರಕಾಶ್ ಅವರ 'ಹಾಗೆ ನೋಡಿದರೆ' ಅತ್ಯಂತ ವೈಚಾರಿಕ ಹಾಗೂ ಸಂಶೋಧಾತ್ಮಕ ಬರಹಗಳು. 'ಸಂವಾದ'ದ ಓದುಗರು ಸದಾ ಈ ಅಂಕಣಗಳಿಗಾಗಿ ಕಾದಿರುತ್ತಾರೆ. ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗಂತೂ ಈ ಅಂಕಣಗಳು ಆಕರ ಲೇಖನಗಳಾಗಿವೆ. ಒಂದೆರಡು ಸಂಚಿಕೆಗಳಲ್ಲಿ ಅಸ್ಸಾದಿ ಅವರ ಅಂಕಣ ಪ್ರಕಟವಾಗದೇ ಹೋದಾಗ ಹಲವಾರು ವಿದ್ಯಾರ್ಥಿಗಳು ತಪ್ಪಿಸದಂತೆ ನನ್ನಲ್ಲಿ ಗೋಗರೆದದ್ದೂ ಇದೆ.

'ಸಂವಾದ'ಕ್ಕೆ ಆರಂಭದಿಂದಲೂ ನಿರಂತರವಾಗಿ ಬರೆಯುತ್ತಿರುವ ಪ್ರೊ॥ ರಹಮತ್ ತರೀಕೆರೆ, ಡಿ.ಎಸ್ ನಾಗಭೂಷಣ, ಶಿವಸುಂದರ್, ನಾ. ದಿವಾಕರ್, ಡಾ. ಟಿ.ಆರ್. ಚಂದ್ರಶೇಖರ್, ಸುರೇಶ್ ಭಟ್, ಮೇಟಿ ಮಲ್ಲಿಕಾರ್ಜುನ ಮೊದಲಾದವರ ಕೊಡುಗೆ ಅನನ್ಯವಾದದ್ದು. ಇವರ ಲೇಖನಗಳಿಂದಾಗಿ 'ಸಂವಾದ'ದ ಘನತೆ ಹೆಚ್ಚಿದೆ. ಇತರ ಭಾಷೆಗಳಲ್ಲಿ ಬಂದ ಲೇಖನಗಳನ್ನು ನಿರಂತರವಾಗಿ ಅನುವಾದ ಮಾಡಿಕೊಡುತ್ತಿರುವ ಡಾ. ಡಿ. ಡೊಮಿನಿಕ್, ಎಂ.ಆರ್ ಸತ್ಯಪ್ರಕಾಶ್, ಎಸ್. ಮರಿಸ್ವಾಮಿ ಅವರುಗಳು 'ಸಂವಾದ'ವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿದ್ದಾರೆ. 'ಸಂಪಾದಕರೊಂದಿಗೆ ಸಂವಾದ', ಮತ್ತೊಂದು ಪ್ರಮುಖ ಅಂಕಣ. ಪ್ರಕಟಿತ ಲೇಖನಗಳಿಗೆ ಕೇವಲ ಪ್ರತಿಕ್ರಿಯೆ ರೂಪದ ನಾಲ್ಕು ಸಾಲು ಬರೆಯುವುದಕ್ಕಿಂತ ಅದನ್ನು ಒಂದು ಗಂಭೀರ ಚರ್ಚೆಯ ಮಟ್ಟಕ್ಕೆ ಕೊಂಡೊಯ್ಯುವುದು ಈ ಅಂಕಣದ ಉದ್ದೇಶ. ಎಷ್ಟೋ ಬಾರಿ ಪ್ರಚಲಿತ ವಿದ್ಯಮಾನಗಳಿಗೆ ದಿರ್ಘ ಲೇಖನವನ್ನೆ ಬರೆಯುವ ಬದಲಿಗೆ ಸಂಕ್ಷಿಪ್ತ ವಿಚಾರ ವಿಮರ್ಶೆಗೆ ಈ ಅಂಕಣ ಉಪಯುಕ್ತವಾಗಿದೆ. ಈ ಸಂದರ್ಭದಲ್ಲಿ 'ಸಂವಾದ' ಸಂಪಾದಕೀಯ ಬಳಗದ ಸಹಕಾರವನ್ನೂ ನೆನಯಲೇಬೇಕು. ಅದರಲ್ಲೂ ಡಾ. ಬಿ.ಯು. ಸುಮಾ ಪ್ರತಿ ಸಂಚಿಕೆಗೂ ಸ್ಪಂದಿಸಿ ಸಹಕರಿಸಿದ್ದಾರೆ.

'ಸಂವಾದ'ದ ಇಷ್ಟೆಲ್ಲಾ ಸಾಧನೆಗೆ ಬೆನ್ನೆಲುಬಾದವರು ಸ್ಫೂರ್ತಿಧಾಮದ ರೂವಾರಿ ಎಸ್. ಮರಿಸ್ವಾಮಿ. ಅವರು ಮನಸ್ಸು ಮಾಡದಿದ್ದರೆ 'ಸಂವಾದ' ಇಷ್ಟು ದಿನ ಉಳಿದು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ.

ಹತ್ತನೇ ವರ್ಷದ ಈ ಸಂದರ್ಭದಲ್ಲಿ 'ಸಂವಾದ' ವಿಶೇಷಾಂಕವೊಂದನ್ನು ಹೊರತರಲು ಸಿದ್ಧತೆ ನಡೆಸಿದೆ. ಕೆಲವು ಹೊಸ ಅಂಕಣಗಳನ್ನು ಆರಂಭಿಸುತ್ತಿದೆ. ವರ್ಷದಲ್ಲಿ ಕೆಲವಾದರೂ ಮಹತ್ವಪೂರ್ಣ ಚರ್ಚೆ, ಸಂವಾದ, ವಿಚಾರ ಸಂಕಿರಣಗಳ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಬಯಸಿದೆ. ಮತ್ತಷ್ಟು ಸುಂದರವಾಗಿ ಅರ್ಥಪೂರ್ಣವಾಗಿ ನಿಮ್ಮ ಕೈ ಸೇರುವ ಆಸೆ ಕೂಡ 'ಸಂವಾದ'ಕ್ಕಿದೆ.

'ಸಂವಾದ'ಕ್ಕೆ ನೆರವಿನ ಹಸ್ತ ಚಾಚಿದವರ ಸಂಖ್ಯೆ ಅಪಾರವಾಗಿದೆ. ಆರಂಭದಿಂದಲೂ ನಮ್ಮೊಂದಿಗಿರುವ ಎಲ್ಲರಿಗೂ 'ಸಂವಾದ' ಬಳಗ ಆಭಾರಿಯಾಗಿದೆ. ಎಂದಿನಂತೆ ಸದಾ ನಿಮ್ಮ ಸಲಹೆ ಸಹಕಾರಗಳನ್ನು 'ಸಂವಾದ' ಬಯಸುತ್ತದೆ.

○ ಇಂದೂಧರ ಹೊನ್ನಾಪುರ

ಹಾಡುಹಕ್ಕಿಗೆ ಬೇಕೆ ಬಿರುದು-ಸಮ್ಮಾನ?

ಸಂಪಾದಕರೊಡನೆ ಸಂವಾದ

ಸನತ್‌ಕುಮಾರ್ ಬೆಳಗಲಿ

> **ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಪದವಿ-ಪ್ರಶಸ್ತಿಗಳನ್ನು ಸ್ವೀಕರಿಸಬಾರದು. ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಹೋಗಬಾರದು ಎಂದು ತೀರ್ಮಾನಿಸಲಾಯಿತು. ಆದರೆ ನಂತರದ ದಿನಗಳಲ್ಲಿ ಆ ತೀರ್ಮಾನ ಅವರವರ ಅನುಕೂಲಕ್ಕೆ ತಕ್ಕಂತೆ ಸಡಿಲ ಗೊಂಡು ಸರ್ಕಾರಿ ಸಂಸ್ಥೆಗಳ ಹುದ್ದೆಗಳಿಗೆ ಪೈಪೋಟಿ ಆರಂಭವಾಯಿತು. ಆಗ ಜಾತ್ಯತೀತ ಪಕ್ಷಗಳ ಸರ್ಕಾರದಿಂದ ಪ್ರಶಸ್ತಿ ತೆಗೆದುಕೊಂಡರೆ ತಪ್ಪಿಲ್ಲ ಎಂಬ ಸಮರ್ಥನೆ ನೀಡಲಾಯಿತು. ಆದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದ ನಂತರವೂ ಈ ಚಾಳಿ ಮುಂದುವರೆದಿದೆ.**

ಪ್ರಿಯ ಸಂಪಾದಕರೇ,

ಎಸ್.ಎಲ್.ಭೈರಪ್ಪನವರಿಗೆ ಮರಣೋತ್ತರ ಜ್ಞಾನಪೀಠ ಪ್ರಶಸ್ತಿ ನೀಡಬಹುದು ಎಂದು ನಿಡುಮಾಮಿಡಿ ಸ್ವಾಮಿಗಳು ಆಡಿರುವ ಮಾತು ಆಸಕ್ತ ವಲಯಗಳಲ್ಲಿ ವಿವಾದದ ಅಲೆಯನ್ನು ಎಬ್ಬಿಸಿದೆ. ಇಂತಹ ಮಾತುಗಳಿಗಾಗಿ ಕಾಯುತ್ತಿದ್ದರೇನೋ ಎಂಬಂತೆ ಸಂಘ ಪರಿವಾರದ ವಟುಗಳು ಮಾಧ್ಯಮಗಳನ್ನು ಬಳಸಿಕೊಂಡು ಕೋಲಾಹಲ ಎಬ್ಬಿಸಲು ನೋಡಿದರು. ಸ್ವಾಮಿಗಳ ಭಾಷಣ ಪ್ರಕಟವಾಗುವ ಮುನ್ನವೇ ಸಾಹಿತಿಗಳನ್ನು ಸಂಪರ್ಕಿಸಿ, "ಮರಣೋತ್ತರ" ಎಂಬ ಒಂದೇ ಪದವನ್ನು ಹೇಳಿ ಪ್ರತಿಕ್ರಿಯೆಗಳನ್ನು ಪ್ರಕಟಿಸಿದರು.

ಹಿಂದೆ ಡಾ. ಯು.ಆರ್.ಅನಂತಮೂರ್ತಿ ಅವರು ಇದೇ ರೀತಿ ಭೈರಪ್ಪನವರ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡಿದಾಗ, ಇದೇ ರೀತಿ ಓದುಗರ ಪ್ರತಿಕ್ರಿಯೆಗಳನ್ನು ಸೃಷ್ಟಿಸಿ ಅನಂತಮೂರ್ತಿಯವರ ತೇಜೋವಧೆ ಮಾಡಿದ್ದರು. ಈ ಬಾರಿ ನಿಡುಮಾಮಿಡಿ ಸ್ವಾಮೀಜಿ ಇವರ ಕೈಗೆ ಸಿಲುಕಿದ್ದಾರೆ.

"ಆ ದಿನ ತಾವು ಮಾತನಾಡಿದ್ದು, ಮಾಧ್ಯಮಗಳಲ್ಲಿ ಸರಿಯಾಗಿ ವರದಿಯಾಗಿಲ್ಲ. ತಮ್ಮ ನಂತರ ಮಾತನಾಡಿದ ಚಂಪಾ ಅವರೇ ಈ ರಗಳೆಗೆ ಕಾರಣ" ಎಂದು ಸ್ವಾಮಿಗಳು ಸ್ಪಷ್ಟೀಕರಣ ನೀಡಿದ್ದಾರೆ. ಅದಕ್ಕೂ ಈ ವಟುಗಳು ಸುಮ್ಮನಾಗುತ್ತಿರಲಿಲ್ಲ. ಅಗ್ನಿ ಶ್ರೀಧರ್ ಸುದೀರ್ಘ ಲೇಖನ ಬರೆದು ಬೆಂಡೆತ್ತಿದ ನಂತರ ವಿವಾದದ ಸೃಷ್ಟಿಕರ್ತರು ತಣ್ಣಗಾಗಿ ಬಾಲ ಮುದುರಿಕೊಂಡು ಕುಳಿತಿದ್ದಾರೆ. ಆದರೂ ಜ್ಞಾನಪೀಠ ಪ್ರಶಸ್ತಿಯ ಸುತ್ತ ಚರ್ಚೆಗಳು ನಡೆಯುತ್ತಲೇ ಇವೆ. "ಆರು ಜನರು ಬ್ರಾಹ್ಮಣರು ಈಗಾಗಲೇ ಪಡೆದಿದ್ದಾರೆ. ಏಳನೆಯದ್ದು ಅವರಿಗೆ ಹೋಗಬೇಕೆ" ಎಂದು ನಿಡುಮಾಮಿಡಿ ಸ್ವಾಮೀಜಿ ಪ್ರಶ್ನಿಸಿದ್ದಾರೆ. ಬಂಡಾಯ ಸಾಹಿತಿ ಬರಗೂರು ಅವರು ತಮ್ಮದೇ ಶೈಲಿಯಲ್ಲಿ "ಭೈರಪ್ಪನವರ ಸಾಹಿತ್ಯಕ್ಕೆ ಜ್ಞಾನಪೀಠ ನೀಡಿದರೆ ತಮ್ಮ ವಿರೋಧವಿಲ್ಲ. ಅವರು ಪ್ರತಿಪಾದಿಸುವ ತತ್ವಗಳಿಗೆ ನೀಡುವುದಾದರೆ ತಮ್ಮ ವಿರೋಧವಿದೆ" ಎಂದಿದ್ದಾರೆ. ಆದರೆ ಭೈರಪ್ಪನವರ ಜನಾಂಗ ದ್ವೇಷಿ-ಸಿದ್ಧಾಂತಗಳೆಲ್ಲ ಅಭಿವ್ಯಕ್ತಿಗೊಂಡಿರುವುದು ಅವರ ಸಾಹಿತ್ಯ ಕೃತಿಗಳಲ್ಲಿಯೇ ಎಂಬುದನ್ನು ನಿರಾಕರಿಸಲಾಗದು. ಅವರ ಸಾಹಿತ್ಯಕ್ಕೆ ನೀಡಿದರೂ ಅವರ ವಿಚಾರಧಾರೆಗೆ ನೀಡಿದಂತೆ ಎಂದು ಪರಿಗಣಿಸಬೇಕಾಗುತ್ತದೆ.

ಆದರೆ ಒಂದು ಮೂಲಭೂತ ಪ್ರಶ್ನೆಯ ಬಗ್ಗೆ ತಮ್ಮನ್ನು ಪ್ರಗತಿಪರ ಎಂದು ಗುರುತಿಸಿಕೊಂಡಿರುವ ಮಹನೀಯರು ಯೋಚಿಸಿದಂತೆ ಕಾಣುವುದಿಲ್ಲ. ವ್ಯವಸ್ಥೆಯ ವಿಕೃತಿ ವಿರುದ್ಧ ಹೋರಾಡುತ್ತ ಬಂದವರು, ಅಂಥ ಹೋರಾಟಗಳಿಗೆ ಬೆಂಬಲ ನೀಡುತ್ತಿರುವವರು, ಶೋಷಕ ವರ್ಗಗಳ ವಿರುದ್ಧ ಲೇಖನಿ ಖಡ್ಗವಾಗಬೇಕು ಎಂದು ಕರೆ ನೀಡಿ ಹುರಿದುಂಬಿಸಿದವರು, ಪ್ರಭುತ್ವದ ಮುಲಾಜಿಗೆ ಒಳಗಾಗಬಾರದು ಎಂದು ಹೇಳುತ್ತಲೇ ಬಂದವರು, ಅದರಲ್ಲೂ ಕೋಮುವಾದದ ವಿರುದ್ಧ ನಿರಂತರ ಹೋರಾಡುತ್ತ ಬಂದ ಘಟಾನುಘಟಿಗಳು, ಜ್ಞಾನಪೀಠ ಪ್ರಶಸ್ತಿಗೆ ಇಷ್ಟೊಂದು ತಲೆ ಕೆಡಿಸಿಕೊಂಡು ಅದರ ಬಗ್ಗೆ ತವಡು ಕುಟ್ಟುತ್ತಿದ್ದಾರಲ್ಲ ಅದು ಎಷ್ಟು ಸರಿ? ಜನಪರವಾಗಿ ಬರೆಯುತ್ತ ಬಂದಿರುವವರಿಗೆ ಪದವಿ-ಪ್ರಶಸ್ತಿಗಳ ಬಗ್ಗೆ ಯಾಕೆ ಈ ವ್ಯಾಮೋಹ?

ಹಿಂದೆ ರಾಜಮಹರಾಜರ ಆಸ್ಥಾನದಲ್ಲಿ ಅವರನ್ನು ಸ್ತುತಿಸುವ, ಹಾಡಿ-ಹೊಗಳುವ ಕವಿಗಳು ಇರುತ್ತಿದ್ದರು. ದೊರೆಯನ್ನು ಹೊಗಳಿ ಆತನಿಂದ ಕೈಗೆ ಚಿನ್ನದ ಕಡಗಗಳನ್ನು ಹಾಕಿಸಿಕೊಳ್ಳುತ್ತಿದ್ದರು. ರಾಜಸೇವಾಸಕ್ತ ಎಂಬ ಬಿರುದನ್ನು ಪಡೆಯುತ್ತಿದ್ದರು. ಅಂಥವರ ಸಾಹಿತ್ಯ ಎಂದಿಗೂ ಬಡಜನರ ನೋವಿಗೆ ಮಿಡಿಯುವ ಪ್ರಾಣಮಿತ್ರನಾಗಲಿಲ್ಲ. ಎಲ್ಲರೂ ಹೀಗೆ ಇದ್ದರೆಂದಲ್ಲ, ಬಸವಣ್ಣನಂತಹವರು ಇದ್ದರು. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣ ಪ್ರಭುವಿನೊಂದಿಗೆ ರಾಜಿ ಮಾಡಿಕೊಳ್ಳದೇ ಅಧಿಕಾರ ತ್ಯಜಿಸಿ ಹೊರಗೆ ಬಂದರು.

12ನೇ ಶತಮಾನದಲ್ಲಿ ಬರೀ ಒಬ್ಬ ಬಸವಣ್ಣ ಮಾತ್ರವಲ್ಲ, ಅಲ್ಲಮಪ್ರಭು, ಅಕ್ಕಮಹಾದೇವಿ, ನುಲಿಯ ಚಂದಯ್ಯ, ಸಮಾಗಾರ ಹರಳಯ್ಯ, ಅಂಬಿಗರ ಚೌಡಯ್ಯ ಹೀಗೆ ನೂರಾರು ವಚನಕಾರರು ಕನ್ನಡ ಸಾಹಿತ್ಯಕ್ಕೆ ಸಮಾಜಮುಖಿಯಾದ ಹೊಸ ದಿಕ್ಕನ್ನು ತೋರಿಸಿದರು. ಒಂದು ಜನಪರ ಸಾಹಿತ್ಯ ಪರಂಪರೆಯೇ ನಿರ್ಮಾಣವಾಯಿತು. ಇವರ್‍ಯಾರೂ ದೊರೆಯಿಂದ ಬಿರುದು-ಬಾವಲಿಗಳನ್ನು ಪಡೆದವರಲ್ಲ. ಆದರೂ ಅವರ ಸಾಹಿತ್ಯ 800 ವರ್ಷಗಳ ನಂತರವೂ ಪ್ರಸ್ತುತತೆ ಉಳಿಸಿಕೊಂಡಿದೆ.

18ನೇ ಶತಮಾನದಲ್ಲಿ ಶಿಶುನಾಳ ಷರೀಫ ಸಾಹೇಬರು ತನ್ನ ಸುತ್ತಲಿನ ಸಮಾಜದಲ್ಲಿ ಕಂಡದ್ದನ್ನೇ ನೋಡಿ, ನೂರಾರು ಹಾಡುಗಳನ್ನು ಬರೆದರು. ಯಾವ ಪ್ರಶಸ್ತಿಗಾಗಿಯು ಅವರು ಬರೆಯಲಿಲ್ಲ. ಈ ಹಾಡುಗಳಿಗಾಗಿ ಯಾವ ಪ್ರಭುತ್ವವು ಅವರಿಗೆ ಪ್ರಶಸ್ತಿಯನ್ನು ನೀಡಲಿಲ್ಲ. ಈ ಎಲ್ಲ ಪ್ರಶಸ್ತಿಗಿಂತ ಮಿಗಿಲಾಗಿ ಷರೀಫ್ ಸಾಹೇಬರು ಅಜರಾಮರ ಸ್ಥಾನ ಪಡೆದರು. ಕಳೆದ ಒಂದೂವರೆ ಶತಮಾನದಿಂದ ನಾಡಿನ ಎಲ್ಲರ ಬಾಯಲ್ಲೂ ಅವರ ಹಾಡುಗಳು ಜೀವಂತವಾಗಿವೆ. ಇದೀಗ ಅವರ ಹಾಡುಗಳನ್ನು ಸಂಪಾದಿಸಿ, ಸಿ.ಡಿ ಮಾಡಿ ಕಾಸು ಮಾಡಿಕೊಳ್ಳುವವರು ಕೂಡ ಈ ನಾಡಿನಲ್ಲಿ ನಮ್ಮೆದುರಿಗೆ ಇದ್ದಾರೆ.

ಇಂತಹ ಒಂದು ಪರಂಪರೆಯ ಭಾಗವಾಗಿಯೇ ಕರ್ನಾಟಕದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ಜನ್ಮತಾಳಿತು. ನಂತರ 70ರ ದಶಕದ ಕೊನೆಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಉದಯಿಸಿತು. ಅದರ ಉದ್ಘಾಟನೆಗೆ ಬಂದಿದ್ದ ಆಂಧ್ರದ ಹೆಸರಾಂತ ಕ್ರಾಂತಿಕಾರಿ ಕವಿ ಶ್ರೀಶ್ರೀ ಆಡಿದ ಮಾತು ಇನ್ನೂ ನನ್ನ ನೆನಪಿನಲ್ಲಿದೆ. ಆ ದಿನ ಶ್ರೀಶ್ರೀಯವರು ಹೆಚ್ಚು ಭಾಷಣ ಮಾಡಲಾಗದೇ, "ದುಡ್ಡಿಗಾಗಿ ಸಿನಿಮಾಗಳಿಗೆ ಹಾಡು ಬರೆಯುವ ನಾನೆಂತಹ ಕ್ರಾಂತಿಕಾರಿ. ನಾನೊಬ್ಬ ವೇಶ್ಯೆಯಿದ್ದಂತೆ. ನಾನೇನು ಮಾತನಾಡಲಿ" ಎಂದು ಭಾವುಕರಾಗಿ ಕೂತುಬಿಟ್ಟರು. ಮನಸ್ಸಾಕ್ಷಿಯಿರುವ ಇರುವ ಒಬ್ಬ ಲೇಖಕನಿಗೆ ಮಾತ್ರ ಇಂತಹ ಸಂಕೋಚ ಮತ್ತು ನಾಚಿಕೆ ಇರುತ್ತದೆ.

ಅದೇ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಪದವಿ-ಪ್ರಶಸ್ತಿಗಳನ್ನು ಸ್ವೀಕರಿಸಬಾರದು. ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಹೋಗಬಾರದು ಎಂದು ತೀರ್ಮಾನಿಸಲಾಯಿತು. ಆದರೆ ನಂತರದ ದಿನಗಳಲ್ಲಿ ಆ ತೀರ್ಮಾನ ಅವರವರ ಅನುಕೂಲಕ್ಕೆ ತಕ್ಕಂತೆ ಸಡಿಲಗೊಂಡು ಸರ್ಕಾರಿ ಸಂಸ್ಥೆಗಳ ಹುದ್ದೆಗಳಿಗೆ ಪೈಪೋಟಿ ಆರಂಭವಾಯಿತು. ಆಗ ಜಾತ್ಯತೀತ ಪಕ್ಷಗಳ ಸರ್ಕಾರದಿಂದ ಪ್ರಶಸ್ತಿ ತೆಗೆದುಕೊಂಡರೆ ತಪ್ಪಿಲ್ಲ ಎಂಬ ಸಮರ್ಥನೆ ನೀಡಲಾಯಿತು. ಆದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದ ನಂತರವೂ ಈ ಚಾಳಿ ಮುಂದುವರೆದಿದೆ. ಈ ಕುರಿತು ಎಡಪಂಥೀಯರನ್ನು ಟೀಕಿಸುವ ಕೆಲ ಮಾಧ್ಯಮದ ಮಿತ್ರರು ಛೇಡಿಸಿದಾಗ, ಉತ್ತರಿಸಲಾಗುವುದಿಲ್ಲ. ಬಿಜೆಪಿ ಸರ್ಕಾರ ಬಂದ ನಂತರ ಅದರ ಎಲ್ಲ ಫ್ಯಾಸಿಸ್ಟ್ ಅನಾಚಾರಗಳು ಇಲ್ಲಿ ನಡೆದಿದ್ದರೂ ಬಂಡಾಯ ಸಾಹಿತ್ಯ ಸಂಘಟನೆಯಿಂದ ತುಟಿ ಪ್ರತಿರೋಧವೂ ಬಂದಿಲ್ಲ. ಬಂಡಾಯ ಸಂಘಟನೆ ಏಣಿಯಿಂದ ಮೇಲೇರಿದ ಒಬ್ಬರು ತಮ್ಮ ಜಾತಿಯ ಮಂತ್ರಿಯ ವಶೀಲಿಯಿಂದ ವಿಶ್ವವಿದ್ಯಾಲಯದ ಉನ್ನತ ಸ್ಥಾನವನ್ನು ಪಡೆದ ಬಗ್ಗೆ ಕೆಲವರು ಪ್ರಶ್ನಿಸಿದಾಗ, ಉತ್ತರಿಸಲಾಗಲಿಲ್ಲ.

(9ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಡಾ. ಎನ್. ಜಗದೀಶ್ ಕೊಪ್ಪ.

ಪ್ರಿಯ ಸಂಪಾದಕರೇ,

ಅವರು ಈ ಕಗ್ಗತ್ತಲಿನಲ್ಲಿ ಹಾಡಬಲ್ಲರೆ?
ಹೌದು ಹಾಡಬಲ್ಲರು
ಕಗ್ಗತ್ತಲನ್ನು ಕುರಿತು ಮಾತ್ರ
ಅವರು ಹಾಡಬಲ್ಲರು

-ಬರ್ಟೋಲ್ ಬ್ರೆಕ್ಟ್

ಈ ಅಂಕಿ ಅಂಶವನ್ನು ನೀವು ನಂಬಲೇಬೇಕು. ಈ ದೇಶದ ನಗರ ಪ್ರದೇಶದ ವ್ಯಕ್ತಿ ದಿನವೊಂದಕ್ಕೆ 33 ರೂಗಳನ್ನು ಹಾಗೂ ಗ್ರಾಮಾಂತರ ಪ್ರದೇಶದ ವ್ಯಕ್ತಿ 26 ರೂಗಿಂತ ಹೆಚ್ಚು ಖರ್ಚು ಮಾಡಿದರೆ, ಅವರು ಬಡವರಲ್ಲ. ಭಾರತದ ಜನತೆ ಬೆಚ್ಚಿ ಬೀಳಿಸುವ ಈ ವರದಿಯನ್ನು ನಮ್ಮ ಕೇಂದ್ರ ಯೋಜನಾ ಆಯೋಗ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದೆ.

ನಮ್ಮನ್ನಾಳುವ ಜನನಾಯಕರು ವಾಸ್ತವದ ಬದುಕಿನಿಂದ ಎಷ್ಟು ದೂರವಿದ್ದಾರೆ ಎಂಬುದಕ್ಕೆ ಈ ಘಟನೆ ಸಾಕು. ಅತ್ಯಂತ ನೋವಿನ ಸಂಗತಿಯೆಂದರೆ, ಈ ದೇಶದ ಆಡಳಿತ ಚುಕ್ಕಾಣಿ ಹಿಡಿದಿರುವ ಡಾ. ಮನಮೋಹನ್‌ಸಿಂಗ್ ಸಾಧಾರಣ ವ್ಯಕ್ತಿಯಲ್ಲ. ಜಗತ್ತಿನ ಪ್ರಸಿದ್ಧ ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಸಂಸ್ಥೆಯಿಂದ ಡಾಕ್ಟರೇಟ್ ಪಡೆದವರು ಜೊತೆಗೆ ಅರ್ಥಶಾಸ್ತ್ರದ ಪಿತಾಮಹ ಎನಿಸಿಕೊಂಡ ಆಡಂಸ್ಮಿತ್ ಹೆಸರಿನಲ್ಲಿ ಇರುವ ಚಿನ್ನದ ಪದಕ ಪಡೆದ ಪ್ರಥಮ ಏಷ್ಯಾದ ವ್ಯಕ್ತಿ, ಇವೆಲ್ಲಕಿಂತ ಹೆಚ್ಚಾಗಿ ಇಡೀ ಜಗತ್ತೇ ಗೌರವಿಸುವ ಶ್ರೇಷ್ಠ ಆರ್ಥಿಕ ತಜ್ಞ, ಇಂತಹ ವ್ಯಕ್ತಿಯ ಉಸ್ತುವಾರಿಯಲ್ಲಿರುವ ಯೋಜನಾ ಆಯೋಗದ ಉಪಾಧ್ಯಕ್ಷ ಮತ್ತು ಮತ್ತೋರ್ವ ಆರ್ಥಿಕ ತಜ್ಞ ಮೊಂಟೇಕ್‌ಸಿಂಗ್ ಅಹ್ಲುವಾಲಿಯ ನ್ಯಾಯಾಲಯಕ್ಕೆ ನೀಡಿದ ವರದಿ ಇಡೀ ದೇಶಾದ್ಯಂತ ನಗೆಪಾಟಲಿಗೀಡಾಗಿದೆ.

1921ರ ಡಿಸಂಬರ್ 12ರಂದು ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡಿದ್ದ ಗಾಂಧೀಜಿ ಹೇಳಿದ್ದ ಮಾತುಗಳು ಇವು. "ಒಂದು ದೇಶ ಎಷ್ಟು ಸದೃಢವಾಗಿದೆ ಎಂಬುದು ನಿರ್ಧಾರವಾಗುವುದು ಆ ದೇಶದಲ್ಲಿರುವ ಕೋಟ್ಯಾಧೀಶ್ವರರ ಆಧಾರದ ಮೇಲಲ್ಲ, ಆ ದೇಶದಲ್ಲಿ ಎಷ್ಟು ಮಂದಿ ಬಡವರು ಬಡತನದ ಸುಳಿಯಿಂದ ಹೊರಬಂದಿದ್ದಾರೆ ಎಂಬುವುದರ ಆಧಾರದ ಮೇಲೆ" ಇಂತಹ ಕಟು ವಾಸ್ತವದ ಗ್ರಹಿಕೆಗಳನ್ನು ಮರೆತ ನಮ್ಮ ನಾಯಕರ ಬೌದ್ಧಿಕ ಸ್ಥಿರತೆ ಬಗ್ಗೆ ಈಗ ಸಂಶಯ ಉಂಟಾಗುತ್ತಿದೆ.

ಸ್ವತಃ ಕೇಂದ್ರ ಸರ್ಕಾರ ಧೃಢಪಡಿಸಿರುವ ಅಂಕಿ ಅಂಶದ ಆಧಾರದ ಪ್ರಕಾರ ಶೇ. 49ರಷ್ಟು ಮಂದಿ ಭಾರತದಲ್ಲಿ ಬಡವರಿದ್ದಾರೆ. ಸರ್ಕಾರದ ಮಾಹಿತಿಯನ್ನು ಹೊರತುಪಡಿಸಿದರೆ, ವಾಸ್ತವವಾಗಿ ಈ ದೇಶದಲ್ಲಿ ಶೇ. 72 ರಷ್ಟು ಮಂದಿ ಬಡವರು ಇರುವುದು ಸತ್ಯ.

ಬಡತನದ ಬಗ್ಗೆ ಯಾವ ಅನುಭವವಾಗಲಿ, ತಿಳಿದುಕೊಳ್ಳುವ ಮನಸ್ಸಾಗಲಿ ಇಲ್ಲದಿರುವ ಈ ನಾಯಕರು ಒಮ್ಮೆ, ತಮ್ಮ ಕುಟುಂಬದ ಪರವಾಗಿ ದಿನಸಿ ಅಂಗಡಿಗೆ, ಅಥವಾ ತರಕಾರಿ ಅಂಗಡಿಗೆ ಇಲ್ಲವೇ, ಮಧ್ಯಮ ವರ್ಗದ ಹೊಟೇಲ್‌ಗೆ ಹೋಗಿ ಬಂದಿದ್ದರೆ ವಾಸ್ತವ ಸ್ಥಿತಿ ಏನೆಂಬುದು ಅರ್ಥವಾಗುತಿತ್ತು.

ಬಡತನ ಕೇವಲ ಹಸಿವಿನ ವಿಚಾರ ಮಾತ್ರವಲ್ಲ, ಅದೊಂದು ಸಮಾಜದ ಬಹುಮುಖಿ ಕೊರತೆ ಜೊತೆಗೆ ಮೈ ಮತ್ತು ಮನಸ್ಸುಗಳನ್ನು ನಿರಂತರವಾಗಿ ಸುಡುವ ಸಮಸ್ಯೆ ಎಂದು ವಿಶ್ಲೇಷಿಸಿದವರು ಅಮಾರ್ತ್ಯಸೇನ್. ಅಲ್ಲಿಯವರೆಗೆ ಜಾಗತೀಕರಣದ ಹುಚ್ಚು ಹೊಳೆಯಲ್ಲಿ ತೇಲುತ್ತಿರುವ ಈ ಜಗತ್ತಿಗೆ ಬಡತನದ ಬಗ್ಗೆ ಸ್ಪಷ್ಟ ಕಲ್ಪನೆ ಇರಲಿಲ್ಲ, ಇಂದಿಗೂ ಇಲ್ಲ.

ಇವತ್ತಿಗೂ ಭಾರತದ 120 ಕೋಟಿ ಜನಸಂಖ್ಯೆಯಲ್ಲಿ ಶೇ. 70ರಷ್ಟು ಮಂದಿ ಬಡವರಾಗಿ ಉಳಿದಿದ್ದಾರೆ. ಇದು ವಾಸ್ತವಿಕ ಆಧಾರದ ಸಂಖ್ಯೆ. ಆದರೆ ಸರ್ಕಾರದ ಅಂಕಿ ಅಂಶಗಳಲ್ಲಿ ಶೇ. 44ರಷ್ಟು ಮಾತ್ರ, ಈಗ ಇದು ಶೇ. 37ಕ್ಕೆ ಇಳಿದಿದೆಯಂತೆ. ಹೆಬ್ಬೆಟ್ಟಿನ ಸಹಿ ಹಾಕುತಿದ್ದ ಅನಕ್ಷರಸ್ತನಿಗೆ ಅವನ ಹೆಸರು ಬರೆಯಲು ಕಲಿಸಿ ಸಾಕ್ಷರ ಎಂದು ಹಣೆಪಟ್ಟಿ ಕಟ್ಟಿ ದೇಶದಲ್ಲಿ ಅನಕ್ಷರತೆ ತೊಲಗಿತು ಎಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಡಂಗೂರ ಸಾರಿದ ಕಥೆಯಷ್ಟು ಸುಲಭವಲ್ಲ ಈ ಸಂಗತಿ. ಭಾರತದ ಬಡಬೋರೇಗೌಡ ಅವಿದ್ಯಾವಂತ ಅಥವಾ ವಿದ್ಯಾವಂತ ಯಾವ ವರ್ಗಕ್ಕೆ ಸೇರಿದರೂ ಗಳಿಸುವುದು ಇಲ್ಲವೇ ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ನಿಜವಾದ ಬಡವನನ್ನು ಬಡವನಲ್ಲವೆಂದು ಘೋಷಿಸಿ ಅವನ ಸವಲತ್ತುಗಳನ್ನು ಕಿತ್ತುಕೊಳ್ಳುವುದು ಅಮಾನವೀಯ ಮತ್ತು ಅಮಾನುಷ ಕೃತ್ಯ.

ಈ ಕಾರಣಕ್ಕಾಗಿಯೆ ಪತ್ರಕರ್ತ ಪಿ. ಸಾಯಿನಾಥ್ ಕಳೆದ 20 ವರ್ಷಗಳಲ್ಲಿ ನಮ್ಮ ಅರ್ಥಶಾಸ್ತ್ರ ಮತ್ತು ಅರ್ಥಶಾಸ್ತ್ರಜ್ಞರುಗಳ ಯಶಸ್ಸು ಎಂದರೆ, ಜನಸಾಮಾನ್ಯರ ಬದುಕಿಗೆ ಸಂಬಧವಿರದಂತೆ ಅರ್ಥವ್ಯವಸ್ಥೆಗಳನ್ನು ರೂಪಿಸಿರುವುದು ಎಂದು ಗೇಲಿ ಮಾಡಿದ್ದಾರೆ.

ತೆಂಡೊಲ್ಕರ್ ಸಮಿತಿಯ ಆಧಾರದ ಮೇಲೆ ವರದಿ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ, ಜೊತೆಗೆ ಈ ಅಂಕಿ ಅಂಶ ಬದಲಾಗುವ ಸಾಧ್ಯತೆ ಕೂಡ ಇದೆ. ಭಾರತದ ನಾಗರೀಕ ತೆಗೆದುಕೊಳ್ಳುವ ಆಹಾರದ ಪ್ರಮಾಣದ ಆಧಾರದ ಮೇಲೆ ಅಂದರೆ, ಮನುಷ್ಯನೊಬ್ಬನಿಗೆ ದಿನವೊಂದಕ್ಕೆ ನಗರ ಪ್ರದೇಶದಲ್ಲಿ 2100 ಕ್ಯಾಲೋರಿ ಮತ್ತು ಗ್ರಾಮೀಣ ಪ್ರದೇಶದಲ್ಲಿ 2400 ಕ್ಯಾಲೋರಿಗಳಷ್ಟು ಪ್ರಮಾಣದ ಆಹಾರದ ಅಗತ್ಯವಿದೆ. ಸಧ್ಯ ಭಾರತದಲ್ಲಿ 1100ರಿಂದ 1600ರಷ್ಟು ಕ್ಯಾಲೋರಿ ಅಹಾರ ಮಾತ್ರ ದೊರೆಯುತ್ತಿದೆ. ಇವತ್ತಿಗೂ ಹಸಿವಿನಿಂದ ದಿನವೊಂದಕ್ಕೆ 10 ಸಾವಿರಕ್ಕೂ ಅಧಿಕ ಮಕ್ಕಳು ಭಾರತದಲ್ಲಿ ಸಾಯುತಿದ್ದಾರೆ ಎಂದು ವಿಶ್ವಸಂಸ್ಥೆಯ ಮಕ್ಕಳ ವಿಭಾಗದ ವರದಿಯಲ್ಲಿ ತಿಳಿಸಲಾಗಿದೆ. ಈವರೆಗೆ 2 ಲಕ್ಷದ 45 ಸಾವಿರಕ್ಕಿಂತಲೂ ಅಧಿಕ ರೈತರು ಸಾವಿಗೆ ಶರಣಾಗಿದ್ದಾರೆ ಇಂತಹ ಕಟುವಾಸ್ತವ ಸಂಗತಿಗಳು ನಮ್ಮೆದುರು ಇದ್ದಾಗಲೂ ಕೂಡ ಅಂತರಾಷ್ಟ್ರೀಯ ಸಮುದಾಯದೆದುರು ಭಾರತದಲ್ಲಿ ಬಡತನವಿಲ್ಲ ಎಂದು ತೋರ್ಪಡಿಸಿಕೊಳ್ಳಲು ಈ ನಾಟಕದ ಅವಶ್ಯಕತೆ ಇರಲಿಲ್ಲ. ಇಲ್ಲಿಯ ಬಡವನೊಬ್ಬ ಸಾಯಲು ನಿರ್ಧರಿಸಿ ವಿಷ ಕೊಳ್ಳಲು ಹೋದರೆ, ಮಾರುಕಟ್ಟೆಯಲ್ಲಿ ಆತನಿಗೆ 26 ರೂಪಾಯಿಗೆ ವಿಷ ಕೂಡ ಸಿಕ್ಕುವುದಿಲ್ಲ.

ದೆಹಲಿಯ ಜವಹರಲಾಲ್ ನೆಹರೂ ವಿ.ವಿ.ಯ ಅರ್ಥಶಾಸ್ತ್ರಜ್ಞೆ ಉತ್ಸಾ ಪಟ್ನಾಯಕ್ ವರ್ತಮಾನದ ಬೆಲೆ ಸೂಚ್ಯಂಕ ಆಧರಿಸಿ ಆಹಾರಕ್ಕಾಗಿ ಕನಿಷ್ಠ ಗ್ರಾಮಾಂತರ ಪ್ರದೇಶದಲ್ಲಿ 36 ರೂಪಾಯಿಗಳು, ನಗರ ಪ್ರದೇಶದಲ್ಲಿ 60 ರೂಪಾಯಿಗಳನ್ನು ಮನುಷ್ಯನೊಬ್ಬ ಖರ್ಚು ಮಾಡಬೇಕಾಗಿದೆ ಎಂದಿದ್ದಾರೆ. ಈ ದೇಶದ ಅಸಮಾನತೆಯ ಬಗ್ಗೆ ಎಲ್ಲಗೂ ತಿಳಿದಿದೆ. ಜಿಂದಾಲ್ ಸಮೂಹದ ಅಧ್ಯಕ್ಷ ಸಜ್ಜನ್ ಜಿಂದಾಲ್ ವಾರ್ಷಿಕವಾಗಿ 69 ಕೋಟಿ, ರಿಲೆಯನ್ಸ್ ಸಮೂಹದ ಮುಖೇಶ್ ಅಂಬಾನಿ 42 ಕೋಟಿ, ಅನಿಲ್ ಅಂಬಾನಿ 35 ಕೋಟಿ, ದಕ್ಷಿಣ ಭಾರತದ ಸನ್ ಟಿ.ವಿ ಸಮೂಹದ ಕಲಾನಿಧಿ ಮಾರನ್ ಹಾಗು ಪತ್ನಿ ಕಾವೇರಿ ತಲಾ 37 ಕೋಟಿ ಸಂಬಳ ಪಡೆಯುತಿದ್ದಾರೆ. ನಮ್ಮ ಕೇಂದ್ರ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿ ತಿಂಗಳಿಗೆ ಪ್ರವಾಸ ಭತ್ಯ, ಮನೆಬಾಡಿಗೆ ಭತ್ಯ ಹೊರತುಪಡಿಸಿ, 1 ಲಕ್ಷದ 20 ಸಾವಿರ ಸಂಬಳ ಪಡೆಯುತ್ತಿದ್ದಾನೆ.

ಇದೇ ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಯಡಿ ದಿನವೊಂದಕ್ಕೆ ಕನಿಷ್ಟ 100 ಕೂಲಿ ನಿಗದಿಪಡಿಸಿರುವಾಗ, ಆಹಾರಕ್ಕಾಗಿ 26 ರುಪಾಯಿಯನ್ನು ಹೇಗೆ ನಿರ್ಧರಿಸಿತು? ಮುಕ್ತ ಮಾರುಕಟ್ಟೆಯ ಪ್ರಭುತ್ವದ ಈ ಜಗತ್ತಿನಲ್ಲಿ ಬಡವರಿಗೆ ನೀಡುವ ಉಚಿತ ಶಿಕ್ಷಣ ಆರೋಗ್ಯ, ಸಬ್ಸಿಡಿಯುಕ್ತ ಆಹಾರಧಾನ್ಯ ಎಲ್ಲವೂ ವಿಶ್ವ ವಾಣಿಜ್ಯ ಸಂಘಟನೆ ಹಾಗೂ ಅದರ ಕೂಸುಗಳಾದ ವಿಶ್ವ ಬ್ಯಾಂಕ್ ಮತ್ತು ಅಂತರಾಷ್ಟ್ರೀಯ ನಿಧಿ ಸಂಸ್ಥೆ ಇವುಗಳ ಕೆಂಗಣ್ಣಿಗೆ ಗುರಿಯಾಗಿವೆ. ಭಾರತ ಈಗ ಎಲ್ಲಾ ಸಬ್ಸಿಡಿಗಳನ್ನು ತೆಗೆದು ಹಾಕಬೇಕಾಗಿದೆ. ಆ ದಿಕ್ಕಿನಲ್ಲಿ ಇಟ್ಟಿರುವ ಹೆಜ್ಜೆ ಇದಾಗಿದೆ.

1990ರ ದಶಕದಲ್ಲಿ ಜಾಗತೀಕರಣಕ್ಕೆ ಭಾರತದ ಹೆಬ್ಬಾಗಿಲನ್ನು ತೆರೆದವರು ಇದೇ ಮನಮೋಹನ್ ಸಿಂಗ್. ಜಾಗತೀಕರಣದ ಒಳಿತು, ಕೆಡಕುಗಳು ಏನೇ ಇರಲಿ, ವೈರುಧ್ಯಗಳನ್ನು ಸೃಷ್ಟಿಸಿ, ಉಳ್ಳವರ ಭಾರತ ಮತ್ತು ನರಳುವವರ ಭಾರತ ಎಂಬ ಎರಡು ಭಾರತಗಳು ಸೃಷ್ಟಿಯಾಗಿರುವುದು ಸತ್ಯ. ಬಡವರ ನಿರ್ಮೂಲನೆ ಮಾಡುವುದರ ಮೂಲಕ ಬಡತನ ನಿರ್ಮೂಲನೆ ಮಾಡುವುದು ಈಗಿನ ಗುರಿಯಾಗಿದೆ.

ಇಲ್ಲಿ ಗಾಳಿ, ನೀರು, ಸೇರಿದಂತೆ ಎಲ್ಲವೂ ಮಾರಾಟದ ಸರಕುಗಳಾಗಬೇಕು ಆಗಲೇ ಜಾಗತೀಕರಣಕ್ಕೆ, ಹಾಗೂ ಅದರ ಪ್ರತಿಪಾದಕರಿಗೆ ನೆಮ್ಮದಿ. □

ದಂತಗೋಪುರದ ದಂಡನಾಯಕರು

ಸಂಪಾದಕರೊಡನೆ ಸಂವಾದ

ದಲಿತರ ಘನತೆಗೆ ಬುದ್ಧಮಾರ್ಗವೇ ಗತಿ

ವಿ ಆರ್ ಮೌರ್ಯ

ಪ್ರಿಯ ಸಂಪಾದಕರೇ,

ಅಕ್ಟೋಬರ್ 14ನೇ ತಾರೀಖಿಗೆ ಬಾಬಾ ಸಾಹೇಬ ಅಂಬೇಡ್ಕರ್‌ರವರು ಬುದ್ಧನೆಡೆಗೆ ಮರಳಿ 55 ವರ್ಷಗಳೇ ಆಗಿ ಹೋದವು. ಹಿಂದೂ ಧರ್ಮ ಅಸ್ಪೃಶ್ಯರನ್ನು ನಡೆಸಿಕೊಂಡ ರೀತಿ ಅವರನ್ನು ಈ ಕಠಿಣ ಮತ್ತು ಸೂಕ್ತ ನಿರ್ಧಾರಕ್ಕೆ ಅಣಿಮಾಡಿತ್ತು. ಏಕೆಂದರೆ ಅವರು ಸ್ವತಃ ಓರ್ವ ಅಸ್ಪೃಶ್ಯರೆ ಆಗಿದ್ದರು. ಅಸ್ಪೃಶ್ಯತೆಯ ನೀಚ ರೂಪವನ್ನು ಸ್ವತಃ ಅನುಭವಿಸಿದ್ದರು. ಒಬ್ಬ ವಿದೇಶಿಯನಾದ ಮೌಂಟ್ ಬ್ಯಾಟನ್‌ನನ್ನು ಮಂದಿರದ ಒಳಗೆ ಬಿಟ್ಟು ಭಾರತೀಯನಾದ, ಹಿಂದೂಧರ್ಮದವನೇ ಆದ ತನ್ನನ್ನು ಪ್ರವೇಶ ನೀಡದೆ ಹೊರಗೆ ನಿಲ್ಲಿಸಿದ್ದು ಅವರನ್ನು ಗಾಢ ಚಿಂತನೆಗೆ ನೂಕಿತ್ತು. ಇಡೀ ಭಾರತ ದೇಶಕ್ಕೆ ಸಂವಿಧಾನವನ್ನು ಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ ಮೇಲೂ ಅಂಬೇಡ್ಕರರನ್ನು ಈ ಮನುವಾದಿಗಳು ಅತಿ ನೀಚವಾಗಿ ನಡೆಸಿಕೊಂಡಿದ್ದು ಸಹಿಸಲಾರದಷ್ಟು ದುಃಖವನ್ನು ತಂದಿತ್ತಲ್ಲದೆ ತನ್ನ ಜನತೆ ಈ ರೀತಿಯ ಶೋಷಣೆಯಿಂದ ತಪ್ಪಿಸಿಕೊಳ್ಳಲು ತೋರಿದ ಮಾರ್ಗವೆ ಬುದ್ಧನ ಮಾರ್ಗ.

ಆದರೆ ಕರ್ನಾಟಕದಲ್ಲಿ ಮತಾಂತರ ವಿಷಯ ಬಂದಾಗಲೆಲ್ಲ ಚಂಗನೆ ಎದ್ದು ನಿಲ್ಲುವ ಮೊದಲಿಗರೆಂದರೆ ಪೇಜಾವರ ಸ್ವಾಮೀಜಿಗಳು. ಅವರ ಪ್ರಕಾರ ಮತಾಂತರ ಮಹಾ ಪಾಪ! ಆದರೆ ನಯನತಾರಾಳಂತಹ ವ್ಯಕ್ತಿಗಳು ಹಿಂದೂ ಧರ್ಮಕ್ಕೆ (ಯಾವ ಜಾತಿಗೊ ನನಗೆ ಗೊತ್ತಿಲ್ಲ) ಮತಾಂತರವಾದಾಗ ಮಾತ್ರ ಇವರು ಮತಾಂತರ ವಿರೋಧಿಸುವುದಿಲ್ಲ. ಯಾಕೆಂದರೆ ಇವರಿಗೆ ಬೇಕಾಗಿರುವುದು ಹಿಂದೂ ಧರ್ಮವನ್ನು ದಲಿತರು ಬಿಡಬಾರದು ಅಷ್ಟೆ. ಬಿಟ್ಟರೆ ಅವರುಗಳು ಸ್ವಾವಲಂಬಿಗಳಾಗುತ್ತಾರೆ. ಸ್ವಾಭಿಮಾನಿಗಳಾಗುತ್ತಾರೆ. ಈ ರೀತಿ ಆಗುವುದನ್ನು ತಡೆಯಲು ಎಷ್ಟು ಬೇಕಾದರು ಸರ್ಕಸ್‌ಗಳನ್ನು ಮಾಡುತ್ತಾರೆ ನಮ್ಮ ಪೇಜಾವರರು. ಈ ರೀತಿಯ ಒಂದು ಸರ್ಕಸ್ಸೇ ಮೊನ್ನೆ ಮೈಸೂರಿನಲ್ಲಿ ನಡೆದ ಸಹಭೋಜನ. ಇದಕ್ಕೆ ಬಲಿಯಾಗಿರುವುದು ಮಾತ್ರ ಒಬ್ಬ ಶೋಷಿತ ಸ್ವಾಮೀಜಿ.

ಇರಲಿ ಮುಂದಿನ ತಿಂಗಳು ಒಂದು ಅಂತರ್ಜಾತಿ ವಿವಾಹ ನಡೆಸುತ್ತಾರೇನೊ ನೋಡೋಣ! (ನಗಬೇಡಿ). ನಾನು ಗಮನಿಸಿದಂತೆ ಮೈಸೂರಿನ ಸಹಭೋಜನವನ್ನು ಎಲ್ಲರೂ ಒಂದು ಕ್ರಾಂತಿಯಂತೆ ಭಾವಿಸುತ್ತಿದ್ದಾರೆ. ಆದರೆ ಆ ಭ್ರಮೆಯನ್ನು ಕಿತ್ತು ಹಾಕಿಬಿಡಿ. ಏಕೆಂದರೆ ಮನುವಾದಿಗಳ ಮನಸು ಬದಲಾಗುವುದು ಅಷ್ಟು ಸುಲಭವಲ್ಲ ಮತ್ತು ಅಸಾಧ್ಯ. ಪೇಜಾವರರಂತಹವರನ್ನು ನಂಬುವುದು ಬಹಳ ಕಷ್ಟ. ಬೇಕಾದರೆ ನಿದರ್ಶನಕ್ಕೆ ಈ ಕೆಳಗಿನ ಮಾಜಿ ಹಿಂದುಳಿದ ಆಯೋಗದ ಅಧ್ಯಕ್ಷರಾದ ದ್ವಾರಕಾನಾಥ್‌ರವರ ಮತ್ತು ಪೇಜಾವರರ ನಡುವೆ ನಡೆದಿರುವ ಸಂಭಾಷಣೆಯನ್ನು ಗಮನಿಸಿ.

> **ಕರ್ನಾಟಕದಲ್ಲಿ ಮತಾಂತರ ವಿಷಯ ಬಂದಾಗಲೆಲ್ಲ ಚಂಗನೆ ಎದ್ದು ನಿಲ್ಲುವ ಮೊದಲಿಗರೆಂದರೆ ಪೇಜಾವರ ಸ್ವಾಮೀಜಿಗಳು. ಅವರ ಪ್ರಕಾರ ಮತಾಂತರ ಮಹಾ ಪಾಪ! ಆದರೆ ನಯನತಾರಾಳಂತಹ ವ್ಯಕ್ತಿಗಳು ಹಿಂದೂ ಧರ್ಮಕ್ಕೆ (ಯಾವ ಜಾತಿಗೊ ಗೊತ್ತಿಲ್ಲ) ಮತಾಂತರವಾದಾಗ ಮಾತ್ರ ಇವರು ಮತಾಂತರ ವಿರೋಧಿಸುವುದಿಲ್ಲ. ಯಾಕೆಂದರೆ ಇವರಿಗೆ ಬೇಕಾಗಿರುವುದು ಹಿಂದೂ ಧರ್ಮವನ್ನು ದಲಿತರು ಬಿಡಬಾರದು ಅಷ್ಟೆ. ಬಿಟ್ಟರೆ ಅವರುಗಳು ಸ್ವಾವಲಂಬಿಗಳಾಗುತ್ತಾರೆ. ಸ್ವಾಭಿಮಾನಿಗಳಾಗುತ್ತಾರೆ. ಈ ರೀತಿ ಆಗುವುದನ್ನು ತಡೆಯಲು ಎಷ್ಟು ಬೇಕಾದರು ಸರ್ಕಸ್‌ಗಳನ್ನು ಮಾಡುತ್ತಾರೆ ನಮ್ಮ ಪೇಜಾವರರು.**

ದ್ವಾರಕಾನಾಥ್‌ರವರು :– ನಿಮ್ಮ ಶಿಷ್ಯ ಕೋಟಿಗಳಲ್ಲಿ ಒಬ್ಬ ದಲಿತನು ಸಹ ಯಾಕಿಲ್ಲ?

ಪೇಜಾವರರು:– ನೋಡಿ ನೀವು ಮಾಂಸ ತಿಂತೀರಿ. ಮದ್ಯ ಕುಡಿತೀರಿ, ಅದು ಹೇಗೆ ನಾವು ದೀಕ್ಷೆ ಕೊಡೋದು?

ದ್ವಾ:– ಮಾಂಸ ಮದ್ಯ ಮುಟ್ಟದೇ ಇರೋರ್ನ ಕೊಡ್ತೀವಿ ಸ್ವಾಮಿ, ನೀವು ಅವರನ್ನೆ ತಗೊಳ್ಳಿ.

ಪೇ:– ಇಲ್ಲಿಲ್ಲ, ಅದು ಹಾಗಾಗಲ್ಲ. ಅವರ ಪೂರ್ವಜರು ತಿಂದಿರ್ತಾರೆ!

ದ್ವಾ:– ನಿಮ್ಮ ಪೂರ್ವಜರು ಗೋಮಾಂಸ ತಿಂತಾ ಇರ್ಲಿಲ್ಲವಾ?

ಪೇ:– (ಮೌನವಾದರು).

ದ್ವಾ:– ಹೋಗಲೀ ಬಿಡಿ, ನಿಮ್ಮಲ್ಲೆ ಒಬ್ಬ ಬ್ರಾಹ್ಮಣ ಹೆಣ್ಣು ಮಗಳನ್ನೆ ನಿಮ್ಮ ಶಿಷ್ಯೆಯನ್ನಾಗಿ ಸ್ವೀಕರಿಸಿ?

ಪೇ:– ಅದು ಹೇಗೆ ಆಗುತ್ತೆ ಮುಟ್ಟು ಮೈಲಿಗೆ ಇರುತ್ತಲ್ಲ?

ದ್ವಾ:– ಮುಟ್ಟು ಮೈಲಿಗೆ ಇಲ್ಲದೆ ಇದ್ದಿದ್ರೆ ನಾವು ನೀವು ಹುಟ್ತಾನೆ ಇರ್ತಿರ್ಲಿಲ್ಲ. ನಿಮಗೆ ನಿಮ್ಮನ್ನು ಹಡೆದ ತಾಯಿ ಬಗ್ಗೆ ಗೌರವ ಇಲ್ಲದೆ ಹೋದ ಮೇಲೆ ಅಂಥ ಧರ್ಮದಲ್ಲಿ ನಾವು ಯಾಕಿರಬೇಕು?

ಪೇ:– (ಉತ್ತರವಿಲ್ಲ, ಮೌನಿ)

ನೋಡಿ ದಲಿತರ ವಿಮೋಚನೆಗೆ ನಾಟಕವಾಡುವ ಇವರುಗಳು ಮನಸ್ಸಿನಲ್ಲಿ ಎಂತಹ ವಿಷವನ್ನಿಟ್ಟುಕೊಂಡಿದ್ದಾರೆ. ಅಷ್ಟೇ ಅಲ್ಲದೆ ಅಂತಹ ವಿಷವನ್ನು ಬಹಿರಂಗವಾಗಿಯೇ ಕಕ್ಕುತ್ತಾರೆ. ಆದ್ದರಿಂದ ದಲಿತರು ಇಂದು ದ್ವಾರಕಾನಾಥರವರು ಕೇಳಿದ ಪ್ರಶ್ನೆಯನ್ನು ಮನುವಾದಿಗಳಿಗೆ ಕೇಳಬೇಕಾಗಿದೆ. ಮನುವಾದಿಗಳ ನಿಜರೂಪವನ್ನು ತಿಳಿಯಬೇಕಾಗಿದೆ. ಇಂತಹ ಧರ್ಮಾಂಧರಿಗೆ ಬೇಕಾಗಿರುವುದು ಸಾಮಾಜಿಕ ನ್ಯಾಯವಲ್ಲ, ತಲೆಬುಡವಿಲ್ಲದ ಸಂಪ್ರದಾಯಗಳಷ್ಟೆ! ಸಂವಿಧಾನ ಬಂದಮೇಲೆ ಇವರುಗಳು ಕಳೆದು ಕೊಂಡಿರುವುದನ್ನು ಪಡೆಯಲಿಕ್ಕೆ ಮತ್ತು ಇಲ್ಲಿವರೆಗು ಹೊಂದಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಬಲಪಡಿಸಿಕೊಳ್ಳುವುದಕ್ಕೋಸ್ಕರ ದಲಿತರಿಗೆ ನ್ಯಾಯ ಒದಗಿಸುವ ನಾಟಕವಾಡುತ್ತಾರೆ. ಆದರೆ ದಲಿತರಿಗೆ ಬೇಕಾಗಿರುವುದು ಬಿಕ್ಷೆಯಲ್ಲ ಹಕ್ಕು ಎಂಬುದನ್ನು ಅವರಿಗೆ ಮನದಟ್ಟು ಮಾಡಬೇಕಾಗಿದೆ. ಮನುಸ್ಮೃತಿಯನ್ನು ಇವರು ಚಾಚೂತಪ್ಪದೆ ಪಾಲಿಸುತ್ತಾರಲ್ಲದೆ ಅದನ್ನು ಇತರರ ಮೇಲೆ ಹೇರಲು ಯಾವಾಗಲು ಹವಣಿಸುತ್ತಿರುತ್ತಾರೆ. ಹೆಣ್ಣೆಂದರೆ ಇಂತಹವರಿಗೆ ಗುಲಾಮಳಷ್ಟೆ.

ನನ್ನ ಸ್ನೇಹಿತನೊಬ್ಬ ಶಿಕ್ಷಕನಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನೂ ಸಹ ದಲಿತ. ಅಲ್ಲಿ ಉಳಿದುಕೊಳ್ಳಲು ಬಾಡಿಗೆ ಮನೆ ಕೇಳಲು ಹೋಗಿದ್ದನಂತೆ, ಆಗ ಮನೆಯ ಮಾಲೀಕ ಈತನ ಜಾತಿ ಕೇಳಿದವನೆ ಮನೆ ಕೊಡಲು ನಿರಾಕರಿಸಿದ್ದಾನೆ. ಆದರೆ ಅದೇ ಮನೆಯನ್ನು ಮತ್ತೋರ್ವ ದಲಿತ ಶಿಕ್ಷಕಿ ಪಡೆದಿದ್ದಾರೆ! ಅದು ಹೇಗೆಂದು ವಿಚಾರಿಸಿದಾಗ ಅವರು ನಾವು ಕ್ರೈಸ್ತರೆಂದು ಹೇಳಿ ಮನೆ ಪಡೆದುಕೊಂಡಿರುವುದು ಬೆಳಕಿಗೆ ಬಂತು. ಇದರ ಅರ್ಥವೇನು? ದಲಿತರಿಗೆ ಹಿಂದೂ ಧರ್ಮದಲ್ಲಿ ಬೆಲೆಯಿಲ್ಲ! ಹೀಗಿದ್ದಮೇಲೆ ನಾವೇಕಿಲ್ಲಿ ಇರಬೇಕು? ಇಲ್ಲೇ ಇದ್ದು ಕೆಳಜಾತಿ ಎನಿಸಿಕೊಂಡೇಕೆ ಸಾಯಬೇಕು? ಗಾಂಧೀಜಿಯವರು ಸಹ ಇದಕ್ಕೆ ಹೊರತಲ್ಲ ಅವರೂ ಸಹ ದಲಿತರನ್ನು ಅಸಡ್ಡೆ ಮಾಡಿರುವುದನ್ನು ನಾವು ಗಮನಿಸಬಹುದು. 1933ರಲ್ಲಿ ಕೇರಳದ ಗುರುವಾಯೂರು ಮಂದಿರಕ್ಕೆ ದಲಿತರಿಗೆ ಪ್ರವೇಶ ಕೋರಿ ಸ್ಥಳೀಯ ದಲಿತರಾದ ಕೇಳಪ್ಪನ್‌ರವರು ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದರು.

ಆದರೆ ಗಾಂಧೀಜಿಯವರು “ನನಗೆ 3 ತಿಂಗಳ ಕಾಲಾವಕಾಶ ಕೊಡಿ ನಾನು ಸವರ್ಣೀಯರ ಮನವೊಲಿಸಿ ನಿಮಗೆ ಮಂದಿರ ಪ್ರವೇಶಕ್ಕೆ ಅನುವು ಮಾಡಿಸಿಕೊಡುತ್ತೇನೆಂದು, ಸವರ್ಣೀಯರು ಒಪ್ಪದಿದರೆ ನಾನೂ ಸಹ ನಿಮ್ಮೊಡನೆ ಸತ್ಯಾಗ್ರಹ ಮಾಡುತ್ತೇನೆಂದು” ಕೇಳಪ್ಪನ್‌ರಿಗೆ ಮಾತು ಕೊಟ್ಟರು. ಆದರೆ ಸ್ಥಳೀಯ ಕಾಂಗ್ರೆಸ್ ಸದಸ್ಯರಾಗಲಿ, ಸವರ್ಣೀಯರಾಗಲಿ ಗಾಂಧೀಜಿಯವರ ಮಾತಿಗೆ ಬೆಲೆ ಕೊಡಲಿಲ್ಲ. ಕೊಚ್ಚಿನ್ ಪ್ರಾಂತ್ಯದ ರಾಜನು ಅಸ್ಪೃಶ್ಯರಿಗೆ ಮಂದಿರಗಳಲ್ಲಿ ಪ್ರವೇಶ ನೀಡುವುದೆ ಇಲ್ಲ

ಎಂದು ಬಹಿರಂಗವಾಗಿಯೆ ಹೇಳಿಬಿಟ್ಟ! ಆಗ ಪ್ರಾಮಾಣಿಕವಾಗಿ ಗಾಂಧೀಜಿಯವರು ತಾವು ಕೊಟ್ಟ ಮಾತಿನಂತೆ ಕೇಳಪ್ಪನ್ ಜೊತೆ ಸತ್ಯಾಗ್ರಹಕ್ಕೆ ಕುಳಿತುಕೊಳ್ಳಬೇಕಿತ್ತು. ಆದರೆ ಮಹಾತ್ಮನ ರಾಜಕಾರಣ ಮನಸ್ಸು ಎಚ್ಚೆತ್ತುಕೊಳ್ಳುತ್ತದೆ. "ಅಸ್ಪೃಶ್ಯರ ಮಂದಿರ ಪ್ರವೇಶ ಹಕ್ಕು ಒದಗಿಸುವ ಬಗ್ಗೆ ಜನಾಭಿಪ್ರಾಯ ಆಗಿಬಿಡಲಿ ಎನ್ನುತ್ತಾರೆ. ಮುಂದುವರಿದು ಅದರಲ್ಲಿ ಪ್ರವೇಶ ನೀಡಕೂಡದು ಎಂದು ಅಭಿಪ್ರಾಯ ಬಂದರೆ ಸತ್ಯಾಗ್ರಹ ನಿಲ್ಲಿಸುವುದಾಗಿ ಹೇಳಿಬಿಡುತ್ತಾರೆ. ಇದನ್ನು ನಿರ್ಣಯಿಸುವ ಮುನ್ನ ಕೇಳಪ್ಪನ್ ರವರನ್ನು ಒಂದು ಮಾತು ಕೇಳಬೇಕೆನ್ನುವ ಸೌಜನ್ಯವನ್ನೆ ಮರೆಯುತ್ತಾರೆ.

ಈ ಮಹಾತ್ಮರುಗಳೇ ಇಷ್ಟೇನೊ. ಅವರೇನೆ ಮಾಡಿದರೂ ಅದು ಸರಿ. ಗುಬ್ಬಚ್ಚಿಗಳ ಮೇಲೆಯೆ ಇವರ ಬ್ರಹ್ಮಾಸ್ತ್ರ. ನಂತರ ಇಲ್ಲೊಂದು ಆಶ್ಚರ್ಯಕರ ಸಂಗತಿ ನಡೆಯುತ್ತದೆ. ಜನಾಭಿಪ್ರಾಯ ಅಸ್ಪೃಶ್ಯರ ಪರವಾಗಿ ಬರುತ್ತದೆ. ಆಗಲಾದರೂ ಗಾಂಧೀಜಿ ತಮ್ಮ ಮಾತು ಉಳಿಸಿಕೊಳ್ಳಬಹುದಾಗಿತ್ತು. ಆದರೆ ಆಗಲೂ ಸತ್ಯಾಗ್ರಹಕ್ಕೆ ಅಣಿಯಾಗುವುದಿಲ್ಲ. ಮತ್ತೆ ರಾಜನ ಅನುಮತಿಗೆ ಕಾಯುತ್ತಾರೆ. ನಂತರ ಹಲವಾರು ಸರ್ಕಸ್‌ಗಳಾದಮೇಲೆ ಕೇಳಪ್ಪನ್ ರವರಿಗೆ ಕೈ ಕೊಟ್ಟು ಸತ್ಯಾಗ್ರಹದ ವಿಚಾರವನ್ನು ಕೈಬಿಡುತ್ತಾರೆ. ಇದೇ ಅಸ್ಪೃಶ್ಯರಿಗೆ ಗಾಂಧೀಜಿಯವರು ನೀಡಿದ ಕೊಡುಗೆ. ದಲಿತರ ಪರವಾಗಿ ಸತ್ಯಾಗ್ರಹ ಮಾಡಲು ನಿರಾಕರಿಸಿದ ಗಾಂಧೀಜಿಯವರು ಪ್ರತ್ಯೇಕ ಮೀಸಲಾತಿ ವಿಚಾರದಲ್ಲಿ ದಲಿತರ ವಿರುದ್ಧವಾಗಿ ಸತ್ಯಾಗ್ರಹ ಮಾಡಲು ಸ್ವಲ್ಪವೂ ಹಿಂಜರಿಯುವುದಿಲ್ಲ. ಹಲವು ವಿಚಾರವಂತರು ದಲಿತರ ವಿಚಾರ ಬಂದಾಗ ಅಂಬೇಡ್ಕರರನ್ನು ಬಿಟ್ಟು ಗಾಂಧೀಜಿಯವರನ್ನು ಹೊಗಳುವುದು ಯಾಕೆಂದು ನನಗೆ ಇದುವರೆಗು ತಿಳಿಯದು. ಗಾಂಧೀಜಿಯವರು ದಲಿತರಿಗೆ ಅನುಕಂಪ ತೋರಿದರು ಅಷ್ಟೆ. ಅವರ ಜೀವನ ಬದಲಾಯಿಸಲಿಲ್ಲ. ಆದರೆ ಅಂಬೇಡ್ಕರ್ ರವರು ದಾರಿ ತೋರಿದರು. ಇಂದು ನಾವೆಲ್ಲ ತಲೆ ಎತ್ತಿ ತಿರುಗಾಡುವಂತೆ ಮಾಡಿದರು. ಅದೇನೆ ಇರಲಿ ಗಾಂಧೀಜಿಯವರು ಸಹ ಚಾತುರ್ವರ್ಣವನ್ನು ಗೌರವಿಸುತ್ತಿದ್ದರೆಂದು ಅವರೇ ಹೇಳಿಕೊಂಡಿದ್ದಾರೆ.

1918ರಲ್ಲಿ ಮುಂಬಯಿಯಲ್ಲಿ ಭಾರತೀಯ ನಿಮ್ನವರ್ಗಗಳ ಮಿಷನ್ ಸೊಸೈಟಿ ಆಶ್ರಯದಲ್ಲಿ ಮೊದಲನೇ ನಿಮ್ನವರ್ಗಗಳ ಸಮಾವೇಶ ನಡೆಯಿತು. ಇದರಲ್ಲಿ ಅಸ್ಪೃಶ್ಯತಾ ವಿರೋಧಿ ಪ್ರಣಾಳಿಕೆಯನ್ನು ಹೊರಡಿಸಲಾಯಿತು. ದೈನಂದಿನ ಚಟುವಟಿಕೆಗಳಲ್ಲಿ ಯಾರೂ ಅಸ್ಪೃಶ್ಯತೆ ಆಚರಿಸಬಾರದೆಂಬುದೇ ಅದರ ಮೂಲಾಂಶ. ಇಂತಹ ಪ್ರಣಾಳಿಕೆಗೆ ಪ್ರಮುಖರೆಲ್ಲ ಸಹಿ ಹಾಕಿದರೂ ಸಹ ಬಾಲಗಂಗಾಧರ ತಿಲಕರು ಸಹಿ ಹಾಕಲಿಲ್ಲ. ದೇಶದ ಗಣ್ಯರೆನಿಸಿಕೊಂಡವರ ಮನಸಿನಲ್ಲಿ ಮನು ಎಷ್ಟು ಆಳವಾಗಿ ಬೇರೂರಿದ್ದಾನೆ ಎನ್ನುವುದು ಇಂತಹ ನಿದರ್ಶನಗಳಿಂದ ತಿಳಿಯುತ್ತದೆ. ಆದ್ದರಿಂದ ಯಾರನ್ನು ನಂಬಬೇಕಾದರೂ ದಲಿತರು ನೂರು ಬಾರಿ ಯೋಚಿಸಬೇಕು. ಅಸ್ಪೃಶ್ಯತೆಯ ಕಳಂಕದಿಂದ ಹೊರಗೆ ಬರಬೇಕಾದರೆ ಬುದ್ಧನ ಬಳಿಗೆ ಮರಳಬೇಕು. ಆಗ ಮಾತ್ರ ನಾವು ಮನುಷ್ಯರಾಗಲು ಸಾಧ್ಯ. ಇಲ್ಲವಾದರೆ ಪೇಜಾವರರಂತಹವರ ಮುಷ್ಠಿಯಲ್ಲಿ ಸ್ವಾಭಿಮಾನ ಕಳೆದುಕೊಂಡು ಅಸ್ಪೃಶ್ಯರಾಗಿ ಭೂಮಿ ಸಾಯುವ ತನಕ ಜೀವಿಸಬೇಕಾದೀತು. □

ಹಾಡುಹಕ್ಕಿಗೆ ಬೇಕೆ ಬಿರುದು-ಸಮ್ಮಾನ?

(6ನೇ ಪುಟದಿಂದ)

ಜ್ಞಾನಪೀಠ ಪ್ರಶಸ್ತಿ ಕೊಡಬೇಕು-ಕೊಡಬಾರದು ಎಂಬುದರ ಬಗ್ಗೆ ಪ್ರಗತಿಪರ ಹಣೆಪಟ್ಟಿಯ ವಿಚಾರವಂತರ ವಲಯದಲ್ಲೇ ಚರ್ಚೆ ನಡೆದಿರುವಾಗ, ಇಂತಹ ಪ್ರಶಸ್ತಿಯನ್ನು ಸ್ವೀಕರಿಸುವ ಔಚಿತ್ಯದ ಬಗ್ಗೆ ಯೋಚಿಸಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ಚುನಾಯಿತ ಸರ್ಕಾರವೊಂದು ನೀಡುವ ಪ್ರಶಸ್ತಿಯನ್ನೇ ನಿರಾಕರಿಸಬೇಕು ಎಂಬುದು ಬಂಡಾಯ ಸಾಹಿತಿಗಳು ಹಿಂದೆ ತಳೆದ ನಿಲುವಾಗಿತ್ತು. ಆದರೆ ಜ್ಞಾನಪೀಠ ಸರ್ಕಾರಿ ಪ್ರಶಸ್ತಿಯೂ ಅಲ್ಲ. ಯಾವುದೇ ಸಾರ್ವಜನಿಕ ಸಂಸ್ಥೆ ನೀಡುವ ಪ್ರಶಸ್ತಿಯೂ ಅಲ್ಲ. ಬಂಡವಾಳಶಾಹಿಯೊಬ್ಬ ತನ್ನ ಅನೈತಿಕ ಸಂಪಾದನೆಯ ಲಾಭದಿಂದ ಸ್ಥಾಪಿಸಿದ ಪ್ರಶಸ್ತಿಯ ಬಗ್ಗೆ ಇಷ್ಟೆಲ್ಲ ಚರ್ವಿತ ಚರ್ವಣ ನಡೆದಿದೆ.

ಉದ್ಯಮಪತಿಯೊಬ್ಬ ತನ್ನ ಲಾಭದ ಹಣದಿಂದ ನೀಡುವ ಪ್ರಶಸ್ತಿಯನ್ನು ಸ್ವೀಕರಿಸಿ ಸಂಭ್ರಮಿಸಬೇಕೆ? ನಾಡಿನ ಜನ ಸಂಕಟದ ಬೆಂಕಿಯಲ್ಲಿ ಬೆಂದು ಹೋಗುತ್ತಿದ್ದಾರೆ. ಪೌಷ್ಟಿಕ ಆಹಾರದ ಕೊರತೆಯಿಂದ ಮಕ್ಕಳನ್ನು ಸಾವನ್ನಪ್ಪುತ್ತಿದ್ದಾರೆ. ಸುಪ್ರೀಂ ಕೋರ್ಟ್ ನೇಮಿಸಿದ ಆಯೋಗದ ಪರ ವಕೀಲರು, "ರಾಜ್ಯದಲ್ಲಿ 70 ಸಾವಿರ ಮಕ್ಕಳು ಪೌಷ್ಟಿಕ ಆಹಾರದಿಂದ ಬಳಲುತ್ತಿದ್ದಾರೆ. 2009ರ ಏಪ್ರಿಲ್‌ನಿಂದ 2011ರ ಆಗಸ್ಟ್‌ವರೆಗೆ ರಾಯಚೂರು ಜಿಲ್ಲೆಯೊಂದರಲ್ಲೇ 2069 ಮಕ್ಕಳು ಸಾವನ್ನಪ್ಪಿದ್ದಾರೆ. ಇಂತಹ ಸನ್ನಿವೇಶದಲ್ಲಿ ಇಂತಹ ಪ್ರಶಸ್ತಿಗಾಗಿ ಸಂಭ್ರಮಿಸಿ, ಕರ್ನಾಟಕದ ಹಿರಿಮೆ ಎನ್ನಬೇಕೆ? ಸಾವಿರಾರು ಕನ್ನಡ ಶಾಲೆಗಳು ಮುಚ್ಚಿಹೋಗುತ್ತಿವೆ. ಕನ್ನಡ ಭಾಷಾ ಮಾಧ್ಯಮವನ್ನೇ ಹೊಸಕಿ ಹಾಕಲಾಗುತ್ತಿದೆ. ವಾಸ್ತವ ಸ್ಥಿತಿ ಹೀಗಿರುವಾಗ, ಯಾವುದಕ್ಕಾಗಿ ನಾವು ಸಂಭ್ರಮಿಸಬೇಕು?

ಜ್ಞಾನಪೀಠ ಪ್ರಶಸ್ತಿ ಪಡೆದವರೆಲ್ಲ, ಆ ಪ್ರಶಸ್ತಿಗಾಗಿಯೇ ಬರೆದಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಇಂತಹ ಪ್ರಶಸ್ತಿಗಳು ಬಂದಾಗ, ನಮ್ಮ ಸುತ್ತಲಿನ ಕರ್ನಾಟಕವು ನಮ್ಮ ಹಿರಿಯ ಸಾಹಿತಿಗಳ ಕಣ್ಣಿನ ದೃಷ್ಟಿಯಲ್ಲಿರಲಿ. ಸೃಷ್ಟಿಶೀಲ ಲೇಖಕ ಪ್ರಶಸ್ತಿ, ಪದವಿಗಳಿಗಾಗಿ ಬಾಯ್ತೆರೆದು ನಿಲ್ಲಬಾರದು. ಕುವೆಂಪು ತಮ್ಮ ಕವನವೊಂದರಲ್ಲಿ, "ಹಾಡುಹಕ್ಕಿಗೆ ಬೇಕೆ ಬಿರುದು-ಸಮ್ಮಾನ" ಎಂದು ಸ್ವಾಭಿಮಾನದಿಂದ ಪ್ರಶ್ನಿಸಿದ್ದಾರೆ. ಇಂಥ ಪ್ರಶಸ್ತಿಗಿಂತ ಜನರ ಬದುಕು ಮುಖ್ಯ. ಕಂಬಾರ ಅವರಂತಹ ಲೇಖಕರು, ಪ್ರಶಸ್ತಿ ಪಡೆಯುವ ಬಗ್ಗೆ ಅಭ್ಯಂತರವಿಲ್ಲ. ಅವರೆಂದೂ ತನ್ನನ್ನು ಹೋರಾಟಗಾರ ಎಂದು ಗುರುತಿಸಿಕೊಂಡಿಲ್ಲ. ಆದರೆ ಪ್ರಗತಿಪರ ಎಂದು ಹೇಳಿಕೊಳ್ಳುವವರು ತಮ್ಮ ಆತ್ಮಸಾಕ್ಷಿಯನ್ನು ಒತ್ತೆಯಿಡಬಾರದಲ್ಲವೇ? ಜಾಗತೀಕರಣದ ನಂತರದ ದಿನಗಳಲ್ಲಿ ನಿರ್ಣಾಯಕ ಸಂಘರ್ಷಕ್ಕೆ ರಾಷ್ಟ್ರ ಕಾಲಿಡುತ್ತಿರುವಾಗ ಲೇಖಕರು ತಾವು ಯಾರ ಪರವಾಗಿ ನಿಲ್ಲಬೇಕು ಎಂಬುದನ್ನು ಲೇಖಕರು ಸ್ಪಷ್ಟಪಡಿಸಬೇಕಾಗಿದೆ.

ಗಣಿಗಾರಿಕೆಯಿಂದ ಬಳ್ಳಾರಿಯ ಪರಿಸರ ರಿಪೇರಿಯಾಗದಷ್ಟು ಹದಗೆಟ್ಟು ಹೋಗಿದೆ. ಭೂ ಮಾಫಿಯಾ ಹಾವಳಿಯಿಂದ ಜನಸಾಮಾನ್ಯರಿಗೆ ಸೂರು ಸಿಗದಂತಾಗಿದೆ. ಜಾಗತೀಕರಣದ ಪರಿಣಾಮವಾಗಿ ಮುಂದಿನ ಪೀಳಿಗೆಯ ಭವಿಷ್ಯ ಇನ್ನೂ ಆತಂಕ ಕಾರಿಯಾಗಿದೆ. ಈ ನಿಟ್ಟಿನಲ್ಲಿ ಆಲೋಚಿಸಿ, ಹೋರಾಟದ ಮುಂಚೂಣಿಯಲ್ಲಿ ಇರಬೇಕಾದವರು ಪ್ರಶಸ್ತಿಗಳಿಗಾಗಿ ಜೊಲ್ಲು ಸುರಿಸಿದರೆ, ಮುಂದಿನ ಪೀಳಿಗೆ ಕ್ಷಮಿಸುವುದಿಲ್ಲ. □

ಕಾದಂಬರಿ ಸ್ಪರ್ಧೆ

"ಪುಸ್ತಕಯಾನ" ಪ್ರಕಾಶನ ಸಂಸ್ಥೆಯ ತನ್ನ ಮೊದಲ ಹುಟ್ಟುಹಬ್ಬದ ಪ್ರಯುಕ್ತ ಕಾದಂಬರಿ ಸ್ಪರ್ಧೆಯನ್ನು ಏರ್ಪಡಿಸಿದೆ. ಆಸಕ್ತ ಕಾದಂಬರಿಕಾರರು ಇದುವರೆಗೆ ಎಲ್ಲಿಯೂ ಯಾವ ಪ್ರಕಾರದಲ್ಲಿಯೂ ಪ್ರಕಟವಾಗಿಲ್ಲದ ಅಚ್ಚಿನಲ್ಲಿ ನೂರು-ನೂರಿಪ್ಪತ್ತು ಪುಟಗಳ ಮಿತಿಯೊಳಗಿರುವಂತಹ ತಮ್ಮ ಕಾದಂಬರಿಗಳ ಹಸ್ತಪ್ರತಿಗಳನ್ನು ಡಿಸೆಂಬರ್ 31, 2011ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕು. ಬಹುಮಾನದ ಮೊತ್ತ ಐದು ಸಾವಿರ ರೂಪಾಯಿಗಳು. ಸ್ಪರ್ಧೆಗೆ ವಯಸ್ಸಿನ ಅಥವಾ ಇನ್ನಾವುದೇ ಬಗೆಯ ಮಿತಿಗಳಿರುವುದಿಲ್ಲ. ಅತ್ಯುತ್ತಮ ಎನಿಸಿದ ಒಂದು ಕೃತಿಯನ್ನು ಆಯ್ಕೆಮಾಡಿ ಪ್ರಕಟಿಸಿ 2012ರ ಯುಗಾದಿಯ ಸಮಯಕ್ಕೆ ಮೈಸೂರಿನಲ್ಲಿ ಲೋಕಾರ್ಪಣೆಗೊಳಿಸಲಾಗುವುದು. ಸ್ಪರ್ಧೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ಪ್ರಕಾಶಕರ ತೀರ್ಮಾನವೇ ಅಂತಿಮ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **pusthaksyaana@gmail. com**

ಹಸ್ತಪ್ರಗತಿಗಳನ್ನು ಕಳುಹಿಸಬೇಕಾದ ವಿಳಾಸ:
ಶ್ರೀ ಎಂ. ದೊರೆರಾಜು,
'ಪುಸ್ತಕಯಾನ', # 654,
ಕೂಗುಬಂಡೆ ರಸ್ತೆ, 'ಇ' ಮತ್ತು 'ಎಫ್' ಬ್ಲಾಕ್,
ಕುವೆಂಪುನಗರ, ಮೈಸೂರು-570 023

ಮತ್ತೆ ಬಿಪಿಎಲ್ ಸರ್ವೇ!

ಶಾರದಾ ಗೋಪಾಲ

ಮತ್ತೆ ಬಿಪಿಎಲ್ ಸರ್ವೆಯಂತೆ! ಬಡತನ ರೇಖೆಯ ಕೆಳಗೆ ಇರುವ ಕುಟುಂಬಗಳನ್ನು ಗುರುತಿಸುವ ಉದ್ದೇಶದಿಂದ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಆಧಾರಿತ ಗಣತಿಯನ್ನು ಮಾಡಲು ಕೇಂದ್ರ ಸರಕಾರವು ಉದ್ದೇಶಿಸಿದೆ. ಇನ್ನು ಕೆಲವೇ ದಿನಗಳಲ್ಲಿ ಸರ್ವೆ ಶುರುವಾಗಲಿದೆ. ಸರಕಾರವು ಯೋಜಿಸುವ ಸವಲತ್ತುಗಳನ್ನು ಮತ್ತು ಪಡಿತರವನ್ನು ಪಡೆಯಲು ಅರ್ಹತೆ ಉಳ್ಳ ಅತ್ಯಂತ ಬಡವರನ್ನು ಗುರುತಿಸುವುದಕ್ಕಾಗಿ ಸರಕಾರವು ಇಂಥ ಸರ್ವೆಯನ್ನು ಮಾಡಿಸುತ್ತದೆ. ಆದರೆ ದುರದೃಷ್ಟವೆಂದರೆ ಸರ್ವೆ ವಿಧಾನದಲ್ಲೇ ಇರುವ ದೋಷವು ಬಹುತೇಕ ಬಡವರನ್ನು ಇದರಿಂದ ಹೊರಗಿಡುತ್ತದೆ. ಮತ್ತು ಬಡವರಲ್ಲದವರು ಅದರೊಳಗೆ ಸೇರಿಕೊಳ್ಳುತ್ತಾರೆ.

ತನ್ನ ದೇಶವಾಸಿಗಳಿಗೆ ನೀಡುತ್ತಿರುವ ಸಾಮಾಜಿಕ ಭದ್ರತೆಯ ಹೊರೆಯನ್ನು ಸರಕಾರವು ಕಡಿಮೆ ಮಾಡಿಕೊಳ್ಳುವುದು ಈ ಸರ್ವೆಗಳ ಮೂಲ ಮುಖ್ಯ ಉದ್ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ಉಳ್ಳವರಿಗೆ ಸರಕಾರದ ರಕ್ಷಣೆ ಯಾಕೆ ಬೇಕು? ಇಲ್ಲದವರಿಗೆ ಇನ್ನೂ ಹೆಚ್ಚು, ಇನ್ನೂ ಚೆನ್ನಾಗಿ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶ ಸರಕಾರದ್ದು ಎಂದು ಇದನ್ನು ಬೆಂಬಲಿಸುವವರು ಹೇಳುತ್ತಾರೆ. ಯಾವ ರಂಗಗಳಲ್ಲಿ ಕೈಗಾರಿಕೆಗಳಿಗೆ ಅವಕಾಶಗಳು ಇರಲಿಲ್ಲವೋ, ಆ ರಂಗಗಳಲ್ಲಿ ಅವಕಾಶ ಪಡೆಯುವ, ಯಾವ ಯಾವ ರಂಗಗಳು ಸರಕಾರದ ನೇರ ಹತೋಟಿಯಲ್ಲಿದ್ದುವೋ ಅವನ್ನು ಒಂದೊಂದಾಗಿ ತಮ್ಮ ತೆಕ್ಕೆಯೊಳಕ್ಕೆ ತೆಗೆದುಕೊಳ್ಳುವ ವಿವಿಧ ಕೈಗಾರಿಕೆಗಳ ಹುನ್ನಾರ ಇದೆಲ್ಲದರ ಹಿಂದಿದೆ ಎನ್ನುವುದನ್ನು ನಾವಿಲ್ಲಿ ಅರ್ಥ ಮಾಡಿಕೊಳ್ಳಬೇಕು.

ಸಾರ್ವತ್ರಿಕ ಪಡಿತರ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಿ ಗುರಿ ಗುಂಪಿಗೆ ಮಾತ್ರ ಪಡಿತರ ವಿತರಣೆ ಮಾಡುವ ವಿಚಾರದ ಹಿಂದೆ ಹೆಚ್ಚು ಹೆಚ್ಚು ಜನರು ಪೇಟೆಯಿಂದಲೇ ತಮ್ಮ ಆಹಾರ ಪೂರೈಕೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶ ಇದೆ. ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಪುಕ್ಕಟೆಯಾಗಿ ಆರೋಗ್ಯ ಸೇವೆ ಇದ್ದುದನ್ನು ಹಿಂತೆಗೆದುಕೊಂಡು ಬಳಕೆದಾರರ ಫೀಯನ್ನು ಅಳವಡಿಸಿರುವುದು, ಪ್ರೀಮಿಯಮ್ ತುಂಬುವ ಆರೋಗ್ಯ ವಿಮಾ ಪದ್ಧತಿ ಇವೆಲ್ಲವೂ ಜನರು ಹಣಕೊಟ್ಟು ಖಾಸಗಿಯವರಿಂದ ಆರೋಗ್ಯ ಸೇವೆಯನ್ನು ಪಡೆದುಕೊಳ್ಳಲಿ ಎಂದು. ಶಿಕ್ಷಣ ಕಾಯಿದೆಯ ಹಿಂದಿನ ತತ್ವವೂ ಹೆಚ್ಚು ದುಡ್ಡು ಕೊಟ್ಟವರಿಗೆ ಮಾತ್ರ ಶಿಕ್ಷಣ ಎಂಬುದೇ ಆಗಿದೆ.

ಆಹಾರವಿರಲಿ, ಶಿಕ್ಷಣವಿರಲಿ ಅಥವಾ ಆರೋಗ್ಯ ಸೇವೆ ಇರಲಿ, ಅತಿ ಚಿಕ್ಕ ಗುರಿ ಗುಂಪಿಗೆ ಮಾತ್ರ ತಾನು ಜವಾಬ್ದಾರ ಎನ್ನುತ್ತದೆ ಸರಕಾರ. ಬಡತನ ರೇಖೆ ಎಂಬ ಒಂದು ಕಾಲ್ಪನಿಕ ಗೆರೆ ಎಳೆದು ಜನರನ್ನು ಅದರ ಹೊರಗೆ ದಾಟಿಸುವ ಪ್ರಯತ್ನ ಸತತವಾಗಿ ನಡೆದಿದೆ. ನಿಜವಾದ ಬಡವರನ್ನು ತಲುಪಬೇಕೆಂಬ ಕಳಕಳಿಗಿಂತಲೂ ಒಂದಷ್ಟು ಕುಟುಂಬಗಳಿಗೆ ಆಹಾರ, ಆರೋಗ್ಯ, ಶಿಕ್ಷಣವನ್ನು ತಾನು ಒದಗಿಸಿದ್ದೇನೆಂದು ಸಂಖ್ಯೆ ತೋರಿಸುವ ಗುರಿ ಮಾತ್ರ ಇಲ್ಲಿ ಇದೆ.

ದೇಶದಲ್ಲಿ ಬಡವರ ಸಂಖ್ಯೆಯು ಗಣನೀಯವಾಗಿ ಕಡಿಮೆ ಆಗುತ್ತಿದೆ ಎಂದು ಒಂದೊಂದು ಸರ್ವೆ ಮಾಡುವಾಗಲೂ ಹೇಳಿಕೊಳ್ಳುವುದು ಸರಕಾರದ ಉದ್ದೇಶವಿರುತ್ತದೆ. 1997ರಲ್ಲಿ ಸರ್ವೆ ಮಾಡುವ ಮೊದಲು ಭಾರತದ ಒಟ್ಟೂ ಜನಸಂಖ್ಯೆಯ 36% ಮಾತ್ರ ಬಡವರಿದ್ದಾರೆ ಎಂಬ ಅಂದಾಜಿನೊಂದಿಗೆ ಆರಂಭಿಸಲಾಗಿತ್ತು. 9ನೇ ಪಂಚವಾರ್ಷಿಕ ಯೋಜನೆ ಆರಂಭವಾಗುವ ಹೊತ್ತಿಗೆ ದೇಶದಲ್ಲಿ 29% ಜನ ಮಾತ್ರ ಬಡವರಿರುತ್ತಾರೆ. ಅದು ಜಾರಿಗೊಂಡನಂತರ ಬಡವರ ಸಂಖ್ಯೆ ಇನ್ನೂ ಗಣನೀಯವಾಗಿ ಕಡಿಮೆಯಾಗುತ್ತದೆ ಎಂಬುದು ಸರಕಾರದ ಆಶಯ. ಹೀಗೆಯೇ ಬಡವರ ಸಂಖ್ಯೆಯು ಕಡಿಮೆ ಆಗುತ್ತಾ 2001–02ರಲ್ಲಿ 10ನೇ ಪಂಚವಾರ್ಷಿಕ ಯೋಜನೆಯ ವೇಳೆಗೆ 17.7%, 11ನೇ ಪಂಚವಾರ್ಷಿಕ ಯೋಜನೆಯ 2006–07ರ ವೇಳೆಗೆ 9.2%ಕ್ಕೆ ಇಳಿದು ಈಗ 2011–12ರ 12ನೇ ಪಂಚವಾರ್ಷಿಕ ಯೋಜನೆ ಆರಂಭ ಆಗುವಾಗ ಅದು ಕೇವಲ 4.4% ಇರುತ್ತದೆ ಎಂದು ಸರ್ಕಾರಿ ಅಂದಾಜು. ಹೀಗಾಗಿ ನಿಜವಾದ ಬಡವರಿಗೆ ಬಿಪಿಎಲ್ ಕಾರ್ಡ್‌ನ್ನು ದೊರಕಿಸುವ ಕಾಳಜಿ ಬಿಪಿಎಲ್ ಸರ್ವೆಯಲ್ಲಿ ಕಾಣುತ್ತಿಲ್ಲ. 2002ರಲ್ಲಿ ಸರ್ವೆ ಮಾಡುವಾಗಲೇ ಈ ಮೂಲ ಉದ್ದೇಶ ಎದ್ದುಕಂಡಾಗ ಸರ್ವೆಗೆ ತೀವ್ರ ಪ್ರತಿರೋಧ ಬಂತು.

ಸಾರ್ವತ್ರಿಕ ಪಡಿತರ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಿ ಗುರಿ ಗುಂಪಿಗೆ ಮಾತ್ರ ಪಡಿತರ ವಿತರಣೆ ಮಾಡುವ ವಿಚಾರದ ಹಿಂದೆ ಹೆಚ್ಚು ಹೆಚ್ಚು ಜನರು ಪೇಟೆಯಿಂದಲೇ ತಮ್ಮ ಆಹಾರ ಪೂರೈಕೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶ ಇದೆ. ಆಹಾರವಿರಲಿ, ಶಿಕ್ಷಣವಿರಲಿ ಅಥವಾ ಆರೋಗ್ಯ ಸೇವೆ ಇರಲಿ, ಅತಿ ಚಿಕ್ಕ ಗುರಿ ಗುಂಪಿಗೆ ಮಾತ್ರ ತಾನು ಜವಾಬ್ದಾರ ಎನ್ನುತ್ತದೆ ಸರಕಾರ. ಬಡತನ ರೇಖೆ ಎಂಬ ಒಂದು ಕಾಲ್ಪನಿಕ ಗೆರೆ ಎಳೆದು ಜನರನ್ನು ಅದರ ಹೊರಗೆ ದಾಟಿಸುವ ಪ್ರಯತ್ನ ಸತತವಾಗಿ ನಡೆದಿದೆ. ನಿಜವಾದ ಬಡವರನ್ನು ತಲುಪಬೇಕೆಂಬ ಕಳಕಳಿಗಿಂತಲೂ ಒಂದಷ್ಟು ಕುಟುಂಬಗಳಿಗೆ ಆಹಾರ, ಆರೋಗ್ಯ, ಶಿಕ್ಷಣವನ್ನು ತಾನು ಒದಗಿಸಿದ್ದೇನೆಂದು ಸಂಖ್ಯೆ ತೋರಿಸುವ ಗುರಿ ಮಾತ್ರ ಇಲ್ಲಿ ಇದೆ.



ಈ ರೀತಿಯಾಗಿ ಯೋಜಿತ ಪ್ರಮಾಣದಲ್ಲಿ ಬಡತನವು ಇಳಿಯುತ್ತ ಬಂದಿದ್ದರೆ ಖಂಡಿತವಾಗಿಯೂ ಬಿಪಿಎಲ್ ಕುಟುಂಬಗಳಿಗೆ ಪಡಿತರ ಅಥವಾ ಆರೋಗ್ಯ, ಶಿಕ್ಷಣದ ಸೇವೆಗಳು ಬೇಕಾಗಿಯೇ ಇಲ್ಲ. 5% ಜನಸಂಖ್ಯೆಗೆ ಅವರವರ ಖಾತೆಗಳಿಗೆ ಒಂದಷ್ಟು ಸಬ್ಸಿಡಿ ಹಣವನ್ನು ಹಾಕುವುದರಲ್ಲಿ ಹೆಚ್ಚು ಅರ್ಥವಿರುತ್ತದೆ.

ಆದರೆ ಹಾಗೆ ಆಗಿದೆಯೇ? ಇಂದು ದೇಶದಲ್ಲಿ ನೂರಕ್ಕೆ 4.4 ರಷ್ಟು ಮಾತ್ರ ಬಡವರಿದ್ದಾರೆಯೆ? ಖಂಡಿತ ಇಲ್ಲ. ಎಷ್ಟು ವೈವಿಧ್ಯಮಯ ಅಳತೆಗೋಲುಗಳನ್ನು ಬಳಸಿ ನೋಡಿದರೂ ಬಡವರ ಸಂಖ್ಯೆಯನ್ನು ಯೋಜಿತ ಪ್ರಮಾಣದಲ್ಲಿ ಇಳಿಸಲು ಸಾಧ್ಯವಾಗಿಲ್ಲ. 9ನೇ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ 17.2% ಮತ್ತು 2006–07ರ ವೇಳೆಗೆ 9.2% ಕ್ಕಿಳಿಯಬೇಕಿದ್ದ ಬಡವರ ಸಂಖ್ಯೆ 2004–05ರ ವೇಳೆಗೆ ಮತ್ತೆ 27.5%ಕ್ಕೇರಿ ಕುಳಿತುಬಿಟ್ಟಿತು.

ಬಡವರ ಸಂಖ್ಯೆಯು ನೂರಕ್ಕೆ 36ರಿಂದ 26ಕ್ಕಿಳಿದಿದೆ ಎಂದು ಸರಕಾರವು ಹೇಳಿಕೊಂಡಾಗಲೇ ಆ ಲೆಕ್ಕಾಚಾರದ ಬಗ್ಗೆ ಗುಮಾನಿಯುಂಟಾಗಿ ಗುಲ್ಲೆದ್ದಿತ್ತು. ಅಂದರೆ ಐದೇ ವರ್ಷದಲ್ಲಿ ಪ್ರತಿ 10ರಲ್ಲಿ 3 ಕುಟುಂಬಗಳು ಬಡತನದಿಂದ ಹೊರಬಂದುಬಿಟ್ಟವೇ? ಸುಪ್ರೀಂ ಕೋರ್ಟಿನಲ್ಲಿ ಈ ಬಿಪಿಎಲ್ ಸರ್ವೆಯನ್ನು 'ಆಹಾರದ ಹಕ್ಕಿಗಾಗಿ ಆಂದೋಲನ'ವು ಪ್ರಶ್ನೆ ಮಾಡಿತು.

2002 ರ ಸರ್ವೆಯ ವಿರೋಧಕ್ಕೆ ಎರಡನೆಯ ಕಾರಣ ಈ ಸರ್ವೆಯಲ್ಲಿ ಇದ್ದ ಅಳತೆಗೋಲು ಅಥವಾ ಮಾನದಂಡ. ಇದನ್ನೂ ಕೂಡ ಸುಪ್ರೀಂ ಕೋರ್ಟಿನ ಮೂಲಕ ಪ್ರಶ್ನಿಸಿದಾಗ ಸುಪ್ರೀಂ ಕೋರ್ಟು ಸರ್ವೆಗೆ ತಡೆಯಾಜ್ಞೆ ಕೊಟ್ಟಿತು. 'ಲೆಕ್ಕದ ಪ್ರಕಾರ ಬಡವರ ಸಂಖ್ಯೆಯನ್ನು ಇಳಿಸಲೇ ಬೇಕು ಎಂಬ ಅಂಶಕ್ಕೆ ಸರಕಾರ ಅಂಟಿಕೊಳ್ಳಬಾರದು, ಮತ್ತು ಹೊಸದಾಗಿ ಯಾರಾದರೂ ಅತಿ ಬಡವರು ಇದ್ದುದು ಕಂಡುಬಂದಲ್ಲಿ ಅವರನ್ನು ಸೇರಿಸಿಕೊಳ್ಳಲು ಅವಕಾಶ ಇರಬೇಕೆಂಬುದನ್ನು' ಸರಕಾರವು ಒಪ್ಪಿಕೊಂಡ ಮೇಲೆ ತಡೆಯಾಜ್ಞೆ ತೆರವಾಯಿತು. ಜೊತೆಗೆ ಸುಪ್ರೀಂ ಕೋರ್ಟಿಗೆ ಆಹಾರದ ಹಕ್ಕಿನ ವಿಚಾರದಲ್ಲಿ ಕಮೀಶನರ್ ಆಗಿರುವ ಎನ್.ಸಿ ಸಕ್ಸೆನಾ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದನ್ನು ಸಲಹೆಗಾಗಿ ನೇಮಿಸಲಾಯಿತು. 2009ರಲ್ಲಿ ಸಕ್ಸೆನಾ ಸಮಿತಿಯು ಮುಂದಿನ ಸರ್ವೆಗೆ ಬಳಸಬೇಕಾದ ಮಾನದಂಡಗಳನ್ನು ಸೂಚಿಸಿದ್ದಲ್ಲದೆ ಹಳ್ಳಿಗಳಲ್ಲಿ ವಾಸಿಸುವ 50% ಜನರನ್ನು ಬಡವರೆಂದು ಪರಿಗಣಿಸಬೇಕೆಂದು ಹೇಳುವುದರ ಜೊತೆಗೆ ಸರಕಾರವೇ ಹೇಳಿರುವಂಥ ದಿನಕ್ಕೆ 2400 ಕ್ಯಾಲೊರಿಗೂ ಕಡಿಮೆ ಆಹಾರ ತಿನ್ನುವ ಜನರು ಹಳ್ಳಿಗಳಲ್ಲಿ ಇಂದಿಗೂ 80% ರಷ್ಟಿದ್ದಾರೆ ಎಂದು ಹೇಳಿತು. ಸುಪ್ರೀಂ ಕೋರ್ಟ್ ನೇಮಿಸಿದ ಈ ಸಮಿತಿಯ ನಿರ್ಣಯವನ್ನು ಬದಿಗೆ ತಳ್ಳಿ ಸರಕಾರವು ತನ್ನದೇ ಇಚ್ಛೆಯಲ್ಲಿ ತೆಂಡೂಲ್ಕರ್‌ರ ನೇತೃತ್ವದ ಇನ್ನೊಂದು ಸಮಿತಿಯನ್ನು ನೇಮಿಸಿತು. ಮತ್ತು ಬಡವರನ್ನು ಗುರುತಿಸುವ ಮಾನದಂಡಗಳನ್ನೇ ಬದಲು ಮಾಡಿತು.

ಹೀಗೆ ಸುಪ್ರೀಂ ಕೋರ್ಟ್ ನಿರ್ದೇಶನದ ಸಕ್ಸೆನಾ ಸಮಿತಿ ಒಂದು, ಅದನ್ನು ಕಡೆಗಣಿಸಿ ಸರಕಾರ ತಾನೇ ನೇಮಿಸಿದ ತೆಂಡೂಲ್ಕರ್ ಸಮಿತಿ ಒಂದು. ಎರಡರದ್ದೂ ಮಾನದಂಡಗಳು ಬೇರೆ ಬೇರೆ. ಸಕ್ಸೆನಾ ಸಮಿತಿಯು ಗ್ರಾಮೀಣ ಭಾಗದ 50% ಜನರನ್ನು ಬಡವರೆಂದು

ಯೋಜನಾ ಆಯೋಗವು ರೂಪಿಸಿರುವ ಹೊಸ ಮಾನದಂಡಗಳಲ್ಲಿ ತರ್ಕವೂ ಇಲ್ಲ, ಮಾನವೀಯತೆಯೂ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 26 ರೂಪಾಯಿ ಮತ್ತು ಶಹರದಲ್ಲಿ ದಿನಕ್ಕೆ 32 ರೂ. ಖರ್ಚು ಮಾಡುವರು ಬಡವರಲ್ಲ ಎನ್ನುತ್ತದೆ ಈ ಅಳತೆಗೋಲು. ಇಷ್ಟು ಖರ್ಚು ಮಾಡಲು ಯೋಗ್ಯತೆ ಉಳ್ಳವರಿಗೆ ಸರಕಾರವು ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಬೇಕಿಲ್ಲ ಎಂದು ಯೋಜನಾ ಆಯೋಗವು ತನ್ನ ಅತಾರ್ಕಿಕ ಮಾನದಂಡಕ್ಕೆ ಪ್ರಧಾನ ಮಂತ್ರಿಗಳ ಕಚೇರಿಯಿಂದಲೂ ಒಪ್ಪಿಗೆ ಪಡೆದು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದೆ.

ಪರಿಗಣಿಸಬೇಕೆಂದು ಹೇಳಿದರೆ ತೆಂಡೂಲ್ಕರ್ ಸಮಿತಿಯು ಗ್ರಾಮೀಣ ಭಾಗದಲ್ಲಿ 41.8% ಮಾತ್ರ ಬಡವರು ಎನ್ನುತ್ತದೆ. ದೇಶದ ಮಟ್ಟದಲ್ಲಿ ಈ ವ್ಯತ್ಯಾಸ 1.3 ಕೋಟಿ ಕುಟುಂಬಗಳಾಗುತ್ತವೆ. ಈ ವ್ಯತ್ಯಾಸವು ಒಡಿಶಾದಲ್ಲಿ 25% ನಷ್ಟಿದ್ದು 16 ಲಕ್ಷ ಮನೆಗಳು ಬಡತನ ರೇಖೆಯ ಹೊರಗುಳಿದುಬಿಡುತ್ತವೆ. ಮೂರಕ್ಕೆ ಒಂದು ಕುಟುಂಬ ಬಡತನದಲ್ಲಿದ್ದೂ ಬಿಪಿಎಲ್ ಸೌಲಭ್ಯಗಳಿಂದ ವಂಚಿತವಾಗುತ್ತದೆ. ಇನ್ನು ಜಾರ್ಖಂಡದಲ್ಲಂತೂ ಸಕ್ಸೆನಾ ಸಮಿತಿಯು ಜನಸಂಖ್ಯೆಯ 82.1% ಬಡವರು ಎಂದು ಗುರುತಿಸಿದ್ದರೆ ತೆಂಡೂಲ್ಕರ್ ಸಮಿತಿಯಲ್ಲಿ ಬಡವರು 50% ಮಾತ್ರ. ಉತ್ತರಖಂಡದಲ್ಲಿ ಸಕ್ಸೆನಾ ಸಮಿತಿಯು 70% ಎಂದರೆ ತೆಂಡೂಲ್ಕರ್ ಸಮಿತಿಯು 35% ಎನ್ನುತ್ತದೆ! ಮಾನದಂಡಗಳು ಬೇರೆ ಬೇರೆ ಆದಾಗ ಬರುವ ಉತ್ತರಗಳೂ ಬೇರೆ ಬೇರೆಯದೇ ತಾನೇ? ರಾಷ್ಟ್ರೀಯ ಮಟ್ಟದಲ್ಲಿ ಕಂಡು ಬಂದ ವ್ಯತ್ಯಾಸಕ್ಕಿಂತ ಬಿಹಾರ, ಮಧ್ಯಪ್ರದೇಶ ಮುಂತಾದ ದೇಶದ ಅತಿ ಬಡ (ಬಿಮಾರು) ರಾಜ್ಯಗಳಲ್ಲೇ ಬಡವರ ಸಂಖ್ಯೆಯಲ್ಲಿ ಅಪಾರ ಪ್ರಮಾಣದ ವ್ಯತ್ಯಾಸ ಕಂಡುಬಂದಿತು. ಯಾವ ರಾಜ್ಯಗಳಲ್ಲಿ ಬಡವರಿಗಾಗಿ ಅತಿ ಹೆಚ್ಚು ಕೆಲಸಗಳಾಗಬೇಕಿತ್ತೋ ಆ ರಾಜ್ಯಗಳಲ್ಲಿ ಬಡವರೇ ಇಲ್ಲ ಎಂದು ದಾಖಲಿಸಿದಾಗ ಆ ಬಡವರ ಪರಿಸ್ಥಿತಿ 'ಗರೀಬಿ ಹಟಾವೋ' ಇದ್ದುದು 'ಗರೀಬೋಂಕೋ ಹಟಾವೋ' ಆದಂತಾಯಿತು.

ತೆಂಡೂಲ್ಕರರು ಅಮೆರಿಕಾದ ಆಹಾರ ಮತ್ತು ಕೃಷಿ ಸಂಸ್ಥೆ ಹೇಳಿರುವ ಮಾನದಂಡಗಳನ್ನು ಬಳಸಿ ನಮ್ಮ ದೇಶದ ಬಡವರನ್ನು ಅಳೆಯಲು ಬಳಸಿದ್ದರು. ದಿನಕ್ಕೆ 2400 ಬದಲಿಗೆ 1770 ಕ್ಯಾಲೊರಿ ತಿಂದರೆ ಸಾಕು ಎನ್ನುತ್ತದೆ ಈ ಮಾನದಂಡ. ಅಂದರೆ ಬಡವರು ಮೇಲ ಕ್ಕೇಳಲಿಲ್ಲವೆಂದು ಅಳತೆ ಪಟ್ಟಿಯನ್ನೇ ಕೆಳಕ್ಕಿಳಿಸಿದ ಲೆಕ್ಕ ಇದು. ಹೆಚ್ಚು ಮೈ ಮುರಿದು ದುಡಿಯದ, ಕುಳಿತೇ ಕೆಲಸ ಮಾಡುವವರು ತಿನ್ನಬೇಕಾಗಿದ್ದು 1770 ಕ್ಯಾಲರಿ ಆಹಾರ. ಮೈಮುರಿದು ದುಡಿಯದಿದ್ದರೆ ಗತಿ ಇಲ್ಲದ ಗ್ರಾಮೀಣ ಪ್ರದೇಶದವರಿಗೂ ಕೂಡ 1770 ಕ್ಯಾಲೊರಿ ಮಾತ್ರ ತಿನ್ನಿಸಿದರೆ ಅವರ ಆರೋಗ್ಯ ಏನಾದೀತು?

ಯೋಜನಾ ಆಯೋಗವು ರೂಪಿಸಿರುವ ಹೊಸ ಮಾನದಂಡಗಳಲ್ಲಿ ತರ್ಕವೂ ಇಲ್ಲ, ಮಾನವೀಯತೆಯೂ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 26 ರೂಪಾಯಿ ಮತ್ತು ಶಹರದಲ್ಲಿ ದಿನಕ್ಕೆ 32ರೂ. ಖರ್ಚು ಮಾಡುವವರು ಬಡವರಲ್ಲ ಎನ್ನುತ್ತದೆ ಈ ಅಳತೆಗೋಲು. ಇಷ್ಟು ಖರ್ಚು ಮಾಡಲು ಯೋಗ್ಯತೆ ಉಳ್ಳವರಿಗೆ ಸರಕಾರವು ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಸಬೇಕಿಲ್ಲ ಎಂದು ಯೋಜನಾ ಆಯೋಗವು ತನ್ನ ಅತಾರ್ಕಿಕ ಮಾನದಂಡಕ್ಕೆ ಪ್ರಧಾನಮಂತ್ರಿಗಳ ಕಚೇರಿಯಿಂದಲೂ ಒಪ್ಪಿಗೆ ಪಡೆದು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿದೆ.

ಹೊರಹಾಕುವ ಪ್ರಸ್ತಾಪ

ಈ ಸರ್ವೆಯ ಪ್ರಕಾರ ಎರಡೂವರೆ ಎಕರೆ ಜಮೀನು ಇದ್ದು ಕೊಳವೆ ಬಾವಿ ಇರುವ ರೈತ ಬಿಪಿಎಲ್ ಅಲ್ಲ. ನಮ್ಮ ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಅವಲೋಕಿಸಿದಾಗ , ಬಿಪಿಎಲ್‌ನಿಂದ ನಿರ್ವಿವಾದವಾಗಿ ಯಾರನ್ನೆ ಆಗಲಿ ಹೊರಗಿಡುವುದು ಸುಲಭವಲ್ಲ. ಹವಾಮಾನದ ಅನಿಶ್ಚಿತತೆ, ಬರ ಮತ್ತು ನೆರೆಗಳ ಮಧ್ಯೆ ಕೃಷಿಯ ಅನಿಶ್ಚಿತತೆಯಲ್ಲಿ ಬದುಕಿಕೊಂಡಿರುವ ದೊಡ್ಡ ಪ್ರಮಾಣದ ಸಣ್ಣ ರೈತರಿಗೆ ಅನ್ಯಾಯವೇ ಆಗುತ್ತದೆ. ಮನೆಯಲ್ಲಿ ಮೋಟರ್ ಇದೆಯೇ? ಹಾಗಿದ್ದರೆ ಅದು ಬಡ ಕುಟುಂಬ ಅಲ್ಲ. ಸೆಕೆಂಡ್ ಹ್ಯಾಂಡ್ ಮೊಪೆಡ್ ಇಟ್ಟುಕೊಂಡು ಹಾಲು ಅಥವಾ ತರಕಾರಿಯನ್ನು ಹಳ್ಳಿಯಿಂದ ಪೇಟೆಗೆ ತರುವ ಮನುಷ್ಯ ಬಡತನ ರೇಖೆಯ ಮೇಲ್ಗಡೆ. ಅದೇ ರೀತಿ ಮೋಟರ್ ಹಚ್ಚಿದ ದೋಣಿ ಇರುವ ಮೀನುಗಾರರು ಬಡತನ ರೇಖೆಯೊಳಗೆ ಇರುವುದಿಲ್ಲ. ವ್ಯವಸಾಯಕ್ಕೆ ಹೊರತಾದ ಚಿಕ್ಕ ಉದ್ದಿಮೆಯನ್ನು ಯಾವುದೇ ರೈತ ಕುಟುಂಬವು ಸರಕಾರದಲ್ಲಿ ನೋಂದಣಿ ಮಾಡಿಸಿದ್ದರೆ ತನ್ನಿಂದ ತಾನೇ ಆ ಕುಟುಂಬವು ಬಿಪಿಎಲ್‌ನಿಂದ ಹೊರಗಾಗುತ್ತದೆ. ಸ್ವಸಹಾಯ ಸಂಘದಿಂದ ಪಡೆದ ಚಿಕ್ಕ ಸಾಲದಲ್ಲಿ ಉದ್ಯಮ ಮಾಡುವ ಹುಮ್ಮಸ್ಸಿನಿಂದ ನೋಂದಣಿಯಾಗಿದ್ದರೂ ಕೂಡ ಅಂಥವರು ಬಿಪಿಎಲ್‌ನೊಳಗೆ ಬರುವುದಿಲ್ಲ. ರೈತರು, ಮೀನುಗಾರರು, ನೇಕಾರರು, ಕುಶಲ ಕರ್ಮಿಗಳು, ಚಿಕ್ಕ ವ್ಯಾಪಾರಿಗಳು ಬಡತನ ರೇಖೆಯಿಂದ ತನ್ನಿಂದ ತಾನೇ ಹೊರಗೆ ಉಳಿಯುತ್ತಾರೆ. ಮೀನುಗಾರರಿಗೆ ಯಾಂತ್ರೀಕೃತ ದೋಣಿ ಇದ್ದಾಗ, ವ್ಯಾಪಾರಿಗೆ ಮೊಪೆಡ್ ಇದೆಯೆಂಬ ಕಾರಣಕ್ಕೆ, ರೈತರ ಬಳಿ ಪಂಪು ಇದೆ ಎಂಬ ಕಾರಣಕ್ಕೆ ಅವರು ಬಡವರಲ್ಲ ಎನಿಸುತ್ತಾರೆ.

ಹಾಗಾದರೆ ಯಾರ್ಯಾರು ಬಿಪಿಎಲ್?

ಬಡವರನ್ನು ಬಿಪಿಎಲ್‌ನೊಳಗೆ ಸೇರಿಸಿಕೊಳ್ಳುವದಕ್ಕಾಗಿ ಮಾಡಿರುವ 5 ಅಂಶಗಳು ಅದೆಷ್ಟು ವಿಚಿತ್ರವಾಗಿವೆ ಎಂದರೆ ದೇಶದ 5% ಜನರನ್ನೂ ಕೂಡಾ ಬಿಪಿಎಲ್ ಒಳಗೆ ಅದು ತರುವುದಿಲ್ಲ. ಮೂಲ ಉದ್ದೇಶವೂ ಅದೇ ತಾನೇ? ಮನೆ ಮಠವಿಲ್ಲದೆ ಭಿಕ್ಷೆ ಬೇಡುತ್ತ ಬೀದಿಯಲ್ಲಿ ಉಳಿದುಬಿಡುವ ಜನರು, ಮಲ ಹೊರುವವರು, ಮೂಲ ನಿವಾಸಿಗಳು, ಕಾನೂನಾತ್ಮಕವಾಗಿ ಬಿಡುಗಡೆ ಹೊಂದಿರುವ ಜೀತದಾಳುಗಳು, ಮನೆ ಇಲ್ಲದವರು, ತಂತಾನೇ ಬಿಪಿಎಲ್ ಪಟ್ಟಿಯಲ್ಲಿ ಸೇರಿಕೊಳ್ಳುತ್ತಾರೆ.

ಸಕ್ಸೆನಾ ಸಮಿತಿಯಲ್ಲಿ ಒಂಟಿ ಮಹಿಳೆ, ವಯಸ್ಕರಲ್ಲದವರು, ಅಂಗವಿಕಲರು ಮನೆಯ ಮುಖ್ಯಸ್ಥರಾಗಿದ್ದರೆ ಮತ್ತು ದಲಿತರಿದ್ದರೆ ಆ ಕುಟುಂಬ ತನ್ನಿಂದ ತಾನೇ ಬಿಪಿಎಲ್ ಆಗುತ್ತಿತ್ತು. ಆದರೆ ಈ ಸರ್ವೆಯಲ್ಲಿ ಈ ಅಂಶವನ್ನು ತೆಗೆಯಲಾಗಿದೆ. ಹಾಗೆಯೇ ದಲಿತ ಮುಸ್ಲಿಮ್, ದಲಿತ ಕ್ರಿಶ್ಚಿಯನ್ನರು, ಅಂಗವಿಕಲ ಹೆಣ್ಣುಮಗಳು ನಡೆಸುತ್ತಿರುವ ಕುಟುಂಬ ಇವೆಲ್ಲ ತನ್ನಿಂದ ತಾನೇ ಬಿಪಿಎಲ್ ಪಟ್ಟಿಯೊಳಗೆ ಸೇರಿಕೊಳ್ಳಬೇಕಾಗಿತ್ತು. ಎಚ್.ಐ.ವಿ. ಇದ್ದವರು ಹಾಗೆಂದು ಹೇಳಬೇಕು. ಅದು ಸಾರ್ವಜನಿಕವಾಗಿ ಘೋಷಿತವಾಗುತ್ತದೆ ಆದರೆ ಅವರು ಬಿಪಿಎಲ್ ಪಟ್ಟಿಗೆ ಸೇರಿಕೊಳ್ಳುವುದಿಲ್ಲ. ಮಕ್ಕಳಿಂದ ಹೊರ ಹಾಕಲ್ಪಟ್ಟ ವೃದ್ಧರು ಕೆಲವು ದಿನಗಳಾದರೂ ದುಡಿದು ಗಳಿಸುತ್ತಿದ್ದು ಅರೆಹೊಟ್ಟೆ ಉಣ್ಣುತ್ತಿದ್ದರೆ ಅವರು ಕೂಡಾ ಈ ಗುಂಪಿನಲ್ಲಿ ಬರುವುದಿಲ್ಲ. ಪರಿಶಿಷ್ಟ ಜಾತಿ/ಪಂಗಡ, ವಿಧವೆಯರು, ಅಂಗವಿಕಲರು, ಅಸಂಘಟಿತ ಕೂಲಿಕಾರರು ಇವರು ಯಾರೂ ನೇರವಾಗಿ ಬಿಪಿಎಲ್ ಪಟ್ಟಿಯಲ್ಲಿ ಬರುವುದಿಲ್ಲ.

ಅಂಥವರಿಗೆ ಈ ಏಳು ಪ್ರಶ್ನೆಗಳನ್ನು ಕೇಳಿ ಅಂಕಗಳನ್ನು ಕೊಡಲಾಗುತ್ತದೆ. ತನ್ನಿಂದ ತಾನೇ ಕುಟುಂಬಗಳನ್ನು ಬಡತನ ರೇಖೆಯಿಂದ ಹೊರಗೆ ಅಥವಾ ಒಳಗೆ ಉಳಿಸುವ ಮ್ಯಾಜಿಕ್ ಪ್ರಶ್ನೆಗಳು ಇವು. 2002ರ ಪ್ರಶ್ನಾವಳಿಯಲ್ಲಿ 13 ಅಂಶಗಳಿದ್ದವು. ಒಂದೊಂದಕ್ಕೂ ನಾಲ್ಕು ಮಾರ್ಕುಗಳು. ಅಂದರೆ ಒಟ್ಟೂ 52 ಮಾರ್ಕುಗಳು. ಅದರಲ್ಲಿ 0 ಬಂದರೆ ಅತ್ಯಂತ ಹೆಚ್ಚು ಬಡವ, 52 ಬಂದರೆ ಬಡವನಲ್ಲ. ಈಗಿನ ಪ್ರಶ್ನಾವಳಿಯಲ್ಲಿ ಕೇವಲ 7 ಪ್ರಶ್ನೆಗಳಿವೆ. ಒಂದಕ್ಕೆ 1 ಮಾರ್ಕು. 0 ಪಡೆದರೆ ಶ್ರೀಮಂತ, 7 ಪಡೆದರೆ ಬಡವ ಎಂದರ್ಥ. ಪ್ರತಿಯೊಬ್ಬ ವ್ಯಕ್ತಿಯನ್ನೂ ಪ್ರಶ್ನೆ ಮಾಡಿ ಕಂಪ್ಯೂಟರಿನಲ್ಲಿ ತುಂಬಿಕೊಳ್ಳುತ್ತಾರೆ.

* ಪ್ರಶ್ನೆ 1. ಒಂದೇ ಕೋಣೆ ಇರುವ ಕಚ್ಚಾ ಗೋಡೆಯ, ಕಚ್ಚಾ ಸೂರು ಇರುವ ಮನೆಯವರು–1 ಅಂಕ. ಆ ಮನೆಯಲ್ಲಿ ನೀವು ಕಷ್ಟಪಟ್ಟು ಎರಡು ರೂಮುಗಳನ್ನು ಹಾಕಿದ್ದರೆ, ಹಂಚು ಹಾಕಿಸಿದ್ದರೆ ನಿಮ್ಮ ಅಂಕ '0'.

* ಪ್ರಶ್ನೆ 2. 16–59 ರ ಮಧ್ಯದ ವಯಸ್ಸಿನ ಯಾವುದೆ ವಯಸ್ಕರು ಇಲ್ಲದ ಕುಟುಂಬ–1 ಅಂಕ. 59 ವರ್ಷದೊಳಗಿನ ಅಂಗವಿಕಲ ತಂದೆ ಇರುವ ಭೂಹೀನ ಕುಟುಂಬದಲ್ಲಿ 16 ವರ್ಷದ ಮಗನು ದುಡಿದು ಹಾಕುತ್ತಿದ್ದರೆ, ಆ ಕುಟುಂಬಕ್ಕೆ '0'

* ಪ್ರಶ್ನೆ 3. ಹೆಣ್ಣು ಮಗಳು ಮುಖ್ಯಸ್ಥರಾಗಿರುವ ಕುಟುಂಬದಲ್ಲಿ 16–59 ವಯಸ್ಸಿನೊಳಗಿನ ಯಾವುದೆ ದುಡಿಯುವ ಗಂಡಸರು ಇಲ್ಲವೆಂದರೆ–1 ಅಂಕ. ಕಾಲೇಜು ಕಲಿಯುತ್ತಿರುವ 17 ವರ್ಷದ ಯುವಕ ಮನೆಯಲ್ಲಿದ್ದರೂ ಆ ಕುಟುಂಬಕ್ಕೆ '0' ಮಾರ್ಕು. ಅಂಗವಿಕಲ ಹೆಂಗಸು ತನ್ನ ಶಾಲೆಗೆ ಹೋಗುತ್ತಿರುವ 16 ವರ್ಷದ ಮಗನೊಂದಿಗೆ ಇದ್ದರೆ ಆಕೆಯ ಕುಟುಂಬಕ್ಕೆ ಅಂಕ ಸಿಗುವುದಿಲ್ಲ. ಯಾಕೆಂದರೆ ಮಗನಿಗೆ 16 ವರ್ಷವಾಗಿದೆ.

* ಪ್ರಶ್ನೆ 4. ಮನೆಯಲ್ಲಿ ಒಂದಾದರೂ ಅಂಗವಿಕಲ ಸದಸ್ಯ ಇದ್ದು ದುಡಿಯುವವರು ಯಾರೂ ಇಲ್ಲವೆಂದರೆ–1 ಅಂಕ.

* ಪ್ರಶ್ನೆ 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ –1 ಅಂಕ. ಕೇವಲ ಹಿಂದೂ, ಸಿಕ್ಕರನ್ನು ಮಾತ್ರ ದಲಿತರಲ್ಲಿ ಸೇರ್ಪಡೆ ಮಾಡಲಾಗಿದೆ. ದಲಿತ ಮುಸ್ಲಿಮ್, ದಲಿತ ಕ್ರಿಶ್ಚಿಯನ್ನರು ಇದರಲ್ಲಿ ಬರುವುದಿಲ್ಲ.

* ಪ್ರಶ್ನೆ 6. ಕುಟುಂಬದಲ್ಲಿ 25 ವರ್ಷಕ್ಕಿಂತ ಮೇಲ್ಪಟ್ಟ, ಅಕ್ಷರಸ್ಥ ಸದಸ್ಯ ಇಲ್ಲವೆಂದರೆ–1 ಅಂಕ. ನಿಮಗೆ 3ನೇ ಕ್ಲಾಸಿನ ತನಕ ಅಕ್ಷರಾಭ್ಯಾಸ ಆಗಿದ್ದರೆ ನಿಮಗೆ '0' ಅಂಕ. ಸಾಕ್ಷರತಾ ಆಂದೋಲನದಲ್ಲಿ ಸಹಿ ಮಾಡಲು ಕಲಿತ ನವ ಸಾಕ್ಷರರು ಇದ್ದರೆ ಎಷ್ಟು ಅಂಕವೋ ಗೊತ್ತಿಲ್ಲ.

* ಪ್ರಶ್ನೆ 7. ಭೂ ಹೀನ ಕುಟುಂಬ, ಅವರ ಗಳಿಕೆಯ ಒಂದೇ ಮಾರ್ಗವೆಂದರೆ ನಿತ್ಯ ದುಡಿಯುವುದು–1 ಅಂಕ. ನಿಮಗೆ ಅರ್ಧ ಗುಂಟೆ ಹೊಲವಿದ್ದರೂ ನೀವು ಈ ಪ್ರಶ್ನೆಗೆ '0' ಅಂಕವನ್ನೇ ಪಡೆಯುತ್ತೀರಿ.

ಒಬ್ಬ ಪರಿಶಿಷ್ಟ ಜಾತಿಯ ಮಹಿಳೆಗೆ ಒಬ್ಬ ವಯಸ್ಸಾದ ತಾಯಿ ಇದ್ದಾಳೆ, 17 ವರ್ಷ ವಯಸ್ಸಿನ ಕಲಿಯುತ್ತಿರುವ ಮಗ, ಇಬ್ಬರು ಪೋಲಿಯೋ ಆಗಿರುವ ಹುಡುಗಿಯರು ಇದ್ದರೆ, ಅರ್ಧ ಎಕರೆ ಜಮೀನು ಇದ್ದು ನಿತ್ಯ ದುಡಿದೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರೆ ಆಕೆಗೆ ಸಿಗುವ ಅಂಕಗಳು 7 ಕ್ಕೆ 1 ಮಾತ್ರ. ಈ ರೀತಿಯಾಗಿ ಬಡವರ ಬಡತನವನ್ನು ಅಲ್ಲಗಳೆಯುವ ಪ್ರಯತ್ನ ನಮ್ಮ ಯೋಜನಾ ಆಯೋಗದವರದ್ದು.

ಹೀಗೆ ಅಂಕಗಳನ್ನು ಪಡೆದ ಕುಟುಂಬಗಳ ಪಟ್ಟಿಯನ್ನು ರಾಜ್ಯ ಸರಕಾರಗಳು ತಯಾರಿಸುತ್ತವೆ. ಆ ನಂತರ ಒಂದೊಂದು ರಾಜ್ಯಕ್ಕೂ ನೂರಕ್ಕೆ ಇಂತಿಷ್ಟು ಕುಟುಂಬಗಳನ್ನು ಮಾತ್ರ ಬಿಪಿಎಲ್ ಎಂದು ಗುರುತಿಸಬೇಕೆಂದು ಕೇಂದ್ರ ಸರಕಾರ ಹೇಳುತ್ತದೆ. ಕೇಂದ್ರ ಸರಕಾರ ಕೊಟ್ಟ ಸಂಖ್ಯೆ ಆಧರಿಸಿ 7 ಕ್ಕೆ 4 ಬಿದ್ದವರು ಬಡವರೋ, 5 ಬಿದ್ದವರು ಬಡವರೋ ಅಥವಾ 7 ಬಿದ್ದವರು ಮಾತ್ರ ಬಡವರೋ ಎಂದು ಆಯಾ ರಾಜ್ಯಗಳು ಲೆಕ್ಕ ಹಾಕಬೇಕು.

ಮನೆಯಲ್ಲಿ ಒಬ್ಬ ಅಂಗವಿಕಲ ಇದ್ದರೂ ಆ ಕುಟುಂಬಕ್ಕೆ ವಿಶೇಷ ಸ್ಥಾನ ಕೊಡಬೇಕಾಗಿತ್ತು. ಆದರಿಲ್ಲಿ ಒಂದು ಅಂಗವಿಕಲ ಇರುವ ಮನೆಯಲ್ಲಿ ಕೂಡ ದುಡಿಯುವ ವಯಸ್ಕ ವ್ಯಕ್ತಿ ಇಲ್ಲವೆಂದರೆ. ಎಂಬ ಅಂಶ ಸೇರಿದಾಗ ಆ ಕುಟುಂಬವು ಆದ್ಯತೆಯಲ್ಲಿ ಹಿಂದೆ ಸರಿದು ಬಿಡುತ್ತದೆ. ಬಡವರನ್ನು ಬಡತನ ರೇಖೆಯೊಳಗೆ ಸೇರಿಸುವ ಎಲ್ಲಾ ಪ್ರಶ್ನೆಗಳೂ ಒಂದಲ್ಲ ಒಂದು ಕಾರಣದಿಂದ ಅವರನ್ನು ಬಡತನ ರೇಖೆಯ ಹೊರಗೇ ಇರಿಸಿಬಿಡುತ್ತದೆ.

ಇಡೀ ಹಳ್ಳಿಯ ಸರ್ವೆ ಮಾಡಿಯಾದ ನಂತರ ಗ್ರಾಮ ಸಭೆಯಲ್ಲಿ ಒಂದೊಂದು ಕುಟುಂಬವನ್ನೂ ಎತ್ತಿಕೊಂಡು ಅವರು ಬಡವರೋ ಅಲ್ಲವೋ ಎಂದು 13 ಪ್ರಶ್ನೆಗಳಿಂದ ಅಳೆಯುತ್ತಾರೆ. 13 ಪ್ರಶ್ನೆಗೆ ಉತ್ತರ ಹೇಳಲು ಒಂದು ಕುಟುಂಬಕ್ಕೆ 15 ನಿಮಿಷ ಸಾಕು ಎಂದು ಹಿಡಿದರೂ 1000 ಜನರ ಒಂದು ಹಳ್ಳಿಯ ಎಲ್ಲರದ್ದೂ ಪ್ರಶ್ನಾವಳಿ ಮುಗಿಯಲು ಗ್ರಾಮ ಸಭೆಗೆ ಕನಿಷ್ಠ ಒಂದು ತಿಂಗಳು ಬೇಕು. ಎಲ್ಲಾದರೂ ಎಂದಾದರೂ ಒಂದು ತಿಂಗಳ ಕಾಲ ಗ್ರಾಮ ಸಭೆ ನಡೆದ ದಾಖಲೆ ಇದೆಯೇ?

ಈ ಬಾರಿ ಪಕ್ಕಾ ಸರ್ವೆ. ಕಂಪ್ಯೂಟರಿನಲ್ಲಿ ಸರ್ವೆ. ಏನೇನೂ ತಪ್ಪುಗಳಾಗಲು ಸಾಧ್ಯವಿಲ್ಲ ಎನ್ನುತ್ತದೆ ಸರಕಾರ. ಆದರೆ ಕಂಪ್ಯೂಟರಿನಲ್ಲಿ ತುಂಬುವವರು ಮನುಷ್ಯರೇ ತಾನೇ? ಬಿಳಿ ಹಾಳೆಯಲ್ಲಿ ಬರೆಯುವ ಬದಲಿಗೆ ಪುಟ್ಟ ಕೈ ಕಂಪ್ಯೂಟರನ್ನು ಹಿಡಿದು ಮನೆ ಮನೆಗೆ ಅವರು ಬರುತ್ತಾರೆ. ಜೊತೆಗೆ ಅಂಗನವಾಡಿ ಕಾರ್ಯಕರ್ತೆ ಅಥವಾ ಆಶಾ ಇರುತ್ತಾರಂತೆ. ಆದರೆ ಜನರು ಹೇಳಿದ್ದನ್ನು ಅಂತೆಯೇ ತುಂಬಿದ್ದಾರೆಂದು ಕಂಪ್ಯೂಟರ್ ಜ್ಞಾನ ಇಲ್ಲದವರು ತಿಳಿಯುವುದೆಂತು? ಏನೇ ಇರಲಿ, ಇದರಲ್ಲಿ ತುಂಬಿದ್ದೆಲ್ಲವೂ ಸತ್ಯ ಎಂದು ಅದನ್ನು ಪ್ರಮಾಣಿಸಿ ಹೆಬ್ಬೆರಳನ್ನು ಬೇರೆ ಒತ್ತಬೇಕಂತೆ!

2012ರಿಂದ ಬಿಪಿಎಲ್ ಕುಟುಂಬಗಳಿಗೆ ಮಾತ್ರ ಚಿಮಣಿ ಎಣ್ಣೆಯನ್ನು ಕೊಡುತ್ತೇವೆಂದು ಸರಕಾರ ಹೇಳುತ್ತಿದೆ. ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕವು ಕೂಡ ಕೇವಲ ಬಿಪಿಎಲ್ ಕುಟುಂಬಕ್ಕೆ. ಹೀಗೆ ಬಿಪಿಎಲ್‌ನಿಂದ ಹೊರಗುಳಿದಿರುವ ಕಾರಣಕ್ಕೆ ಚಿಮಣಿ ಎಣ್ಣೆಯೂ ಇಲ್ಲ, ಕಡಿಮೆ ದರದ ವಿದ್ಯುತ್ ಸಂಪರ್ಕವೂ ಇಲ್ಲ. ಪುಕ್ಕಟೆ ಔಷಧ, ಆರೋಗ್ಯ ಸೇವೆ ಇವೂ ಕೂಡ ಬಿಪಿಎಲ್ ಗೆ ಮಾತ್ರ. ಬಿಪಿಎಲ್ ವಿಧವೆಯರಿಗೆ ಮಾತ್ರ ವಿಧವಾ ವೇತನ, ಬಿಪಿಎಲ್ ಹೆಣ್ಣುಮಕ್ಕಳಿಗೆ ಮಾತ್ರ ಭಾಗ್ಯಲಕ್ಷ್ಮಿ, ಬಿಪಿಎಲ್‌ಗೆ ಮಾತ್ರ ಸಾಮಾಜಿಕ ಭದ್ರತೆ ಯೋಜನೆಗಳು ಸಿಗುತ್ತವೆಂದಾಗ ಸಹಜವಾಗಿಯೇ ಎಲ್ಲರೂ ಆ ಪಟ್ಟಿಯೊಳಗೆ ಸೇರಿಕೊಳ್ಳಲು ಬಯಸುತ್ತಾರೆ. ಎಣೆ ಇಲ್ಲದ ಭ್ರಷ್ಟಾಚಾರಕ್ಕೆ ಇದು ಕಾರಣವಾಗುತ್ತದೆ. ಬಿಪಿಎಲ್ ಕಾರ್ಡ್ ಇದ್ದವರಿಗೆ ಮಾತ್ರವೇ ಸಾಮಾಜಿಕ ಭದ್ರತೆ ಇರುವಾಗ ಬಿಪಿಎಲ್‌ನಿಂದಲೇ ಹೊರ ಹಾಕಲ್ಪಟ್ಟ ಬಡ ಕುಟುಂಬಗಳಿಗೆ ಯಾವ ರೀತಿಯ ಸಾಮಾಜಿಕ ಭದ್ರತೆ?

ಬಿಪಿಎಲ್ ಸರ್ವೆಯ ನೇರ ಹೊಡೆತ ಬೀಳುವುದು ಚಿಕ್ಕ ಹಿಡುವಳಿದಾರರಿಗೆ, ಅಂಚಿನಲ್ಲಿ ಬದುಕುತ್ತಿರುವವರಿಗೆ. ನಮ್ಮ ದೇಶದ ಆರ್ಥಿಕತೆಗೆ ಸಣ್ಣ ರೈತರು, ಸಾಮಾನ್ಯ ಮೀನುಗಾರರು, ಚಿಕ್ಕ ವ್ಯಾಪಾರಿಗಳು, ಕುಶಲ ಕರ್ಮಿಗಳು. ಇವರ ಕೊಡುಗೆ ಅಪಾರವಾಗಿದ್ದರೂ ದೇಶವು ಇವರಿಗೆ ಏನನ್ನೂ ಕೊಡದು. ಜಾಗತೀಕರಣದ ಹಿನ್ನೆಲೆಯಲ್ಲಿ ಚಿಕ್ಕ ಹಿಡುವಳಿದಾರರಿಗೆ ಯಾವುದೇ ರೀತಿಯ ಪ್ರೋತ್ಸಾಹವಂತೂ ಇಲ್ಲವೇ ಇಲ್ಲ. ಇನ್ನು ಸಾಮಾಜಿಕ ಭದ್ರತೆಯನ್ನೂ ತೆಗೆದುಹಾಕಿದರೆ ಬಲು ಬೇಗ ಬಡತನದ ರೇಖೆಯೊಳಗೆ ಬೀಳುವಂಥ ಪರಿಸ್ಥಿತಿಯನ್ನು ತಲುಪುತ್ತಾರೆ. ರೈತರಿಗೆ ಕೊಡುವ ಸಬ್ಸಿಡಿಯನ್ನೂ ಸೀದಾ ಅವರ ಖಾತೆಗೆ ಹಾಕುವ ಪ್ರಯತ್ನವು ಗೊಬ್ಬರಗಳ ಬೆಲೆ ಹೆಚ್ಚುವ ಸೂಚನೆಯನ್ನು ಕೊಡುತ್ತಿದೆ. ಪಡಿತರದಲ್ಲಿ ಕಾಳಿನ ಬದಲಿಗೆ ಕ್ಯಾಶ್ ಕೊಡುವ ಯೋಜನೆಯು ರೈತರಿಗೆ ಬೆಂಬಲ ಬೆಲೆ ನಿಲ್ಲುವ ಸೂಚನೆ. ನೇಕಾರರಿಗೆ, ಕುಶಲ ಕರ್ಮಿಗಳಿಗೆ, ಮೀನುಗಾರರಿಗೆ ಬಿಪಿಎಲ್ ಕಾರ್ಡ್ ಇದ್ದರೆ ಸರಕಾರದಿಂದ ಪ್ರೋತ್ಸಾಹಕ ನೆರವು ಇರುತ್ತಿತ್ತು. ಅವರನ್ನೇ ಬಿಪಿಎಲ್‌ನಿಂದ ತೆಗೆದು ಹಾಕಿದಾಗ ಇನ್ನು ನೆರವೆಲ್ಲಿಂದ? ಪ್ರೋತ್ಸಾಹವೆಲ್ಲಿಂದ? ಬಿಪಿಎಲ್ ಹೆಣ್ಣು ಮಕ್ಕಳಿಗೆ ಸ್ವ ಉದ್ಯೋಗ ಪ್ರಾರಂಭಿಸಲು ಎಸ್‌ಜಿಎಸ್‌ವೈ ಯೋಜನೆಯಡಿ ಪ್ರೋತ್ಸಾಹಕ ಸಹಾಯಧನವಿತ್ತು. ಈಗ ಅದನ್ನು ಪಡೆದುಕೊಳ್ಳಬಲ್ಲ ಹೆಣ್ಣುಮಕ್ಕಳೇ ಕಡಿಮೆಯಾಗುತ್ತಾರೆ. ಹಪ್ಪಳ ಸಂಡಿಗೆ, ಖಾರದ ಪುಡಿಯಂಥ ಗೃಹೋದ್ಯೋಗಗಳಲ್ಲೂ ದೊಡ್ಡ ದೊಡ್ಡ ಉದ್ದಿಮೆಗಳು ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ಸ್ವ ಉದ್ಯೋಗಕ್ಕೆ ಸರಕಾರದ ನೆರವು ನಿಂತು ಹೋದಾಗ ಎಲ್ಲೆಲ್ಲೂ ದೊಡ್ಡ ಉದ್ದಿಮೆಗಳೇ ವಿಜೃಂಭಿಸುವ ದಿನ ದೂರವಿಲ್ಲ. ಅತ್ಯಲ್ಪ ಭೂಮಿ ಇದ್ದವರೂ, ಕೂಲಿ ಕೆಲಸದ ಹೊರತಾಗಿ ಇನ್ನಾವುದೇ ಕೆಲಸ ಮಾಡಿಕೊಂಡಿದ್ದವರು ಬಿಪಿಎಲ್ ಆಗಲಾರರು. ಚಿಕ್ಕ ಹಿಡುವಳಿದಾರರು ಬದುಕುಳಿಯ ಬೇಕೆಂಬ ವಿಚಾರ ಸರಕಾರಕ್ಕೆ ಇದ್ದಂತಿಲ್ಲ. ಇರುವ ಎಲ್ಲಾ ಭದ್ರತಾ ಸೌಲಭ್ಯಗಳನ್ನು ಹಿಂತೆಗೆದುಕೊಂಡರೆ ಕೊನೆಯು ಬೇಗ ಬರುತ್ತದೆ ಎಂದಿದ್ದರೆ ಅವೆಲ್ಲವನ್ನೂ ಬೇಗ ಮಾಡಲು ಸರಕಾರವು ಹೊರಟಂತಿದೆ. □

ಅಮೆರಿಕಾ ನಡೆಸಿದ ಯುದ್ಧಗಳು ನ್ಯಾಯಸಮ್ಮತವೆ?

ಸುರೇಶ್ ಭಟ್ ಬಾಕ್ರಬೈಲು

ಮಹಾಭಾರತ ಯುದ್ಧದ ಪ್ರಾರಂಭದಲ್ಲಿ ರಥಾರೂಢ ಅರ್ಜುನ ದೊಡ್ಡದೊಂದು ತೊಳಲಾಟಕ್ಕೆ ತುತ್ತಾಗಿದ್ದ. 'ಅನಾಗರಿಕ ವಿರೋಧಿಗಳೊಂದಿಗೆ ಸುಸಂಸ್ಕೃತನಾದ ತಾನು ಹೋರಾಡುವುದು ಸರಿಯಲ್ಲ. ಇದರಿಂದ ಲೋಕದ ಸಂಕಟ ಪರಿಹಾರ ಆಗುವುದಿಲ್ಲ. ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿ ಅನ್ಯ ಮಾನವರನ್ನು ಯಾಕೆ ಸಂಹರಿಸಲಿ?' ಇವೇ ಮುಂತಾದ ಗೊಂದಲಗಳು ಅರ್ಜುನನ ಮನಸ್ಸಿನಲ್ಲಿ ಮೂಡಿದ್ದವು. ಸಾರಥಿ ಕೃಷ್ಣ ಅರ್ಜುನನ ಪಾಪಪ್ರಜ್ಞೆಯನ್ನು ನಿವಾರಿಸಿ ಆತನನ್ನು ಸಮರಕ್ಕೆ ಹುರಿದುಂಬಿಸುವುದಕ್ಕೋಸ್ಕರ ಕುರುಕ್ಷೇತ್ರದಲ್ಲೇ ಗೀತೋಪದೇಶ ಮಾಡಿದನೆನ್ನಲಾಗುತ್ತದೆ. ಕೃಷ್ಣ ಅರ್ಜುನನಿಗೆ 'ಆತ್ಮ ಅವಿನಾಶಿ. ಅದನ್ನು ಕೊಲ್ಲುತ್ತೇನೆಂದು ತಿಳಿದವನೂ ಅದು ಹತವಾಯಿತೆಂದು ತಿಳಿಯುವವನೂ ಇಬ್ಬರೂ ಏನೂ ಅರಿಯರು. ಇವರನ್ನೆಲ್ಲ ನಾನು ಮೊದಲೇ ಸಂಹರಿಸಿದ್ದೇನೆ. ನೀನು ಕೇವಲ ನಿಮಿತ್ತ ಮಾತ್ರ, ಎಲ್ಲಾ ಕರ್ಮಗಳಿಗೂ ನಾನೇ 'ಕರ್ತೃ'ಎಂದು ತಿಳಿಯುವವನು ಅಹಂಕಾರದಿಂದ ಮೂಢನಾದವನು. ಹೆದರಬೇಡ. ಕೊಲ್ಲು. ಯುದ್ಧ ಮಾಡು' ಎಂದು ಬೋಧಿಸಿದ ಎನ್ನಲಾಗುತ್ತದೆ.

ಎಲ್ಲವೂ ಭಗವದ್‌ನಿಯಮಕ ಮತ್ತು ಪೂರ್ವನಿಶ್ಚಿತ; ಆತ್ಮಕ್ಕೆ ಸಾವಿಲ್ಲ; ಆದ್ದರಿಂದ ಕೊಲೆ ಮತ್ತು ಮಾರಣಹೋಮ ಅಪರಾಧವಲ್ಲ ಎನ್ನುವ ವಾದಸರಣಿಯನ್ನು ಇಲ್ಲಿ ಕಾಣಬಹುದು. ಇದು ಗೀತೆಯಲ್ಲಿರುವ 'ನ್ಯಾಯಸಮ್ಮತ ಯುದ್ಧ' (just war) ಮತ್ತು 'ಅಪರಾಧವಲ್ಲದ ಕೊಲೆ'ಗಳ ಪರಿಕಲ್ಪನೆ. ಅಂದ ಹಾಗೆ ಗಾಂಧಿ ಮತ್ತು ಗಾಂಧಿ ಹಂತಕ ಗೋಡ್ಸೆ ಇಬ್ಬರ ಪಾಲಿಗೂ ಭಗವದ್ಗೀತೆ ಒಂದು ಪವಿತ್ರ ಧಾರ್ಮಿಕ ಗ್ರಂಥ ವಾಗಿತ್ತು. ಅವರಿಬ್ಬರೂ ಅದನ್ನು ತಮ್ಮದೇ ಆದ ರೀತಿಗಳಲ್ಲಿ ವ್ಯಾಖ್ಯಾನಿಸಿಕೊಂಡು ಬಳಸಿದ್ದರು. ತಾನು ಗಾಂಧಿಯನ್ನು ಕೊಲೆ ಮಾಡಿದುದು ನ್ಯಾಯಸಮ್ಮತ ವಾಗಿತ್ತೆಂದು ಸಮರ್ಥಿಸಿಕೊಳ್ಳಲು ಗೋಡ್ಸೆ ಭಗವದ್ಗೀತೆಯ ಶ್ಲೋಕಗಳನ್ನು ಉದ್ಧರಿಸಿದ್ದ!

ಇದೇ ರೀತಿಯ 'ನ್ಯಾಯಸಮ್ಮತ ಯುದ್ಧ'ದ ಪರಿಕಲ್ಪನೆಯನ್ನು ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲೂ ಕಾಣಬಹುದು. ಆಯಾ ಭಾಷೆಗಳಲ್ಲಿ ಇದನ್ನು 'ಜಿಹಾದ್', 'just war' ಎಂದೆಲ್ಲ ಕರೆಯಲಾಗಿದೆ. ಇವೆಲ್ಲ ಆಯಾ ಕಾಲಘಟ್ಟಗಳಲ್ಲಿ ಇದ್ದ ಸನ್ನಿವೇಶಗಳಿಗೆ ಅನುಗುಣವಾಗಿ ಹುಟ್ಟಿಕೊಂಡಿರುವ ಪರಿಕಲ್ಪನೆಗಳೆಂದು ತೋರುತ್ತದೆ.

ಹೇಗೆ ಅಣುಬಾಂಬು, ಖಂಡಾಂತರ ಅಣ್ವಸ್ತ್ರ ಕ್ಷಿಪಣಿಗಳು ಏಕಕಾಲಕ್ಕೆ ಸಾವಿರಾರು ಜನರನ್ನು ಬಲಿತೆಗೆದುಕೊಳ್ಳುವುದೇ ಅಲ್ಲದೆ ಲಕ್ಷಾಂತರ ಜನರನ್ನೂ, ಪರಿಸರವನ್ನೂ ವರ್ಷಾನುಗಟ್ಟಲೆ ಅಡ್ಡಪರಿಣಾಮಗಳಿಗೆ ಗುರಿಯಾಗಿಸಬಲ್ಲವು ಎನ್ನುವುದನ್ನು ನಾವೆಲ್ಲರೂ ಬಲ್ಲೆವು. ಹಾಗಾದರೆ ಈ ಅಣ್ವಸ್ತ್ರಗಳನ್ನು ಪ್ರಯೋಗಿಸುವ ಆಧುನಿಕ ಅರ್ಜುನರಿಗೆ ಯಾವುದೇ ರೀತಿಯ ನೈತಿಕ ಸಮಸ್ಯೆಗಳು ಕಾಡುವ ಸಾಧ್ಯತೆಗಳಿಲ್ಲವೇ? ಖಂಡಿತಾ ಇದೆ. ಆದುದರಿಂದಲೇ ಕೆಲವು ದೇಶಗಳು ಇದಕ್ಕಾಗಿ ಧರ್ಮಗಳ ಮೊರೆ ಹೊಕ್ಕಿವೆ. ಉದಾಹರಣೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನ. ಹೌದು, ಆಶ್ಚರ್ಯಕರವಾದರೂ ಇದು ನಿಜ! ರಾಜ್ಯಾಡಳಿತದ ಒಂದು ಯಂತ್ರಾಂಗವಾಗಿರುವ ಅಮೆರಿಕಾದ ಸೇನಾಪಡೆಯೊಳಗೆ ಧರ್ಮದ ಪ್ರವೇಶವಾಗಿದೆ. ಆಡಳಿತದಿಂದ ಧರ್ಮವನ್ನು ದೂರವಿಡಲಾಗುತ್ತದೆ ಎನ್ನಲಾಗುವ ಅಮೆರಿಕಾದ ಮಟ್ಟಿಗೆ ಹೀಗೆ ಧರ್ಮವನ್ನು ಇನ್ನೊಂದು ಮೂಲೆಯಿಂದ ಆಡಳಿತದೊಳಕ್ಕೆ ತೂರಿಸಿರುವುದು ದೊಡ್ಡದೊಂದು ವಿಪರ್ಯಾಸವೇ ಸರಿ!

> **ವರ್ನರ್ ವಾನ್ ರೌನ್ ವಿ2 ಖಂಡಾಂತರ ಕ್ಷಿಪಣಿಯನ್ನು ನಿರ್ಮಿಸಿದಾತ. ದ್ವಿತೀಯ ಮಹಾಯುದ್ಧದ ವೇಳೆ ಇದೇ ವಿ2 ಕ್ಷಿಪಣಿಯನ್ನು ಬ್ರಿಟನ್ ಮೇಲೆ ಪ್ರಯೋಗಿಸಲಾಗಿತ್ತು. ತತ್ಪರಿಣಾಮವಾಗಿ ಸಾವಿರಾರು ಬ್ರಿಟಿಷ್ ಪ್ರಜೆಗಳು ಸಾವನ್ನಪ್ಪಿದ್ದರು. ತನ್ನ ವಿವಿಧ ಯುದ್ಧಾಪರಾಧಗಳಿಗಾಗಿ ಜೀವನಪರ್ಯಂತ ಸೆರೆಮನೆ ಕಂಬಿ ಎಣಿಸಬೇಕಾಗಿದ್ದ ಈ ರೌನ್ ನನ್ನು ಅಮೆರಿಕಾಗೆ ಕರೆಸಿಕೊಂಡು ಬಾಹ್ಯಾಕಾಶ ಯೋಜನೆಗೆ ಬಳಸಿಕೊಂಡಿರುವುದರ ಹಿಂದೆ ಎಷ್ಟೊಂದು ದೊಡ್ಡ ಹುನ್ನಾರ ಇದ್ದಿರಬೇಕು ಯೋಚಿಸಿ.**

ಈಗ ನೇರವಾಗಿ ವಿಷಯಕ್ಕೆ ಬರೋಣ. ಅಮೆರಿಕಾದ ಕ್ಯಾಲಿಫೋರ್ನಿಯ ರಾಜ್ಯದಲ್ಲಿ ವ್ಯಾಂಡೆನ್‌ಬರ್ಗ್ ವಾಯುಸೇನಾ ನೆಲೆ ಇದೆ. ಅಲ್ಲಿ ಯೋಧರಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತದೆ. ಅವರ ಪೈಕಿ ಖಂಡಾಂತರ ಅಣ್ವಸ್ತ್ರ ಕ್ಷಿಪಣಿಗಳನ್ನು ಪ್ರಯೋಗಿಸುವ ಕಾರ್ಯಕ್ಕೆ ನಿಯುಕ್ತರಾದ ಶಿಕ್ಷಾರ್ಥಿ ಅಧಿಕಾರಿಗಳಿಗೆಲ್ಲ ಒಂದು ವಾರದ ನೀತಿಶಾಸ್ತ್ರ ಪಾಠ ಕಡ್ಡಾಯವಾಗಿತ್ತು. ನೀತಿಶಾಸ್ತ್ರದ ಪಾಠ ಹೇಳಿಕೊಡುತ್ತಿದ್ದವರು ಅಮೆರಿಕಾದ ಸೇನಾ ಪಡೆಯಲ್ಲಿ ಇರುವ ಪುರೋಹಿತರು (chaplain). ಶಿಕ್ಷಾರ್ಥಿಗಳಿಗೆ ಕ್ರೈಸ್ತ ಸಂತ ಆಗಸ್ಟಿನ್‌ರ 'ಕ್ರೈಸ್ತ ನ್ಯಾಯಸಮ್ಮತ ಯುದ್ಧ ಸಿದ್ಧಾಂತ'ದ (Christian Just War Theory) ಬಗ್ಗೆ ತಿಳಿಹೇಳಲಾಗುತ್ತಿತ್ತು. ಜೊತೆಗೆ ಬೈಬಲ್‌ನ ಹಳೆ ಮತ್ತು ಹೊಸ ಒಡಂಬಡಿಕೆಗಳನ್ನು ಉದ್ಧರಿಸಿ "ನ್ಯಾಯ ಮಾರ್ಗ"ದಲ್ಲಿ ಯುದ್ಧ ಮಾಡುತ್ತಿದ್ದ ಹಲವಾರು ವ್ಯಕ್ತಿಗಳ ಉದಾಹರಣೆಗಳನ್ನು ನೀಡಲಾಗುತ್ತಿತ್ತು.

ಸಂತ ಆಗಸ್ಟಿನ್‌ರ ಬೋಧನೆಗಳನ್ನು ವಾಯುಸೇನೆ ವ್ಯಾಖ್ಯಾನಿಸಿಕೊಂಡದ್ದು ಹೀಗೆ: 'ನ್ಯಾಯಸಮ್ಮತ ಯುದ್ಧವೊಂದನ್ನು ನಡೆಸಲು ನ್ಯಾಯಯುತ ಕಾರಣ ಮತ್ತು ನ್ಯಾಯಯುತ ಉದ್ದೇಶಗಳಿರುತ್ತವೆ. ಆಗಿರುವ ಕೆಡುಕಿಗೆ ಪರಿಹಾರ ಪಡೆಯುವುದು ಅಥವಾ ಕೆಡುಕನ್ನು ತಪ್ಪಿಸುವುದು; ಅಮಾಯಕರನ್ನು ರಕ್ಷಿಸುವುದು ಮತ್ತು ಸಮಾಜದಲ್ಲಿ ನೈತಿಕ ವ್ಯವಸ್ಥೆಯನ್ನು ಮರುಸ್ಥಾಪಿಸುವುದು ಇವು ನ್ಯಾಯಯುತ ಕಾರಣಗಳು. ನ್ಯಾಯಸಮ್ಮತ ಯುದ್ಧವನ್ನು ನೈತಿಕ ವ್ಯವಸ್ಥೆಯ ಮರುಸ್ಥಾಪನೆಗಾಗಿ ಮಾಡುವುದು ಮತ್ತು ಅದನ್ನು ಅಧಿಕಾರ ವಿಸ್ತರಣೆಗಾಗಿ, ಹೆಮ್ಮೆಗಾಗಿ ಅಥವಾ ಸೇಡು ತೀರಿಸಲು ಮಾಡದಿರುವುದು ನ್ಯಾಯಯುತ ಉದ್ದೇಶ.' ತರಬೇತಿಯ ವೇಳೆ 'ಬುಕ್ ಆಫ್ ರಿವಿಲೇಶನ್ಸ್' (Book of Revelations) ನಿಂದಲೂ ಕೆಲವು ವಿಷಯಗಳನ್ನು ಕಲಿಸಲಾಗುತ್ತಿತ್ತು. "ಶ್ರೇಷ್ಠ ಯೋಧ"ನಾದ ಯೇಸುಕ್ರಿಸ್ತ ಕೆಲವು ಯುದ್ಧಗಳನ್ನು ನ್ಯಾಯಯುತವೆಂದು ಕರೆದಿದ್ದನೆಂದು ವಾದಿಸಲಾಗುತ್ತಿತ್ತು. ಅಣ್ವಸ್ತ್ರ ಪ್ರಯೋಗದ ನಿರ್ಧಾರ ಸರಿಯೆಂದು ಸಮರ್ಥಿಸಿಕೊಳ್ಳಲು ಕ್ರೈಸ್ತ ಧರ್ಮಶಾಸ್ತ್ರವನ್ನು ಹೀಗೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿತ್ತು.

ಅಮೆರಿಕಾದ ಬಾಹ್ಯಾಕಾಶ ಯೋಜನೆಯ ಪಿತನೆಂದೇ ಪರಿಗಣಿಸಲ್ಪಟ್ಟಿರುವ ವರ್ನರ್ ವಾನ್ ರೌನ್ ಎಂಬಾತನ ಕೆಲವು ಚಿಂತನೆಗಳನ್ನೂ ಕಲಿಸಿಕೊಡಲಾಗುತ್ತಿತ್ತು. ವಾಯುಸೇನೆಯ ಈ ತರಬೇತಿ ಕಾರ್ಯಕ್ರಮದಲ್ಲಿ ಆತನನ್ನು ಓರ್ವ ನೈತಿಕ ತಜ್ಞನೆಂದು ಬಳಸಿಕೊಳ್ಳಲಾಗುತ್ತಿತ್ತು! ಜರ್ಮನ್ ಪ್ರಜೆಯಾದ ರೌನ್ ಹಿಂದೆ ನಾಜಿ ಪಕ್ಷದ ಮಾಜಿ ಸದಸ್ಯನಾಗಿದ್ದನಷ್ಟೇ ಅಲ್ಲ, ಎಸ್‌ಎಸ್ (Schutz Staffeinel, ಕರಿ ಸಮವಸ್ತ್ರದ ಪಡೆಗಳು) ನಲ್ಲಿ ಓರ್ವ ಮೇಜರ್ ಕೂಡ ಆಗಿದ್ದ. ಈತನೇ ವಿ2 ಖಂಡಾಂತರ ಕ್ಷಿಪಣಿಯನ್ನು ನಿರ್ಮಿಸಿದಾತ. ಅದರ ನಿರ್ಮಾಣ ಕಾರ್ಯದಲ್ಲಿ ಆತ ಬಳಸಿಕೊಂಡದ್ದು ನಾಜಿ ಶಿಬಿರಗಳಲ್ಲಿ ಬಂಧಿತರಾಗಿದ್ದ ಯಹೂದ್ಯರನ್ನು, ಫ್ರಾನ್ಸ್‌ನ ನಾಜಿ ವಿರೋಧಿಗಳನ್ನು, ನಾಗರಿಕರನ್ನು ಮತ್ತಿತರರನ್ನು. ದ್ವಿತೀಯ ಮಹಾಯುದ್ಧದ ವೇಳೆ ಇದೇ ವಿ2 ಕ್ಷಿಪಣಿಯನ್ನು ಬ್ರಿಟನ್ ಮೇಲೆ ಪ್ರಯೋಗಿಸಲಾಗಿತ್ತು. ತತ್ಪರಿಣಾಮವಾಗಿ ಸಾವಿರಾರು ಬ್ರಿಟಿಷ್ ಪ್ರಜೆಗಳು ಸಾವನ್ನಪ್ಪಿದ್ದರು. ತನ್ನ ವಿವಿಧ ಯುದ್ಧಾಪರಾಧಗಳಿಗಾಗಿ ಜೀವನಪರ್ಯಂತ ಸೆರೆಮನೆಯ ಕಂಬಿ ಎಣಿಸಬೇಕಾಗಿದ್ದ ಈ ರೌನ್‌ನನ್ನು ಅಮೆರಿಕಾಗೆ ಕರೆಸಿಕೊಂಡು ಬಾಹ್ಯಾಕಾಶ ಯೋಜನೆಗೆ ಬಳಸಿಕೊಂಡಿರುವುದರ ಹಿಂದೆ ಎಷ್ಟೊಂದು ದೊಡ್ಡ ಹುನ್ನಾರ ಇದ್ದಿರಬೇಕು ಯೋಚಿಸಿ.

ತರಬೇತಿ ಕಾರ್ಯಕ್ರಮದ ಕೊನೆಯಲ್ಲಿ ಶಿಕ್ಷಾರ್ಥಿಗಳಿಂದ ಒಂದು ಕಾನೂನುಪತ್ರಕ್ಕೆ ಸಹಿ ಹಾಕಿಸಿಕೊಳ್ಳಲಾಗುತ್ತಿತ್ತು. ಅದರಲ್ಲಿ 'ಯುಎಸ್‌ಎ ಅಧ್ಯಕ್ಷರು ಅಥವಾ ಅವರ ಕಾನೂನಾತ್ಮಕ ಉತ್ತರಾಧಿಕಾರಿ ಕಾನೂನಾತ್ಮಕವಾಗಿ ಆದೇಶ ನೀಡಿದರೆ ತಾನು ಖಂಡಾಂತರ ಅಣ್ವಸ್ತ್ರ ಕ್ಷಿಪಣಿಗಳನ್ನು ಪ್ರಯೋಗಿಸಲು ಹಿಂಜರಿಯುವುದಿಲ್ಲ.' ಎಂದು ಬರೆದಿರುತ್ತಿತ್ತು.

ಸುಮಾರು 20–25 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದ್ದ ಈ ಸಂವಿಧಾನ ವಿರೋಧಿ ಕಾರ್ಯಕ್ರಮಕ್ಕೆ ಇದೇ ಜುಲೈ ತಿಂಗಳಲ್ಲಿ ತೆರೆ ಬಿದ್ದಿದೆ. ಸೇನಾ ಧಾರ್ಮಿಕ ಸ್ವಾತಂತ್ರ್ಯ ಸಂಸ್ಥೆಯ (Military Religious Freedom Foundation) ಅವಿರತ ಶ್ರಮದಿಂದಾಗಿ ರಾಜಕಾರಣದಲ್ಲಿ ಧರ್ಮದ ದುರ್ಬಳಕೆ ಸದ್ಯಕ್ಕೆ ನಿಂತಿದೆ. ಅಮೆರಿಕಾದ ವಾಯುಸೇನೆ ಈಗ ಪರ್ಯಾಯ ವ್ಯವಸ್ಥೆಯ ಹುಡುಕಾಟದಲ್ಲಿದೆ.

ಕೃಪೆ: ಜುಲೈ–ಆಗಸ್ಟ್ 2011ರ 'ಕಮ್ಯೂನಲಿಸಂ ಕಾಂಬ್ಯಾಟ್' ನಲ್ಲಿ ಪ್ರಕಟವಾಗಿರುವ ಜೇಸನ್ ಲಿಯೊಪೋಲ್ಡ್‌ರ ಲೇಖನ.

ಶ್ರೀಯುತ ಬಿ.ವಿ. ವೀರಭದ್ರಪ್ಪರ ಕೃತಿ 'ಭಗವದ್ಗೀತೆ–ಒಂದು ವೈಚಾರಿಕ ಒಳನೋಟ' □

ಅಮೆರಿಕಾದಲ್ಲಿ ಸಿಡಿದೆದ್ದ ಬಂಡಾಯ : ಸಂಪತ್ತಿಗೆ ಸವಾಲ್!

ಹರ್ಷಕುಮಾರ್ ಕುಗ್ವೆ

ಹಲವಾರು ದಿನಗಳಿಂದ ನನಗೆ ಒಂದು ಬಯಕೆಯಿತ್ತು. ಅದೇನೆಂದರೆ ಅಮೆರಿಕವೇ ಅಮೆರಿಕದ ವಿರುದ್ಧ ಬಂಡೆದ್ದು ನಿಲ್ಲಬೇಕು ಎನ್ನುವ ಬಯಕೆ ಅದು. ಕಳೆದ ಸೆಪ್ಟೆಂಬರ್ 17ರಿಂದ ಅಮೆರಿಕದಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ನೋಡಿ ಕೊಂಚ ಥ್ರಿಲ್ ಆಗುತ್ತಿದೆ. ಜಗತ್ತಿನೆಲ್ಲೆಡೆ ನಡೆಯುತ್ತಿರುವ ಜನಾಂದೋಲನಗಳ ಸಾಲಿನಲ್ಲಿ ಈಗ ಅಮೆರಿಕದ ಜನರೂ ಹೊಸ ಹೆಜ್ಜೆ ಇಟ್ಟಿರುವುದು ನೋಡಿ ಖುಷಿಯಾಗಿದೆ. ಈ ಬಂಡಾಯ ಎಲ್ಲಿಯವರೆಗೆ ನಡೆಯುತ್ತದೆ, ಏನು ಸಾಧಿಸುತ್ತದೆ, ಯಾವುದೂ ಖಾತ್ರಿಯಿಲ್ಲ. ಆದರೆ ಜಗತ್ತಿನ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯೂ ಮುಕ್ತ ಮನಸ್ಸಿನಿಂದ ಬೆಂಬಲಿಸಬೇಕಾದ ಚಳವಳಿ ಇದು ಎಂದು ಮಾತ್ರ ಹೇಳಬಹುದು. ಇದಕ್ಕೆ ಕಾರಣಗಳನ್ನು ಸ್ವಲ್ಪ ವಿವರವಾಗಿ ಗಮನಿಸುವ ಮುನ್ನ ಇಲ್ಲಿ ಏನೇನಾಗುತ್ತಿದೆ ಎಂದು ನೋಡೋಣ.

ನಿಜಕ್ಕೂ ಅಚ್ಚರಿಯ ಹಾಗೂ ಬೇಸರದ ಸಂಗತಿಯೆಂದರೆ ಅಲ್ಲಿ ನಡೆಯುತ್ತಿರುವ ಇಂತಹ ಒಂದು ಅದ್ಭುತ ಬೆಳವಣಿಗೆಗೆ ನಮ್ಮ ಮಾಧ್ಯಮಗಳ ಪ್ರತಿಕ್ರಿಯೆ ಏನೂ ಇಲ್ಲವೆನ್ನುವಷ್ಟರ ಮಟ್ಟಿಗಿರುವುದು. ಇದು ಮಾಧ್ಯಮಗಳ ಜಾಣ ಮೌನವಾ? ಇದು ಇಲ್ಲಿನ ಮಾಧ್ಯಮಗಳ ಪರಿಸ್ಥಿತಿ ಮಾತ್ರವಲ್ಲ. ಅಮೆರಿಕದ ಮುಖ್ಯವಾಹಿನಿ ಮಾಧ್ಯಮಗಳೂ ಬೇಕೆಂದೇ ಈ ಚಳವಳಿಯ ಕುರಿತು ಉಪೇಕ್ಷೆಯನ್ನೂ ಹಾಗೂ ಅಪಪ್ರಚಾರವನ್ನೂ ನಡೆಸುತ್ತಿವೆ. ಈಜಿಪ್ಟಿನ, ಲಿಬಿಯಾದ, ಅಥವಾ ನಮ್ಮದೇ ಅಣ್ಣಾ ಚಳವಳಿಗಳನ್ನು ಮುಖಪುಟದಲ್ಲಿ ವಾರಗಟ್ಟಲೆ ವರದಿ ಮಾಡಿದ ಪತ್ರಿಕೆಗಳಿಗೆ, ಟೀವಿ ಚಾನಲ್‌ಗಳಿಗೆ ಈಗ ಕನಿಷ್ಠ ಒಂದು ವರದಿಯನ್ನೂ ಮಾಡದಿರುವಂಥದ್ದು ಏನಾಗಿದೆ?!

ಈಗ ಅಮೆರಿಕದಲ್ಲಿ ಆರಂಭಗೊಂಡಿರುವ ಚಳವಳಿ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' (Occupy Wall Street) ಚಳವಳಿ. ಮೊದಲಿಗೆ ಹತ್ತಾರು ಸಂಖ್ಯೆಯಲ್ಲಿ ಚಳವಳಿಗಾರರು ಆರಂಭಿಸಿದ ಈ ಚಳವಳಿಯಲ್ಲಿ ದಿನಕಳೆದಂತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರನ್ನು ಸೇರಿಸಿಕೊಂಡು ಕಾಳ್ಗಿಚ್ಚಿನಂತೆ ಅಮೆರಿಕಾದಾದ್ಯಂತ ವ್ಯಾಪಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ಹೊಸ ಪೀಳಿಗೆಯ ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು ಸೇರಿಕೊಳ್ಳುತ್ತಿದ್ದಾರೆ. ಮಾತ್ರವಲ್ಲ 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿಯನ್ನು ಬೆಂಬಲಿಸಿ ವಾಷಿಂಗ್ಟನ್ ಡಿಸಿ, ಬೋಸ್ಟನ್, ಚಿಕಾಗೋ, ಫಿಲಡೆಲ್ಫಿಯಾ, ಹೂಸ್ಟನ್, ಪೋರ್ಟ್‌ಲೆಂಡ್, ಒರೆಗಾಂವ್, ಸಿಯಾಟಲ್, ಟೆಕ್ಸಸ್, ಮುಂತಾದ ಹತ್ತಾರು ಕಡೆಗಳಲ್ಲಿ ಅದೇ ಮಾದರಿಯ ಚಳವಳಿಗಳೂ ಆರಂಭಗೊಳ್ಳುತ್ತಿವೆ. ದೊಡ್ಡ ಮತ್ತು ಸಣ್ಣ ಸುಮಾರು ಇನ್ನೂರು ನಗರಗಳಲ್ಲಿ ಪ್ರತಿಭಟನೆಗಳಾಗಿವೆ. ಮೊದಮೊದಲು ಇದನ್ನು ಬರೀ ಪಡ್ಡೆ ಹುಡುಗರ ಬಂಡಾಯ ಎಂದು ಉಪೇಕ್ಷೆ ಮಾಡಿದ್ದವರಿಗೆ ಈಗ ಆಘಾತವಾಗಿದೆ. ಅಮೆರಿಕದ ಹಲವಾರು ದೊಡ್ಡ ಕಾರ್ಮಿಕ ಸಂಘಟನೆಗಳೂ ನಿನ್ನೆ ಯಷ್ಟೇ ತಮ್ಮ ಬಹಿರಂಗ ಬೆಂಬಲವನ್ನು ಘೋಷಿಸಿವೆ. ವಾಲ್‌ಸ್ಟ್ರೀಟ್ ಬಳಿ ಇರುವ ಝುಕ್ಕೊಟ್ಟಿ ಪಾರ್ಕ್‌ನಲ್ಲಿ ನೂರಾರು ಕಾರ್ಯಕರ್ತರು ಕಾರ್ಡ್‌ಬೋರ್ಡ್ ಜೋಪಡಿ ಕಟ್ಟಿಕೊಂಡು ಕಳೆದ ಹದಿನೈದು ಇಪ್ಪತ್ತು ದಿನಗಳಿಂದ ಜಾಂಡಾ ಹೂಡಿದ್ದರೆ ಇವರಿಗೆ ಬೆಂಬಲವಾಗಿ ಅಮೆರಿಕಾದ್ಯಂತ ಸಾವಿರಾರು ಜನರು ಕೇರಾಫ್ 'ಆಕ್ಯುಪೈ ವಾಲ್‌ಸ್ಟ್ರೀಟ್' ವಿಳಾಸಕ್ಕೆ ತಮ್ಮ ಕೈಲಾಗುವಂಥಾದ್ದನ್ನೆಲ್ಲಾ ಸಹಾಯ ಮಾಡುತ್ತಿದ್ದಾರೆ. ಊಟ, ಬಟ್ಟೆ, ಬರೆ, ಮೊಬೈಲ್ ಫೋನ್‌ಗಳಿಗೆ ಬೇಕಾದ ಬ್ಯಾಟರಿಗಳು, ಬ್ಯಾಕಪ್ ಸರಕುಗಳು, ಬಾರಿಸಲು ಡ್ರಮ್‌ಗಳು, ಪೀಪಿಗಳು, ಹೀಗೆ ಏನೇನು ಸಾಧ್ಯವೋ ಎಲ್ಲಾ ಅಂಚೆಯ ಮೂಲಕ ಹರಿದು ಬರುತ್ತವೆ. ಗ್ರೀನ್ ಪೀಸ್ ಸಂಘಟನೆ ಈಗ ಪ್ರತಿಭಟನೆಯ ಸ್ಥಳದಲ್ಲಿ ಸೌರ ವಿದ್ಯುತ್ತನ್ನು ಅಳವಡಿಸುವ ಹೊಣೆ ಹೊತ್ತುಕೊಂಡಿದೆ. ಮಾತ್ರವಲ್ಲದೆ ಈಗ ಈ ಚಳವಳಿ 'ಸಾಮಾನ್ಯ ಶಾಸನಸಭೆ'ಗಳನ್ನೂ (General assembly) ಸಂಘಟಿಸುತ್ತಿದೆ.

ಒಟ್ಟಾರೆಯಾಗಿ ನಿಧಾನಕ್ಕೆ ಈ ಬಂಡಾಯ ಒಂದು ಬೃಹತ್ ಜನಾಂದೋಲನವಾಗಿ ಚಳವಳಿಯಾಗುವ. ಕಳೆದ ಒಂದು ದಶಕದಲ್ಲಿ ಅಮೆರಿಕದಲ್ಲಿ ವ್ಯವಸ್ಥೆಯ ವಿರುದ್ಧ ಜನಸಾಮಾನ್ಯರಲ್ಲಿ ಮಡುಗಟ್ಟಿರುವ ಆಕ್ರೋಶವನ್ನು ಗಮನಿಸಿದರೆ ಈ ಸೂಚನೆ ತೋರುತ್ತದೆ.

ನೀವೆಲ್ಲಾ 1984ರಲ್ಲಿ ತಥಾಕಥಿತ ಕಮ್ಯುನಿಸ್ಟ್ ಚೀನಾ ಸರ್ಕಾರದ ಸರ್ವಾಧಿಕಾರದ ವಿರುದ್ಧ ನಡೆಸಿದ್ದ ದಂಗೆಯ ಕುರಿತು ಕೇಳಿರಬಹುದು. ಇಂದು ಅಮೆರಿಕದಲ್ಲಿ ನಡೆಯುತ್ತಿರುವ ಈ ಚಳವಳಿಯನ್ನು ಗಮನಿಸಿದರೆ ಬಹುತೇಕ ಅದೇ ಮಾದರಿಯಲ್ಲಿ ನಡೆಯುತ್ತಿರುವುದು ತಿಳಿಯುತ್ತಿದೆ. ಆದರೆ ಇಲ್ಲಿ ನಡೆಯುತ್ತಿರುವುದು ಭಾರತದಲ್ಲಿ ಅಣ್ಣಾ ಹಜಾರೆ ಕೇವಲ ಕಾಂಗ್ರೆಸ್ ವಿರುದ್ಧ ನಡೆಸಿದಂತೆ ಬರೀ ಒಬಾಮಾ ಸರ್ಕಾರದ ನೀತಿಗಳ ವಿರುದ್ಧ ಮಾತ್ರವಲ್ಲ. ಇಡೀ ಜಗತ್ತಿನ ಹಣಕಾಸು ಮಾರುಕಟ್ಟೆಯನ್ನು ತನ್ನ ಬೆರಳ ತುದಿಯಲ್ಲಿ ಕುಣಿಸುತ್ತಿರುವ 'ವಾಲ್ ಸ್ಟ್ರೀಟ್'ನ ಹಣಕಾಸು ಸರ್ವಾಧಿಕಾರದ ವಿರುದ್ಧ ನಡೆಯುತ್ತಿರುವ ಚಳವಳಿ ಇದು.

ಈಗ ನಡೆಯುತ್ತಿರುವ ಚಳವಳಿಯ ರೂಪುರೇಷೆ ಯನ್ನು ಮೊದಲು ನೀಡಿದ್ದು ಕೆನಡಾದಲ್ಲಿರುವ 'ಅಡ್‌ಸ್ಟರ್' ಎಂಬ ಗುಂಪು. ಈ



ಈಗ ಅಮೆರಿಕದಲ್ಲಿ ಆರಂಭಗೊಂಡಿರುವ ಚಳವಳಿ 'ವಾಲ್ ಸ್ಟ್ರೀಟ್ ವಶಪಡಿಸಿ ಕೊಳ್ಳಿ' (Occupy Wall Street) ಚಳವಳಿ. ಮೊದಲಿಗೆ ಹತ್ತಾರು ಸಂಖ್ಯೆಯಲ್ಲಿ ಚಳವಳಿಗಾರರು ಆರಂಭಿಸಿದ ಈ ಚಳವಳಿಯಲ್ಲಿ ದಿನಕಳೆದಂತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರನ್ನು ಸೇರಿಸಿಕೊಂಡು ಕಾಳ್ಗಿಚ್ಚಿನಂತೆ ಅಮೆರಿಕಾದಾದ್ಯಂತ ವ್ಯಾಪಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ಹೊಸ ಪೀಳಿಗೆಯ ವಿದ್ಯಾರ್ಥಿಗಳು, ಯುವಕರು, ಕಾರ್ಮಿಕರು ಸೇರಿಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ನಿಧಾನಕ್ಕೆ ಈ ಬಂಡಾಯ ಒಂದು ಬೃಹತ್ ಜನಾಂದೋಲನವಾಗಿ ಚಳವಳಿಯಾಗುವ. ಕಳೆದ ಒಂದು ದಶಕದಲ್ಲಿ ಅಮೆರಿಕದಲ್ಲಿ ವ್ಯವಸ್ಥೆಯ ವಿರುದ್ಧ ಜನಸಾಮಾನ್ಯರಲ್ಲಿ ಮಡುಗಟ್ಟಿರುವ ಆಕ್ರೋಶ ಗಮನಿಸಿದರೆ ಈ ಸೂಚನೆ ತೋರುತ್ತದೆ.

ಗುಂಪಿನ ಸಲಹೆ ಮೇರೆಗೆ ಹೋರಾಟದ ರೂಪುರೇಷೆಯನ್ನು ಸಿದ್ಧಪಡಿಸಿ ಸೆಪ್ಟೆಂಬರ್ 17ರಂದು ಆರಂಭವಾಯಿತು. ಈ ಚಳವಳಿಯವರು ತಮ್ಮ ಹೋರಾಟವನ್ನು ಘೋಷಿಸಿಕೊಂಡಿರುವುದು ಹೀಗೆ –"ಈಜಿಪ್ಟ್, ಗ್ರೀಸ್, ಸ್ಪೇನ್ ಹಾಗೂ ಐಸ್‌ಲ್ಯಾಂಡ್‌ಗಳಲ್ಲಿನ ನಮ್ಮ ಸಹೋದರಂತೆಯೇ ನಾವು ಕ್ರಾಂತಿಕಾರಿ ಅರಬ್ ಬಂಡಾಯವನ್ನು ಅಮೆರಿಕದಲ್ಲಿ ಪ್ರಜಾಪ್ರಭುತ್ವವನ್ನು ಪುನರ್‌ಸ್ಥಾಪಿಸಲು ಬಳಸುತ್ತಿದ್ದೇವೆ. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬರ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ನಾವು ಅಹಿಂಸಾ ಮಾರ್ಗವನ್ನು ಬಳಸುತ್ತಿದ್ದೇವೆ. 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಒಂದು ನಾಯಕರಹಿತ ಚಳವಳಿ. ಇದರಲ್ಲಿ ಬೇರೆ ಬೇರೆ ವರ್ಣ, ಲಿಂಗ, ರಾಜಕೀಯ ದೃಷ್ಟಿಕೋನಗಳ ಜನರು ಭಾಗವಹಿಸುತ್ತಿದ್ದಾರೆ. ನಮ್ಮೆಲ್ಲರಲ್ಲಿರುವ ಸಮಾನ ಅಂಶವೆಂದರೆ 1% ಜನರ ದುರಾಸೆ ಹಾಗೂ ಭ್ರಷ್ಟಾಚಾರವನ್ನು 99% ಜನ ರಾದ ನಾವು ಇನ್ನು ಮುಂದೆ ಸಹಿಸಲು ಸಾಧ್ಯವೇ ಇಲ್ಲ".

ಇಲ್ಲಿ ಮೊಳಗುತ್ತಿರುವ ಘೋಷಣೆಗಳನ್ನೂ ನೋಡಿ–

"ನಾವು ಬಹಳ ಮಂದಿ, ಅವರು ಕೆಲವೇ ಮಂದಿ, ನಾವು ಎದ್ದು ನಿಂತರೆ ಅವರೇನು ಮಾಡ್ತಾರೆ?"; "ಅವರು ಎಷ್ಟು ಅಂತ ಶ್ರೀಮಂತರಾಗುತ್ತಲೇ ಹೋಗುತ್ತಾರೆ? ಮೊದಲು ವಿದ್ಯಾರ್ಥಿಗಳ ಎಲ್ಲಾ ಸಾಲ ಮನ್ನಾ ಮಾಡಿ"; "ಅವರು ಹೇಳ್ತಾರೆ ಕಟ್ ಬ್ಯಾಕ್, ನಾವು ಹೇಳ್ತೀವಿ– ಫೈಟ್ ಬ್ಯಾಕ್"; "ಸಾಲಪಾವತಿಗೆ ಒಂದೇ ದಾರಿ– ಯುದ್ಧ ನಿಲ್ಲಿಸಿ, ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಿ", ಹೀಗೆ ಇಂತಹ ಹಲವಾರು ಘೋಷಣೆಗಳನ್ನು ಹಾಕುತ್ತಾ ಹುಮ್ಮಸ್ಸಿನಿಂದ ಪಾಲ್ಗೊಳ್ಳುತ್ತಿರುವ ಕಾರ್ಯಕರ್ತರ ಚಳವಳಿಗೆ ಇಂದಿನ ಸಂದರ್ಭದಲ್ಲಿ ಜಾಗತಿಕ ಮಟ್ಟದ ಪ್ರಾಮುಖ್ಯತೆ ಇದೆ.

ಈ ಚಳವಳಿಯ ಹಲವಾರು ಬೇಡಿಕೆಗಳಲ್ಲಿ ಪ್ರಮುಖವಾದವೆಂದರೆ,

* ಜನರ ಎಲ್ಲಾ ಬಗೆಯ ಸಾಲಗಳನ್ನು ಮನ್ನಾ ಮಾಡಬೇಕು.
* ಉದ್ಯೋಗ ಭದ್ರತೆ ಹಾಗೂ ಉತ್ತಮ ವೇತನ ಖಾತ್ರಿಗೊಳಿಸಬೇಕು.
* ಸಾಮಾಜಿಕ ಭದ್ರತಾ ಕ್ರಮಗಳನ್ನು ಕಡಿತಗೊಳಿಸದೇ ಹೆಚ್ಚಿಸಬೇಕು.
* ಸರ್ವರಿಗೂ ಹೆಲ್ತ್ ಕೇರ್ ವ್ಯವಸ್ಥೆ ಜಾರಿಗೊಳಿಸುವುದು.
* ಸರ್ಕಾರದ ಆದಾಯ ಹೆಚ್ಚಿಸಲಿಕ್ಕಾಗಿ ಶೇಕಡಾ 10 ರಷ್ಟು ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸಬೇಕು
* ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ಜನತೆಯ ಭಾಗ ಅಲ್ಲ ಎಂದು ಸಂವಿಧಾನದಲ್ಲಿ ತಿದ್ದುಪಡಿ ತರಬೇಕು.
* ಉಚಿತ ಕಾಲೇಜು ಶಿಕ್ಷಣ ನೀಡಬೇಕು.
* ಮೂಲಸೌಕರ್ಯಗಳಿಗಾಗಿ (ನೀರು, ಒಳಚರಂಡಿ, ರೈಲ್ವೆ, ರಸ್ತೆ, ಸೇತುವೆ, ವಿದ್ಯುತ್) ಒಂದು ಲಕ್ಷಕೋಟಿ ಡಾಲರ್ ಮೀಸಲಿಡಬೇಕು.
* ಪರಿಸರ ಸಂರಕ್ಷಣೆಗಾಗಿ ಒಂದು ಲಕ್ಷ ಕೋಟಿ ಡಾಲರ್ ಮೀಸಲಿಡಬೇಕು.
* ತೈಲ ಇಂಧನಾಧಾರಿತ ವಿದ್ಯುತ್ ಮೇಲಿನ ಅವಲಂಬನೆ ಕೊನೆಗೊಳಿಸಿ ಪರ್ಯಾಯ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು.
* ಲಿಂಗ ಹಾಗೂ ಜನಾಂಗೀಯ ಭೇದಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಮಾನಹಕ್ಕು ತಿದ್ದುಪಡಿ ತರಬೇಕು ಇತ್ಯಾದಿ.

ಇಡೀ ಜಗತ್ತಿಗೇ ಬುದ್ಧಿ ಹೇಳುವ ಅಮೆರಿಕದಂತ ಅಮೆರಿಕದಲ್ಲಿ ಇಂತಹ ಒಂದು ಬಂಡಾಯ ಹುಟ್ಟಿಕೊಂಡಿರುವುದು ಯಾಕೆ? ಈಗ ಹುಟ್ಟಿರುವ ಚಳವಳಿಯ ವ್ಯಾಪ್ತಿಯೇನು? ಇದರ ಶಕ್ತಿ ಏನು? ದೌರ್ಬಲ್ಯಗಳೇನು? ಈ ಕುರಿತು ಕೊಂಚ ತಲೆಕೆಡಿಸಿ ಕೊಳ್ಳುವ ಅಗತ್ಯ ಭಾರತೀಯರಿಗೂ ಇದೆ. ಯಾಕೆ ಇದರ ಅಗತ್ಯ ನಮಗಿದೆ ಎಂದರೆ ಎರಡನೆಯ ವಿಶ್ವ ಮಹಾಯುದ್ಧದ ನಂತರದಲ್ಲಿ ಅದರಲ್ಲೂ ಸೋವಿಯತ್ ಒಕ್ಕೂಟ ಕುಸಿದ ಮೇಲೆ ಇಡೀ ಜಗತ್ತನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿರುವುದು ಅಮೆರಿಕ. ನೂರಾರು ದೇಶಗಳಲ್ಲಿ ಬುಡಮೇಲು ಕೃತ್ಯಗಳನ್ನು, ಸಾವಿರಾರು ಪ್ರಾಕ್ಸಿ ಯುದ್ಧಗಳನ್ನು ನಡೆಸುತ್ತಾ ಇಡೀ ಜಗತ್ತಿನ ಬಹುಪಾಲು ದೇಶಗಳನ್ನು ತನ್ನ ಪದತಲದಲ್ಲಿ ಬೀಳುವಂತೆ ಮಾಡಿಕೊಂಡು ಕೇಕೆ ಹಾಕುತ್ತಿರುವುದು ಅಮೆರಿಕ.

'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿಯ ಲೋಗೋ ನೋಡಿ. 'ಗೂಳಿ'ಯ ಮೇಲೆ ನೃತ್ಯಗೈಯುತ್ತಿರುವ ಯುವತಿಯ ಚಿತ್ರ! ಈ ಚಳವಳಿ ತನ್ನ ಕೇಂದ್ರವನ್ನು ವಾಲ್‌ಸ್ಟ್ರೀಟನ್ನೇ ಕೇಂದ್ರ ಮಾಡಿಕೊಂಡಿರುವುದಕ್ಕೆ ಕಾರಣವಿದೆ. ಇಂದು ಅಮೆರಿಕದ ಇಡೀ ಹಣಕಾಸು ವ್ಯವಹಾರ ನಡೆಯುವುದು ವಾಲ್‌ಸ್ಟ್ರೀಟ್‌ನಲ್ಲಿ. ಜಗತ್ತಿನ ಅತಿ ದೊಡ್ಡ ಶೇರು ಮಾರುಕಟ್ಟೆಯಾದ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಹಾಗೂ ನಾಸ್ಡಾಕ್, ಅಮೆರಿಕನ್ ಸ್ಟಾಕ್ ಎಕ್ಸ್‌ಚೇಂಜ್, ಎಲ್ಲಾ ಇರುವುದು ಇಲ್ಲೇ.

ತಮ್ಮ ಚಳವಳಿಗೆ ಮುಖ್ಯವಾಹಿನಿ ಮಾಧ್ಯಮಗಳು ಬೆಂಬಲ ನೀಡಲಾರವು ಎಂಬ ಸಂಶಯವಿಟ್ಟುಕೊಂಡೇ ಚಳವಳಿಗಾರರು ಸಾಧ್ಯವಿರುವ ಎಲ್ಲಾ ಪರ್ಯಾಯ ಮಾಧ್ಯಮಗಳನ್ನೂ ಬಳಸಿಕೊಳ್ಳುತ್ತಿದ್ದಾರೆ. 'ಆಕ್ಯುಪೈ ವಾಲ್ ಸ್ಟ್ರೀಟ್ ಜರ್ನಲ್, ಎಂಬ ಪತ್ರಿಕೆಯನ್ನೂ' ಹೊರತರುತ್ತಿದ್ದಾರೆ. ಅದರ ಮೊದಲ ಸಂಚಿಕೆಯ ಮುಖಪುಟದಲ್ಲೇ "ಕ್ರಾಂತಿ ಈಗ ತಾಯ್ನಾಡಿನಲ್ಲೇ ಭುಗಿಲೆದ್ದಿದೆ" ಎಂಬ ಒಕ್ಕಣೆಯಿತ್ತು. ಇದರೊಂದಿಗೆ ಫೇಸ್‌ಬುಕ್, ಟ್ವಿಟರ್‌ಗಳು, ಯೂಟ್ಯೂಬ್, ವೆಬ್‌ಸೈಟ್ ಹೀಗೆ ಎಲ್ಲವೂ ನಿರಂತರವಾಗಿ ಜನಸಾಮಾನ್ಯರಿಗೆ ಸುದ್ದಿವಾಹಿನಿಗಳಾಗಿ, ಚರ್ಚಾ ವೇದಿಕೆಗಳಾಗಿ ಕೆಲಸ ಮಾಡುತ್ತಿದೆ. ಇದೀಗ ಆನ್‌ಲೈನ್ ಚರ್ಚೆಗಳನ್ನು ಆರಂಭಿಸಿದ್ದಾರೆ. ಜನರು ವ್ಯಾಪಕವಾಗಿ ಬಳಸುವ ವಿಕಿಪಿಡಿಯಾ ಕೂಡಾ ಚಳವಳಿಯ ಬೆಳವಣಿಗೆಯನ್ನು ದಾಖಲಿಸುತ್ತಿದೆ. ಅರಬ್ ಹಾಗೂ ಭಾರತದಲ್ಲೇ ಸಾಕಷ್ಟು ಕೆಲಸ ಮಾಡಿರುವ ಇವುಗಳೆಲ್ಲಾ ಅಮೆರಿಕದಲ್ಲಿ ಮಾಡದಿರುತ್ತವೆಯೆ?

ಸೆಪ್ಟೆಂಬರ್ 17ರಂದು ಆರಂಭವಾದ ಈ ಚಳವಳಿಯ ಮೊದಲ ದಿನ ಸುಮಾರು ಒಂದು ಸಾವಿರ ಕಾರ್ಯಕರ್ತರು ಬೀದಿಗಳಲ್ಲಿ ಜಮಾಯಿಸಿ ಝುಕ್ಕೊಟ್ಟಿ ಪಾರ್ಕ್‌ನಲ್ಲಿ ಕಾರ್ಡ್‌ಬೋರ್ಡ್‌ಗಳ ಸಹಾಯದಿಂದ ಜೋಪಡಿ ಹಾಕಿಕೊಂಡು ತಂಗಿದ್ದರು, (ನ್ಯೂಯಾರ್ಕ್ ಪೊಲೀಸ್ ಇಲಾಖೆ ಟೆಂಟ್ ಬಳಕೆಯನ್ನು ನಿಷೇಧಿಸಿದ ಕಾರಣ). ಆ ವಾರ ಪೊಲೀಸರು ನಾಲ್ಕು ಜನರನ್ನು ಬಂಧಿಸಿದ್ದರು. ಸೆ.24ರಂದು ಕನಿಷ್ಠ 80 ಜನರನ್ನು ಬಂಧಿಸಲಾಗಿತ್ತು. ಅಂದು ನಡೆದ ಜಟಾಪಟಿಯಲ್ಲಿ ಮೂವರು ಮಹಿಳೆಯರ ಮೇಲೆ ಪೊಲೀಸರು ಬಲೆಯನ್ನು ಬೀಸಿ 'ಪೆಪ್ಪರ್' (ಮೆಣಸುಕಾಳಿನ ದ್ರವ) ಸಿಂಪಡಿಸಿ ಹಲ್ಲೆ ನಡೆಸಿದ್ದರು. ಇದನ್ನು ಕೂಡಲೇ ಯೂಟ್ಯೂಬ್‌ನಲ್ಲಿ ಬಹಿರಂಗಪಡಿಸಿದ ಪ್ರತಿಭಟನಾಕಾರರು ಆ ಪೊಲೀಸ್ ಅಧಿಕಾರಿಯ ಸಂಪೂರ್ಣ ವಿವರ, ಫೋನ್ ನಂಬರ್‌ಗಳನ್ನೂ ಪ್ರಕಟಿದ್ದರು. ಯಾವುದೇ ಪೊಲೀಸ್ ಅಧಿಕಾರಿ ಕೆಟ್ಟದಾಗಿ ವರ್ತಿಸಿದ ಮರುಕ್ಷಣವೇ ಆತನ ಎಲ್ಲಾ ವರ್ತನೆಯನ್ನೂ ವಿಡಿಯೋ ಸಮೇತ ಜಗತ್ತಿನ ವೀಕ್ಷಣೆಗೆ ಬಿಡಲಾಗುತ್ತಿದೆ!

ಅಕ್ಟೋಬರ್ 1ರಂದು ಬ್ರೂಕ್‌ಲಿನ್ ಸೇತುವೆ ಮೇಲೆ ಪ್ರತಿಭಟಿಸಿದ ಸುಮಾರು 700 ಜನರನ್ನು ಪೊಲೀಸರು ಬಂಧಿಸಿದ್ದರು. ಇಲ್ಲಿ ಹೀಗೆ ಬಂಧಿಸುವಾಗ ಪೊಲೀಸರು 'ಕೆಟ್ಲಿಂಗ್' ಎಂಬ ತಂತ್ರವನ್ನು ಪ್ರಯೋಗಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ನಡೆಸುವಂತೆ ಹಠಾತ್ ಲಾಠಿ ಚಾರ್ಜು, ಗೋಲಿಬಾರ್‌ಗಳನ್ನು, ಹಲ್ಲೆಗಳನ್ನು ಅಮೆರಿಕದಲ್ಲಿ ನಡೆಸಿ ಸುಲಭವಾಗಿ ದಕ್ಕಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಾನವ ಹಕ್ಕು, ಪ್ರಜಾತಂತ್ರಗಳ ಕುರಿತ ಮುಂದುವರಿದ ದೇಶಗಳ ಜನರ ಜನರ ಪ್ರಜ್ಞಾಮಟ್ಟ ಹೆಚ್ಚಿರುವುದರಿಂದ ಪೊಲೀಸ್ ಅಧಿಕಾರಿಗಳು ಮನಬಂದಂತೆ ವರ್ತಿಸಲು ಬರುವುದಿಲ್ಲ. ಹೀಗಾಗಿ ಪ್ರತಿಭಟನಾಕಾರರನ್ನು ಆದಷ್ಟು ಚದುರಿಸಿ, ದಿಕ್ಕು ತಪ್ಪಿಸಿ ಗುಂಪು ಗುಂಪಾಗಿ ಬಂಧಿಸುವ ತಂತ್ರ ಹೂಡುವ ಕೆಟ್ಲಿಂಗ್ ಕೂಡಾ ಬಹಳಷ್ಟು ಸಲ ಟೀಕೆಗೊಳಗಾಗಿದೆ. ನಂತರ ಅಕ್ಟೋಬರ್ 5ರಂದು ನ್ಯೂಯಾರ್ಕ್ ನಗರದ ಹತ್ತಾರು ಶಾಲಾಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಸೇರಿಕೊಂಡರು. ಅಂದು ನಡೆದ ಮೆರವಣಿಗೆಯಲ್ಲಿ ಸುಮಾರು 15,000 ಜನರು ಪಾಲ್ಗೊಂಡಿದ್ದರು. ಹೀಗೆ ದಿನೇ ದಿನೇ ಆಂದೋಲನದಲ್ಲಿ ಹೆಚ್ಚೆಚ್ಚು ಜನರು ಭಾಗವಹಿಸುತ್ತಲೇ ಇದ್ದಾರೆ.

1999ರಲ್ಲಿ ಸಿಯಾಟಲ್‌ನಲ್ಲಿ ನಡೆದ ಡಬ್ಲ್ಯೂಟಿಓ ಸಮ್ಮೇಳನದ ವಿರುದ್ಧ ಹಾಗೂ ನಂತರ ಇರಾಕ್ ಯುದ್ಧದ ವಿರುದ್ಧ ಬೃಹತ್ ಚಳವಳಿ ನಡೆದಿದ್ದವು ಅವುಗಳಲ್ಲಿ ಲಕ್ಷಾಂತರ ಜನರು ಸೇರಿದ್ದರಾದರೂ ಅವು ನಿರ್ದಿಷ್ಟ ದಿನಗಳಂದು ನಡೆದ ಸೀಮಿತ ಪ್ರದರ್ಶನಗಳು. ಆದರೆ ಈಗ ನಡೆಯುತ್ತಿರುವುದು ಬೇರೆಯದೇ ಸ್ವರೂಪದ್ದು.

ಹಾಗಾದರೆ ಇಡೀ ಜಗತ್ತಿಗೇ ಬುದ್ಧಿ ಹೇಳುವ ಅಮೆರಿಕದಂತ ಅಮೆರಿಕದಲ್ಲಿ ಇಂತಹ ಒಂದು ಬಂಡಾಯ ಹುಟ್ಟಿಕೊಂಡಿರುವುದು ಯಾಕೆ? ಈಗ ಹುಟ್ಟಿರುವ ಚಳವಳಿಯ ವ್ಯಾಪ್ತಿಯೇನು? ಇದರ ಶಕ್ತಿ ಏನು? ದೌರ್ಬಲ್ಯಗಳೇನು? ಈ ಕುರಿತು ಕೊಂಚ ತಲೆಕೆಡಿಸಿ ಕೊಳ್ಳುವ ಅಗತ್ಯ ಭಾರತೀಯರಿಗೂ ಇದೆ. ಯಾಕೆ ಇದರ ಅಗತ್ಯ ನಮಗಿದೆ ಎಂದರೆ ಎರಡನೆಯ ವಿಶ್ವ ಮಹಾಯುದ್ಧದ ನಂತರದಲ್ಲಿ ಅದರಲ್ಲೂ ಸೋವಿಯತ್ ಒಕ್ಕೂಟ



ಕುಸಿದ ಮೇಲೆ ಇಡೀ ಜಗತ್ತನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿರುವುದು ಅಮೆರಿಕ. ನೂರಾರು ದೇಶಗಳಲ್ಲಿ ಬುಡಮೇಲು ಕೃತ್ಯಗಳನ್ನು, ಸಾವಿರಾರು ಪ್ರಾಕ್ಸಿ ಯುದ್ಧಗಳನ್ನು ನಡೆಸುತ್ತಾ ಇಡೀ ಜಗತ್ತಿನ ಬಹುಪಾಲು ದೇಶಗಳನ್ನು ತನ್ನ ಪದತಲದಲ್ಲಿ ಬೀಳುವಂತೆ ಮಾಡಿಕೊಂಡು ಕೇಕೆ ಹಾಕುತ್ತಿರುವುದು ಅಮೆರಿಕ. ಒಂದು ಕಡೆ ಮುಕ್ತ ಆರ್ಥಿಕತೆಯ ನೀತಿಗಳನ್ನು ಎಲ್ಲರ ಮೇಲೆ ಹೇರುತ್ತಲೇ ತಾನು ಮಾತ್ರ ರಕ್ಷಣಾತ್ಮಕ ನೀತಿಗಳನ್ನು ಪಾಲಿಸಿಕೊಂಡು ಇಬ್ಬಗೆಯ ನೀತಿಯನ್ನು ಪಾಲಿಸುತ್ತಿರುವುದು ಇದೇ ಅಮೆರಿಕ. ಜಗತ್ತಿನ ತೈಲಸಂಪನ್ಮೂಲಗಳ ಮೇಲಿನ ಹಿಡಿತಕ್ಕಾಗಿ ಲಕ್ಷಾಂತರ ಜನರ ಮಾರಣ ಹೋಮ ನಡೆಸಿರುವುದೂ ಇದೇ ಅಮೆರಿಕ. ಇಂದು ಇಡೀ ಜಗತ್ತನ್ನು ಕಾಡುತ್ತಿರುವ 'ಇಸ್ಲಾಂ ಭಯೋತ್ಪಾದನೆಗೆ' ಬೀಜ ನೆಟ್ಟು, ನೀರು ಗೊಬ್ಬರ ಹಾಕಿ ಈಗ ಮತ್ತೆ ಭಯೋತ್ಪಾದನೆಯ ವಿರುದ್ಧದ ಹೋರಾಟದ ಹೆಸರಿನಲ್ಲಿ ತನ್ನ ಅಜೆಂಡಾಗಳನ್ನು ಜಗತ್ತಿನ ಮೇಲೆ ಹೇರುತ್ತಿರುವುದೂ ಇದೇ ಅಮೆರಿಕ. ಇಂದು ಜಗತ್ತಿನ ಪ್ರತಿಯೊಬ್ಬ ಮನುಷ್ಯನೂ ಕೂಡ ಅಮೆರಿಕ ತನ್ನ ಹಿತಾಸಕ್ತಿಗಾಗಿ ಹಾಕಿಕೊಟ್ಟ ಅಜೆಂಡಾಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ಪಾಲಿಸುತ್ತಲೇ ಇದ್ದಾನೆ ಎಂದರೆ ಅತಿಶಯೋಕ್ತಿಯಲ್ಲ. ಆದರೆ ಇದೆಲ್ಲಾ ಜಾಗತೀಕರಣ ಮುಸುಕಿನಲ್ಲಿ ನಡೆಯುತ್ತಿರುವುದರಿಂದ ಅದನ್ನೆಲ್ಲಾ ನಮ್ಮದೇ ಎಂಬಂತೆ ನಾವು ಒಪ್ಪಿಕೊಂಡು ಹೋಗುತ್ತಿದ್ದೇವಷ್ಟೆ.

'ಜಾಗತೀಕರಣ' ಎಂದರೆ 'ಅಮೆರಿಕೀಕರಣ' ಎಂದು ಬಣ್ಣಿಸುವ ನಮ್ಮ ಡಾ. ಯು. ಆರ್. ಅನಂತಮೂರ್ತಿಯಂತಹವರ ಅಭಿಪ್ರಾಯ ಮುಖ್ಯವಾಗುವುದು ಈ ಕಾರಣದಿಂದಲೇ.

ಇಂತಿಪ್ಪ ಅಮೆರಿಕದ ಪ್ರಭುತ್ವದ ವಿರುದ್ಧ ಅಮೆರಿಕದ ಪ್ರಜೆಗಳೇ ದಂಗೆಯೇಳುವ ಸ್ಥಿತಿ ಉಂಟಾಗಿದೆ ಎಂದರೆ ನಾವು ಖಂಡಿತಾ ಇದನ್ನು ಕೊಂಚ ಹತ್ತಿರದಿಂದ ಗಮನಿಸುವ ಅಗತ್ಯವಿದೆ. ಇದಕ್ಕಾಗಿ ಈ ಚಳವಳಿಗೆ ಕಾರಣವಾಗಿರುವ ಅಮೆರಿಕ ಆರ್ಥಿಕತೆಯನ್ನು ಸಂಕ್ಷಿಪ್ತವಾಗಿಯಾದರೂ ಅರಿಯಬೇಕಾಗುತ್ತದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಅಮೆರಿಕ ಸರ್ಕಾರದ ಋಣಾರ್ಹತೆ ಮಟ್ಟವನ್ನು ಅಲ್ಲಿನ ಪ್ರಮುಖ ಮೌಲ್ಯಮಾಪನಾ ಸಂಸ್ಥೆಗಳಲ್ಲೊಂದಾದ ಎಸ್ & ಪಿ AAA ಯಿಂದ AA+ಗೆ ಇಳಿಸಿತ್ತು. ತಾನು ಸುಸ್ತಿದಾರನಾಗುವ (Defaulter) ಹಂತಕ್ಕೆ ಹೋಗುವುದನ್ನು ತಪ್ಪಿಸಲು ಒಬಾಮಾ ಸರ್ಕಾರವು ಸಾಲ ಒಪ್ಪಂದ ಕಾಯ್ದೆಯನ್ನು (Debt ceiling Act) ಜಾರಿ ಮಾಡಿತು.

ಇನ್ನೂ ಸ್ವಲ್ಪ ಹಿಂದಕ್ಕೆ ಹೋಗೋಣ. 2008ರ ಸೆಪ್ಟೆಂಬರ್ ತಿಂಗಳಲ್ಲಿ ಅಮೆರಿಕದ ಸಬ್‌ಪ್ರೈಂ ಗೃಹಸಾಲ ಬಿಕ್ಕಟ್ಟು ಸ್ಫೋಟಗೊಂಡಿತ್ತು. ಅಮೆರಿಕಾದ ವಾಣಿಜ್ಯ ಬ್ಯಾಂಕುಗಳು, ವಿಮಾ ಕಂಪನಿಗಳು ಹಾಗೂ ಎಲ್ಲಾ ಹಣಕಾಸು ಉದ್ದಿಮೆಗಳೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ಈ ಸಬ್‌ಪ್ರೈಮ್ ಗೃಹಸಾಲ ಮಾರುಕಟ್ಟೆ ಯೊಳಗೆ ಕಾಲಿಟ್ಟಿದ್ದವು. ಅಗ್ಗದ ಬಡ್ಡಿ ದರದಲ್ಲಿ ನೀಡ ತೊಡಗಿದ್ದ ಗೃಹಸಾಲ ಉದ್ದಿಮೆಗೆ ಕಾಲಿಟ್ಟ ಹಣಕಾಸು ಸಂಸ್ಥೆಗಳು ಬೃಹತ್ ಮಟ್ಟದಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸತೊಡಗಿದ್ದೇ ಬೃಹತ್ ಪ್ರಮಾಣದ ಬಂಡವಾಳ ಸಂಚಯವಾಗತೊಡಗಿತ್ತು. ಆದರೆ ಯಾವಾಗ ಇದ್ದಕ್ಕಿದ್ದಂತೆ ಹೆಚ್ಚೆಚ್ಚು ಜನರು ಗೃಹಸಾಲದ ಕಂತು ಕಟ್ಟಲಾರದೆ ಡಿಫಾಲ್ಟರ್ ಆಗತೊಡಗಿದ್ದರೋ ಆಗ ಈ ಉದ್ದಿಮೆಯನ್ನವಲಂಬಿಸಿ ಬಹುದೂರ ಹೋಗಿಬಿಟ್ಟದ್ದ ಆರ್ಥಿಕತೆಯೆಲ್ಲವೂ ಕುಸಿಯತೊಡಗಿತ್ತು. ಎಂತಹ ಪರಿಸ್ಥಿತಿ ಸೃಷ್ಟಿ ಯಾಗಿತ್ತೆಂದರೆ 2007ರ ಡಿಸೆಂಬರ್‌ನಲ್ಲಿ ಅಮೆರಿಕಾದಲ್ಲಿ ಬ್ಯಾಂಕುಗಳಿಗೆ ಬಾಕಿ ಬರಬೇಕಿದ್ದ ಈ ಸಬ್‌ಪ್ರೈಮ್ ಗೃಹ ಸಾಲದ ಒಟ್ಟು ಮೊತ್ತ 70 ಲಕ್ಷ ಕೋಟಿ ರೂ.ಗಳು! ಅದೇ ವರ್ಷ 12 ಲಕ್ಷ ಮನೆಗಳು ಜಪ್ತಿಯಾದವು. ಹೀಗೆ ಜಪ್ತಿಯಾಗಿ ಅಕ್ಷರಶಃ ಬೀದಿಗೆ ಬಿದ್ದವರ ಸಂಖ್ಯೆ 45 ಲಕ್ಷ ದಾಟಿತ್ತು!. ಮನೆಗಳ ಬೆಲೆಗಳು ಶೇಕಡಾ 40ರಷ್ಟು ಕುಸಿದಿದ್ದರೂ ಕೊಳ್ಳುವವರೇ ಗತಿ ಇರಲಿಲ್ಲ: 1.86 ಕೋಟಿ ಮನೆಗಳು ಹೀಗೆ ದೂಳು ಹಿಡಿದು ಕೂತಿದ್ದವು. ಆದರೆ ಆ ಮನೆಗಳಲ್ಲಿರಬೇಕಾದವರು ಬೀದಿ ಮೂಲೆಗಳಲ್ಲಿ, ತಮ್ಮ ಕಾರುಗಳೊಳಗೆ, ರೈಲು ಬೋಗಿಗಳಲ್ಲಿ, ಪಾರ್ಕ್‌ಗಳಲ್ಲಿ ರಾತ್ರಿಗಳನ್ನು ಕಳೆಯುವ ಪರಿಸ್ಥಿತಿ ಬಂದೊದಗಿತ್ತು!

ವಾಸ್ತವದಲ್ಲಿ ಇಂದು ಅಮೆರಿಕದ ಶ್ರೀಮಂತಿಕೆ ನಿಂತಿರುವುದೇ ತೃತೀಯ ಜಗತ್ತಿನ ಸಂಪತ್ತಿನ ಲೂಟಿಯನ್ನಾಧರಿಸಿ ಹಾಗೂ ಬಡದೇಶಗಳ ಜನರ ಅಗ್ಗದ ಶ್ರಮವನ್ನು ದೋಚಿದ್ದರ ಪರಿಣಾಮವಾಗಿ. ಯಾವ ಸರ್ಕಾರಗಳು ಬಂಡವಾಳಿಗರ ಲಾಭಕ್ಕಾಗಿ ಸರಕು ಸಂಸ್ಕೃತಿಯನ್ನು, ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರೇರೇಪಿಸಿ ತಾವು ಸಾಲದ ಬಲೆಯಲ್ಲಿ ಬೀಳುವ ಜೊತೆಗೆ ಜನರನ್ನೂ ಸಾಲದ ವ್ಯಸನಕ್ಕೆ ಗುರಿಮಾಡಿದ್ದರೋ ಆ ಎಲ್ಲಾ ಸರ್ಕಾರಗಳನ್ನೂ ಅಮೆರಿಕನ್ನರು ಚುನಾವಣೆಯಿಂದ ಚುನಾವಣೆಗೆ ಗೆಲ್ಲಿಸಿಕೊಂಡೇ ಬಂದಿದ್ದಾರೆ.

ಮತ್ತೊಂದೆಡೆ ಲೀಮಾನ್ ಬ್ರದರ್ಸ್? ನಂತಹ ಅತಿ ದೊಡ್ಡ ಹೂಡಿಕೆ ಬ್ಯಾಂಕುಗಳು ದಿವಾಳಿಯಾದವು. ಕೆಲವು ಬ್ಯಾಂಕುಗಳನ್ನು ಸರ್ಕಾರ ರಾಷ್ಟ್ರೀಕರಣ ಮಾಡಿ ಉಳಿಸಿಕೊಂಡಿತು. ಅಮೆರಿಕ ಸರ್ಕಾರ ಕೂಡಲೇ ಸುಮಾರು 700 ಶತಕೋಟಿ ಡಾಲರುಗಳ ಬೇಲೌಟ್ (Bailouts) ನೀಡಿತ್ತು. ಹಣಕಾಸು ಸಂಸ್ಥೆಗಳಿಗೆ ತಾತ್ಕಾಲಿಕ ಸಾಲ ನೀಡುವ ಕಮರ್ಷಿಯಲ್ ಪೇಪರ್ ಕೂಡಾ ಕುಸಿದು ಬಿದ್ದಿದ್ದು ಈ ದಿಢೀರ್ ಅವಘಡಗಳಿಗೆ ಕಾರಣವಾಗಿತ್ತು. ಆರ್ಥಿಕತೆಯ ಈ ಬಿಕ್ಕಟ್ಟಿನಿಂದಾಗಿ ಅಂದು ಅಮೆರಿಕ ಒಂದರಲ್ಲಿ ಕೆಲಸ ಕಳೆದುಕೊಂಡವರು 12 ಲಕ್ಷಕ್ಕಿಂತ ಹೆಚ್ಚು ಮಂದಿ! ಈ ಬಿಕ್ಕಟ್ಟು ಅಂದು ಇತರ ದೇಶಗಳಿಗೂ ಹರಡಿ ಎಲ್ಲೆಡೆ ಇದೇ ಬೆಳವಣಿಗೆಗಳಾದವು.

1930ರಲ್ಲಾದಂತೆಯೇ ಮತ್ತೊಂದು ಆರ್ಥಿಕ ಮಹಾಕುಸಿತದ (The Great Deppression) ಮುನ್ಸೂಚನೆ ದೊರೆತು ಜಗತ್ತು ತಲ್ಲಣಗೊಂಡಿತ್ತು. ಇದು ಅಮೆರಿಕದಲ್ಲಿ ಡಬಲ್ ಡಿಪ್‌ರಿಶೆಷನ್ ಸ್ಥಿತಿ. ಅಂದರೆ ಈಗಾಗಲೇ ಒಂದು ಬಿಕ್ಕಟ್ಟಿನಿಂದ ಪೂರ್ತಿ ಚೇತರಿಸಿಕೊಳ್ಳುವಷ್ಟರಲ್ಲೇ ಮತ್ತೊಂದು ಆರ್ಥಿಕ ಕುಸಿತದ ಭಯ!

2008ರಲ್ಲಿ ಈ ಕುಸಿತವಾದಾಗ ಅಮೆರಿಕ ಸರ್ಕಾರ ಹಾಗೂ ಅನೇಕ ಆರ್ಥಿಕ ಪಂಡಿತರು ಗೃಹಸಾಲ ಮಾರುಕಟ್ಟೆಯನ್ನು ದೂರಿದರಾಗಲೀ ಈ ಸಮಸ್ಯೆಯ ಕಾರಣವನ್ನು ಗುರುತಿಸಿ ಅದಕ್ಕೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಲಿಲ್ಲ.

ಇಷ್ಟಕ್ಕೆಲ್ಲ ಇರುವ ಮೂಲ ಕಾರಣವನ್ನು ಹೆಚ್ಚಿನ ವಿವರಗಳನ್ನೂ ಅಂಕಿ ಅಂಶಗಳನ್ನು ನೀಡುವ ಗೊಡವೆಗೆ ಹೋಗದೇ ಅತ್ಯಂತ ಸರಳವಾಗಿ ಹೀಗೆ ಹೇಳಬಹುದು – ಅದು ಅಮೆರಿಕ ಕೇಂದ್ರಿತ ಜಾಗತಿಕ ಮಾರುಕಟ್ಟೆ ವ್ಯವಸ್ಥೆ ನೈಜವಾದ ಆರ್ಥಿಕತೆಯಿಂದ (ಅಂದರೆ ಉತ್ಪಾದನೆಯನ್ನು, ಉದ್ಯೋಗ ಬೆಳವಣಿಗೆಯನ್ನು ಆಧರಿಸಿದ ಆರ್ಥಿಕತೆ) ವಿಮುಖಗೊಂಡು ಹಣಕಾಸು ಬಂಡವಾಳವನ್ನು ಅಗಾಧವಾಗಿ ಸಂಚಯಿಸಿಕೊಳ್ಳುತ್ತಾ ಹೋದದ್ದು. (financialization of economy) ಕೊನೆಗೆ ಇಡೀ ಆರ್ಥಿಕತೆಯೇ ಸಾಲದ ವ್ಯಸನಕ್ಕೊಳಗಾಗಿ ಈಗ ದಿವಾಳಿ ಹಂತಕ್ಕೆ ತಲುಪಿದ್ದು. ಉತ್ಪಾದನೆ ಆಧಾರಿತ ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳು ಒಂದು ಹಂತದಲ್ಲಿ ಸ್ಥಗಿತಗೊಂಡು ಸಾಲಾಧಾರಿತ ಸಟ್ಟಾ ವ್ಯಾಪಾರದ (speculative business) ಪ್ರಾಬಲ್ಯ ತೀವ್ರಗೊಂಡಿದ್ದು, ಇದು

ಬೇರೇನೂ ಆಗಿರದೇ ಹಣಕಾಸು ಮಾರುಕಟ್ಟೆಯೊಳಗಿನ ಜೂಜು ಮಾತ್ರವಾಗಿದ್ದದ್ದು.

ಅಮೆರಿಕದಲ್ಲಿ ಎಲ್ಲಾ ಕ್ಷೇತ್ರಗಳನ್ನೂ ಗಣನೆಗೆ ತೆಗೆದುಕೊಂಡರೆ 1954ರಲ್ಲಿ ಒಟ್ಟು ಜಿಡಿಪಿಗೆ ಹೋಲಿಸಿ ನೋಡಿದಾಗ ಅಲ್ಲಿನ ಸಾಲ ಶೇಕಡಾ 153ರಷ್ಟಿದ್ದರೆ 2007ರಲ್ಲಿ ಶೇಕಡಾ 373ರಷ್ಟಿತ್ತೆಂದರೆ ಸಾಲದ ಪಾತ್ರವನ್ನು ಊಹಿಸಬಹುದು. ಪ್ರಪಂಚದ ಅತಿದೊಡ್ಡ ಸಾಲಗಾರನಾಗಿರುವ ಅಮೆರಿಕದ ಈಗಿನ 14 ಲಕ್ಷ ಕೋಟಿ ಡಾಲರ್‌ಗಳು!. ಮಾತ್ರವಲ್ಲ ಅತ್ತ ನೈಜ ಆರ್ಥಿಕತೆ ಯಾವ ಬೆಳವಣಿಗೆಯನ್ನೂ ಕಾಣದೇ ಬಡತನ, ನಿರುದ್ಯೋಗ ಕ್ರಮೇಣ ಹೆಚ್ಚತೊಡಗಿದ್ದರೆ ಆರ್ಥಿಕತೆಯನ್ನು ಹೀಗೆ ಬರೀ ಪೇಪರ್ ಮೇಲಿನ ಹಣದ (ಕಂಪ್ಯೂಟರ್ ಎಂದು ಓದಿಕೊಳ್ಳಿ) ಮೇಲೆಯೇ ನಿಲ್ಲಿಸಿದ ಪರಿಣಾಮವಾಗಿ ದೊಡ್ಡ ಕಾರ್ಪೊರೇಷನ್‌ಗಳು ವಿಪರೀತ ಲಾಭ ಮಾಡ ತೊಡಗಿದವು. ಮಧ್ಯಮ ವರ್ಗದವರ ಆದಾಯದಲ್ಲಿ ಅಂತಹ ಏರಿಕೆ ಇಲ್ಲದಿದ್ದರೂ ಈ ಹಣಕಾಸು ಸಂಸ್ಥೆಗಳು ಸಾವಿರ ಸಾವಿರ ಪಟ್ಟು ಲಾಭ ಮಾಡಿಕೊಂಡವು. ಅಮೆರಿಕಾದಲ್ಲಿ 2001ರಲ್ಲಿ ಹಣಕಾಸು ವ್ಯವಸ್ಥೆಯ ತುತ್ತತುದಿಯಲ್ಲಿದ್ದ ಶೇಕಡಾ 1ರಷ್ಟು ಹಣಕಾಸು ಬಂಡವಾಳವು ಅಲ್ಲಿನ ಕೆಳಹಂತದ ಶೇಕಡಾ 80ರಷ್ಟು ಜನರ ಒಟ್ಟು ಆದಾಯದ ನಾಲ್ಕು ಪಟ್ಟು ಇತ್ತು. 2006ರಲ್ಲಿ ಅಮೆರಿಕಾದ ಕೇವಲ 60 ಅತಿ ದೊಡ್ಡ ಶ್ರೀಮಂತರ ಬಳಿ ಶೇಖರಣೆಗೊಂಡಿದ್ದ ಸಂಪತ್ತು 630 ಶತಕೋಟಿ ಡಾಲರುಗಳಷ್ಟು ಎಂದರೆ ಯೋಚಿಸಿ!. ಆರ್ಥಿಕತೆ ಎಂದರೇ ಹಣಕಾಸು ಆರ್ಥಿಕತೆ ಎಂದು ಆದ ಪರಿಣಾಮವಾಗಿ ಇಡೀ ವ್ಯವಸ್ಥೆಯನ್ನು ನಿಯಂತ್ರಿಸುವವರೇ ಈ ಕಾರ್ಪೊರೇಟರ್‌ಗಳಾದರು. ಹೀಗೆ ಪ್ರಜಾಪ್ರಭುತ್ವ ವ್ಯವಸ್ಥೆಗಳು ಕಾರ್ಪೊರೇಟ್ ಪ್ರಭುತ್ವಗಳಾಗಿ ಪರಿವರ್ತನೆಯಾಗಿದ್ದವು.

ಆದರೆ ಒಳಗೆ ಯಾವ ಹೂರಣವೂ ಇಲ್ಲದೇ ಹೀಗೆ ಬಲೂನಿನಂತೆ ಊದಿಕೊಳ್ಳುತ್ತಲೇ ಹೋದ ಆರ್ಥಿಕತೆ ಭಾರೀ ಸದ್ದಿನೊಂದಿಗೆ ಒಡೆದು ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡುವ ಸೂಚನೆ 2008ರಲ್ಲಿ ಸಿಕ್ಕಿತ್ತು. ಆದರೆ ತಾವು ಆರ್ಥಿಕತೆಯಲ್ಲಿ ಸೃಷ್ಟಿಸಿದ್ದ ನಿಜವಾದ ಸಮಸ್ಯೆಯನ್ನು ಸರಿಪಡಿಸಲು ಬಂಡವಾಳದ ನೇತಾರರು ತಯಾರಿಲ್ಲ.

ಹೀಗೆ ಆರ್ಥಿಕತೆಯನ್ನು ಹಣಕಾಸಿನ ನೀರು ಗುಳ್ಳೆಯ ಮಟ್ಟಕ್ಕೆ ಸೀಮಿತಗೊಳಿಸುವುದರ ಅಪಾಯವನ್ನು 1930ರ ದಶಕದಲ್ಲೇ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಕೀನ್ಸ್ ವಿವರಿಸಿದ್ದರು. ಕೀನ್ಸ್ ಒಬ್ಬ ಬಂಡವಾಳವಾದಿ ವ್ಯವಸ್ಥೆಯ ಪರವಾದ ಅರ್ಥಜ್ಞನೇ ಆಗಿದ್ದರೂ ಅವರು ಪ್ರತಿಪಾದಿಸಿದ್ದು ವಿವೇಚನಾಶೀಲ ಬಂಡವಾಳವಾದವನ್ನು. ಬದಲಾಗಿ ಇಂದು ಬೆಳೆದಿರುವ ದುರಾಸೆಯ ವಿಕೃತ ಬಂಡವಾಳವಾದವನ್ನು ಖಂಡಿತಾ ಆಗಿರಲಿಲ್ಲ. 1930ರ ದಶಕದಲ್ಲಿ ಅಮೆರಿಕ ಕೇಂದ್ರಿತ ಜಾಗತಿಕ ಹಣಕಾಸು ವ್ಯವಸ್ಥೆಯ ಜಾಡು ಹಿಡಿದ ಪೌಲ್ ಸ್ವೀಜಿಯಂತಹ ಎಡಪಂಥೀಯ ಅರ್ಥಶಾಸ್ತ್ರಜ್ಞರೂ ಸಹ ಸನಿಹದಲ್ಲೇ ಬಂದೆರಗಲಿರುವ ಭಾರೀ ಅಪಾಯವನ್ನು ತಿಳಿಸಿದ್ದರು. ಇದು ಇಡೀ ಜಗತ್ತನ್ನು ಮತ್ತೊಂದು ಮಹಾನ್ ಆರ್ಥಿಕ ಕುಸಿತಕ್ಕೆ ಕೊಂಡೊಯ್ಯಲಿದೆ ಎಂದೂ ಅಂಕಿ-ಅಂಶಗಳ ಸಮೇತ ತಿಳಿಸಿದ್ದರು. ಅವರು ಹೇಳಿದ್ದೆಲ್ಲಾ ಈಗ ಸಾಕ್ಷಾತ್ಕಾರವಾಗುತ್ತಿದೆ.



ಇಂತಹ ಒಂದು ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಅಮೆರಿಕದ ಈ ಚಳವಳಿ 'ವಾಲ್‌ಸ್ಟ್ರೀಟ್ ವಶಪಡಿಸಿ'ಕೊಳ್ಳುವ ಕರೆನೀಡಿ ಹೊರಟಿರುವುದು ಅರ್ಥಪೂರ್ಣವಾಗಿದೆ. ಪ್ರಪಂಚದ ಪ್ರಜಾಪ್ರಭುತ್ವವಾದಿಗಳೆಲ್ಲರೂ ಸ್ವಾಗತಿಸಬೇಕಾದ ಬೆಳವಣಿಗೆ ಇದು. ಜಗತ್ತಿನ ಜನಸಾಮಾನ್ಯರ ಸಾಕ್ಷಿಪ್ರಜ್ಞೆ ಎಂದೇ ಕರೆಯಬಹುದಾದ ನೋಮ್ ಚಾಮ್‌ಸ್ಕಿ ಕೂಡಾ ಈ ಚಳವಳಿಯ ಕುರಿತು ಪ್ರತಿಕ್ರಿಯಿಸಿ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಈ ಚಳವಳಿ ತನ್ನನ್ನು ತಾನು 'ನಾಯಕರಹಿತ' ಎಂದು ಘೋಷಿಸಿಕೊಂಡಿದೆ. ಆದರೆ ಇದರಲ್ಲಿ ಒಳಿತೂ ಉಂಟು, ಕೆಡುಕೂ ಉಂಟು. ಒಬ್ಬ ನಾಯಕ ಅಥವಾ ಇಲ್ಲದೇ ಪ್ರತಿಯೊಂದು ನಿರ್ಧಾರವನ್ನೂ ಸಾಮೂಹಿಕವಾಗಿ ತೆಗೆದುಕೊಳ್ಳುತ್ತಿರುವ ಕಾರಣ ಸರ್ಕಾರಕ್ಕೆ ಈ ಚಳವಳಿಯನ್ನು ಹತ್ತಿಕ್ಕಲು ಸುಲಭ ಸಾಧ್ಯವಾಗಲಾರದು. ಮತ್ತು ಒಬ್ಬನ ಅಭಿಪ್ರಾಯವನ್ನು ಇಡೀ ಚಳವಳಿಯ ಮೇಲೆ ಹೇರಲು ಸಾಧ್ಯವಾಗಲಾರದು. ಆದರೆ ಇಡೀ ಜಗತ್ತಿನ ಚಳವಳಿಗಳನ್ನು ನೋಡಿದರೆ ಅಲ್ಲಿ ಒಬ್ಬ ನಾಯಕನಿರುತ್ತಾನೆ ಎಂದರೆ ಆತನ ಬೆನ್ನಿಗೆ ಒಂದು ಸಿದ್ಧಾಂತವೂ ಇರುತ್ತದೆ. ಆ ಸಿದ್ಧಾಂತ ಎಷ್ಟು ಮಾನವೀಯವಾಗಿರುತ್ತದೆಯೋ ಅಷ್ಟು ಗಟ್ಟಿತನ ಆ ಚಳವಳಿಗಿರುತ್ತದೆ. ಒಂದೊಮ್ಮೆ ಆ ನಾಯಕ 'ಸಾಮೂಹಿಕ ಪ್ರಜ್ಞೆ'ಯನ್ನು ಸಮರ್ಥವಾಗಿ ಪ್ರತಿಬಿಂಬಿಸುವಂತಾದಾಗ ಆ ಚಳವಳಿ ಇನ್ನಷ್ಟು ಬಲಗೊಳ್ಳುವ ಸಾಧ್ಯತೆಯಿರುತ್ತದೆ. ಅಮೆರಿಕದಲ್ಲೇ ನೋಡುವುದಾದರೆ ಈ ಹಿಂದೆ ಸಮಾನತೆಗಾಗಿ ಚಳವಳಿ ನಡೆಸಿದ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಹಾಗೂ ರೋಸಾ ಪಾರ್ಕ್‌ರಂತಹ ಉದಾತ್ತ ವ್ಯಕ್ತಿಗಳ ಉದಾಹರಣೆಗಳಿವೆ.

ಈಗಿನ ಚಳವಳಿ ಪ್ರಮುಖವಾಗಿ ಅಲ್ಲಿನ ಮಧ್ಯಮ ವರ್ಗದ ಕೈಯಲ್ಲಿರುವುದರಿಂದ ಅದು ಎಷ್ಟರ ಮಟ್ಟಿಗೆ ಯಶಸ್ಸು ಸಾಧಿಸುತ್ತದೆ ಎನ್ನುವುದೂ ಸಂಶಯಕ್ಕೆಡೆ ಮಾಡಿದೆ. ಸದ್ಯಕ್ಕೆ ಈ ಚಳವಳಿ ಹಲವಾರು ವಿಚಾರಧಾರೆಗಳ ಕಾಕ್‌ಟೇಲ್ ಆಗಿದೆ. ಇಲ್ಲಿ ಎನ್ ಜಿ ಒಗಳು ಟ್ರೇಡ್ ಯೂನಿಯನ್ ಕಾರ್ಯಕರ್ತರು, ಪೈಲಟ್‌ಗಳು, ಶಿಕ್ಷಕರ ಸಂಘಗಳು, ಬಲಪಂಥೀಯರು, ಎಡಪಂಥೀಯರು, ಅನಾರ್ಕಿಸ್ಟರು, ಒಂದೆರಡು ಮಾವೋವಾದಿ ಗುಂಪುಗಳ ಕಾರ್ಯಕರ್ತರು ಹೀಗೆ ಎಲ್ಲಾ ಬಗೆಯವರೂ ಒಂದಲ್ಲಾ ಒಂದು ಮಟ್ಟದಲ್ಲಿ ಭಾಗವಹಿಸುತ್ತಿದ್ದಾರೆ. ಇಲ್ಲಿ ಕೂಡಾ ಚಳವಳಿಯ ನೀತಿ ನಿರೂಪಣೆಗಳ ಮೇಲೆ, ಕಾರ್ಯಕರ್ತರ ಮೇಲೆ ತಂತಮ್ಮ ಸಿದ್ಧಾಂತಗಳನ್ನು ಹೇರುವ ಪ್ರಯತ್ನಗಳು ನಡೆಯುತ್ತಿವೆ. ಇಂತಹ ಪರಿಸ್ಥಿತಿ ಗೊಂದಲ ಮೂಡಿಸುವ ಸಾಧ್ಯತೆಯೂ ಇರುತ್ತದೆ. ಈ ಚಳವಳಿಗೆ ಬೆಂಬಲಿಸುತ್ತಲೇ ಇದನ್ನು ಹಲವಾರು ಬಗೆಯಲ್ಲಿ ದಿಕ್ಕುತಪ್ಪಿಸುವ ಪ್ರಯತ್ನವನ್ನೂ ಡೆಮಾಕ್ರಾಟರು, ರಿಪಬ್ಲಿಕನ್ನರು ಮಾಡುತ್ತಿರುವುದೂ ಗೋಚರಿಸುತ್ತಿದೆ.

ಅಮೆರಿಕದ ಪ್ರಭುತ್ವಕ್ಕೆ ಚಳವಳಿಗಳನ್ನು ಎಲ್ಲಾ ರೀತಿಯಲ್ಲೂ ಬಗ್ಗುಬಡಿಯುವ ವಿಧಾನಗಳೂ ಗೊತ್ತಿವೆ. ಸೈನಿಕವಾಗಿಯೂ, ರಾಜಕೀಯವಾಗಿಯೂ ನೂರಾರು ಚಳವಳಿಗಳನ್ನು ಹುಟ್ಟುಹಾಕಿದ ಹಾಗೂ ಬಗ್ಗುಬಡಿದ ಚರಿತ್ರೆಯೇ ಅಮೆರಿಕದ 'ಪೆಂಟಗನ್'ಗೆ ಇದೆ. ಈಗ ಭುಗಿಲೆದ್ದ ಚಳವಳಿಯನ್ನು ಅಗತ್ಯ ಬಂದರೆ ಅತ್ಯಂತ ತೀವ್ರವಾಗಿ ಸರ್ಕಾರ ಹತ್ತಿಕ್ಕಬಹುದು. ಈಗ ಅಮೆರಿಕದಲ್ಲಿ ಮತ್ತೊಂದು 'ತಿಯನನ್‌ಮನ್ ಚೌಕ' ಮರುಕಳಿಸಬಹುದು. ಆದರೆ ಇಂದಿನ ಅಮೆರಿಕದ ಟೆಕ್ ಸ್ಯಾವಿ ಪೀಳಿಗೆಯ ಮುಂದೆ ಅಂತದ್ದೊಂದನ್ನು ನಡೆಸುವುದೇನೂ ಸುಲಭಸಾಧ್ಯವಲ್ಲ. ಎಚ್ಚೆತ್ತ ಜನಶಕ್ತಿಯ ಮುಂದೆ ಎಲ್ಲಾ ಬಗೆಯ ಸರ್ವಾಧಿಕಾರಗಳೂ ಮಂಡಿಯೂರಿರುವುದೂ ಇತಿಹಾಸವೇ ಅಲ್ಲವೇ?

ಇದೇ ಸಂದರ್ಭ ಅಮೆರಿಕನ್ನರಿಗೆ ಮತ್ತೊಂದು ಅವಕಾಶವನ್ನೂ ಸೃಷ್ಟಿಸಿದೆ. ಅದೇನೆಂದರೆ ಅವರು ನಿಜವಾದ ಅರ್ಥದಲ್ಲಿ ಮನುಷ್ಯರಾಗುವ ಅವಕಾಶ!. ವಾಸ್ತವದಲ್ಲಿ ಇಂದು ಅಮೆರಿಕದ ಶ್ರೀಮಂತಿಕೆ ನಿಂತಿರುವುದೇ ತೃತೀಯ ಜಗತ್ತಿನ ಸಂಪತ್ತಿನ ಲೂಟಿಯನ್ನಾಧರಿಸಿ ಹಾಗೂ ಬಡದೇಶಗಳ ಜನರ ಅಗ್ಗದ ಶ್ರಮವನ್ನು ದೋಚಿದ್ದರ ಪರಿಣಾಮವಾಗಿ. ಯಾವ ಸರ್ಕಾರಗಳು ಬಂಡವಾಳಿಗರ ಲಾಭಕ್ಕಾಗಿ ಸರಕು ಸಂಸ್ಕೃತಿಯನ್ನು, ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರೇರೇಪಿಸಿ ತಾವು ಸಾಲದ ಬಲೆಯಲ್ಲಿ ಬೀಳುವ ಜೊತೆಗೆ ಜನರನ್ನೂ ಸಾಲದ ವ್ಯಸನಕ್ಕೆ ಗುರಿಮಾಡಿದ್ದರೋ ಆ ಎಲ್ಲಾ ಸರ್ಕಾರಗಳನ್ನೂ ಅಮೆರಿಕನ್ನರು ಚುನಾವಣೆಯಿಂದ ಚುನಾವಣೆಗೆ ಗೆಲ್ಲಿಸಿಕೊಂಡೇ ಬಂದಿದ್ದಾರೆ. ತಮ್ಮ ಸರ್ಕಾರಗಳ ಇಂತಹ ನೀತಿಗಳನ್ನು ಹಾಗೂ ತಮ್ಮ ಅನುಭೋಗೀ ಸಂಸ್ಕೃತಿಯ ಕುರಿತ ದೊಡ್ಡ ಮಟ್ಟದಲ್ಲಿ ಮರುಚಿಂತನೆ ನಡೆಸಿ ಇದುವರೆಗೆ ಕಾರ್ಪೊರೇಟ್ ಪ್ರಭುತ್ವಗಳು ಪ್ರೇರೇಪಿಸುತ್ತಾ ಬಂದಿರುವ ಲ್ಯಾವಿಶ್ ಬದುಕಿನ ರೀತಿ ರಿವಾಜುಗಳನ್ನು ಧಿಕ್ಕರಿಸಿ ಆದಷ್ಟು ಸರಳ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆಯಿಡುವ ಅವಕಾಶವನ್ನಾದರೂ ಈಗಿನ ಚಳವಳಿ ಸೃಷ್ಟಿಸಿದರೆ ಅದೇ ಚಳವಳಿಯ ಅತಿದೊಡ್ಡ ಯಶಸ್ಸಾಗಲಿದೆ. ಈ ಜಗತ್ತನ್ನು ಎಲ್ಲಾ ಬಗೆಯ ಬಿಕ್ಕಟ್ಟುಗಳಿಂದಲೂ ರಕ್ಷಿಸಬಹುದಾದ ಏಕೈಕ ದಾರಿಯಿದು.

(ಕೃಪೆ- 'ಇಬ್ಬನಿ' ಬ್ಲಾಗ್) □

ದಕ್ಕಲಿಗರಿಗೂ ಸ್ವಾತಂತ್ರ್ಯ ಬಂತು!!

ಸುಗತ ಶ್ರೀನಿವಾಸರಾಜು
ಅನು: ವಡ್ಡಗೆರೆ ನಾಗರಾಜಯ್ಯ

ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರವರು ಲಾಲ್ ಖಿಲಾದಿಂದ ಸಡಗರದಲ್ಲಿ ತೇಲುತ್ತಿದ್ದ ಭಾರತವನ್ನು ಉದ್ದೇಶಿಸಿ, 65ನೇ ಸ್ವಾತಂತ್ರ್ಯೋತ್ಸವದ ಮಾತನಾಡುತ್ತಿದ್ದರೆ, ಇತ್ತ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಪಟ್ಟಣದ ಹೊರವಲಯದಲ್ಲಿ ನೆಲೆಸಿರುವ ಬಹಿಷ್ಕೃತ ಅಲೆಮಾರಿ ದಕ್ಕಲಿಗರು ತಮ್ಮ ಮೊಟ್ಟಮೊದಲ ಸ್ವಾತಂತ್ರ್ಯದ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ದಲಿತರಲ್ಲಿಯೇ ಇರುವ ಮಾದಿಗ ಜನಾಂಗಕ್ಕೆ ಸೇರಿದ ಊರಾಚೆಯ ಐದು ಎಕರೆ ಸ್ಮಶಾನದ ಬಯಲಿನಲ್ಲಿ ಹುಲ್ಲು ಗುಡಿಸಲುಗಳಲ್ಲಿ ವಾಸಿಸುತ್ತಿರುವ ಕೆಲವೇ ದಕ್ಕಲಿಗರ ಕುಟುಂಬಗಳು ಅಂದು ಸ್ವಾತಂತ್ರ್ಯದಿನದ ಸಂಭ್ರಮಾಚರಣೆಗೆ ಸೇರಿದ್ದರು. ಇಂದಿಗೂ ಅಲೆಮಾರಿ ಹಂತದಲ್ಲಿಯೇ ಉಳಿದುಕೊಂಡಿರುವ ದಕ್ಕಲಿಗರ ಬದುಕಿನಲ್ಲಿ ಎಂದಿಗೂ ಹಾರಾಡದಿದ್ದ ತ್ರಿವರ್ಣ ಬಾವುಟ ಮತ್ತು ಹೂವಿನ ಹಾರದ ಅಲಂಕಾರ ಅಪರಿಚಿತವಾದ ಆನಂದವನ್ನೇ ತುಂಬಿತ್ತು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ 64 ವರ್ಷಗಳ ತರುವಾಯದಲ್ಲಿಯೂ ಮತ್ತು ನಿಮ್ನ ವರ್ಗಗಳಿಗೆ ಸಂವಿಧಾನಾತ್ಮಕ ಹಕ್ಕುಬಾಧ್ಯತೆಗಳನ್ನು ನೀಡಿದ 60 ವರ್ಷಗಳ ದೀರ್ಘಕಾಲದ ನಂತರದಲ್ಲಿಯೂ ದಕ್ಕಲಿಗರನ್ನು 'ಅಸ್ಪೃಶ್ಯರಿಂದಲೇ ಅಸ್ಪೃಶ್ಯರನ್ನಾಗಿ' ನಡೆಸಿಕೊಳ್ಳುತ್ತಿರುವ ಅಮಾನವೀಯ ವ್ಯವಸ್ಥೆ ನಮ್ಮಲ್ಲಿದೆ. ದಕ್ಕಲಿಗರ ಪಾಲಿಗೆ ಮುಖ್ಯ ಪೀಡಕರಾಗಿರುವುದು ತಮ್ಮದೇ ರಕ್ತ ಸಂಬಂಧಿಗಳೆಂದು ಹೇಳಿಕೊಳ್ಳುವ ಹಾಗೂ ದಲಿತರೇ ಆಗಿರುವ ಮಾದಿಗರು. ದಕ್ಕಲಿಗರು ಮಾದಿಗರ 'ದತ್ತು ಮಕ್ಕಳು' ಎಂಬುದು ಅನೇಕ ಶತಮಾನಗಳಿಂದ ದಕ್ಕಲಿಗ-ಮಾದಿಗ ಜನಮಾನಸದಲ್ಲಿ ನೆಲೆಸಿರುವ ಜನಪ್ರಿಯ ನಂಬಿಕೆ. ಇದೇ ನಂಬಿಕೆಯ ಪ್ರಕಾರ ಹಿಂದಿನಿಂದಲೂ ದಕ್ಕಲಿಗರು ಮಾದಿಗರಿಂದ 'ಹಕ್ಕಿನ ಭಿಕ್ಷೆ'ಯನ್ನು ಪಡೆಯುತ್ತಾ ಜೀವಿಸುತ್ತಿದ್ದಾರೆ. (ಇತ್ತೀಚಿನ ವರ್ಷಗಳಲ್ಲಿ ದಕ್ಕಲಿಗರ ಯುವಕರು ಪ್ಲಾಸ್ಟಿಕ್ ಸಾಮಾನು, ಕಸಪೊರಕೆ ಮುಂತಾದ ವಸ್ತುಗಳನ್ನು ನಗರ ಮತ್ತು ಪಟ್ಟಣಗಳಲ್ಲಿ ಮಾರಾಟ ಮಾಡುವ ಉದ್ಯೋಗದಲ್ಲಿ ನಿರತರಾಗಿದ್ದಾರೆ)

ಶ್ರೇಣೀಕೃತ ಜಾತಿ ಪದ್ಧತಿಯಲ್ಲಿ ಸ್ವಯಂ ಮಾದಿಗರೇ 'ಬಹಿಷ್ಕೃತ'ರಾಗಿರುವಾಗ, ಮಾದಿಗರಿಗಿಂತಲೂ ಕೆಳತುದಿಯಲ್ಲಿ ದಕ್ಕಲಿಗರಿದ್ದಾರೆ. ಆದುದರಿಂದಲೇ ಅವರು ಅಸ್ಪೃಶ್ಯರಿಗೆ ಸೇರಿದ ಸ್ಮಶಾನದ ಬಯಲಿನಲ್ಲಿ ನೆಲೆಸಿದ್ದಾರೆ. ದಕ್ಕಲಿಗರು ತಮಗೆ ಸಿಕ್ಕಬೇಕಾದ ಸವಲತ್ತುಗಳಿಂದ ವಂಚಿತರಾಗಿ ಮತ್ತು ದಯನೀಯವಾಗಿ ಬದುಕುತ್ತಿದ್ದರೂ ಸಹ ಸ್ವಾತಂತ್ರ್ಯದ ದಿನವನ್ನು ಈ ಪರಿ ಸಂಭ್ರಮದಿಂದ ಆಚರಿಸಲು ಕಾರಣವಾದ ಸಂಗತಿಯಾದರೂ ಏನು?

ಚಿಕ್ಕನಾಯಕನಹಳ್ಳಿ ಪಟ್ಟಣದ ಹೊರವಲಯದಲ್ಲಿರುವ ದಕ್ಕಲರಿಗೆ ಸ್ವಾತಂತ್ರ್ಯ ಬಂದದ್ದು ತೀರಾ ತಡವಾಗಿ. ಅಂದರೆ 2010ರಲ್ಲಿ. ದಕ್ಕಲಿಗರ ಪಾಲಿನ ಆಪದ್ಬಾಂಧವರಾಗಿ ಬಂದ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರಾದ ಡಾ.ಸಿ.ಎಸ್. ದ್ವಾರಕಾನಾಥ್ ಮತ್ತು ಸ್ಥಳೀಯ ಪಶುವೈದ್ಯರಾದ ಡಾ. ರಘುಪತಿಯವರು ಆಡಳಿತ ಯಂತ್ರದ ಮೇಲೆ ಒತ್ತಡ ತಂದು 19 ಕುಟುಂಬಗಳಿಗೆ ನಿವೇಶನಗಳ ಹಕ್ಕುಪತ್ರಗಳನ್ನು ಕೊಡಿಸುವಲ್ಲಿ ಯಶಸ್ವಿಯಾದರು. ದಕ್ಷಿಣ ಕರ್ನಾಟಕದಲ್ಲಿಯೇ ಪ್ರಥಮವಾದ ಈ ಪ್ರಯತ್ನ ಕಮ್ಮಿ ಸಾಧನೆಯಂತೂ ಅಲ್ಲ. ಹಲವಾರು ದಲಿತ ಸಂಘಟನೆಗಳು ತಮ್ಮ ಸ್ಮಶಾನದಲ್ಲಿ ಭೂಗ್ರಹಣ ಮಾಡಿಕೊಂಡು ದಕ್ಕಲಿಗರು ನೆಲೆಸದಂತೆ ಪ್ರತಿರೋಧಿಸಿದಾಗಲೂ ದಕ್ಕಲಿಗರಿಗೆ ನಿವೇಶನದ ಹಕ್ಕುಪತ್ರ ಕೊಡಿಸಿದ್ದು ಮಹತ್ವದ ಸಾಧನೆಯೇ ಆಗಿತ್ತು. ಡಾ. ರಘುಪತಿ ಹೇಳುವ ಪ್ರಕಾರ ದಕ್ಕಲಿಗರಿಗೆ ಭೂ ಹಸ್ತಾಂತರ ಮಾಡಿಕೊಟ್ಟ ನಿವೇಶನದ ಚಕ್ಕುಬಂದಿಯನ್ನು ಪುರಸಭೆಯ ಅಥವಾ ತಾಲ್ಲೂಕು ಕಛೇರಿಯ ದಾಖಲೆಗಳಲ್ಲಿ ಈಗಲೂ ಸ್ಪಷ್ಟವಾಗಿ ದಾಖಲಾಗಿರುವುದಿಲ್ಲ.

ದಕ್ಕಲಿಗರ ಸ್ವಾತಂತ್ರ್ಯ ದಿನದ ಆಚರಣೆಯ ಸಡಗರಕ್ಕೆ ಮತ್ತೊಂದು ಕಾರಣವೆಂದರೆ, ಕರ್ನಾಟಕದಾದ್ಯಂತ ಚೆಲ್ಲಾಚೆದುರಿ ಹೋಗಿದ್ದ ತಮ್ಮ ಇಡೀ ಸಮುದಾಯದ ಬಾಂಧವರು, ಕಳೆದ ಜುಲೈ 23ರಂದು, ತಮ್ಮ ಜನಾಂಗಕ್ಕೆ ಸಂಬಂಧಿಸಿದ ವಿಷಯಗಳ ಕುರಿತು

ಸಂವಿಧಾನಾತ್ಮಕ ಹಕ್ಕುಬಾಧ್ಯತೆಗಳನ್ನು ನೀಡಿದ ೬೦ ವರ್ಷಗಳ ದೀರ್ಘಕಾಲದ ನಂತರದಲ್ಲಿಯೂ ದಕ್ಕಲಿಗರನ್ನು 'ಅಸ್ಪೃಶ್ಯರಿಂದಲೇ ಅಸ್ಪೃಶ್ಯರನ್ನಾಗಿ' ನಡೆಸಿಕೊಳ್ಳುತ್ತಿರುವ ಅಮಾನವೀಯ ವ್ಯವಸ್ಥೆ ನಮ್ಮಲ್ಲಿದೆ. ದಕ್ಕಲಿಗರ ಪಾಲಿಗೆ ಮುಖ್ಯ ಪೀಡಕರಾಗಿರುವುದು ತಮ್ಮದೇ ರಕ್ತ ಸಂಬಂಧಿಗಳೆಂದು ಹೇಳಿ ಕೊಳ್ಳುವ ಹಾಗೂ ದಲಿತರೇ ಆಗಿರುವ ಮಾದಿಗರು. ದಕ್ಕಲಿಗರು ಮಾದಿಗರ 'ದತ್ತು ಮಕ್ಕಳು' ಎಂಬುದು ಅನೇಕ ಶತಮಾನಗಳಿಂದ ದಕ್ಕಲಿಗ-ಮಾದಿಗ ಜನಮಾನಸದಲ್ಲಿ ನೆಲೆಸಿರುವ ಜನಪ್ರಿಯ ನಂಬಿಕೆ. ಇದೇ ನಂಬಿಕೆಯ ಪ್ರಕಾರ ಹಿಂದಿನಿಂದಲೂ ದಕ್ಕಲಿಗರು ಮಾದಿಗರಿಂದ 'ಹಕ್ಕಿನ ಭಿಕ್ಷೆ'ಯನ್ನು ಪಡೆಯುತ್ತಾ ಜೀವಿಸುತ್ತಿದ್ದಾರೆ.

ವಿಚಾರ ವಿನಿಮಯ ಮಾಡಿಕೊಳ್ಳಲು ಒಂದೆಡೆ ಸಮಾವೇಶಗೊಂಡಿದ್ದರು. ಆ ಸಮಾವೇಶದ ದಿನದಂದೇ ದಕ್ಕಲಿಗರೆಲ್ಲಾ ಹೀಗೆ ಚಾರಿತ್ರಿಕವಾಗಿ ಒಂದೆಡೆ ಕಲೆತ ಸಂದರ್ಭವನ್ನು ಆಗಸ್ಟ್ 15ರಂದು ರಾಷ್ಟ್ರೀಯ ಬಾವುಟವನ್ನು ಹಾರಿಸುವ ಮೂಲಕ ಉತ್ಸವದ ರೂಪದಲ್ಲಿ ವ್ಯಕ್ತಪಡಿಸಬೇಕೆಂದು ತೀರ್ಮಾನಿಸಿದ್ದರು. ತಮ್ಮ ಸಂಘಟನೆಯ ರೂಪುರೇಷೆ ಹಾಗೂ ಜನರನ್ನು ಸಂಘಟಿಸುವ ವಿಧಾನಗಳನ್ನೂ ಕುರಿತು ಸಮಾ ವೇಶದ ಸಂದರ್ಭದಲ್ಲಿಯೇ ಸ್ಪಷ್ಟಪಡಿಸಿಕೊಳ್ಳಲಾಗಿತ್ತು. ಅಂದು ಕರ್ನಾಟಕ ರಾಜ್ಯದ 16 ಜಿಲ್ಲೆಗಳಲ್ಲಿ ನೆಲೆಸಿರುವ ದಕ್ಕಲಿಗ ಕುಟುಂಬಗಳ ಜನಸಂಖ್ಯಾ ಸಮೀಕ್ಷೆಯ ವರದಿಯನ್ನೂ ಮಂಡಿಸಲಾಯಿತು. ತಮ್ಮ ಜನಸಂಖ್ಯೆ ಎಷ್ಟಿದೆ ಎಂಬ ಸ್ಪಷ್ಟ ಅಂಕಿ ಅಂಶಗಳ ಚಿತ್ರಣ ಈಗ ಅವರಿಗೆ ದೊರಕಿದೆ. ಸುಮಾರು 1200 ಜನಸಂಖ್ಯೆಯ 400 ದಕ್ಕಲಿಗರ ಕುಟುಂಬಗಳು ಕರ್ನಾಟಕದಲ್ಲಿವೆ.

ದಕ್ಕಲಿಗ ಸಮುದಾಯದ ಉತ್ಸಾಹೀ ಯುವಕರು ಈ ಸಮೀಕ್ಷೆ ನಡೆಸಿ, ಕರ್ನಾಟಕದಲ್ಲಿ 'ಪ್ರಗತಿಪರ' ಎನ್ನಿಸಿಕೊಂಡ ದಕ್ಷಿಣ ಭಾಗಕ್ಕಿಂತಲೂ ಉತ್ತರ ಕರ್ನಾಟಕದಲ್ಲಿರುವ ದಕ್ಕಲಿಗ ಕುಲಸ್ಥರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ಸಾಪೇಕ್ಷವಾಗಿ ಉತ್ತಮವಾಗಿವೆ ಎಂಬ ಅಂಶವನ್ನು ವ್ಯಕ್ತಪಡಿಸಿದರು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಅರ್ಧಕ್ಕರ್ಧ ಪ್ರಮಾಣದ ದಕ್ಕಲಿಗರು ಈಗಾಗಲೇ ಸರ್ಕಾರಿ ನಿವೇಶನಗಳನ್ನು ಹೊಂದುವಲ್ಲಿ ಸಫಲರಾಗಿದ್ದಾರಲ್ಲದೆ, ಅಲ್ಲಿನ ಜಾತಿ ದಬ್ಬಾಳಿಕೆಯ ತೀವ್ರತೆ ತುಂಬಾ ಕಮ್ಮಿ. "ನಮ್ಮನ್ನು ಇತರೆ ಮೇಲ್ಜಾತಿ ಜನರೊಂದಿಗೆ ಹೋಲಿಸಿಕೊಳ್ಳುವುದರಲ್ಲಿ ಯಾವುದೇ ಅಂಶವಿಲ್ಲ. ಆದರೆ ದಕ್ಷಿಣದ ಜಿಲ್ಲೆಗಳಲ್ಲಿರುವ ಮಾದಿಗರ ಕೇರಿಗಳಿಗೆ ಅಪ್ಪಿತಪ್ಪಿ ನಾವು ಪ್ರವೇಶಿಸಿದರೆ ಸಾಕು; ಮಾದಿಗರು ನಮ್ಮ ಕಪಾಳಕ್ಕೆ ಬಾರಿಸುತ್ತಾರೆ. ನಮ್ಮ ಪಾದಗಳ ಧೂಳಿನಿಂದ ಕೇಡುಗಳು ಸಂಭವಿಸುತ್ತವೆಂದು ಅವರು ತಿಳಿದುಕೊಂಡಿದ್ದಾರೆ. ರಾಜಕಾರಣಿಗಳೂ ಸಹ ನಮ್ಮಿಂದ ಓಟು ಕೇಳುತ್ತಿಲ್ಲ. ನಮ್ಮಿಂದ ಓಟು ಪಡೆದರೆ ಚುನಾವಣೆಯಲ್ಲಿ ಸೋಲು ಅನುಭವಿಸುತ್ತಾರೆಂಬುದು ರಾಜಕಾರಣಿಗಳಲ್ಲಿರುವ ಸಾಮಾನ್ಯ ನಂಬಿಕೆ" ಎನ್ನುತ್ತಾರೆ ದಕ್ಕಲಿಗರ ಯುವ ಮುಖಂಡ ಶಾಂತರಾಜು. ಜುಲೈ 23ರಂದು ನಡೆದ ದಕ್ಕಲಿಗರ ಸಮಾವೇಶವನ್ನು ಆಯೋಜಿಸುವಲ್ಲಿ ಶಾಂತರಾಜು ಅವರ ಪರಿಶ್ರಮ ಶ್ಲಾಘನೀಯ.

"ಕರ್ನಾಟಕದಲ್ಲಿರುವ 101 ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ದಕ್ಕಲಿಗರನ್ನು ಸೇರಿಸಲಾಗಿದೆ. ಆದರೆ ಪರಿಶಿಷ್ಟ ಜಾತಿಯ ಬಹುಪಾಲು ಅನುಕೂಲಗಳು ಪರಿಶಿಷ್ಟರಲ್ಲಿಯೇ ಅಧಿಕ ಸಂಖ್ಯೆಯಲ್ಲಿರುವ ಹೊಲೆಮಾದಿಗರ ಪಾಲಾಗುತ್ತಿವೆ. ದಕ್ಕಲಿಗರು ಅನುಭವಿಸುತ್ತಿರುವ ಬಹುಮುಖ್ಯ ಅನಾನುಕೂಲವೇನೆಂದರೆ ದಕ್ಕಲಿಗರು ಕೆಲವೇ ಸಾವಿರಗಳ ಸಂಖ್ಯೆಯಲ್ಲಿರುವ ಅತ್ಯಂತ ಸೂಕ್ಷ್ಮ ಅಲ್ಪಸಂಖ್ಯಾತ ಜಾತಿಯಾಗಿದ್ದು ಲಕ್ಷಾಂತರ ಸಂಖ್ಯೆಯಲ್ಲಿರುವ ಇತರೆ ಪರಿಶಿಷ್ಟ ಜಾತಿಗಳೊಂದಿಗೆ ಸ್ಪರ್ಧಿಸಲಾಗಲೀ, ಅನುಕೂಲ ಪಡೆಯಲಾಗಲೀ ಸಾಧ್ಯವಾಗುತ್ತಿಲ್ಲ. ದಕ್ಕಲಿಗರು ಜಾತಿಪತ್ರಗಳಿಗಾಗಿ ಸರ್ಕಾರಿ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಆ ಅಧಿಕಾರಿಗಳು ದಕ್ಕಲಿಗ ಸಮುದಾಯವನ್ನು ಗುರುತಿಸುವ ಕೆಲಸವನ್ನೂ ಮಾಡುತ್ತಿಲ್ಲ. ಬಹುಸಂಖ್ಯಾತ ದಲಿತ ಕೋಮುಗಳ ಮೀಸಲಾತಿಯನ್ನು ದಕ್ಕಲಿಗರು ಕಬಳಿಸಿಬಿಡುತ್ತಾರೆಂದು ಅವರು ಭಾವಿಸುತ್ತಾರೆ. ಒಂದು ವೇಳೆ ಜಾತಿಪತ್ರ ನೀಡುವ ಅಧಿಕಾರಿ ದಲಿತನಾಗಿದ್ದರಂತೂ ಮುಗಿಯಿತು; ಅಂತಹ ಅಧಿಕಾರಿಯಿಂದ ದಕ್ಕಲಿಗರು ದೊಡ್ಡ ತಾರತಮ್ಯವನ್ನೇ ಎದುರಿಸಬೇಕಾಗುತ್ತದೆ. ಯಾಕೆಂದರೆ ದಕ್ಕಲಿಗರು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದಾರೆ. ನನಗೆ ತಿಳಿದಿರುವಂತೆ ದಕ್ಕಲಿಗರಲ್ಲಿ ಕೇವಲ ಇಬ್ಬರು ಯುವಕರು ಮಾತ್ರ ಬಿ.ಎ ಪದವೀಧರರಾಗಿದ್ದು ಅವರಿಗೆ ಸರ್ಕಾರಿ ನೌಕರಿ ಸಿಕ್ಕಿರುವುದಿಲ್ಲ. ನಮ್ಮ ಥರದ ಪ್ರಜಾಪ್ರಭುತ್ವದಲ್ಲಿ ಸಂಖ್ಯಾದೃಷ್ಟಿಯಿಂದ ಸಣ್ಣಗಾತ್ರದಲ್ಲಿರುವ ತಳದ ಜನ ಯಾವತ್ತೂ ಕಡೆಗಣನೆಗೀಡಾಗುತ್ತಿದ್ದಾರೆ" ಎಂದು ಡಾ. ಸಿ.ಎಸ್. ದ್ವಾರಕನಾಥ್ ಬಣ್ಣಿಸುತ್ತಾರೆ.

ದಕ್ಕಲಿಗರು ಜಾತಿಪತ್ರಗಳಿಗಾಗಿ ಸರ್ಕಾರಿ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಆ ಅಧಿಕಾರಿಗಳು ದಕ್ಕಲಿಗ ಸಮುದಾಯವನ್ನು ಗುರುತಿಸುವ ಕೆಲಸವನ್ನೂ ಮಾಡುತ್ತಿಲ್ಲ. ಬಹುಸಂಖ್ಯಾತ ದಲಿತ ಕೋಮುಗಳ ಮೀಸಲಾತಿಯನ್ನು ದಕ್ಕಲಿಗರು ಕಬಳಿಸಿಬಿಡುತ್ತಾರೆಂದು ಅವರು ಭಾವಿಸುತ್ತಾರೆ. ಒಂದು ವೇಳೆ ಜಾತಿಪತ್ರ ನೀಡುವ ಅಧಿಕಾರಿ ದಲಿತನಾಗಿದ್ದರಂತೂ ಮುಗಿಯಿತು; ಅಂತಹ ಅಧಿಕಾರಿಯಿಂದ ದಕ್ಕಲಿಗರು ದೊಡ್ಡ ತಾರತಮ್ಯವನ್ನೇ ಎದುರಿಸಬೇಕಾಗುತ್ತದೆ. ಯಾಕೆಂದರೆ ದಕ್ಕಲಿಗರು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದಾರೆ. ನನಗೆ ತಿಳಿದಿರುವಂತೆ ದಕ್ಕಲಿಗರಲ್ಲಿ ಕೇವಲ ಇಬ್ಬರು ಯುವಕರು ಮಾತ್ರ ಬಿ.ಎ ಪದವೀಧರರಾಗಿದ್ದು ಅವರಿಗೆ ಸರ್ಕಾರಿ ನೌಕರಿ ಸಿಕ್ಕಿರುವುದಿಲ್ಲ.

ಅಂದಿನ ಸಭೆಯಲ್ಲಿ ದಕ್ಕಲಿಗರಿಂದ ಕೇಳಿಬಂದ ಮುಖ್ಯ ಅಹವಾಲು ತಮ್ಮ ಜಾತಿಪತ್ರಗಳಿಗೆ ಸಂಬಂಧಿಸಿದ್ದಾಗಿತ್ತು. ಜಾತಿ ಪತ್ರ ಪಡೆಯುವಲ್ಲಿ ಬಾಧಿತನಾದ ವ್ಯಕ್ತಿಯೊಬ್ಬ ಹೇಳುವ ಪ್ರಕಾರ ದಕ್ಕಲಿಗರನ್ನು ಉದ್ದೇಶಪೂರ್ವಕವಾಗಿಯೇ ಜಾತಿಪತ್ರಗಳಲ್ಲಿ 'ಆದಿ ಕರ್ನಾಟಕ' (ಒಂದು ಪ್ರತ್ಯೇಕ ಪರಿಶಿಷ್ಟ ಜಾತಿ) ಅಥವಾ 'ಮಾದಿಗ' ಎಂಬ ಹೆಸರಿನಲ್ಲಿ ನಮೂದಿಸಿ ಸರ್ಕಾರ ಜಾತಿಪತ್ರಗಳನ್ನು ನೀಡುತ್ತಿದೆ. ತಮಗೆ ದಕ್ಕಬೇಕಾಗಿರುವ ಸಂವಿಧಾನಾತ್ಮಕ ಹಕ್ಕುಗಳಿಂದ ವಂಚಿಸುವ ಸಲುವಾಗಿ ಎಸಗುತ್ತಿರುವ ಕೃತ್ಯವಿದು. ರಾಯಚೂರು ಜಿಲ್ಲೆಯ ಲಿಂಗಸಗೂರಿನ ಮಾರುತಿ ಎಂಬ ಬಿ.ಎ ಪದವೀಧರ, "ಕೆಲವು ಸಲ ಅಧಿಕಾರಿಗಳು 'ದಕ್ಕಲಿಗ' ಎಂಬ ಜಾತಿಯೇ ಇರುವುದಿಲ್ಲ; ಆದರೆ 'ಒಕ್ಕಲಿಗ' (ಪ್ರಬಲವಾದ ಗೌಡ ಸಮುದಾಯ) ಎಂಬ ಜಾತಿ ಮಾತ್ರ ಇದೆ. ಎಂಬ ಮೊಂಡು ಮಾತು ಹೇಳುತ್ತಾರೆ. ನಮ್ಮ ಜಾತಿಯ ಹೆಸರು ಸರ್ಕಾರಿ ಕಂಪ್ಯೂಟರ್‌ಗಳಲ್ಲಿ ಇರುವುದಿಲ್ಲ" ಎಂದು ದೂರಿದರು.

ಇದಕ್ಕಿಂತಲೂ ಆಘಾತಕಾರಿಯಾದ ಅಂಶಗಳು ಇಂದಿಗೂ ದಕ್ಷಿಣದ ಜಿಲ್ಲೆಗಳಲ್ಲಿ ಆದಾಗ್ಯೂ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ದಾವಣಗೆರೆ ಭಾಗದಲ್ಲಿ ದಕ್ಕಲಿಗರ ವಿರುದ್ಧ ದಲಿತರಿಂದಲೇ ಅಸ್ಪೃಶ್ಯತೆ ಹೇಗೆಲ್ಲಾ ಆಚರಣೆಯಲ್ಲಿದೆ ಎಂಬ ಬಗ್ಗೆ ಸಾರ್ವಜನಿಕವಾಗಿ ಆಲಿಸಿದಾಗ ಹೊರಬಿದ್ದವು. ಮೂವರು ದಕ್ಕಲಿಗ ಹೆಂಗಸರು ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದು ಹೀಗೆ– "ಕೆಲವು ತಿಂಗಳ ಹಿಂದೆ ಚಿಕ್ಕನಾಯಕನ ಹಳ್ಳಿಯಲ್ಲಿ ಸ್ವಸಹಾಯ ಗುಂಪೊಂದು ಸದಸ್ಯತ್ವ ನೋಂದಣಿ ಅಭಿಯಾನ ಕೈಗೊಂಡಿತ್ತು. ಸದಸ್ಯತ್ವ ಪಡೆದವರಿಗೆ ಗುರುತಿನ ಪತ್ರಗಳನ್ನು ನೀಡಲಾಗುತ್ತಿತ್ತು. ನಾವು ಸಹ ಸ್ವಯಂ ಸ್ಫೂರ್ತಿಯಿಂದ ಸದಸ್ಯತ್ವ ಪಡೆದುಕೊಳ್ಳಲು ಭಾವಚಿತ್ರ ತೆಗೆಸಿಕೊಳ್ಳಲು ಹೋಗಿ ಸಾಲಿನಲ್ಲಿ ನಿಂತುಕೊಂಡೆವು. ಸರದಿ ಸಾಲಿನಲ್ಲಿ ನಿಂತುಕೊಂಡಿದ್ದ ಜನ ದೊಂಬಿಯನ್ನೇ ಸೃಷ್ಟಿಸಿ ನಮ್ಮನ್ನು ಅಲ್ಲಿದ ಕಟ್ಟಡದೊಳಕ್ಕೆ ಪ್ರವೇಶಿಸದಂತೆ ತಡೆದರು". ಈ ಮಹಿಳೆಯರನ್ನು ಅಂಬೇಡ್ಕರ್ ಭವನಕ್ಕೆ ಪ್ರವೇಶಿಸದಂತೆ ನಿರ್ಬಂಧಿಸಿದ್ದರು.

ಶಾಂತರಾಜುರವರು ಈಗ್ಗೆ ಆರು ತಿಂಗಳ ಹಿಂದೆ ಪ್ಲಾಸ್ಟಿಕ್ ಪಾತ್ರೆಗಳನ್ನು ಮಾರಾಟ ಮಾಡುತ್ತಾ, ಆಕಸ್ಮಿಕವಾಗಿ ಚಿಕ್ಕನಾಯಕನ ಹಳ್ಳಿ ಪಟ್ಟಣದ ದಲಿತ-ಮಾದಿಗರ ಕೇರಿಯನ್ನು ಪ್ರವೇಶಿಸಿದ ಬಳಿಕ ಅಲ್ಲಿನ ಮಾದಿಗರಿಂದ ತಮಗಾದ ಅನುಭವವನ್ನು ವಿವರಿಸಿದ್ದು ಹೀಗೆ– "ಮಾದಿಗರ ಹಟ್ಟಿಯೊಳಗೆ ತರಕಾರಿ ಮಾರುತ್ತಿದ್ದ ಹೆಂಗಸೊಬ್ಬಳು ನನ್ನ ಕೊರಳುಪಟ್ಟಿ ಹಿಡಿದು, ಪಟ್ಟಣದ ಚೌಕದಲ್ಲಿ ಎಳೆದಾಡಿಕೊಂಡು, ನಾನು ಅವರ ಹಟ್ಟಿಯೊಳಕ್ಕೆ ಪ್ರವೇಶಿಸಿದ ಮರು ವಾರದಲ್ಲಿಯೇ ಅವಳ ಸಂಬಂಧಿಕರೊಬ್ಬರು ಸತ್ತು ಹೋದರೆಂದು, ನಾನು ಅವರ ಹಟ್ಟಿಯೊಳಕ್ಕೆ ಪ್ರವೇಶ ಮಾಡಿದ್ದರಿಂದಲೇ ಈ ಕೇಡು ಸಂಭವಿಸಿತೆಂದು ಆ ಹೆಂಗಸು ನನ್ನ ವಿರುದ್ಧ ದೂರತೊಡಗಿದಳು". ಶಾಂತರಾಜು ಅವರಿಗಾದ ಇಂತಹ ಅನುಭವದ ಬಗ್ಗೆ ಪಶುವೈದ್ಯ ಡಾ॥ ರಘುಪತಿ, "ಕೆಳಜಾತಿಯ ವಿರುದ್ಧ ಮೇಲ್ಜಾತಿಯವರು ಪ್ರದರ್ಶಿಸುವ ಸಿಟ್ಟಿನ ಬಗೆ ಇದು. ಇದೊಂದು ರೀತಿ 'repressed anger'. ಜಾತಿ ದಬ್ಬಾಳಿಕೆಗೆ ಗುರಿಯಾಗಿರುವ ದಲಿತ ಜಾತಿಯೊಂದು ತನಗಿಂತಲೂ ಕೆಳಗಿರುವ ಮತ್ತೊಂದು ದಲಿತ ಜಾತಿಯ ವಿರುದ್ಧ ಪ್ರದರ್ಶಿಸುವ ಈ ಸಿಟ್ಟನ್ನು ಬೇರೆ ಹೇಗೆ ವಿವರಿಸಬೇಕು ಹೇಳಿ?" ಎಂದು ಕೇಳುತ್ತಾರೆ.

ತಮ್ಮದೇ ಸಕಾರಾತ್ಮಕ ಗುರುತನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ, ದಕ್ಕಲಿಗ ಸಮುದಾಯ ಇದೀಗ ತನ್ನನ್ನು ಪ್ರತಿನಿಧಿಸುವ ತನ್ನದೇ ಪ್ರಬಲ ಪ್ರತಿಷ್ಠೆಯ ಲಾಂಛನದ ಹುಡುಕಾಟಕ್ಕೆ ಮುಂದಾಗಿದೆ. "ದಲಿತರು ಅಂಬೇಡ್ಕರ್‌ರವರ ಭಾವಚಿತ್ರವನ್ನು ಬಳಸುತ್ತಿದ್ದಾರೆ. ಪ್ರಾಯಶಃ ನಾವು ಚತುರ್ಭುಜ ದಕ್ಷಬ್ರಹ್ಮ (ಒಬ್ಬ ಪುರಾಣ ಪುರುಷ)ನ ಚಿತ್ರವನ್ನು ಸೃಷ್ಟಿಸಿಕೊಳ್ಳುತ್ತೇವೆ" ಎಂದು ಯಾದಗಿರಿ ಜಿಲ್ಲೆಯ ದಕ್ಕಲಿಗರ ಮುಖಂಡ ಮಲಕಪ್ಪ ಹೇಳುತ್ತಾರೆ. ಇಂತಹದ್ದೊಂದು ಪ್ರತಿಮೆಯನ್ನು ಸೃಷ್ಟಿಸಿಕೊಳ್ಳುವವರೆಗೆ ಗಾಂಧೀಜಿಯವರ ಭಾವಚಿತ್ರವನ್ನು ಬಳಸಲು ದಕ್ಕಲಿಗರು ತೀರ್ಮಾನಿಸಿದ್ದಾರೆ. ಅವರು ಈಗ ನೆಲೆಸಿರುವ ಹತ್ತೊಂಭತ್ತು ನಿವೇಶನಗಳುಳ್ಳ ಹೊಸ ಸ್ಮಶಾನಕ್ಕೆ ಗಾಂಧಿನಗರ ಎಂದು ಹೆಸರಿಡಲಾಗಿದೆ. 65ನೇ ಸ್ವಾತಂತ್ರ್ಯ ದಿನದ ಆಚರಣೆ ಪ್ರಾಯಶಃ ದಕ್ಕಲಿಗರ ಪುಟ್ಟ ಪ್ರಯತ್ನಕ್ಕೆ ಸಿಕ್ಕಿದ ವಿಜಯೋತ್ಸವದ ಆರಂಭದ ದ್ಯೋತಕವಾಗಿದೆ. ಇದು ದಕ್ಕಲಿಗರ ಪಾಲಿನ ಮೊಟ್ಟಮೊದಲ ಸ್ವಾತಂತ್ರ್ಯ ದಿನಾಚರಣೆ. □

(ಸೌಜನ್ಯ : ಔಟ್‌ಲುಕ್, 29 ಆಗಸ್ಟ್ 2011)

ಕೋಮುವಾದಿ ಹಿಂಸೆಯನ್ನು ತಡೆಗಟ್ಟುವ ಮಸೂದೆ

ಕಾಯಿದೆ ಬೇಕು-ತಿದ್ದುಪಡಿಗಳೂ ಬೇಕು!

ಶಿವಸುಂದರ್

ಬಿಜೆಪಿ ಈಗಾಗಲೇ ಇದು ಹಿಂದೂ ವಿರೋಧಿ ಮಸೂದೆ ಎಂಬ ಪ್ರಚಾರವನ್ನು ಅಬ್ಬರದಿಂದ ಶುರು ಮಾಡಿ ಹಿಂದೂ ಓಟ್ ಬ್ಯಾಂಕನ್ನು ಧೃಢ ಪಡಿಸಿಕೊಳ್ಳುತ್ತಿದೆ. ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ಯುಪಿಎ ಅಂಗಪಕ್ಷಗಳು ಸಹ ಹಿಂದೂ ವಿರೋಧಿ ಇಮೇಜನ್ನು ಹೊರಲು ಸಿದ್ಧರಿರುವುದಿಲ್ಲ. ಹೀಗಾಗಿ ಸದ್ಯಕ್ಕೆ ಈ ಮಸೂದೆ ಜಾರಿಗೆ ಬರುವ ಸೂಚನೆಯಿಲ್ಲ. ಆದರೂ ಈ ಮಸೂದೆಯನ್ನು ಬಿಜೆಪಿಯಂಥ ಹಿಂದೂತ್ವವಾದಿ ಪಕ್ಷಗಳು ಅಲ್ಪ ಸಂಖ್ಯಾತರ ವಿರುದ್ಧ ಬಹುಸಂಖ್ಯಾತ ಹಿಂದೂಗಳ ಮನಸ್ಸನ್ನು ಎತ್ತಿಕಟ್ಟಲು ಬಳಸುತ್ತಿರುವುದರಿಂದ ಈ ಮಸೂದೆಯ ಬಗ್ಗೆ ಈ ದೇಶದ ಜನ ಬಿಜೆಪಿಯ ಹುನ್ನಾರಕ್ಕೆ ಬಲಿಯಾಗದಂತೆ ಸರಿಯಾದ ನಿಲುವಿಗೆ ಬರುವ ಅಗತ್ಯವಿದೆ.

ಕೇಂದ್ರದ ಯುಪಿಎ ಸರ್ಕಾರ ಚುನಾವಣೆಗಳು ಸಮೀಪಿಸುತ್ತಿದ್ದಂತೆ ತನ್ನ ಸೆಕ್ಯುಲರ್ ಅಜೆಂಡಾವನ್ನು ಜನರಿಗೆ ತೋರಿಸುವ ಸಲುವಾಗಿ ಕೋಮುವಾದಿ ಹಿಂಸೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಉದ್ದೇಶದಿಂದ Prevention of Communal and Targeted Violence (Access to Justice and Reparation) Bill -ಕೋಮುವಾದಿ ಮತ್ತು ಗುಂಪು ಗುರಿಮಾಡಿ ಮಾಡುವ ಹಿಂಸೆ ತಡೆಗಟ್ಟುವ(ನ್ಯಾಯ ಮತ್ತು ನಷ್ಟ ಪರಿಹಾರ ಪರ್ಯಾಪ್ತಗೊಳಿಸುವ) ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಯುಪಿಎ ಸರ್ಕಾರಕ್ಕೆ ಮತ್ತು ಕಾಂಗ್ರೆಸ್ಸಿಗೆ ಈ ಮಸೂದೆಯನ್ನು ತನ್ನ ಚುನಾವಣಾ ಕಾರ್ಯಸೂಚಿಗೆ ತಕ್ಕಂತೆ ಬಳಸಿಕೊಳ್ಳುವ ಎಲ್ಲಾ ಯೋಜನೆಗಳಿದ್ದರೂ ಇಂಥಾ ಒಂದು ಮಸೂದೆಯ ಅಗತ್ಯವನ್ನು ಈ ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದಿ ಹಿಂಸೆಯನ್ನು ಕಂಡು, ಅನುಭವಿಸಿ ಕಂಗೆಟ್ಟಿದ್ದ ಜನರೆಲ್ಲಾ ತೀವ್ರವಾಗಿ ಭಾವಿಸಿದ್ದರು. ಅದರಲ್ಲೂ ಗುಜರಾತ್‌ನಲ್ಲಿ 2002ರಲ್ಲಿ ಪ್ರಭುತ್ವದ ಬೆಂಬಲದೊಂದಿಗೆ ಸಂಘಪರಿವಾರವು ಹಿಂದೂ ಬಹುಸಂಖ್ಯಾತರ ಹೆಸರಿನಲ್ಲಿ ಮಾಡಿದ ಮುಸ್ಲಿಮರ ನರಮೇಧವನ್ನು ಅನುಭವಿಸಿ ತತ್ತರಿಸಿದ್ದ ಈ ದೇಶಕ್ಕೆ ಅಂಥಾ ಕೋಮುವಾದೀ ಹಿಂಸೆ ಮತ್ತೊಮ್ಮೆ ಮರುಕಳಿಸದಂತೆ ತಡೆಯಲು ಒಂದು ಬಲವಾದ ಮತು ಪರಿಣಾಮಕಾರಿ ಕಾಯಿದೆಯೊಂದರ ಅಗತ್ಯವಿದೆ ಎಂದು ಅನಿಸಿತು.

2004ರ ಚುನಾವಣೆಯಲ್ಲಿ ಕಾಂಗ್ರೆಸ್ ಇಂಥಾ ಒಂದು ಮಸೂದೆಯನ್ನು ತನ್ನ ಚುನಾವಣಾ ಭರವಸೆಗಳಲ್ಲಿ ಒಂದನ್ನಾಗಿಸಿತ್ತು. ಆದರೆ 2005ರಲ್ಲಿ ಅದು ಮುಂದಿಟ್ಟ ಮಸೂದೆ ಕೋಮುವಾದೀ ಹಿಂಸೆಯನ್ನು ನಿಗ್ರಹಿಸುವ ಹೆಸರಲ್ಲಿ ಕೇಂದ್ರ ಸರ್ಕಾರಕ್ಕೆ ಅಪಾರ ಅಧಿಕಾರವನ್ನು ಕೊಡುವ ಪ್ರಸ್ತಾಪವನ್ನು ಪ್ರಧಾನವಾಗಿ ಹೊಂದಿತ್ತು. ಮತ್ತು ಕೋಮುವಾದೀ ಹಿಂಸೆಯ ನಿಗ್ರಹಕ್ಕೆ ಪ್ರಸ್ತಾಪಿತವಾಗಿದ್ದ ಆ ಕಾಯಿದೆ ಲಾಗೂ ಆಗುವ ಮೊದಲು ಆ ಪ್ರದೇಶವನ್ನು "ಗಲಭೆಗ್ರಸ್ತ ಪ್ರದೇಶ" ಎಂದು ಘೋಷಿಸುವುದನ್ನು ಕಡ್ಡಾಯ ಮಾಡುತ್ತಿತ್ತು. ಆದರೆ ಗಲಭೆಪೀಡಿತ ಪ್ರದೇಶ ಎಂದು ಘೋಷಿಸಿದ ನಂತರ ಆ ಭಾಗದಲ್ಲಿ ಕೋಮುವಾದಿ ಹಿಂಸೆಗೆ ಬಲಿಯಾದವರ ಮೂಲಭೂತ ಹಕ್ಕುಗಳನ್ನು ಸಹ ಅದು ಹರಣ ಮಾಡುತ್ತಿತ್ತು. ಹಾಗೂ ಒಂದು ಪ್ರದೇಶವನ್ನು ಗಲಭೆಗ್ರಸ್ತ ಎಂದು ಕರೆಯುವ ಮಟ್ಟಿಗೆ ನಡೆಯದ ಕೋಮುವಾದಿ ಹಿಂಸಾಚಾರವನ್ನು ಕೂಡಾ ತಡೆಯುವ ಬಗ್ಗೆ ಅದರಲ್ಲಿ ಯೋಜನೆಗಳಿರಲಿಲ್ಲ. ಹೀಗಾಗಿ ಆ ಮಸೂದೆಯನ್ನು ಸೆಕ್ಯುಲರ್‌ವಾದಿಗಳು ಮತ್ತು ಕೋಮುವಾದೀ ಹಿಂಸಾಚಾರಕ್ಕೆ ಬಲಿಯಾದವರೇ ವಿರೋಧಿಸಿದರು.

2008ರಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರದ ಮೇಲೆ ಕೋಮುವಾದೀ ಹಿಂಸೆಯನ್ನು ಸಮಗ್ರವಾಗಿ ನಿವಾರಿಸಬಹುದಾದ ಮಸೂದೆಯೊಂದನ್ನು ಜಾರಿಗೆ ತರಲು ಸಮಾಜದಿಂದ ದೊಡ್ಡ ಒತ್ತಡವಿತ್ತು. ಸೋನಿಯಾಗಾಂಧಿಯವರ ನೇತೃತ್ವದಲ್ಲಿ ರಚಿತವಾಗಿರುವ ರಾಷ್ಟ್ರೀಯ ಸಲಹಾ ಸಮಿತಿ ಅಂಥ ಒಂದು ಮಸೂದೆಯನ್ನು ರಚಿಸುವ ಜವಾಬ್ದಾರಿಯನ್ನು ತೆಗೆದುಕೊಂಡು 2011ರ ಜನವರಿ ವೇಳೆಗೆ ಒಂದು ಕರಡು ಮಸೂದೆಯನ್ನು ರಚಿಸಿ ಚರ್ಚೆಗೆ ಬಿಟ್ಟಿತು. ಆದರೆ ಸರ್ಕಾರ ಆ ಚರ್ಚೆಯನ್ನು ವಿಸ್ತೃತಗೊಳಿಸಲೇ ಇಲ್ಲ. ಕೇವಲ ಕೆಲವು ಆಸಕ್ತ ಗುಂಪುಗಳು, ಕೆಲವು ಎನ್‌ಜಿಒಗಳನ್ನು ಬಿಟ್ಟರೆ ದೊಡ್ಡಮಟ್ಟದಲ್ಲಿ ಕೋಮುವಾದೀ ಹಿಂಸೆಗೆ ಬಲಿಯಾದವರ ನಡುವೆ ಈ ಕರಡೂ ಹೆಚ್ಚಿನ ಚರ್ಚೆಗೆ ಒಳಪಡಲಿಲ್ಲ.

ಪ್ರಾರಂಭದಲ್ಲಿ ಈ ಕರಡೂ ಸಹ ಎಡಪಕ್ಷಗಳನ್ನೂ ಒಳಗೊಂಡಂತೆ ಎಲ್ಲಾ ವಿರೋಧ ಪಕ್ಷಗಳ ಮತ್ತು ಯುಪಿಎ ಸರ್ಕಾರದ ಸಹಭಾಗೀ "ಜಾತ್ಯತೀತ" ಪಕ್ಷಗಳ ವಿರೋಧಕ್ಕೆ ಗುರಿಯಾಗಿತ್ತು. ಈ "ಜಾತ್ಯತೀತ" ಪಕ್ಷಗಳ ಪ್ರಮುಖ ವಿರೋಧಕ್ಕೆ ಕಾರಣ ರಾಜ್ಯ ಸರ್ಕಾರವನ್ನು ಕಿತ್ತೊಗೆಯಲು ಬಳಸಬಹುದಾದ ಸಂವಿಧಾನದ 355ನೇ ಕಲಮನ್ನು ಬಳಸಲು ಈ ಮಸೂದೆ ಅವಕಾಶ ಕೊಡುತ್ತಿದ್ದದ್ದು. ಬಿಜೆಪಿಯ ವಿರೋಧ ಪ್ರಧಾನವಾಗಿ ಇದ್ದದ್ದು ಈ ಮಸೂದೆ ಬಹುಸಂಖ್ಯಾತ ಹಿಂದೂಗಳು ಅಲ್ಪಸಂಖ್ಯಾತ ಸಮುದಾಯದ ಮೇಲೆ ಮಾಡಬಹುದಾದ ಹಿಂಸೆಯನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತದೆಯೇ ವಿನಃ ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ಮಾಡಬಹುದಾದ ಹಿಂಸೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎನ್ನುವುದು.

2001ರ ಜೂನ್-ಜುಲೈ ತಿಂಗಳಿನಲ್ಲಿ ಮಸೂದೆ ಸಿದ್ಧಪಡಿಸಿದ ಕರಡು ಸಮಿತಿ ಇದಕ್ಕೆ 49 ತಿದ್ದುಪಡಿಗಳನ್ನು ಮಾಡಿ ಸೆಪ್ಟೆಂಬರ್ ತಿಂಗಳಿನಲ್ಲಿ ಸರ್ಕಾರಕ್ಕೆ ಮಂಡಿಸಿದೆ. ಈ ಹೊಸ ಕರಡಿನಲ್ಲಿ ಈಗ ದೇಶದ ಒಕ್ಕೂಟ ರಚನೆಗೆ ಧಕ್ಕೆ ತರುತ್ತದೆ ಎಂದು ವಿರೋಧ ಪಕ್ಷಗಳು ಭಾವಿಸಿದ್ದ 355ನೇ ಕಲಮಿನ ಪ್ರಸ್ತಾಪವನ್ನು ಕೈಬಿಡಲಾಗಿದೆ. ಹಾಗೂ ಇನ್ನೂ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ.

ಈ ಹೊಸ ತಿದ್ದುಪಡಿ ಮಾಡಿದ ಕರಡಿಗೆ ಕೇಂದ್ರ ಕ್ಯಾಬಿನೆಟ್ ಸಹ ಸಮ್ಮತಿ ನೀಡಿದ್ದು ಇಷ್ಟರಲ್ಲೇ ಪಾರ್ಲಿಮೆಂಟಿನಲ್ಲಿ ಮಂಡನೆಯಾಗಲಿದೆ. ಆದರೆ ರಾಜ್ಯಸಭೆಯಲ್ಲಿ ಯುಪಿಎ ಸರ್ಕಾರಕ್ಕೆ ಬಹುಮತ ಇಲ್ಲ. ಮತ್ತು ಬಿಜೆಪಿ ಈಗಾಗಲೇ ಇದು ಹಿಂದೂ ವಿರೋಧಿ ಮಸೂದೆ ಎಂಬ ಪ್ರಚಾರವನ್ನು ಅಬ್ಬರದಿಂದ ಶುರುಮಾಡಿ ಹಿಂದೂ ಓಟ್ ಬ್ಯಾಂಕನ್ನು ಧೃಢಪಡಿಸಿಕೊಳ್ಳುತ್ತಿದೆ. ಚುನಾವಣೆ ಹತ್ತಿರ ಬರುತ್ತಿರುವುದರಿಂದ ಯುಪಿಎ ಅಂಗಪಕ್ಷಗಳು ಸಹ ಹಿಂದೂ ವಿರೋಧಿ ಇಮೇಜನ್ನು ಹೊರಲು ಸಿದ್ಧರಿರುವುದಿಲ್ಲ. ಹೀಗಾಗಿ ಸದ್ಯಕ್ಕೆ ಈ ಮಸೂದೆ ಜಾರಿಗೆ ಬರುವ ಸೂಚನೆಯಿಲ್ಲ. ಆದರೂ ಈ ಮಸೂದೆಯನ್ನು ಬಿಜೆಪಿಯಂಥ ಹಿಂದೂತ್ವವಾದಿ ಪಕ್ಷಗಳು ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತ ಹಿಂದೂಗಳ ಮನಸ್ಸನ್ನು ಎತ್ತಿಕಟ್ಟಲು ಬಳಸುತ್ತಿರುವುದರಿಂದ ಈ ಮಸೂದೆಯ ಬಗ್ಗೆ ಈ ದೇಶದ ಜನ ಬಿಜೆಪಿಯ ಹುನ್ನಾರಕ್ಕೆ ಬಲಿಯಾಗದಂತೆ ಸರಿಯಾದ ನಿಲುವಿಗೆ ಬರುವ ಅಗತ್ಯವಿದೆ.

ಕೋಮುವಾದವನ್ನು ನಿಗ್ರಹಿಸಬೇಕೆಂಬ ಆಶಯವುಳ್ಳ ಜನರ ಮುಂದೆ ಈ ಮಸೂದೆಯ ಬಗ್ಗೆ ಇರುವ ಈಗ ಇರುವ ಪ್ರಧಾನ ಪ್ರಶ್ನೆಗಳು ಮೂರು:

1. ಈಗಾಗಲೇ ಇರುವ ಕಾನೂನುಗಳಲ್ಲದೆ, ಕೋಮುವಾದವನ್ನು ನಿಗ್ರಹಿಸಲು ಇನ್ನೂ ಒಂದು ಹೊಸ ಕಾನೂನು ಅಗತ್ಯ ವಿದೆಯೇ?
2. ಈ ಹೊಸ ಕಾಯಿದೆ ಕೋಮುವಾದೀ ಹಿಂಸೆಯನ್ನು ನಿಗ್ರಹಿಸಬಲ್ಲದೆ?
3. ಈ ಮಸೂದೆಯನ್ನು ಇಡಿಯಾಗಿ ಬೆಂಬಲಿಸಲು ಸಾಧ್ಯವೇ? ಕೋಮುವಾದೀ ಹಿಂಸೆಯನ್ನು ನಿಗ್ರಹಿಸಲು ಹೊಸ ಕಾನೂನಿನ ಅಗತ್ಯವಿತ್ತೆ?

ಇತ್ತು ಮತ್ತು ಇಲ್ಲ! ವಾಸ್ತವವಾಗಿ ನಮ್ಮ ಇಂಡಿಯನ್ ಪೀನಲ್ ಕೋಡ್ ಮತ್ತು ಕ್ರಿಮಿನಲ್ ಪ್ರೊಸಿಜರ್ ಕೋಡುಗಳಲ್ಲಿ ಪ್ರಸ್ತಾಪಿತವಾಗಿರುವ ಅಪರಾಧಗಳೇ ಕೋಮುವಾದೀ ಹಿಂಸಾಚಾರ ನಡೆಯುವಾಗಲೂ ನಡೆಯುತ್ತವೆ. ಕೊಲೆ, ಸುಲಿಗೆ, ಬಲಾತ್ಕಾರ, ಆಸ್ತಿ ಲೂಟಿ, ಸಂಚು, ಇತ್ಯಾದಿ. ಸರ್ಕಾರಿ ಯಂತ್ರಾಂಗಗಳು ಅದರಲ್ಲೂ ಜಿಲ್ಲೆಯ ಮಟ್ಟದ ಪೊಲೀಸ್ ಮತ್ತು ಜಿಲ್ಲಾಧಿಕಾರಿಗಳು ಇರುವ ಕಾನೂನನ್ನೇ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದರೆ ಕೋಮುವಾದೀ ಹಿಂಸಾ

ಚಾರ ಬಹಳಷ್ಟು ಮಟ್ಟಿಗೆ ಕಡಿಮೆಯಾಗುತ್ತಿತ್ತು. ಆದರೆ 1959ರಲ್ಲಿ ಜಬಲ್ಪುರದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ನಂತರದ ಕೋಮುಗಲಭೆ ಇತಿಹಾಸ 1980ರ ನಂತರ ಬಿಜೆಪಿಯ ಹಿಂದುತ್ವವಾದಿ ಅಜೆಂಡಾದೊಂದಿಗೆ ಹೊಸ ರೂಪವನ್ನೇ ಪಡೆದುಕೊಂಡಿದೆ. ಅಲ್ಲಿಯವರೆಗೆ ಕೋಮು ಗಲಭೆಗಳು, ತತ್ಪ್ರೇರಣೆಯಿಂದ ಅಥವಾ ಸ್ಥಳೀಯ ಮಟ್ಟದಲ್ಲಿ ಕೂಡಿಟ್ಟ ಕಾರಣಗಳಿಂದ ಅಥವಾ ತತ್‌ಕ್ಷಣದ ರಾಜಕೀಯ ಪ್ರಯೋಜನಕ್ಕಾಗಿ ರಾಜಕೀಯ ಪಕ್ಷಗಳು (ಉದಾಹರಣೆಗೆ ಕಾಂಗ್ರೆಸ್ಸಿನ ಒಂದು ಗುಂಪು ಮತ್ತೊಂದು ಗುಂಪಿನ ವಿರುದ್ಧ) ನಡೆಸುತ್ತಿದ ಚಿತಾವಣೆಗಳ ಕಾರಣಕ್ಕೆ ಸಂಭವಿಸುತ್ತಿದ್ದವು. ಅವಕ್ಕೆ ವ್ಯಾಪಕ ಸ್ವರೂಪವಾಗಲೀ, ಒಂದು ಸೈದ್ಧಾಂತಿಕ ಅಜೆಂಡಾವಾಗಲೀ, ಹೆಚ್ಚಾಗಿ ಇರುತ್ತಿರಲಿಲ್ಲ. ಹೆಚ್ಚೂ ಕಡಿಮೆ ಪ್ರಭುತ್ವ ಯಂತ್ರಾಂಗವೂ ಇದರಲ್ಲಿ ಸಾಪೇಕ್ಷವಾಗಿ ಹಿಂದೂ-ಮುಸ್ಲಿಂ ಎಂದು ತಾರತಮ್ಯ ಮಾಡದೆ ನಡೆದು ಕೊಳ್ಳುತ್ತಿತ್ತು.

ಆದರೆ 1980ರ ದಶಕದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರ ತನ್ನ ರಾಜಕೀಯ ಪುನರುತ್ಥಾನಕ್ಕಾಗಿ ಹಿಂದೂತ್ವವಾದೀ ಫ್ಯಾಸಿಸ್ಟ್ ರಾಜಕಾರಣವನ್ನು ಪ್ರಾರಂಭಿಸುತ್ತಿದ್ದಂತೆ ಕೋಮುಗಲಭೆಗಳ ಸ್ವರೂಪವೇ ಬದಲಾಗಿದೆ. 1980ರ ಅದ್ವಾನಿಯ ರಕ್ತಸಿಕ್ತ ರಥಯಾತ್ರೆ, 1992ರ ಬಾಬ್ರಿ ಮಸೀದಿ ನಾಶದ ಸುತ್ತಮುತ್ತಾ ನಡೆದ ಮುಸ್ಲಿಮರ ನರಹತ್ಯಾಕಾಂಡ, ಗುಜರಾತ್ ನರಮೇಧ ಎಲ್ಲವೂ ತೋರಿಸಿ ಕೊಡುವಂತೆ ಅವು ಎರಡು ಗುಂಪುಗಳ ನಡುವೆ ನಡೆದ ಗುಂಪು ಘರ್ಷಣೆಗಳಲ್ಲ. ಬದಲಿಗೆ ಬಹುಸಂಖ್ಯಾತ ಹಿಂದೂಗಳ ಹೆಸರಿನಲ್ಲಿ ಒಂದು ಫ್ಯಾಸಿಸ್ಟ್ ರಾಜಕಾರಣದ ಗುಂಪು ಪ್ರಭುತ್ವದ ಅಂಗಸಂಸ್ಥೆಗಳ ಸಂಪೂರ್ಣ ಸಹಕಾರದೊಂದಿಗೆ ಸುಳ್ಳು ಪೊಳ್ಳುಗಳನ್ನು ಹರಡುತ್ತಾ, ದ್ವೇಷ ಪೂರಿತ ಪ್ರಚಾರ ಮಾಡುತ್ತಾ ಬಹುಸಂಖ್ಯಾತ ಹಿಂದೂಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾವನೆಗಳನ್ನು ಬಡಿದೆಬ್ಬಿಸಿ ತಮ್ಮ ಹಿಂಸಾಚಾರಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷ ಬೆಂಬಲವನ್ನು ಗಿಟ್ಟಿಸಿಕೊಂಡು ಸರ್ಕಾರದ ಬೆಂಬಲದೊದಿಗೆ ಅಲ್ಪಸಂಖ್ಯಾತ ಸಮುದಾಯದ ಮೇಲೆ, ಅವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವವರು ಅನ್ನುವ ಕಾರಣಕ್ಕೆ, ನಡೆಸುತ್ತಿರುವ ಏಕಪಕ್ಷೀಯ ಆಕ್ರಮಣಗಳಾಗಿವೆ.

ಇದರಲ್ಲಿ ಅತಿ ಮುಖ್ಯವಾದದ್ದು ಅಲ್ಪಸಂಖ್ಯಾತರ ಸಮುದಾಯಗಳ ವಿರುದ್ಧ ಅವರು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು ಎಂಬ ಕಾರಣಕ್ಕಾಗಿ ಅವರ ಸಮುದಾಯದ ಐಡೆಂಟಿಟಿಯನ್ನು ಗುರಿಮಾಡಿ ಒಂದು ಸಂಘಟನೆ ಸತತವಾಗಿ ಯಾವುದೇ ಶಿಕ್ಷೆಯ ಭಯವಿಲ್ಲದೆ ನಡೆಸುವ ದ್ವೇಷಪೂರಿತ ಪ್ರಚಾರ. ಅದರಷ್ಟೇ ಮುಖ್ಯವಾದದ್ದು ಈ ಪ್ರಚಾರಗಳಲ್ಲಿ ಹಿಂಸಾಚಾರಗಳಲ್ಲಿ ಸರ್ಕಾರದ ಅಂಗಸಂಸ್ಥೆಗಳ ಪ್ರತ್ಯಕ್ಷ ಮತ್ತು ಪರೋಕ್ಷ ಪಾಲುದಾರಿಕೆ. ರಾಮ ರಥಯಾತ್ರೆ, ಬಾಬ್ರಿ ಮಸೀದಿ ನಾಶ, ಗುಜರಾತ್ ಹತ್ಯಾಕಾಂಡಗಳ ಬಗ್ಗೆ ವರದಿ ಮಾಡಿರುವ ಎಲ್ಲಾ ಸ್ವತಂತ್ರ ಮತ್ತು ನ್ಯಾಯಾಂಗ ತನಿಖಾ ಅಯೋಗಗಳು ಸಹ ಇದನ್ನೇ ಧೃಢೀಕರಿಸಿವೆ. (ಮುಂಬೈ ಗಲಭೆ ಬಗ್ಗೆ ಶ್ರೀಕೃಷ್ಣ ಆಯೋಗ, ಗುಜರಾತ್ ಹತ್ಯಾಕಾಂಡದ ಬಗ್ಗೆ ಎನ್ ಎಚ್ ಆರ್‌ಸಿ ವರದಿ, ನಿವೃತ್ತ ನ್ಯಾಯಾಧೀಶರ ಅಯೋಗದ ವರದಿ ಇತ್ಯಾದಿಗಳು).

ಈ ದೇಶದಲ್ಲಿ ಜಾತಿ ಆಧಾರಿತ, ಧರ್ಮಾಧಾರಿತ ಮತ್ತು ಭಾಷೆಯಾಧಾರಿತ ಅಲ್ಪ ಸಂಖ್ಯಾತ ಗುಂಪುಗಳು ಅಸ್ತಿತ್ವದಲ್ಲಿವೆ ಮತ್ತು ಜಾತಿ, ಭಾಷೆ ಮತ್ತು ಧಾರ್ಮಿಕ ಬಹುಸಂಖ್ಯಾತರಿಗೆ ಸೇರಿದ ಗುಂಪುಗಳು ಅವರ ಮೇಲೆ ಆ ಕಾರಣಕ್ಕಾಗಿಯೇ ಹಿಂಸಾಚಾರ ನಡೆಸಬಹುದು ಎಂಬ ಗ್ರಹಿಕೆ ಈ ಮಸೂದೆಯಲ್ಲಿದೆ. ಹೀಗಾಗಿ ಇದು ಕೇವಲ ಮುಸ್ಲಿಂ ಸಮುದಾಯ ವನ್ನು ರಕ್ಷಿಸಲು ರೂಪುಗೊಂಡಿರುವ ಮಸೂದೆಯಲ್ಲ. ಹಾಗೆ ನೋಡಿದರೆ ಕಾಶ್ಮೀರದಲ್ಲಿ ಮುಸ್ಲಿಮರೇ ಬಹುಸಂಖ್ಯಾತರು. ಅಲ್ಲಿ ಈ ಕಾಯಿದೆ ಹಿಂದೂಗಳ ರಕ್ಷಣೆಗೆ ಉಪಯೋಗಕ್ಕೆ ಬರುತ್ತದೆ.

ರಾಜಕೀಯ ಇಚ್ಛಾಶಕ್ತಿ ಇದ್ದರೆ ಈಗಿರುವ ಕಾನೂನುಗಳಲ್ಲೂ ಇಂಥವನ್ನು ತಡೆಗಟ್ಟಲು ಸಾಧ್ಯವಿದೆ. ಆದರೆ ಅದು ಸಾಧ್ಯವಾಗದಂತೆ ಮಾಡಲೂ ಸಹ ಸಾಕಷ್ಟು ತೂತುಗಳು ಈಗಿರುವ ಕಾನೂನುಗಳಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈಗಿರುವ ಕಾನೂನುಗಳು ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಮೇಲೆ ನಡೆಸುವ ದೌರ್ಜನ್ಯ ಅಥವಾ ಅಪರಾಧಗಳನ್ನು ಗಣನೆಗೆ ತೆಗೆದುಕೊಳ್ಳುತ್ತವೆಯೇ ವಿನಃ ಒಂದು ಸಮುದಾಯವನ್ನು ಅವರು ಆ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕೆ ನಡೆಸುವ ಅಪರಾಧವನ್ನು ಸಮುದಾಯ ಅಥವಾ ಸಂಘಟನಾ ಮಟ್ಟದಲ್ಲಿ ಪರಿಭಾವಿಸುವುದಿಲ್ಲ. ದಲಿತರು ಅನ್ನುವ ಕಾರಣಕ್ಕೆ ದಲಿತರ ಮೇಲೂ ಮತ್ತು ಮಹಿಳೆಯರು ಅನ್ನುವ ಕಾರಣಕ್ಕೆ ಮಹಿಳೆಯರ ಮೇಲೂ ಮೇಲ್ಜಾತಿ ದುರಭಿಮಾನ ಮತ್ತು ಪುರುಷಾಧಿಪತ್ಯ ನೆಲೆಯಿಂದಲೂ ಹಿಂಸಾಚಾರಗಳು ಸಂಭವಿಸುತ್ತಿವೆ.

1989ರಲ್ಲಿ SC-ST (Prevention of Atrocities Act) ಜಾರಿಯಾದ ಮೇಲೆ ದಲಿತರ ಮೇಲೆ ಮೇಲ್ಜಾತಿ ಸಂಘಟಿತ ದಾಳಿಗಳು ದೊಡ್ಡ ಸಂಖ್ಯೆಯಲ್ಲಿ ಕಡಿಮೆ ಯಾಗಲಿಲ್ಲವಾದರೂ ಸಾಮಾನ್ಯರ ಮಟ್ಟದಲ್ಲಿ ಈ ಕಾಯಿದೆ ಇರುವ ಕಾರಣದಿಂದ ದಲಿತರ ಮೇಲೆ ಹಿಂದಿನಂತೆ ದೌರ್ಜನ್ಯ ಎಸಗಲು ಭಯವು ಮೂಡಿದೆ. ಹಾಗೂ ದಲಿತರಲ್ಲಿ ಅಲ್ಪಸ್ವಲ್ಪ ಧೈರ್ಯವೂ ಬರಲೂ ಕಾರಣವಾಗಿದೆ. ಕಾನೂನುಗಳು ಸಮಾಜದಲ್ಲಿ ಚಳವಳಿಗಳಿಂದ ಬರಬೇಕಿರುವ ವ್ಯವಸ್ಥಾಗತ ಬದಲಾವಣೆಗೆ ಎಂದೂ ಪರ್ಯಾಯವಾಗಲಾರದು. ಆದರೆ ಅಂಥಾ ಒಂದು ಕಾಯಿದೆಯೇ ಇಲ್ಲದಿರುವ ಸಂದರ್ಭವು ಕಾಯಿದೆ ಇರುವ ಸಂದರ್ಭಕ್ಕಿಂತ ಹೆಚ್ಚಿನ ಆತಂಕವನ್ನು ಮತ್ತು ಭೀತಿಯನ್ನು ಬಲಿಪಶುವಾಗುವ ಜನರಲ್ಲಿ ಮೂಡಿಸುವುದು ನಿಜವೇ. ಆದ್ದರಿಂದ ಈ ಹೊಸ ಮಸೂದೆ ಕೋಮುವಾದೀ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಸಹಕಾರಿಯೇ ಆಗಿದೆಯಾದ್ದರಿಂದ ಇಂಥಾ ಒಂದು ಕಾಯಿದೆ ಜಾರಿಯಾಗುತ್ತಿರುವುದು ಸ್ವಾಗತಾರ್ಹ.

ಈ ಹೊಸ ಕಾಯಿದೆ ಕೋಮುವಾದೀ ಹಿಂಸೆಯನ್ನು ನಿಗ್ರಹಿಸಬಲ್ಲದೆ?

ಈ ಹೊಸ ಮಸೂದೆಯಲ್ಲಿ ಕೋಮುವಾದೀ ಹಿಂಸಾಚಾರವನ್ನು ನಿಗ್ರಹಿಸಲು ಸಹಾಯ ಮಾಡಬಲ್ಲ ಹಲವಾರು ಅಂಶಗಳಿವೆ:

1. ಈಗಾಗಲೇ ಚರ್ಚಿಸಿದಂತೆ ಈ ಮಸೂದೆಯ ಶೀರ್ಷಿಕೆಯೇ ಕೋಮುವಾದಿ ಮತ್ತು ಗುಂಪುಗುರಿ ಮಾಡಿ ಮಾಡುವ ಹಿಂಸೆ ತಡೆಗಟ್ಟುವ ಮಸೂದೆ. ಅಂದರೆ ಈ ಸಮಾಜದಲ್ಲಿ ಅಲ್ಪಸಂಖ್ಯಾತ ಗುಂಪುಗಳನ್ನು ಬಹುಸಂಖ್ಯಾತರಿಗೆ ಸೇರಿರುವ ಗುಂಪುಗಳು ಅವರು ಬಹುಸಂಖ್ಯಾತರಲ್ಲ ಅನ್ನುವ ಕಾರಣಕ್ಕೆ ಅಲ್ಪಸಂಖ್ಯಾತ ಸಮುದಾಯದ ಐಡೆಂಟಿಟಿಯನ್ನೇ ಗುರಿಮಾಡಿ ಮಾಡುವ ದುರಭಿಮಾನ ಪ್ರೇರಿತ ಹಿಂಸಾಚಾರವನ್ನು ಒಂದು ವಿಶಿಷ್ಟ ಬಗೆಯ ಹಿಂಸಾಚಾರವೆಂದೂ, ಅಪರಾಧವೆಂದೂ ಈ ಮಸೂದೆ ಗ್ರಹಿಸುತ್ತದೆ. ಇದು ತುಂಬಾ ಮುಖ್ಯವಾದ ಸೇರ್ಪಡೆಯಾಗಿದೆ. ಅಲ್ಲದೆ ಈ ದೇಶದಲ್ಲಿ ಜಾತಿ ಆಧಾರಿತ, ಧರ್ಮಾಧಾರಿತ ಮತ್ತು ಭಾಷೆಯಾಧಾರಿತ ಅಲ್ಪ ಸಂಖ್ಯಾತ ಗುಂಪುಗಳು ಅಸ್ತಿತ್ವದಲ್ಲಿವೆ ಮತ್ತು ಜಾತಿ, ಭಾಷೆ ಮತ್ತು ಧಾರ್ಮಿಕ ಬಹುಸಂಖ್ಯಾತರಿಗೆ ಸೇರಿದ ಗುಂಪುಗಳು ಅವರ ಮೇಲೆ ಆ ಕಾರಣಕ್ಕಾಗಿಯೇ ಹಿಂಸಾಚಾರ ನಡೆಸಬಹುದು ಎಂಬ ಗ್ರಹಿಕೆ ಈ ಮಸೂದೆಯಲ್ಲಿದೆ. ಹೀಗಾಗಿ ಇದು ಕೇವಲ ಮುಸ್ಲಿಂ ಸಮುದಾಯವನ್ನು ರಕ್ಷಿಸಲು ರೂಪುಗೊಂಡಿರುವ ಮಸೂದೆಯಲ್ಲ. ಹಾಗೆ ನೋಡಿದರೆ ಕಾಶ್ಮೀರದಲ್ಲಿ ಮುಸ್ಲಿಮರೇ ಬಹುಸಂಖ್ಯಾತರು. ಅಲ್ಲಿ ಈ ಕಾಯಿದೆ ಹಿಂದೂಗಳ ರಕ್ಷಣೆಗೆ ಉಪಯೋಗಕ್ಕೆ ಬರುತ್ತದೆ. ಅಲ್ಲದೆ ಭಾಷಾ ಸಂಘರ್ಷದಲ್ಲಿ ಎರಡು ಕಡೆಗಳಲ್ಲಿ ಬಹಳಷ್ಟು ಸಾರಿ ಹಿಂದೂಗಳೇ ಇರುತ್ತಾರೆ. ಹೀಗಾಗಿ ಇದನ್ನು ಹಿಂದೂ ವಿರೋಧಿ ಕಾಯಿದೆ ಎನ್ನಲು ಬರುವುದಿಲ್ಲ. ಒಟ್ಟಿನಲ್ಲಿ ಈ ಮಸೂದೆಯ ಹಿಂದಿನ ಗ್ರಹಿಕೆ ಈ ದೇಶದ ವಾಸ್ತವದ ಪ್ರತಿಫಲನವನ್ನು ಸರಿಯಾಗಿಯೇ ಮಾಡುತ್ತದೆ.

2. ಈ ಮಸೂದೆಯು ಎಲ್ಲಾ ಐಪಿಸಿ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗಳಲ್ಲಿ ಪ್ರಸ್ತಾಪಿತವಾಗಿರುವ ಅಪರಾಧಗಳನ್ನು ಈ ಕಾಯಿದೆಯಡಿಯೂ ಅಪರಾಧವೆಂದು ಪರಿಗಣಿಸುವುದಲ್ಲದೆ ವಿಶೇಷವಾಗಿ ಲೈಂಗಿಕ ಅತ್ಯಾಚಾರಗಳಿಗೆ ಸಂಬಂಧಪಟ್ಟ ಅಪರಾಧಗಳನ್ನು ಇನ್ನಷ್ಟು ಸೂಕ್ಷ್ಮವಾಗಿ ವಿಶ್ಲೇಷಿಸಿ ಅಪರಾಧದ ವ್ಯಾಖ್ಯಾನದಡಿ ತರುತ್ತದೆ. ಈವರೆಗೆ ಬಲಾತ್ಕಾರ-ರೇಪ್-ನ ವ್ಯಾಖ್ಯಾನ ಹೆಣ್ಣಿನ ಸಮ್ಮತಿಯಿಲ್ಲದೆ ನಡೆಯುವ ಸಂಭೋಗವೆಂದಿತ್ತು. ಆದರೆ ಈ ಮಸೂದೆ ಹೆಣ್ಣು-ಗಂಡುಗಳಿಬ್ಬರ ಮೇಲೂ ನಡೆಯುವ ಬಲಾತ್ಕಾರವನ್ನು ಬಲಾತ್ಕಾರ ಎಂದು ಪರಿಗಣಿಸುತ್ತದೆ ಮತ್ತು ಸಮ್ಮತಿಯನ್ನು ಸಹ ಭೀತಿ, ಪ್ರಲೋಭನೆ, ಒತ್ತಡ, ತಪ್ಪು ತಿಳಿವಳಿಕೆ ನೀಡಿ ಅಥವಾ ತಪ್ಪಾದ ಗುರುತು ನೀಡಿ ಪಡೆದಿದ್ದರೆ ಅದನ್ನೂ ಸಹ ಬಲಾತ್ಕಾರ ಎಂದೇ ಪರಿಗಣಿಸುತ್ತದೆ. ಮತ್ತು ಸಂಭೋಗದ ವ್ಯಾಖ್ಯಾನವನ್ನೂ ವಿಶಾಲಗೊಳಿಸಿದೆ. ಈ ಅಂಶಗಳು ಸ್ವಾಗತಾರ್ಹವಾಗಿದೆ ಮತ್ತು ಅದನ್ನು ಐಪಿಸಿಯಲ್ಲೂ ಸೇರಿಸಿಕೊಳ್ಳುವ ಅಗತ್ಯವಿದೆ.

3. ಈ ಮಸೂದೆಯ ಅತಿ ಪ್ರಮುಖ ಅಂಶ ಸೆಕ್ಷನ್ 14ರಲ್ಲಿದೆ. ಅದು ಒಂದೆಡೆ "ವ್ಯವಸ್ಥಿತವಾಗಿ ಮತ್ತು ವಿಸ್ತೃತವಾಗಿ" ಕೋಮು ಹಿಂಸಾಚಾರವು ನಡೆಯುತ್ತಿದ್ದರೆ ಅದನ್ನು ನಿಗ್ರಹಿಸಲು ಆ ಪ್ರದೇಶದ ಮೇಲಾಧಿಕಾರಿ-ಜಿಲ್ಲೆ

ಯಾಗಿದ್ದರೆ ಜಿಲ್ಲಾ ಪೊಲೀಸ್ ಅಧಿಕಾರಿ ಮತ್ತು ಜಿಲ್ಲಾಧಿಕಾರಿ–ನೇರವಾಗಿ ಹೊಣೆಗಾರನಾಗಿರುತ್ತಾನೆ. ತನ್ನ ಕೆಳಗಿನ ಅಧಿಕಾರಿ ತಪ್ಪು ಮಾಡಿದರೂ ಅದರ ಜವಾಬ್ದಾರಿಯನ್ನು ಮೇಲಧಿಕಾರಿಯೇ ಹೊರಬೇಕಾಗುತ್ತದೆ. ವ್ಯಾಪಕವಾಗಿ ಕೋಮುಗಲಭೆ ನಡೆಯುತ್ತಿದ್ದರೆ ಅದರ ಮಾಹಿತಿ ಮೇಲಧಿಕಾರಿಗೆ ಇತ್ತೂ ಎಂದೇ ಭಾವಿಸಲಾಗುತ್ತದೆ. ಹಾಗಿಲ್ಲದಿದ್ದಲ್ಲಿ ತನಗೆ ಆ ಮಾಹಿತಿ ಇರಲಿಲ್ಲ ಎಂದು ಆ ಅಧಿಕಾರಿ ಸಾಬೀತು ಮಾಡಬೇಕಾಗುತ್ತದೆ. ಮತ್ತು ಇದಕ್ಕೆ 10 ವರ್ಷಗಳ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಅಷ್ಟು ಮಾತ್ರವಲ್ಲದೆ ಕೋಮು ಹಿಂಸಾಚಾರ ಸಂಭವಿಸದಂತೆ ಮುಂಜಾಗರೂಕತೆಯಾಗಿ ಮಾಹಿತಿ ಸಂಗ್ರಹಿಸುವ ಮತ್ತು ಅದನ್ನು ತಡೆಗಟ್ಟಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಮೇಲಧಿಕಾರಿಯದ್ದಾಗಿರುತ್ತದೆ. ಅದನ್ನು ಮಾಡದಿರುವುದೂ ಕೂಡಾ ಕರ್ತವ್ಯಚ್ಯುತಿ ಎಂದು ಪರಿಗಣಿಸಲಾಗುತ್ತದೆ.

ಇದು ಈ ಮಸೂದೆಯ ಪ್ರಮುಖ ಅಂಶ. ಇದರಿಂದ ಕೋಮು ಹಿಂಸಾಚಾರಕ್ಕೆ ಸರ್ಕಾರಿ ಯಂತ್ರಾಂಗದ ಪ್ರೋತ್ಸಾಹ ಮತ್ತು ಸಹಕಾರ ತಪ್ಪುತ್ತದೆಂದು ನಿರೀಕ್ಷಿಸಲಾಗಿದೆ.

ಅದೇ ರೀತಿ ಈವರೆಗೆ ಇರುವ ಎಲ್ಲಾ ಕಾನೂನುಗಳಲ್ಲೂ ಸರ್ಕಾರಿ ನೌಕರನ ಮೇಲೆ ಅಪರಾಧಿ ಸಂಹಿತೆಯಡಿ ಕ್ರಮ ಜರುಗಿಸಲು ಸರ್ಕಾರದ ಅನುಮತಿ ಬೇಡಬೇಕಿತ್ತು. ಈ ಮಸೂದೆಯಡಿಯಲ್ಲಿ ಗುರುತರವಾದ ಅಪರಾಧಗಳ ಬಗ್ಗೆ ಕ್ರಮ ಜರುಗಿಸಲು ಈಗಲೂ ಸರ್ಕಾರದ ಅನುಮತಿ ಪಡೆಯುವುದು ಕಡ್ಡಾಯವಾದರೂ ಸಾಕ್ಷಿನಾಶ ಮತ್ತು ತಪ್ಪು ಸಾಕ್ಷಿಗಳ ವಿಷಯದಲ್ಲಿ ಸರ್ಕಾರದ ಅನುಮತಿ ಇಲ್ಲದೆ ಕ್ರಮ ಜರುಗಿಸುವ ಅವಕಾಶ ಈ ಕಾನೂನಿನಲ್ಲಿದೆ.

4. ಅದೇ ರೀತಿ ಈ ಮಸೂದೆಯ ಸೆಕ್ಷನ್ 15 "ವ್ಯವಸ್ಥಿತ ಮತ್ತು ವಿಸ್ತೃತ" ಕೋಮುಗಲಭೆಗೆ ಕಾರಣವಾಗುವ ಸಂಘಟನೆಗಳ ರಾಜ್ಯ ಪದಾಧಿಕಾರಿಗಳಿಗೆ ಈ ಅಪರಾಧಗಳ ಬಗೆ ಸಂಪೂರ್ಣ ಮಾಹಿತಿ ಇತ್ತು ಮತ್ತು ಅದನ್ನು ತಡೆಗಟ್ಟಲು ಸಾಧ್ಯವಿದ್ದರೂ ಅದನ್ನು ನಡೆಯಲು ಅವಕಾಶ ಕೊಟ್ಟಿದ್ದಾರೆ ಎಂಬ ಕಾರಣಕ್ಕೆ ಬಂಧಿಸಬಹುದು. ಅವರಿಗೂ 10 ವರ್ಷಗಳ ಶಿಕ್ಷೆ. ತಮಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದು ಅವರು ಸಾಬೀತು ಮಾಡದಿದ್ದರೆ ಶಿಕ್ಷೆಗೆ ಗುರಿಯಾಗುತ್ತಾರೆ.

5. ಅದೇ ರೀತಿ ದ್ವೇಷಪೂರಿತ ಭಾಷಣ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಲೂ ಸರ್ಕಾರದ ಅನುಮತಿ ಬೇಕಾಗಿತ್ತು. ಕಾಂಗ್ರೆಸ್ ಸರ್ಕಾರವಾಗಲೀ, ಬಿಜೆಪಿ ಸರ್ಕಾರವಾಗಲೀ ಬಾಳಾ ಠಾಕ್ರೆಯ ಮೇಲೆ ಕ್ರಮ ತೆಗೆದುಕೊಳ್ಳಲು ಅನುಮತಿ ಕೊಟ್ಟೇ ಇರಲಿಲ್ಲ. ಈಗ ಈ ಮಸೂದೆಯ ಪ್ರಕಾರ ಅಂಥಾ ಪ್ರಕರಣಗಳಲ್ಲಿ ಸರ್ಕಾರದ ಅನುಮತಿ ಬೇಕಾಗಿಲ್ಲ.

6. ಒಂದು ಕೋಮುಗಲಭೆ ನಡೆದ ಪ್ರದೇಶದ ವಿಚಾರಣೆಯನ್ನು ಕನಿಷ್ಠ ಡಿಎಸ್‌ಪಿ ನೇತೃತ್ವದ ಅಧಿಕಾರಿ ನಡೆಸಬೇಕಾಗುತ್ತದೆ.

7. ಕೋಮು ಹಿಂಸಾಚಾರದಲ್ಲಿ ಮೃತರಾದ ವ್ಯಕ್ತಿಯ ಪೋಸ್ಟ್ ಮಾರ್ಟೆಮ್ ಅನ್ನು 3 ಜನರಿರುವ ವೈದ್ಯಾಧಿಕಾರಿಗಳ ತಂಡ ಮೃತರ ಸಮೀಪವರ್ತಿಗಳ ಸಮಕ್ಷಮದಲ್ಲಿ ನಡೆಸಿ ಇಡೀ ಪ್ರಕ್ರಿಯೆಯನ್ನು ವಿಡಿಯೋಗ್ರಾಫ್ ಮಾಡಬೇಕು.

8. ಅಪರಾಧ ನಡೆದ ಜಾಗದ ವಿಡಿಯೋಗ್ರಫೀ ಮತ್ತು ಫೋಟೋಗ್ರಫಿ ನಡೆಸಬೇಕು. ಅದು ಪ್ರಮುಖ ಸಾಕ್ಷ್ಯವೆಂದು ಪರಿಗಣಿಸಬೇಕು.

9. ಸರ್ಕಾರ ಗಲಭೆಗೆ ತುತ್ತಾದವರ ಸಹಾಯಕ್ಕೆ ಸರ್ಕಾರಿ ವಕೀಲರ ತಂಡವನ್ನು ನೇಮಿಸಬೇಕು. ಅದರಲ್ಲಿ 1/3 ಭಾಗ ಮಹಿಳೆಯರೂ, 1/3 ಭಾಗ ಅಲ್ಪಸಂಖ್ಯಾತರೂ ಇರಬೇಕು.

10. ಇದಲ್ಲದೆ ಕೋಮುವಾದಿ ಹಿಂಸಾಚಾರ ಮತ್ತು ಕೋಮುವಾದದ ನಿಯಂತ್ರಣಕ್ಕಾಗಿ ಒಂದು National Authority For Communal Harmony Justice and Reparation - ಕೋಮುಸೌಹಾರ್ದ, ನ್ಯಾಯ ಮತ್ತು ನಷ್ಟಪರಿಹಾರಕ್ಕಾಗಿ ರಾಷ್ಟ್ರೀಯ ಪ್ರಾಧಿಕಾರವನ್ನು ಕೇಂದ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ರಚಿಸುವ ಪ್ರಸ್ತಾಪವನ್ನು ಈ ಮಸೂದೆ ಹೊಂದಿದೆ. ಇದು ಏಳು ಜನರನ್ನು ಹೊಂದಿದ್ದು ಅದನ್ನು ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿ ನೇಮಕ ಮಾಡುತ್ತಾರೆ. ಈ ಪ್ರಾಧಿಕಾರದ ಸದಸ್ಯರ ಆಯ್ಕೆಯನ್ನು ಪ್ರಧಾನಿ, ವಿರೋಧಪಕ್ಷದ ನಾಯಕ, ಎಲ್ಲಾ ನೊಂದಾಯಿತ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ನೇಮಕ ಮಾಡುತ್ತದೆ. ಇದರ ಸದಸ್ಯರು ಮತ್ತು ಅಧ್ಯಕ್ಷರಾಗಿರುವವರು ನಿಷ್ಕಳಂಕ ವ್ಯಕ್ತಿತ್ವವುಳ್ಳವರೂ, ಕೋಮು ಸೌಹಾರ್ದಕ್ಕಾಗಿ ಶ್ರಮಿಸಿದವರೂ, ಕಾನೂನು ಪರಿಣಿತರೂ, ಎರಡು ವರ್ಷಕ್ಕೆ ಮುಂಚೆ ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗದವರೂ ಆಗಿರಬೇಕು ಮತ್ತು ಪ್ರಾಧಿಕಾರದಿಂದ ನಿವೃತ್ತರಾದ ನಂತರ ಒಂದು ವರ್ಷದಲ್ಲಿ ಯಾವುದೇ ಚುನಾವಣೆಯಲ್ಲಿ ಭಾಗವಹಿಸಬಾರದೆಂದೂ ನಿಗದಿ ಪಡಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ಪ್ರಾಧಿಕಾರದ ಏಳು ಜನರಲ್ಲಿ ನಾಲ್ವರು ಅಲ್ಪಸಂಖ್ಯಾತರಾಗಿರಬೇಕು ಮತ್ತು ಇಬ್ಬರು ಕಡ್ಡಾಯವಾಗಿ ಮಹಿಳೆಯರೂ ಮತ್ತು ಎಸ್‌ಸಿ–ಎಸ್ಟಿ ಜನಾಂಗದವರೂ ಆಗಿರಬೇಕು ಎಂದು ಕಡ್ಡಾಯಗೊಳಿಸಲಾಗಿದೆ. ಇದೇ ರೀತಿ ರಾಜ್ಯ ಮಟ್ಟದಲ್ಲಿ ಪ್ರಾಧಿಕಾರವನ್ನು ಗವರ್ನರ್ ನೇಮಿಸುತ್ತಾರೆ. ಆಯ್ಕೆಯನ್ನು ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಎಲ್ಲಾ ನೊಂದಾಯಿತ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ನೇಮಿಸುತ್ತದೆ.

"ವ್ಯವಸ್ಥಿತವಾಗಿ ಮತ್ತು ವಿಸ್ತೃತವಾಗಿ" ಕೋಮು ಹಿಂಸಾಚಾರವು ನಡೆಯುತ್ತಿದ್ದರೆ ಅದನ್ನು ನಿಗ್ರಹಿಸಲು ಆ ಪ್ರದೇಶದ ಮೇಲಾಧಿಕಾರಿ–ಜಿಲ್ಲೆಯಾಗಿದ್ದರೆ ಜಿಲ್ಲಾ ಪೊಲೀಸ್ ಅಧಿಕಾರಿ ಮತ್ತು ಜಿಲ್ಲಾಧಿಕಾರಿ–ನೇರವಾಗಿ ಹೊಣೆಗಾಗರನಾಗಿರುತ್ತಾನೆ. ತನ್ನ ಕೆಳಗಿನ ಅಧಿಕಾರಿ ತಪ್ಪು ಮಾಡಿದರೂ ಅದರ ಜವಾಬ್ದಾರಿಯನ್ನು ಮೇಲಧಿಕಾರಿಯೇ ಹೊರಬೇಕಾಗುತ್ತದೆ. ವ್ಯಾಪಕವಾಗಿ ಕೋಮುಗಲಭೆ ನಡೆಯುತ್ತಿದ್ದರೆ ಅದರ ಮಾಹಿತಿ ಮೇಲಧಿಕಾರಿಗೆ ಇತ್ತೂ ಎಂದೇ ಭಾವಿಸಲಾಗುತ್ತದೆ. ಹಾಗಿಲ್ಲದಿದ್ದಲ್ಲಿ ತನಗೆ ಆ ಮಾಹಿತಿ ಇರಲಿಲ್ಲ ಎಂದು ಆ ಅಧಿಕಾರಿ ಸಾಬೀತು ಮಾಡಬೇಕಾಗುತ್ತದೆ. ಮತ್ತು ಇದಕ್ಕೆ 10 ವರ್ಷಗಳ ಶಿಕ್ಷೆಯನ್ನು ವಿಧಿಸಲಾಗುತ್ತದೆ.

ಈ ಪ್ರಾಧಿಕಾರಕ್ಕೆ 1. ಕೋಮುವಾದವನ್ನು ನಿಗ್ರಹಿಸಲು ಮತ್ತು ನಷ್ಟಪರಿಹಾರವನ್ನು ನೀಡಲು ಸರ್ಕಾರಕ್ಕೆ ಸೂಕ್ತವಾದ ಸಲಹೆಗಳನ್ನು ನೀಡುವ ಅಧಿಕಾರವಿರುತ್ತದೆ. 2. ಕೋಮುಗಲಭೆಗಳ ಬಗ್ಗೆ ತಾವೇ ಸ್ವಯಂ ಪ್ರೇರಿತವಾಗಿ ಸ್ವತಂತ್ರ ವಿಚಾರಣೆ ನಡೆಸುವ ಅಧಿಕಾರ. ಆ ಸಂದರ್ಭದಲ್ಲಿ ಸಾಕ್ಷ್ಯವನ್ನು ಸಮನ್ಸ್ ಮಾಡುವ ಮತ್ತು ವರದಿ ಕೇಳುವ ಸಿವಿಲ್ ಕೋರ್ಟಿನ ಅಧಿಕಾರವನ್ನು ಈ ಪ್ರಾಧಿಕಾರ ಹೊಂದಿರುತ್ತದೆ. 3. ಕಾಲಕಾಲಕ್ಕೆ ಮತ್ತು ಕಡ್ಡಾಯವಾಗಿ ವರ್ಷಕ್ಕೊಮ್ಮೆ ದೇಶದ ಮತ್ತು ರಾಜ್ಯದ ಕೋಮುಸೌಹಾರ್ದಕ್ಕೆ ಸಂಬಂಧಪಟ್ಟಂತೆ ವರದಿಗಳನ್ನು ಬಿಡುಗಡೆ ಮಾಡುವ ಮತ್ತು ಪ್ರಕಟಿಸುವ ಅಧಿಕಾರವನ್ನು ಹೊಂದಿರುತ್ತದೆ. ಸರ್ಕಾರ ಪ್ರಾಧಿಕಾರದ ಸಲಹೆಗಳ ಬಗ್ಗೆ 30 ದಿನಗೊಳಗಾಗಿ ತನ್ನ ಪ್ರತಿಕ್ರಿಯೆಯನ್ನು ಕೊಡಬೇಕಾಗುತ್ತದೆ. ಕೋಮುಗಲಭೆಗಳ ವಿಚಾರಣೆ ನಡೆಯುವಾಗ ತನಿಖಾಧಿಕಾರಿ ಸೂಕ್ತವಾದ ವಿಚಾರಣೆ ನಡೆಸುತ್ತಿಲ್ಲ ಅಥವಾ ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಸಂತ್ರಸ್ತರಿಗೆ ಅನಿಸಿದಲ್ಲಿ ಅವರು ಅದರ ಬಗ್ಗೆ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸಬಹುದು. ಪ್ರಾಧಿಕಾರಕ್ಕೆ ಆ ದೂರು ಸರಿಇದೆ ಎಂದು ಕಂಡುಬಂದಲ್ಲಿ ಮರು ವಿಚಾರಣೆ ನಡೆಸಲು ಸರ್ಕಾರಕ್ಕೆ ಸಲಹೆ ಮಾಡಬಹುದು.

ಮತ್ತು ಈ ಪ್ರಾಧಿಕಾರ ಜಿಲ್ಲಾ ಮತ್ತು ಪ್ರದೇಶ ಮಟ್ಟದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ತಡೆಯಲು ಮತ್ತು ಮಾನವ ಹಕ್ಕುಗಳನ್ನು ರಕ್ಷಿಸಲು "ಮಾನವ ಹಕ್ಕು ರಕ್ಷಕರ"ನ್ನು ಅಧಿಕೃತವಾಗಿ ನೇಮಿಸಬಹುದು.

11. ಇದಲ್ಲದೆ ಕೋಮುಗಲಭೆ ನಡೆದಾಗ ಸಂತ್ರಸ್ತರಿಗಾಗಿ ಸರ್ಕಾರ ಕಡ್ಡಾಯವಾಗಿ ಸಂತ್ರಸ್ತರ ಶಿಬಿರವನ್ನು ತೆರೆಯಬೇಕು. ಅಲ್ಲಿ ಘನತೆಯಿಂದ ಬದುಕಲು ಪೂರಕವಾದ ಎಲ್ಲಾ ವಾತಾವರಣವನ್ನು ನಿರ್ಮಿಸಬೇಕು. ಡಿಎಸ್ಪಿ ಮಟ್ಟದ ಅಧಿಕಾರಿ ಶಿಬಿರಕ್ಕೆ ಬಂದು ಸಂತ್ರಸ್ತರ ಅಹವಾಲನ್ನು ಆಲಿಸಬೇಕು ಮತ್ತು ಅವರು ಅಲ್ಲಿಗೆ ಬರಲು ಕಾರಣವಾದ ಪರಿಸ್ಥಿತಿಗಳನ್ನು ದಾಖಲಿಸಿಕೊಳ್ಳಬೇಕು. ಪ್ರಾಧಿಕಾರವೂ ಸಹ ಈ ವಿಷಯದಲ್ಲಿ ಸಕ್ರಿಯವಾಗಿ ಸರ್ಕಾರಕ್ಕೆ ಮಾರ್ಗದರ್ಶನ ನೀಡಬಹುದು.

12. ಕೋಮುಗಲಭೆಯಿಂದಾದ ಆಸ್ತಿ ಮತ್ತು ಪ್ರಾಣಹಾನಿಯನ್ನು ಅಂದಾಜು ಮಾಡಲು ಮತ್ತು ನಷ್ಟ ಪರಿಹಾರ ನೀಡುವ ದೃಷ್ಟಿಯಲ್ಲಿ ಪರಿಹಾರವನ್ನು ನಿಗದಿ ಮಾಡಲು ಜಿಲ್ಲಾ ಮಟ್ಟದಲ್ಲಿ "ನಷ್ಟ ಅಂದಾಜು ಸಮಿತಿ"ಗಳನ್ನು ನೇಮಿಸಲಾಗುವುದು.

ಇವಿಷ್ಟೂ ಈವರೆಗೆ ಇತರ ಕಾನೂನುಗಳಲ್ಲಿಲ್ಲದೇ ಇರುವ ಕೋಮುವಾದೀ ಹಿಂಸಾಚಾರವನ್ನು ನಿಗ್ರಹಿಸುವ ಉದ್ದೇಶದಿಂದ ಈ ಮಸೂದೆಯಲ್ಲಿ ಮಾತ್ರ ಅಡಕವಾಗಿರುವ ಅಂಶಗಳು. ಮೇಲ್ನೋಟಕ್ಕೆ ಕಾಣುವಂತೆ ಈ ಎಲ್ಲಾ ಅಂಶಗಳು ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದೀ ಹಿಂಸಾಚಾರವನ್ನು ಒಂದಷ್ಟಾದರೂ ಕಡಿಮೆ ಮಾಡಲು, ಸರಿಯಾಗಿ ಅನುಷ್ಠಾನಕ್ಕೆ ಬಂದರೆ ಕನಿಷ್ಠಪಕ್ಷ

ಕೋಮುಹಿಂಸಾಚಾರಕ್ಕೆ ಕಾರಣರಾದವರನ್ನು ಶಿಕ್ಷೆ ಗುರಿಪಡಿಸಲು ಸಹಾಯಕ್ಕೆ ಬರುತ್ತದೆ. ಆದ್ದರಿಂದ ಮಸೂದೆಯು ಸ್ವಾಗತಾರ್ಹವೇ...ಆದರೆ...

ಈ ಮಸೂದೆಯನ್ನು ಇಡಿಯಾಗಿ ಬೆಂಬಲಿಸಲು ಸಾಧ್ಯವೇ?

ಆದರೆ ಈ ಮಸೂದೆಯನ್ನು ರಚಿಸುವ ಹೊತ್ತಿನಲ್ಲಿ ಕರಡುಕರ್ತರ ತಲೆಯಲ್ಲಿ ಗುಜರಾತ್ ಗಲಭೆಯ ಪರಿಣಾಮಗಳೇ ಆವರಿಸಿಕೊಂಡಿದ್ದ ಕಾರಣಕ್ಕಾಗಿಯೋ ಏನೋ ಮಸೂದೆಯ ಪ್ರಜಾತಾಂತ್ರಿಕ ಆಶಯವನ್ನೇ ನಿರಾಕರಿಸುವಂಥ ಕೆಲವು ಅಂಶಗಳೂ ಮಸೂದೆಯಲ್ಲಿ ಸೇರಿಕೊಂಡಿವೆ.

ಮೊದಲನೆಯದಾಗಿ ಅಪರಾಧ ಸಂಹಿತೆಗಳು ಮತ್ತು ಕಾನೂನುಗಳು ಎಷ್ಟೇ ಸದಾಶಯಗಳಿಂದ ರಚಿತವಾಗಿದ್ದರೂ ಸಮಾಜದಲ್ಲಿ ವರ್ಗ, ಜಾತಿ ಮತ್ತು ಧರ್ಮದ ಆಧಾರದಲ್ಲಿ ಅಸಮಾನತೆಗಳು ಮತ್ತು ತಾರತಮ್ಯಗಳು ಮುಂದುವರೆಯುತ್ತಿರುವವರೆಗೆ ಮತ್ತು ಆಡಳಿತ ಯಂತ್ರಾಂಗ ಈ ಅಧಿಕಾರ ರಚನೆಗಳ ಸೇವೆಯನ್ನು ಮಾಡುತ್ತಾ ಇರುವವರೆಗೆ, ಸದುದ್ದೇಶದಿಂದ ರಚಿತವಾಗಿದ್ದರೂ ದಮನ ಮಾಡುವ ಅಂಶಗಳನ್ನು ಹೊಂದಿರುವ ಕಾನೂನು, ದಮನಿತರ ವಿರುದ್ಧವಾಗಿಯೇ ಬಳಸಲ್ಪಡುವ ಅವಕಾಶಗಳು ಜಾಸ್ತಿ. ಆದ್ದರಿಂದಲೇ ಜನರ ಪ್ರಜ್ಞೆ ಮತ್ತು ಶಕ್ತಿ ಬಲಗೊಳ್ಳದೆ ಪ್ರಭುತ್ವವನ್ನು ಆಡಳಿತ ಯಂತ್ರಾಂಗವನ್ನು ಕಾನೂನನ್ನು ಮಾತ್ರ ಬಲಮಾಡುವ ಯಾವುದೇ ಪ್ರಯತ್ನ ಅಂತಿಮವಾಗಿ ಜನರ ವಿರುದ್ಧವಾಗಿಯೇ ತಿರುಗುವ ಅವಕಾಶ ಹೆಚ್ಚು. ಹೀಗಾಗಿಯೇ ಇಂದು ಎಸ್ಸಿಎಸ್ಟಿ ಅಟ್ರಾಸಿಟಿ ಕಾಯಿದೆಯಿಂದ ಮೊದಲುಗೊಂಡು ಬಹುಪಾಲು ಕಾನೂನುಗಳು ಸಹ ದಮನಿತರಿಗೆ ಹೆಚ್ಚಾಗಿ ಅನುಕೂಲವಾಗುತ್ತಿಲ್ಲ. ಆದ್ದರಿಂದಲೇ ಯಾವುದೇ ಕಾನೂನು ರಚಿಸಬೇಕಾದರೂ ಅದರಲ್ಲೂ ಪ್ರಭುತ್ವದ ಕೈಗಳನ್ನು ಬಲಪಡಿಸುವಂಥ ಕಾನೂನುಗಳನ್ನು ರಚಿಸಬೇಕಾದರೆ ಪ್ರಜಾತಂತ್ರ ಮತ್ತು ಸಹಜನ್ಯಾಯದ ಅಂಶಗಳನ್ನು ಕೈಬಿಡಬಾರದು. ಹಾಗೆಯೇ ಅಂಥಾ ಕಾಯಿದೆಯಲ್ಲೇ ಅಂತರ್ಗತವಾಗಿ ಅದನ್ನು ಅಧಿಕಾರಿಗಳು ಯಾವ ಕಾರಣಕ್ಕೂ ದುರುಪಯೋಗ ಪಡಿಸಿಕೊಳ್ಳದಂಥ ಉಸ್ತುವಾರಿ ರಚನೆಗಳು ಇರದಿದ್ದರೆ ದಮನಿತರಿಗೆ ಅನ್ಯಾಯ ಖಚಿತ.

ಪ್ರಭುತ್ವ ಯಾವಾಗಲೂ ತನಗೆ ಹೇರಲಾಗಿರುವ ಪ್ರಜಾತಂತ್ರದ ಸಂಕೋಲೆಗಳನ್ನು ಕಳಚಿಕೊಂಡು ನಿರಂಕುಶವಾಗಲು ನೆಪಗಳನ್ನು ಹುಡುಕುತ್ತಿರುತ್ತದೆ. ಆದ್ದರಿಂದಲೇ ಭಯೋತ್ಪಾದನೆಯ ನಿಗ್ರಹದ ಹೆಸರಿನಲ್ಲಿ ಸರ್ಕಾರ ಪೋಟಾ, ಟಾಡಾ, ಯುಎಪಿಎದಂಥಾ ಕಾಯಿದೆಯನ್ನು ಜಾರಿಗೆ ತರುವಾಗ ಜಾಮೀನು, ಸಾಕ್ಷಿ, ನ್ಯಾಯ ವಿಚಾರಣೆಯೆಲ್ಲದರಲ್ಲೂ ಪ್ರಜಾತಾಂತ್ರಿಕ ನ್ಯಾಯಸಂಹಿತೆಗೇ ವಿರುದ್ಧವಾದ ಅಂಶಗಳನ್ನು ಸೇರಿಸಿತ್ತು. ಆಗ ಅದನ್ನು ಬಿಜೆಪಿ ಸಹ ಬೆಂಬಲಿಸಿತ್ತು. ಆದರೆ ಈಗ ಅದೇ ಅಂಶಗಳನ್ನು ಬಿಜೆಪಿ ಈ ಮಸೂದೆಯಲ್ಲಿ ಸೇರಿಸಿರುವುದನ್ನು ವಿರೋಧಿಸುತ್ತಿದೆ. ಅದೇನೇ ಇರಲಿ ಒಂದು ಪ್ರಜಾತಾಂತ್ರಿಕ ಸಮಾಜವನ್ನು ಆಶಿಸುವವರು ಮತ್ತು ಸಮಾಜದಲ್ಲಿ ಇನ್ನೂ ಅಧಿಕಾರ ರಚನೆಗಳು ಶೋಷಕ ಶಕ್ತಿಗಳ ಹಿಡಿತದಲ್ಲಿ ಇದೆ ಎಂದು ಬಲ್ಲವರು ಈ ಮಸೂದೆಯಲ್ಲೂ ಪ್ರಜಾತಾಂತ್ರಿಕ ನ್ಯಾಯಸಂಹಿತೆಗೆ ವಿರುದ್ಧವಾದ ಅಂಶಗಳನ್ನು ಬೆಂಬಲಿಸಲು ಸಾಧ್ಯವಿಲ್ಲ. ಹಾಗಾದಲ್ಲಿ

ಪ್ರಭುತ್ವ ಯಾವಾಗಲೂ ತನಗೆ ಹೇರಲಾಗಿರುವ ಪ್ರಜಾತಂತ್ರದ ಸಂಕೋಲೆಗಳನ್ನು ಕಳಚಿಕೊಂಡು ನಿರಂಕುಶವಾಗಲು ನೆಪಗಳನ್ನು ಹುಡುಕುತ್ತಿರುತ್ತದೆ. ಆದ್ದರಿಂದಲೇ ಭಯೋತ್ಪಾದನೆಯ ನಿಗ್ರಹದ ಹೆಸರಿನಲ್ಲಿ ಸರ್ಕಾರ ಪೋಟಾ, ಟಾಡಾ, ಯುಎಪಿಎ ದಂಥಾ ಕಾಯಿದೆಯನ್ನು ಜಾರಿಗೆ ತರುವಾಗ ಜಾಮೀನು, ಸಾಕ್ಷಿ, ನ್ಯಾಯ ವಿಚಾರಣೆಯೆಲ್ಲದರಲ್ಲೂ ಪ್ರಜಾತಾಂತ್ರಿಕ ನ್ಯಾಯ ಸಂಹಿತೆಗೇ ವಿರುದ್ಧವಾದ ಅಂಶಗಳನ್ನು ಸೇರಿಸಿತ್ತು. ಆಗ ಅದನ್ನು ಬಿಜೆಪಿ ಸಹ ಬೆಂಬಲಿಸಿತ್ತು. ಆದರೆ ಈಗ ಅದೇ ಅಂಶಗಳನ್ನು ಬಿಜೆಪಿ ಈ ಮಸೂದೆಯಲ್ಲಿ ಸೇರಿಸಿರುವುದನ್ನು ವಿರೋಧಿಸುತ್ತಿದೆ.

ಅದು ಅಲ್ಪಸಂಖ್ಯಾತರ ಹಿತಾಸಕ್ತಿಗೆ ವಿರುದ್ಧವಾಗಿಯೇ ಕೆಲಸ ಮಾಡುತ್ತದೆ.

ಅಂಥಾ ಹಲವಾರು ಪ್ರಜಾತಂತ್ರ ವಿರೋಧಿ ಅನ್ಯಾಯಯುತ ಅಂಶಗಳು ಈ ಮಸೂದೆಯಲ್ಲಿವೆ.

1. ಈ ಮಸೂದೆಯಲ್ಲಿನ 67–69 ಸೆಕ್ಷನ್‌ಗಳು ಸಾಕ್ಷಿಯನ್ನು ಸಂಗ್ರಹಿಸುವ ಹೆಸರಿನಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಗೆ ಖಾಸಗಿ ಫೋನುಗಳನ್ನು ಕದ್ದಾಲಿಸುವ, ಇಮೇಲ್‌ಗಳನ್ನು ಕದ್ದು ಓದುವ , ಸಂಪರ್ಕ ಸಾಧನಗಳ ಮೇಲೆ ಸುಪರ್ದಿ ಸಾಧಿಸುವ ಅಧಿಕಾರವನ್ನು ಕೊಡುತ್ತದೆ. ಇದು ಕೇವಲ ಸಂಭವನೀಯ ಅಪರಾಧಿಗಳನ್ನು ಮಾತ್ರವಲ್ಲದೆ ಇಡೀ ಸಮಾಜದ ಖಾಸಗಿ ಜೀವನವನ್ನು ಪೊಲೀಸರ ಉಸ್ತುವಾರಿಗೆ ಒಳಪಡಿಸುತ್ತದೆ.

2. ಯಾವುದೇ ವ್ಯಕ್ತಿಯ ಆರೋಪ ಸಾಬೀತಾಗುವ ತನಕ ಆತ ನಿರಪರಾಧಿಯೇ. ಹೀಗಾಗಿ ಜಾಮೀನು ಆರೋಪಿಗೆ ಇರುವ ಒಂದು ಪ್ರಜಾತಾಂತ್ರಿಕ ಅವಕಾಶ. ಅದನ್ನು ಕೊಡುವ ಅಥವಾ ನಿರಾಕರಿಸುವ ಅಧಿಕಾರ ನ್ಯಾಯಾಲಯಕ್ಕಿರುತ್ತದೆ. ಆದರೆ ಪೊಲೀಸರು ಚಾರ್ಜ್‌ಶೀಟನ್ನು ಹಾಕದೆಯೇ ವಿನಾಕಾರಣ ವಿಚಾರಣೆ ಮುಂದುವರೆಯುತ್ತಿದೆ ಎಂಬ ಹೆಸರಲ್ಲಿ ಆರೋಪಿ ನ್ಯಾಯಾಲಯದಲ್ಲಿ ಕೊಳೆಯುವಂತೆ ಮಾಡುತ್ತಾರೆ. ಆದ್ದರಿಂದಲೇ ಈವರೆಗೆ 3 ತಿಂಗಳೊಳಗೆ ಚಾರ್ಜ್‌ಶೀಟನ್ನು ದಾಖಲಿಸಬೇಕೆಂಬ ಕಡ್ಡಾಯವಿತ್ತು. ಆದರೆ ಪೋಟಾ ಮತ್ತು ಟಾಡಾದಂಥ ಕರಾಳ ಕಾಯಿದೆಯಲ್ಲಿ 6 ತಿಂಗಳವರೆಗೂ ಚಾರ್ಜ್‌ಶೀಟನ್ನು ಹಾಕದೆ ಆರೋಪಿಯನ್ನು ಕೊಳೆಹಾಕುವ ಅವಕಾಶವನ್ನು ನೀಡಲಾಗಿತ್ತು.

ಈಗ ಈ ಮಸೂದೆಯಲ್ಲೂ 180 ದಿನಗಳವರೆಗೆ ಚಾರ್ಜ್‌ಶೀಟ್ ಹಾಕದೆ ಆರೋಪಿಯನ್ನು ಕೊಳೆಸುವ ಅವಕಾಶವನ್ನು ನೀಡಲಾಗಿದೆ. ಅಷ್ಟು ಮಾತ್ರವಲ್ಲ. ಬೇರೆ ಯಾವುದಾದರೂ ಅರೋಪದ ಮೇಲೆ ಆರೋಪಿ ಈ ಅಪರಾಧ ಸಂಭವಿಸುವಾಗ ಹೊರಗಿದ್ದರೂ ಅದನ್ನು ಜಾಮೀನು ಪಡೆಯಲು ಅನರ್ಹತೆ ಎಂದು ಪರಿಗಣಿಸುವ ಅವಕಾಶವನ್ನು ನೀಡಲಾಗಿದೆ. ಇವೆರಡೂ ಎರಡು ಅಲಗಿನ ಕತ್ತಿಯಾಗಿದ್ದು ಯಾವುದೇ ಕಾರಣಕ್ಕೆ ಇಂಥಾ ಅಪ್ರಜಾತಾಂತ್ರಿಕ ಅಧಿಕಾರಗಳನ್ನು ಪ್ರಭುತ್ವಕ್ಕೆ ನೀಡಿದಲ್ಲಿ ನಾಳೆ ಸಾಮಾನ್ಯ ಜನರನ್ನು ಬೇರೆ ಹೆಸರಿನಲ್ಲಿ ದಮನ ಮಾಡುವಾಗ ಇದೇ ನಿಯಮವನ್ನು ಬಳಸಿದಲ್ಲಿ ಅದನ್ನು ಕೂಡದು ಎನ್ನುವ ಅಧಿಕಾರವನ್ನು ನಾಗರಿಕ ಸಮಾಜ ಕಳೆದುಕೊಳ್ಳುತ್ತದೆ. ಅಲ್ಲದೆ ಒಂದು ವೇಳೆ ಬಹುಸಂಖ್ಯಾತರು ಯಾರು ಎನ್ನುವ ತೀರ್ಮಾನ ರಾಜ್ಯಮಟ್ಟದಲ್ಲಿ ಆಗುವುದಾದರೆ ಕಾಶ್ಮೀರ ಇನ್ನಿತ್ಯಾದಿ ಕಡೆಗಳಲ್ಲಿ ಇದೇ ಅಂಶವು ಈಗಾಗಲೇ ಕಾನೂನುಬಾಹಿರವಾಗಿ ಅಲ್ಲಿನ ಬಹುಸಂಖ್ಯಾತ ಮುಸ್ಲಿಮರ ಮೇಲೆ ನಡೆಸುತ್ತಿರುವ ಪ್ರಭುತ್ವ ದೌರ್ಜನ್ಯಗಳಿಗೆ ಕಾನೂನು ಸಮ್ಮತಿಯನ್ನೂ ಒದಗಿದಂತಾಗುತ್ತದೆ.

3. ಅದೇ ರೀತಿ ಆರೋಪಿಯ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವನ್ನೂ ಸಹ ಪೂರ್ವಾಪರ ಯೋಚನೆಯಿಲ್ಲದೆ ಸೇರಿಸಲಾಗಿದೆ. ನಂತರದ ಕರಡಿನಲ್ಲಿ ಆರೋಪಕ್ಕೆ ಸಂಬಂಧಪಟ್ಟ ಆಸ್ತಿ–ಪಾಸ್ತಿ ಎಂದು ತಿದ್ದುಪಡಿ ಮಾಡಲಾಗಿದ್ದರೂ ವಿಚಾರಣೆಯ ಹಂತದಲ್ಲೇ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಈ ಅಂಶ ಪೊಲೀಸರಿಗೆ ಇನ್ನಿಲ್ಲದಷ್ಟು ಅಧಿಕಾರವನ್ನು ಕೊಡುತ್ತದೆ. ಮತ್ತು ಇದು ಸಾಮಾನ್ಯ ಜನರಿಗೆ ಮತ್ತು ಆರೋಪಿಯ ಅವಲಂಬಿತರನ್ನು ಚಿತ್ರಹಿಂಸೆಗೆ ಗುರಿ ಮಾಡುವುದರಲ್ಲಿ ಸಂಶಯವಿಲ್ಲ.

ಇವಿಷ್ಟೂ ಅಂಶಗಳು ಖಂಡಿತಾ ಈ ಮಸೂದೆಯಿಂದ ಹೊರಗಿಡಲೇಬೇಕು. ಒಂದು ವೇಳೆ ಸರ್ಕಾರ ಬಿಜೆಪಿಯ ಒತ್ತಡಕ್ಕೆ ಮಣಿದು ಈ ಮಸೂದೆಯಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ವ್ಯಾಖ್ಯಾನವನ್ನು ಕೈಬಿಟ್ಟರೆ ಇಡೀ ಮಸೂದೆ ಈಗಾಗಲೇ ದಮನಕ್ಕೊಳಗಾಗಿರುವ ಅಲ್ಪಸಂಖ್ಯಾತ ಸಮುದಾಯವನ್ನು ಕಾನೂನುಬದ್ಧವಾಗಿ ಸದೆಬಡಿಯಲು ಒಂದು ಅಸ್ತ್ರವಾಗಿಬಿಡುತ್ತದೆ.

ಇದಲ್ಲದೆ ಈ ಮಸೂದೆಯಲ್ಲಿ ಸ್ಪಷ್ಟವಿಲ್ಲದ ಕೆಲವು ಅಂಶಗಳಿವೆ. ಅದರಲ್ಲೂ ಈ ಬದಲಾವಣೆಗಳು ಬರಬೇಕಿವೆ.

1. ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು ಎಂದು ಭೌಗೋಳಿಕವಾಗಿ ನಿಗದಿ ಮಾಡಲು ಘಟಕ ದೇಶವೋ/ ರಾಜ್ಯವೋ? ಇಲ್ಲವೇ ಜಿಲ್ಲೆಯೋ ಎಂಬುದು ಮಸೂದೆಯಲ್ಲಿ ಸ್ಪಷ್ಟವಿಲ್ಲ. ಒಂದು ವೇಳೆ ರಾಜ್ಯ ಎಂದಾದರೆ ಕನಿಷ್ಠ 8 ರಾಜ್ಯಗಳಲ್ಲಿ (ಕಾಶ್ಮೀರ, ಈಶಾನ್ಯ ಭಾರತದ ರಾಜ್ಯಗಳು ಇತ್ಯಾದಿ)ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೆ. ಆದರೆ ಅಲ್ಲಿ ಬಹುಸಂಖ್ಯಾತ ಸಮುದಾಯದ ಮೇಲೆ ಈವರೆಗೆ ಭಾರತ ಪ್ರಭುತ್ವ ತನ್ನ ಹಿಂದೂ ರಾಷ್ಟ್ರೀಯವಾದಿ ಪಾರಮ್ಯವನ್ನು ಹೇರಲು ಆಡಳಿತ ಯಂತ್ರಾಂಗವನ್ನೇ ಬಳಸಿಕೊಂಡು ನಿರಂತರ ದೌರ್ಜನ್ಯ ನಡೆಸಿಕೊಂಡು ಬಂದಿದೆ. ಹೀಗಿರುವಾಗ ಈ ಮಸೂದೆ ಆ ಪ್ರದೇಶದಲ್ಲಿ ಈಗಾಗಲೇ ಇತರ ಕಾರಣಗಳಿಗೆ ದಮನಕ್ಕೆ ಒಳಗಾಗಿರುವ ಆ ಸಮುದಾಯವನ್ನು ಇನ್ನಷ್ಟು ದಮನಕ್ಕೆ ಒಳಗಾಗಿಸುವುದಿಲ್ಲವೇ? ಆದ್ದರಿಂದ ಅಲ್ಪಸಂಖ್ಯಾತ ಸಮುದಾಯದ ವ್ಯಾಖ್ಯಾನವನ್ನು ಭೌಗೋಳಿಕವಾಗಿ ರಾಜ್ಯಮಟ್ಟಕ್ಕೆ ವಿಕೇಂದ್ರೀಕರಿಸುವುದು ಉಚಿತವಲ್ಲ. ಏಕೆಂದರೆ ಭಾರತೀಯ ಪ್ರಭುತ್ವ ಕೇಂದ್ರೀಕೃತವಾಗಿದ್ದು ಅದರಲ್ಲಿರುವ ಬಹುಸಂಖ್ಯಾತ ಹಿಂದೂಪರ ಮನಸ್ಥಿತಿ ಸರ್ವವ್ಯಾಪಿಯಾಗಿದೆ. ಹೀಗಾಗಿ ಅಲ್ಪಸಂಖ್ಯಾತ ಗುಂಪುಗಳ ವ್ಯಾಖ್ಯಾನ

(29ನೇ ಪುಟಕ್ಕೆ)

ಹೊಸ ಸಾಹಿತ್ಯ ಚಳವಳಿ ಬೇಕೆ?

ಎಸ್. ಶಿವಾನಂದ

ಹೊಸ ಸಾಹಿತ್ಯ ಚಳವಳಿಯ ಅಗತ್ಯವಿದೆಯೇ ಎಂದು ಪ್ರಶ್ನಿಸುವುದಕ್ಕಿಂತ ಈಗಿರುವ ಸಾಂಸ್ಕೃತಿಕ ಬಿಕ್ಕಟ್ಟಿನಲ್ಲಿ ಬರಹಗಾರ ಎದುರಿಸುತ್ತಿರುವ ಸಮಸ್ಯೆಗಳು ಏನು ಎಂದು ಕೇಳುವುದು ಹೆಚ್ಚು ಅರ್ಥಪೂರ್ಣವಾಗಬಹುದು.

ಕನ್ನಡ ಸಾಹಿತ್ಯದಲ್ಲಿ ಇಂದು ಯಾವುದೇ ಸಾಹಿತ್ಯ ಚಳವಳಿಯಾಗಲಿ ಅಥವಾ 'ಇಸಂ'ಗಳ ಹಾವಳಿಯಾಗಲಿ ಇಲ್ಲ ಅಂತ ಕೆಲವರು ಸಂಭ್ರಮದಿಂದ ಹೇಳುತ್ತಿದ್ದಾರೆ. ಇದಕ್ಕೆ ಇತ್ತೀಚಿನ ಒಂದು ಉದಾಹರಣೆ ಎಂದರೆ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯನವರ ಹೇಳಿಕೆ: "ಚಳವಳಿಗಳ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಸಾಹಿತ್ಯ ರಚನೆಯಾಗುತ್ತಿದ್ದ ಕಾಲ ಈಗ ಮುಗಿದಿದೆ. ಇಂದಿನ ಬರಹಗಾರರು ಸ್ವತಂತ್ರವಾಗಿ, ವೈಯಕ್ತಿಕ ಬದ್ಧತೆಯೊಂದಿಗೆ ಬರೆಯುತ್ತಿದ್ದಾರೆ ಎಂಬ ಮಾತುಗಳು ಸಾಕಷ್ಟು ಕೇಳಿ ಬರುತ್ತಿವೆ. ಚಳವಳಿಗಳ ಹಿನ್ನೆಲೆಯಿಲ್ಲದ ಅನೇಕ ಯುವಕರು ಚೆನ್ನಾಗಿ ಬರೆಯುತ್ತಿದ್ದಾರೆ" [ಪ್ರಜಾವಾಣಿ: 30.8.2011]. ಭೈರಪ್ಪನವರೂ ಕೂಡ ಇದೇ ರೀತಿಯಲ್ಲಿ ಹೇಳುತ್ತಾರೆ: "ನನಗೆ ಯಾವುದೇ ಐಡಿಯಾಲಜಿ ಇಲ್ಲ. ಸತ್ಯವೇ ನನ್ನ ತತ್ವ. ನನಗೆ ಎಡಪಂಥವೂ ಇಲ್ಲ, ಬಲಪಂಥವೂ ಇಲ್ಲ. ಇಂಥ ವಿಂಗಡಣೆಯನ್ನು ಕೆಲವು ಗುಂಪಿನವರು ಮಾಡ್ತಾರೆ" [ಸಂದರ್ಶನ: ಬಿ.ಎಸ್. ಜಯಪ್ರಕಾಶ ನಾರಾರಾಯಣ: ವಿಜಯ ಕರ್ನಾಟಕ: 21.8.2011]. ಹಾಗೆಯೇ ಅನಂತಮೂರ್ತಿಯವರು ಸಹ ಬಲಪಂಥೀಯರು ರಾಹುಗ್ರಸ್ತ ಲೇಖಕರಾದರೆ, ಎಡಪಂಥೀಯ ಲೇಖಕರು ಕೇತುಗ್ರಸ್ತರಾಗಿರುತ್ತಾರೆ ಅಂತ ಜ್ಯೋತಿಷಿಗಳ ಪರಿಭಾಷೆಯಲ್ಲಿ ಹೇಳಿದ್ದಾರೆ [ಸೃಜನಶೀಲತೆಯ ಅಗ್ನಿದಿವ್ಯ: ಪ್ರಜಾವಾಣಿ: 26.6.2011]. ಇಂಥವರದ್ದು ಎಡವೂ ಅಲ್ಲದ ಬಲವೂ ಅಲ್ಲದ ಮೂರನೆಯ ಆಯಾಮ. ಹಾಗೆಂತಲೇ ಬರಗೂರರು ಅದನ್ನು 'ಸುರಕ್ಷಿತ ವಲಯ' ಎಂದು ಕರೆದಿದ್ದಾರೆ.

ಯಾವುದೇ 'ಇಸಂ' ಇಲ್ಲದೆ ಲೇಖಕರು ಬರೆಯುತ್ತಾರೆ ಎನ್ನವುದು ಮೂಲತಃ ಒಂದು ಭ್ರಮಾತ್ಮಕ ಧೋರಣೆಯಾಗಿರುತ್ತದೆ. 'ಮುಕ್ತತೆ' ಎನ್ನವುದೇ ಒಂದು ಅಪಕಲ್ಪನೆ. ಇಂಥವರ ನಿಲುವುಗಳ ಹಿಂದಿರುವ ಇಂಗಿತವೆಂದರೆ: ಒಳ್ಳೆಯ ಸಾಹಿತ್ಯ ಸೃಷ್ಟಿಗೆ ಯಾವುದೇ ಚಳವಳಿಯಾಗಲಿ ಅಥವಾ ತಾತ್ವಿಕತೆಯಾಗಲಿ ಬೇಕಿಲ್ಲ ಎಂಬುದು. ಇದು ಒಂಥರಾ ನಿರಾಭರಣ ಸುಂದರಿ ಅಂತ ಹೇಳಿದಂತೆ. ನಿಜ, ಆಕೆಗೆ ಆಭರಣಗಳೇ ಇಲ್ಲದಿರಬಹುದು ಅಥವಾ ಇದ್ದ ಆಭರಣಗಳು ಹಳೆಯವಾಗಿರಬಹುದು. ಹಾಗೆಯೇ 'ಒಳ್ಳೆಯ ಸಾಹಿತ್ಯ' ಎಂಬುದು ಒಂದು ಸಾಪೇಕ್ಷವೂ ಸುಂದರವೂ ಸಾಧುವೂ ಆದ ಪದಪುಂಜ. ಶೂನ್ಯದಿಂದ ನಿರ್ವಾತದಿಂದ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಆ ರೀತಿ ಯಾವುದೇ ಇಸಂಗೆ ಬದ್ಧನಾಗದೆ ಬರೆಯುತ್ತೇನೆ ಅಥವಾ ಬರೆಯುತ್ತಿದ್ದಾರೆ ಎಂದು ಗ್ರಹಿಸಿಕೊಳ್ಳುವುದೇ ಅಪ್ರಜ್ಞಾಪೂರ್ವಕವಾಗಿ ಒಂದು 'ಇಸಂ' ಆಗಿರುತ್ತದೆ ಹಾಗೂ ಅದು ಆಳದಲ್ಲಿ ಯಥಾಸ್ಥಿತಿವಾದಿಯಾಗಿರುತ್ತದೆ ಅಥವಾ ಈಗಿನ ಜಾಗತೀಕರಣದ ಸಂದರ್ಭದಲ್ಲಿ ಅದನ್ನು ಪೋಸ್ಟ್ ಮಾಡರ್ನಿಸಂ ಮಾಯೆ ಎನ್ನಬಹುದು.

ಈಗ ನಮ್ಮ ಮುಂದಿರುವ 'ಈಗ ಹೊಸ ಸಾಹಿತ್ಯ ಚಳವಳಿಯ ಅವಶ್ಯಕತೆಯಿದೆಯೇ?' ಎಂಬ ಪ್ರಶ್ನೆಗೆ ಬರೋಣ. ಬಂಡಾಯ ಸಾಹಿತ್ಯ ಚಳವಳಿ ಈಗ ಅಪ್ರಸ್ತುತವಾಗಿದೆ ಎನ್ನುವ ಗ್ರಹಿಕೆ ಈ ಪ್ರಶ್ನೆಯ ಹಿಂದಿದೆ. ಬಂಡಾಯ ಚಳವಳಿ ಹುಟ್ಟಿ ಈಗ ಮೂವತ್ತು ವರ್ಷಗಳಾಗಿವೆ. ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಅದರ ಸಾಧನೆಗಳನ್ನು ಹಾಗೂ ಅದು ಉಂಟುಮಾಡಿದ ಪರಿಣಾಮಗಳನ್ನು ನಾನಿಲ್ಲಿ ಪಟ್ಟಿ ಮಾಡಲು ಹೋಗುವುದಿಲ್ಲ. ಆದರೆ ಹೊಸ ಸಾಹಿತ್ಯ ಚಳವಳಿಯ ಅವಶ್ಯಕತೆಯ ಹಿನ್ನೆಲೆಯಲ್ಲಿ ಬಂಡಾಯ ಚಳವಳಿ ಕಟ್ಟಿಕೊಂಡ ಮಿತಿ ಹಾಗೂ ದೌರ್ಬಲ್ಯ-ವೈಫಲ್ಯಗಳನ್ನು ನಾವು ಗುರುತಿಸಿಕೊಳ್ಳಬೇಕಾಗುತ್ತದೆ.

ಬಂಡಾಯ ಚಳವಳಿ ಎಡವಿದ್ದೆಲ್ಲಿ? ನನಗೆ ಮುಖ್ಯವಾಗಿ ಕಂಡ ಕೆಲವು ಅಂಶಗಳ ಬಗ್ಗೆ ಚರ್ಚಿಸಲು ಪ್ರಯತ್ನಿಸುತ್ತೇನೆ. ಮೊದಲನೆಯದಾಗಿ, ಬಂಡಾಯ ಸಂಘಟನೆಯ ಆರಂಭದಲ್ಲಿ ಜೊತೆಗಿದ್ದ ಡಿ.ಆರ್. ನಾಗರಾಜ್, ಸಿದ್ಧಲಿಂಗಯ್ಯ, ಶೂದ್ರ ಶ್ರೀನಿವಾಸರಂಥವರು ಸಂಘಟನೆಯಿಂದ ಹೊರಬಂದದ್ದು ಅವರ ವ್ಯಕ್ತಿಗತ ಪ್ರತಿಷ್ಠೆಯ ಅಹಂ ಆಗಿ ಕಾಣುತ್ತದೆ. ಹಾಗೆಯೆ ಸಂಘಟನೆಯ ಒಳಗಡೆ ಭಿನ್ನಾಭಿಪ್ರಾಯಗಳ ಬಗ್ಗೆ ಮುಕ್ತ ಹಾಗೂ ಆರೋಗ್ಯಕರ ಚರ್ಚೆಗೆ ಅವಕಾಶ ಇರಲಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಅಂದರೆ ಸಂಘಟನೆಯ ಒಳಗಡೆ ತಾತ್ವಿಕ ಮಟ್ಟದ ಸ್ವವಿಮರ್ಶೆ ಎಂಬುದು ಇರಲಿಲ್ಲ ಎನ್ನವುದು ಇದರಿಂದ ಗ್ರಹೀತವಾಗುತ್ತದೆ.

2. ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಬಂಡಾಯದವರು ಯಾವುದೇ ಸಂಬಂಧ ಇಟ್ಟುಕೊಳ್ಳಬಾರದು ಎಂಬ ನೀತಿಸಂಹಿತೆಯನ್ನು ಹೇರಿದ್ದು ಅಪ್ರಬುದ್ಧತೆಯ ತೀರ್ಮಾನವಾಗಿತ್ತು. ಪರಿಷತ್ತು ಚುನಾವಣೆಯ ಮೂಲಕ ನಡೆಯುವ ಸಂಸ್ಥೆಯೇ ವಿನಾ ಮೂಲತಃ ಅದೊಂದು ಪ್ರತಿಗಾಮೀ ಸಂಸ್ಥೆಯಾಗಿರಲಿಲ್ಲ.

3. ಚಳವಳಿಯ ಮುಂಚೂಣಿ ನಾಯಕರು ಅಕಾಡೆಮಿ, ವಿಧಾನ ಪರಿಷತ್ತು, ಪ್ರಾಧಿಕಾರಗಳಿಗೆ ನೇಮಕಗೊಂಡದ್ದು; ಇದನ್ನು ವ್ಯವಸ್ಥೆಯೊಂದಿಗಿನ ರಾಜಿ ಎಂದು ಪರಿಗಣಿಸಿ, ನಾಯಕರ ನೈತಿಕ ನಿಲುವನ್ನು ಭಾವುಕವಾಗಿ ಪ್ರಶ್ನಿಸುವಂತಹದ್ದಾಗಿತ್ತು. ಸರ್ಕಾರವನ್ನೆ 'ವ್ಯವಸ್ಥೆ' ಎಂದು ಭಾವಿಸಿಕೊಂಡದ್ದು ಒಂದು ರೀತಿಯಲ್ಲಿ ತಪ್ಪು ಗ್ರಹಿಕೆ. ಸರ್ಕಾರದ ಸಂಸ್ಥೆಗಳಲ್ಲಿದ್ದೂ, ಮೂಲತಃ ತಾವು ನಂಬಿದ ಸೈದ್ಧಾಂತಿಕ ತತ್ವಗಳೊಂದಿಗೆ ರಾಜಿಯಾಗದೆ ಚಳವಳಿಗೆ ಪೂರಕವಾಗಿ ನಿಂತರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಪ್ಪೇನಲ್ಲ. ಆದರೆ ಸಂಘಟನೆಯನ್ನು ನಿರ್ಲಕ್ಷಿಸಿ ಸರ್ಕಾರದ ಸಂಸ್ಥೆಗಳಲ್ಲಿ ಭಾಗಿಯಾಗಿದ್ದರೆ ಅದನ್ನು ಅವಕಾಶವಾದ ಎನ್ನಲೇಬೇಕು.

4. ಬಂಡಾಯ ಚಳವಳಿಯ ಮುಖ್ಯವಾದ ಮಿತಿ-ದೌರ್ಬಲ್ಯ ಎಂದರೆ, ಅದರ ಸಂಘಟನಾತ್ಮಕ ಕೊರತೆ. ನಿರೀಕ್ಷಿತ ಮಟ್ಟದಲ್ಲಿ ಅದರ ಹರವು ಹಿಗ್ಗಲಿಲ್ಲ. ಬರುಬರುತ್ತಾ ಎರಡು ಮೂರು ವರ್ಷಕ್ಕೊಮ್ಮೆ ಜಿಲ್ಲಾಮಟ್ಟದಲ್ಲಿ ಸಮ್ಮೇಳನಗಳನ್ನು ನಡೆಸುವುದನ್ನು ಬಿಟ್ಟರೆ, ಸಂಘಟನೆಯನ್ನು ಬಲಪಡಿಸುವ ಶಿಬಿರ-ಕಮ್ಮಟ ಮುಂತಾದ ಕಾರ್ಯಕ್ರಮಗಳು ನಡೆಯಲಿಲ್ಲ. ಇದರಿಂದ ಹೊಸ ಸಾಹಿತ್ಯಾಸಕ್ತರನ್ನು ಸೆಳೆಯಲು/ಬೆಳಸಲು ಸಾಧ್ಯವಾಗಲಿಲ್ಲ.

5. ಸಂಘಟನೆ ವತಿಯಿಂದ ಒಂದು ಸಣ್ಣ ಪತ್ರಿಕೆಯನ್ನು ನಡೆಸಿಕೊಂಡು ಬರಲಾಗಲಿಲ್ಲ. ಬಂಡಾಯ ಎನ್ನುವ ಪತ್ರಿಕೆ ಒಂದೆರಡು ಸಂಚಿಕೆಗಳಿಗೇ ನಿಂತು ಹೋಯಿತು. ಸಂಕ್ರಮಣ, ಅನ್ವೇಷಣೆ, ಸಮುದಾಯದಂತಹ ಪತ್ರಿಕೆಗಳು ಇದ್ದರೂ ಬಂಡಾಯ ಸಂಘಟನೆಗೆ ಸಂಬಂಧಿಸಿದ ಒಂದು ಪತ್ರಿಕೆ ರೂಪುಗೊಳ್ಳಬೇಕಿತ್ತು. ಹೊಸ ಬರಹಗಾರರಿಗೆ ವಿಮರ್ಶಾತ್ಮಕ ಉತ್ತೇಜನಕ್ಕಾಗಿ ಹಾಗೂ ಬಂಡಾಯದ ಲೇಖಕರಿಗೆ ಸಮಕಾಲೀನ ಸಾಹಿತ್ಯಕ- ಸಾಂಸ್ಕೃತಿಕ ಚರ್ಚೆಗಳಿಗೆ ಅತ್ಯವಶ್ಯ ಬೇಕಾಗಿದ್ದ ಒಂದು ಅಭಿವ್ಯಕ್ತಿ ವೇದಿಕೆಯನ್ನು ಸಂಘಟನೆ ನಿರ್ಮಿಸಿಕೊಡಲಿಲ್ಲ. ಆ ಮೂಲಕ ಬಂಡಾಯ ಸಾಹಿತ್ಯ ವಿಮರ್ಶೆಗೆ ಮತ್ತು ಸಾಂಸ್ಕೃತಿಕ ವಿಮರ್ಶೆಗೆ ಒಂದು ಸೈದ್ಧಾಂತಿಕ ಮೀಮಾಂಸೆ ಗಟ್ಟಿಗೊಳ್ಳುವ ಸಾಧ್ಯತೆ ಇತ್ತು.

ಶೋಷಣೆ, ಅಪಮಾನಗಳಿಂದ ಮಾನವನನ್ನು ಬಿಡುಗಡೆ ಗೊಳಿಸುವ ಎಲ್ಲ ಸಾಮಾಜಿಕ-ಸಾಂಸ್ಕೃತಿಕ ಹೋರಾಟಗಳನ್ನು ಶಂಕಿಸುವ-ಪ್ರಶ್ನಿಸುವ ಆಧುನಿಕೋತ್ತರವಾದವನ್ನು ಎದುರಿಸಲು ಹಾಗೂ ಪಶ್ಚಿಮದ/ವಸಾಹತುಶಾಹಿಯ ವಿಕಲ್ಪಗಳನ್ನು ವಿಕೃತಿಗಳನ್ನು ಗುರುತಿಸುವ ನೆಪದಲ್ಲಿ ಆಧುನಿಕತೆಯ ವೈಚಾರಿಕ ಪ್ರಗತಿಪರ ನೆಲೆಗಳನ್ನೆ ಕತ್ತರಿಸುವ ವಸಾಹತೋತ್ತರ ವಿಸ್ಮೃತಿವಾದೀ ಚಿಂತನೆಗಳನ್ನು ಎದುರಿಸಲು, ಬಹು ಸಂಸ್ಕೃತಿಗಳಲ್ಲಿ ಅಂತಸ್ಥವಾಗಿರುವ ಜೀವಪರ ಹಾಗೂ ಚಲನಶೀಲ ಜೀವಧಾತುಗಳನ್ನು ಒಗ್ಗೂಡಿಸಿ ಹೊಸ ಬದುಕನ್ನು ಕಟ್ಟುವ ಸಾಂಸ್ಕೃತಿಕ ಚಳವಳಿಯೊಂದನ್ನು ರೂಪಿಸುವಂತಹ ಹೊಸ ಸಾಹಿತ್ಯ ಚಳವಳಿ ಇಂದಿನ ಅಗತ್ಯವಾಗಿದೆ.

6. ತೊಂಭತ್ತರ ದಶಕದ ನಂತರದಲ್ಲಿ ದೇಶದ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಕಾಲಕಾಲಕ್ಕೆ ಆದಂತಹ ಪಲ್ಲಟಗಳ ಸವಾಲುಗಳ ವಿಘಟನೆಗಳ ಹಿನ್ನೆಲೆಯಲ್ಲಿ ಬಂಡಾಯ ಸಂಘಟನೆ ಚಳವಳಿಯನ್ನು ಗಟ್ಟಿಗೊಳಿಸಬೇಕಿತ್ತು. ಉದಾಹರಣೆಗೆ ಗ್ಯಾಟ್ ಒಪ್ಪಂದ, ಬಾಬ್ರಿ ಮಸೀದಿ ಧ್ವಂಸ, ಬಾಬಾಬುಡನ್ ಗಿರಿ ಸಮಸ್ಯೆ, ಕೋಮುವಾದ, ಜಾಗತೀಕರಣ–ಉದಾರೀಕರಣ–ಖಾಸಗೀಕರಣಗಳ ಜನವಿರೋಧಿ ನೆಲೆ ನಿಲುವುಗಳ ಕುರಿತಂತೆ ಮತ್ತು ಇತ್ತೀಚೆಗೆ ನಡೆದ ಮಡೇಸ್ನಾನದಂತಹ ಮೌಢ್ಯಾಚರಣೆ ಹಾಗೂ ಶಾಲೆಗಳಲ್ಲಿ ಭಗವದ್ಗೀತೆ ಬೋಧನೆ ಕುರಿತಂತೆ ಬಂಡಾಯ ಚಳವಳಿ ಶಕ್ತಿಶಾಲಿಯಾಗಿ ಸಜ್ಜುಗೊಳ್ಳಲಿಲ್ಲ. ಒಂದು ರೀತಿಯಲ್ಲಿ ದಲಿತ ಚಳವಳಿ ಹೋಳಾಗುತ್ತ ಹೋಗುತ್ತಿದ್ದರೂ, ಅದು ಕ್ರಿಯಾಶಾಲಿಯಾಗಿರುವಷ್ಟೂ ಬಂಡಾಯ ಚಳವಳಿ ಕ್ರಿಯಾಶಾಲಿಯಾಗಿಲ್ಲ.

7. ಬಂಡಾಯ ಚಳವಳಿ ತನ್ನ ತಾತ್ವಿಕ ನೆಲೆಗಟ್ಟನ್ನು ವಿಶಾಲ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಸಂಘಟನೆ ಎಂದು ಗುರುತಿಸಿಕೊಂಡಿತ್ತು. ಮುಖ್ಯವಾಗಿ ಮಾರ್ಕ್ಸ್‌ವಾದಿ, ಲೋಹಿಯಾವಾದಿ ಹಾಗೂ ಅಂಬೇಡ್ಕರ್‌ವಾದೀ ಶಕ್ತಿಗಳ ಮೈತ್ರಿಯನ್ನು ಘೋಷಿಸಲಾಗಿತ್ತು. ಇದೊಂದು ಪ್ರಗತಿಪರ ಶಕ್ತಿಗಳ ಸಾಂಸ್ಕೃತಿಕ ಮೈತ್ರಿಯಾಗಿ ಅತ್ಯಂತ ಸ್ವಾಗತಾರ್ಹ ಹೆಜ್ಜೆಯಾಗಿತ್ತು. ಆದರೆ ವಾಸ್ತವದಲ್ಲಿ ಈ ಮೂರು ಶಕ್ತಿಗಳ ನಡುವೆ ಕನಿಷ್ಠಪಕ್ಷ ಸಾಮಾನ್ಯ ವಿಷಯಗಳ ಮಟ್ಟದಲ್ಲಿಯೂ ಸಮನ್ವಯವಾಗಲಿ, ಅನುಸಂಧಾನವಾಗಲಿ ಏರ್ಪಡಲಿಲ್ಲ. ಅವು ತಂತಮ್ಮ ತಾತ್ವಿಕ ಅನನ್ಯತೆಗಳನ್ನು ಉಳಿಸಿಕೊಂಡೇ ಸಾಂಸ್ಕೃತಿಕ ಮೈತ್ರಿಯ ಒಂದು ಏಕತ್ರ ವೇದಿಕೆಯೂ ಆಗಿ ಬೆಳೆಯಲಿಲ್ಲ. ಈ ಮೂರು ಶಕ್ತಿಗಳ ಜೊತೆಗಷ್ಟೇ ಅಲ್ಲದೆ, ರೈತ ಸಂಘ ಮುಂತಾದ ಪ್ರಗತಿಪರ ಚಿಂತಕರು ಹಾಗೂ ಸಂಘಟನೆಗಳೊಂದಿಗೂ ತಾತ್ವಿಕ ಒಡನಾಟ ಏರ್ಪಡಿಸಿಕೊಳ್ಳಬಹುದಿತ್ತು. ಇಂತಹ ಮಹತ್ತರ ಜವಾಬ್ದಾರಿಯನ್ನು ಬಂಡಾಯ ಸಂಘಟನೆ ಕಾರ್ಯರೂಪಕ್ಕೆ ತರಲು ವಿಫಲಗೊಂಡಿದೆ.

8. ಬಂಡಾಯದ್ದು ಮೂಲತಃ ಎಪ್ಪತ್ತರ ದಶಕದ ವಿದ್ಯಮಾನಗಳಿಗೆ ಪ್ರತಿರೋಧವಾಗಿ ರೂಪುಗೊಂಡ ತಾತ್ವಿಕ ಚೌಕಟ್ಟಾಗಿದೆ. ಆದರೆ ಕಾಲಕಾಲಕ್ಕೆ ಬದಲಾದ ವಿದ್ಯಮಾನಗಳನ್ನು ವಿವರಿಸಲು, ಎದುರಿಸಲು ಬೇರೆ ಬೇರೆ ರೀತಿಯ ತಾತ್ವಿಕ ಹತಾರಗಳೂ ಹೊಸ ವಿಮರ್ಶಾ ಪರಿಭಾಷೆಗಳೂ ಬೇಕಾಗುತ್ತವೆ. ಅಂದರೆ ಬಂಡಾಯದ ಮೂಲ ತಾತ್ವಿಕ ನೆಲೆಗಟ್ಟು ಚಲನಶೀಲತೆಯನ್ನು ಪಡೆಯದೆ, ಸಮಕಾಲೀನ ವಿದ್ಯಮಾನಗಳಿಗೆ ಮುಖಾಮುಖಿಯಾಗದೆ ಉಳಿಯಿತು.

ಬಂಡಾಯ ಚಳವಳಿಯ ಚಾರಿತ್ರಿಕ ಮಿತಿ–ದೌರ್ಬಲ್ಯಗಳ ಹಿನ್ನೆಲೆಯಲ್ಲಿ, 'ಈಗ ಹೊಸ ಸಾಹಿತ್ಯ ಚಳವಳಿಯ ಅವಶ್ಯಕತೆಯಿದೆಯೇ?' ಎನ್ನುವ ಪ್ರಶ್ನೆಗೆ ಹಿಂದಿರುಗೋಣ. ಖಂಡಿತಾ ಅವಶ್ಯಕತೆಯಿದೆ ಎಂದು ಹೇಳದೆ ಗತ್ಯಂತರವಿಲ್ಲ. ಆಧುನಿಕೋತ್ತರವಾದದ ಚಿಂತನೆಗಳು ಇವತ್ತಿನ ಕನ್ನಡ ಸಾಹಿತ್ಯದೊಳಕ್ಕೆ ನುಸುಳುತ್ತಿರುವ ಸಂದರ್ಭದಲ್ಲಿ ಹೊಸ ಸಾಹಿತ್ಯ ಚಳವಳಿ ರೂಪುಗೊಳ್ಳುವ ಅವಶ್ಯಕತೆಯಿದೆ.

'ಶುದ್ಧ ಸಾಹಿತ್ಯ' ಎನ್ನುವುದು ಒಂದು ಕಲಾತ್ಮಕ ಪರಿಕಲ್ಪನೆಯಾಗಿ ಅದಕ್ಕೆ ಅದರದ್ದೇ ಆದ ಚರಿತ್ರೆ ಉಂಟು. ಶುದ್ಧ ಎಂಬ ಕಲ್ಪನೆ ಹುಟ್ಟುವುದೇ ಅಶುದ್ಧತೆಯ ಎದುರಲ್ಲಿ. 'ಶುದ್ಧ ಕಲೆ', 'ಶುದ್ಧ ಸೌಂದರ್ಯ', 'ಕವಿಯ ನಿರ್ಲಿಪ್ತತೆ', 'ಲೇಖಕನ ಸೃಜನಶೀಲ ಸ್ವಾತಂತ್ರ್ಯ' ಎಂಬ ಕಲ್ಪನೆಗಳು 'ಕಲೆಗಾಗಿ ಕಲೆ' ಸಿದ್ಧಾಂತದ ಪ್ರಣಾಳಿಕೆಗಳು. ಕಲೆಗೆ ಯಾವುದೇ 'ಉದ್ದೇಶ' ಇರಬಾರದು; ಯಾವುದೇ ಉದ್ದೇಶವು ಕಲೆಯನ್ನು ವಿಕೃತಗೊಳಿಸುತ್ತದೆ; ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಉದ್ದೇಶಗಳು ಕಲೆ–ಸಾಹಿತ್ಯದ ಮೌಲ್ಯವನ್ನು ಪರಿಶುದ್ಧತೆಯನ್ನು ಹಾಳು ಮಾಡುತ್ತವೆ– ಇದು ಕಲೆಗಾಗಿ ಕಲೆ ಸಿದ್ಧಾಂತದ ತಿರುಳು. 'ಶುದ್ಧ ಸಾಹಿತ್ಯ'ದ ಕಲ್ಪನೆ ಆಳದಲ್ಲಿ ಮೆರಿಟ್ ಸಿದ್ಧಾಂತಕ್ಕೆ ಸಂವಾದಿಯಾದದ್ದು. ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ವ್ಯಸನ ಇದು. ಮೂಲತಃ ಇದು ಒಂದು ಜನವಿರೋಧಿ ಕಲ್ಪನೆ.

ದೇಶಕಾಲ ಪತ್ರಿಕೆಯ ವಿಶೇಷಾಂಕ ಕುರಿತಂತೆ ಅಂತರ್ಜಾಲದಲ್ಲಿ ಕಳೆದ ವರ್ಷ ನಡೆದ ವಾಗ್ವಾದಗಳು ಮೇಲ್ನೋಟಕ್ಕೆ ಒರಟೊರಟಾಗಿ ಕಂಡರೂ ಅವು ಆಳದಲ್ಲಿ ಒಂದು ಹೊಸ ಸಾಹಿತ್ಯ ಚಳವಳಿಯ ಹುಟ್ಟಿನ ಕತ್ತಲ ಮಿಣುಕುಗಳೆಂದು ಗ್ರಹಿಸಬೇಕಾಗುತ್ತದೆ. ಪ್ರಜಾವಾಣಿ ಹಾಗೂ ದೇಶಕಾಲ ಪತ್ರಿಕೆಗಳ ಸಹಯೋಗದಲ್ಲಿ ಹೊರಬರುತ್ತಿರುವ ಸಾಹಿತ್ಯ ಪುರವಣಿಯನ್ನು "ಶುದ್ಧ ಸಾಹಿತ್ಯದ ಭಿನ್ನ ಪ್ರಯೋಗ" ಎಂದು 'ಕರೆಯಲಾಗಿದೆ: "ಕಲಬೆರಕೆ ಇಲ್ಲದೆ ಯಾವುದನ್ನಾದರೂ ಕಾಣುವುದು ದುರ್ಲಭವಾಗಿರುವ ಈ ದಿನಗಳಲ್ಲಿ ಪರಿಶುದ್ಧ ಸಾಹಿತ್ಯವನ್ನು ಕನ್ನಡದ ಓದುಗರಿಗೆ ನೀಡುವ ಹಂಬಲ ಪ್ರಜಾವಾಣಿಯದು" [ದಿನಾಂಕ: 6.2.2011]. ಇದು ಯಾವುದೇ ಸಾಹಿತ್ಯ ಚಳವಳಿಯಾಗಲಿ ಇಸಂ ಆಗಲಿ ಇಲ್ಲದ ಸ್ಥಿತಿಯಲ್ಲಿ 'ಪರಿಶುದ್ಧ ಸಾಹಿತ್ಯ'ದ ನೆಪದಲ್ಲಿ ಆಧುನಿಕೋತ್ತರವಾದದ ಕುಲಾಂತರಿ ತಳಿಯನ್ನು ಪರೋಕ್ಷವಾಗಿ ಬಿತ್ತುವ ಹುನ್ನಾರವಾಗಿ ಕಾಣುತ್ತದೆ; ಯಾಕಂದರೆ 'ಶುದ್ಧ ಸಾಹಿತ್ಯ' ಎನ್ನುವುದು ಆಪ್ಯಾಯಮಾನವಾದ ಕೇವಲ ಒಂದು ಪದಪುಂಜವಲ್ಲ.

'ಶುದ್ಧ ಸಾಹಿತ್ಯ' ಎನ್ನುವುದು ಒಂದು ಕಲಾತ್ಮಕ ಪರಿಕಲ್ಪನೆಯಾಗಿ ಅದಕ್ಕೆ ಅದರದ್ದೇ ಆದ ಚರಿತ್ರೆ ಉಂಟು. ಶುದ್ಧ ಎಂಬ ಕಲ್ಪನೆ ಹುಟ್ಟುವುದೇ ಅಶುದ್ಧತೆಯ ಎದುರಲ್ಲಿ. 'ಶುದ್ಧ ಕಲೆ', 'ಶುದ್ಧ ಸೌಂದರ್ಯ', 'ಕವಿಯ ನಿರ್ಲಿಪ್ತತೆ', 'ಲೇಖಕನ ಸೃಜನಶೀಲ ಸ್ವಾತಂತ್ರ್ಯ' ಎಂಬ ಕಲ್ಪನೆಗಳು 'ಕಲೆಗಾಗಿ ಕಲೆ' ಸಿದ್ಧಾಂತದ ಪ್ರಣಾಳಿಕೆಗಳು. ಕಲೆಗೆ ಯಾವುದೇ 'ಉದ್ದೇಶ' ಇರಬಾರದು; ಯಾವುದೇ ಉದ್ದೇಶವು ಕಲೆಯನ್ನು ವಿಕೃತಗೊಳಿಸುತ್ತದೆ; ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಉದ್ದೇಶಗಳು ಕಲೆ–ಸಾಹಿತ್ಯದ ಮೌಲ್ಯವನ್ನು ಪರಿಶುದ್ಧತೆಯನ್ನು ಹಾಳು ಮಾಡುತ್ತವೆ– ಇದು ಕಲೆಗಾಗಿ ಕಲೆ ಸಿದ್ಧಾಂತದ ತಿರುಳು. 'ಶುದ್ಧ ಸಾಹಿತ್ಯ'ದ ಕಲ್ಪನೆ ಆಳದಲ್ಲಿ ಮೆರಿಟ್ ಸಿದ್ಧಾಂತಕ್ಕೆ ಸಂವಾದಿಯಾದದ್ದು. ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ವ್ಯಸನ ಇದು. ಮೂಲತಃ ಇದು ಒಂದು ಜನವಿರೋಧಿ ಕಲ್ಪನೆ. ಕನ್ನಡ ಸಾಹಿತ್ಯದಲ್ಲಿ ಇಂತಹ ಸಂಕರವನ್ನು 'ಕಲಬೆರಕೆ' ಯನ್ನು ಬಂಡಾಯ ಸಾಹಿತ್ಯ ಉಂಟು ಮಾಡಿರುವುದಕ್ಕೆ ಇತಿಶ್ರೀ ಹಾಡಿ ಅದರ ಜಾಗದಲ್ಲಿ 'ಪರಿಶುದ್ಧ ಸಾಹಿತ್ಯ'ವನ್ನು ನೀಡುವ/ ನಿರ್ಮಿಸುವ ಯೋಜನೆಯೊಂದನ್ನು ಪ್ರಜಾವಾಣಿ–ದೇಶಕಾಲ ಪತ್ರಿಕೆಗಳು ಜಂಟಿಯಾಗಿ ಹಾಕಿಕೊಂಡಂತಿದೆ. ಇದೊಂದು ಸಣ್ಣ ಮೊಳಕೆ. ಇದರ ಚಾಲಕ ಶಕ್ತಿ ಬಹಳ ದೊಡ್ಡದು.

ಸಾಮಾಜಿಕ–ಸಾಂಸ್ಕೃತಿಕ ದುರಂತದ ಪ್ರತಿಭಟನೆಯ ದನಿಗಳನ್ನು 'ಬಂಡಾಯದ ಗಂಟಲಲ್ಲಿ ಕವಿತೆಯ ಕೂಗು' ಎಂದು ಮೂದಲಿಸುತ್ತ, ಅಂತಹ ರಚನೆಗಳನ್ನು ಕವಿತೆಗಳು ಎನ್ನಲಾಗದು ಎಂದು ತಿರಸ್ಕರಿಸುವ ವಿಮರ್ಶೆಗಳು (ಆರ್. ಸುಧೀಂದ್ರಪ್ರಸಾದ್) ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿರುವುದಕ್ಕೂ ಶುದ್ಧ ಸಾಹಿತ್ಯ ಕಲ್ಪನೆಗೂ ಅಂತಃಸಂಬಂಧವಿದೆ. ಸಿಟ್ಟಿನ ಭಾವ ಆಕ್ರೋಶವಾಗ ಬಾರದು, ನಿಜ. ಆದರೆ ಅನ್ಯಾಯ– ಅಸಮಾನತೆಯ ದುರಂತಗಳಿಗೆ ಸಿಟ್ಟು–ವಿಷಾದ ಭಾವಗಳ ಧಾತುವಿಲ್ಲದೆ ಎಲ್ಲವನ್ನೂ ಥಣ್ಣಗೆ ಸಂತತನದಲ್ಲಿ ಕರಗಿಸಿ ತೋರಿಸಬೇಕೆ? ನವ್ಯೋತ್ತರ ವಿಮರ್ಶೆಯ ಅರ್ಥಾತ್ ಆಧುನಿಕೋತ್ತರವಾದದ ಅಸಾಂಸ್ಕೃತಿಕ ಅರಾಜಕೀಯ ನಿಲುವಿನಲ್ಲಿ ಸೂಕ್ಷ್ಮ ಕಲೆಗಾರಿಕೆಯ ನೆಪದಲ್ಲಿ ಬಂಡಾಯದ ಕಾವ್ಯಸೃಷ್ಟಿಯನ್ನು ಹೀಗೆ ದಿಕ್ಕುತಪ್ಪಿಸಿ, ಅದನ್ನು ಹೊಸಕಿಹಾಕುವ ಮಸಲತ್ತು ಇದು.

ಆಧುನಿಕೋತ್ತರವಾದ ಎನ್ನುವ ತಳಿ ಮೂಲತಃ ಪಾಶ್ಚಾತ್ಯ ನೆಲದ್ದು. ಆಧುನಿಕತೆಯ ಸರ್ವ ಸುಖ ಭೋಗಗಳನ್ನು ಅನುಭವಿಸಿದ ಸಮೃದ್ಧ ರಾಷ್ಟ್ರ [Affluent Society]ಗಳಲ್ಲಿ ಆಧುನಿಕತೆಯ ವಿರುದ್ಧವೇ ಹುಟ್ಟಿದ ತತ್ವ ಅದು. ಇದು ನಮ್ಮ ಜೈನ ಕಥೆಗಳಲ್ಲಿ ಬರುವಂತಹ ವೈಭೋಗದ ತುತ್ತ ತುದಿಯಲ್ಲಿ ವೈರಾಗ್ಯ ಮೂಡಿಬಿಡುವ ಸ್ಥಾಯೀ ಸ್ಥಿತಿಯಂತೇನಲ್ಲ. ಬದಲಿಗೆ ಅಂತಹ ವೈಭೋಗದ ಚಿರಸ್ಥಾಯೀಕರಣದ ಯೋಜನೆಯಾಗಿ ಜಾಗತೀಕರಣ ರೂಪುಗೊಂಡಿತು. ಇದನ್ನೆ "ಇತ್ತೀಚಿನ ಬಂಡವಾಳ ಶಾಹಿಯ ಸಾಂಸ್ಕೃತಿಕ ತರ್ಕಾವತಾರ" [Cultural logic of Late Capitalism] ಎಂದು ಫ್ರೆಡ್ರಿಕ್ ಜೇಮ್ಸನ್ ಕರೆಯುತ್ತಾನೆ. ಇಂತಹ ಸುಖ ಸಮೃದ್ಧಿ ಸಮಾಜದ ಅಭಿವೃದ್ಧಿ ಮಾದರಿಗಳ ಚಲಾವಣೆಗೆ ಮೂರನೆಯ ಜಗತ್ತೇ ಮಾರುಕಟ್ಟೆಯಾಯಿತು. ಭಾರತದಲ್ಲಿ ಸ್ವರ್ಗದ ಬಾಗಿಲು ತೆರೆಯುವ ಮಹಾಪ್ರಸ್ಥಾನದಂತೆ 90ರ ದಶಕದಲ್ಲಿ 'ಖೋಲ್ಜಾ ಸಿಮ್ ಸಿಮ್' ಎಂದು ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಎಂಬ ಛೂಮಂತ್ರ ಹಾಕಿದವರು ವಿಶ್ವಬ್ಯಾಂಕ್‌ನ ಮನಮೋಹನ್ ಸಿಂಗ್. ವಾಸ್ತವವಾಗಿ ಭಾರತದಲ್ಲಿ ಆಧುನಿಕತೆಯ ಅವತಾರವೇ ಇನ್ನೂ ಪರಿಪೂರ್ಣವಾಗದೆ ಇರುವಾಗಲೇ ಆಧುನಿಕೋತ್ತರವಾದದ ದಿಡ್ಡಿಬಾಗಿಲು ಇಲ್ಲಿ ತೆರೆದುಕೊಂಡಿದೆ.

ಆಧುನಿಕೋತ್ತರವಾದವು ಆಧುನಿಕತೆಯ ವಿಕಲ್ಪಗಳನ್ನು ಪ್ರಶ್ನಿಸುವ ತನ್ನ ಆರಂಭದ ಹಂತದಲ್ಲಿ ಅದರ ಬಂಡುಕೋರತನ[Avant-garde]ದಿಂದಾಗಿ ಬೌದ್ಧಿಕ

(30ನೇ ಪುಟಕ್ಕೆ)

ನವ ಉದಾರವಾದಕ್ಕೆ ಮೋದಿಗಳು ಬೇಕಾಗಿದ್ದಾರೆ

ನಾ ದಿವಾಕರ

ಅಣ್ಣಾ ಹಜಾರೆ ತಂಡದ ಭ್ರಷ್ಟಾಚಾರ ವಿರೋಧಿ ಆಂದೋಲನ ದೇಶದ ರಾಜಕೀಯ ವಲಯದಲ್ಲಿ ಹೊಸ ಸಂಚಲನವನ್ನು ಮೂಡಿಸಿರುವುದು ದಿನೇ ದಿನೇ ಸ್ಪಷ್ಟವಾಗುತ್ತಿದೆ. ಅಣ್ಣಾ ತಂಡದ ಮೂಲ ಉದ್ದೇಶ ಜನಲೋಕಪಾಲ್ ಮಸೂದೆಯನ್ನು ಜಾರಿಗೊಳಿಸುವುದೇ ಆದರೂ, ಆಂದೋಲನದ ಭರಾಟೆಯಲ್ಲಿ ಸಮಾಜದ ಎಲ್ಲ ವರ್ಗಗಳೂ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ವಾಸ್ತವ ಸಂಗತಿ. ಹಜಾರೆಯವರ ಗಾಂಧಿಗಿರಿ ಜನಲೋಕಪಾಲ್ ಮಸೂದೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಒಂದು ಸ್ಪಷ್ಟ ಆಯಾಮವನ್ನು ಒದಗಿಸಿದೆಯಾದರೂ, ಭಾರತದ ಸಾಮಾಜಿಕ-ಆರ್ಥಿಕ-ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಬೇರುಬಿಟ್ಟಿರುವ ಭ್ರಷ್ಟ ಪರಂಪರೆಯನ್ನು ಸಮಗ್ರವಾಗಿ ಪರಾಮರ್ಶಿಸುವ ಒಂದು ಮಾನದಂಡವನ್ನು ಸೃಷ್ಟಿಸಿಲ್ಲ. ಲೋಕಪಾಲ್ ಮಸೂದೆ ಮತ್ತೊಂದು ಸಾಂವಿಧಾನಿಕ ಬದ್ಧತೆಯುಳ್ಳ ಸಾಂಸ್ಥಿಕ ಸ್ವರೂಪ ಪಡೆದು ದೇಶದ ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟ ಪರಂಪರೆಗೆ ತಡೆ ಒಡ್ಡಬಹುದು. ಕಳೆದ ಆರು ದಶಕಗಳ ಸ್ವತಂತ್ರ ಭಾರತದಲ್ಲಿ ಕಾಣದಿದ್ದ ಒಂದು ನಿಯಂತ್ರಣಾ ವ್ಯವಸ್ಥೆಯನ್ನು ಈ ಮಸೂದೆಯ ಮೂಲಕ ಸಾಕಾರಗೊಳಿಸಬಹುದು.

ಆದರೆ ಈಗ ಚರ್ಚೆ ಲೋಕಪಾಲ್‌ನಿಂದ ದೂರಸರಿದಿದ್ದು ರಾಜಕೀಯ ಪಕ್ಷಗಳು ಮತ್ತು ನೇತಾರರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಭ್ರಷ್ಟಾಚಾರ ವಿರೋಧಿ ನೆಲೆಯಲ್ಲಿ ತಮ್ಮ ಅಸ್ಮಿತೆಗಳನ್ನು ಕಂಡುಕೊಳ್ಳಲು ಯತ್ನಿಸುತ್ತಿದ್ದಾರೆ. ಪ್ರಗತಿಪರ ಹೋರಾಟಗಳಿಗೆ, ಪ್ರಭುತ್ವದ ನೀತಿಯನ್ನು ಪ್ರತಿರೋಧಿಸುವ ಬಂಡಾಯ ಚಳವಳಿಗಳಿಗೆ, ಜನಪರ ಆಂದೋಲನಗಳಿಗೆ ಸೀಮಿತವಾಗಿದ್ದ ಗಾಂಧಿ ಪ್ರಣೀತ ಸತ್ಯಾಗ್ರಹ ಅಥವಾ ಉಪವಾಸ ಸತ್ಯಾಗ್ರಹ ಈಗ ರಾಜಕಾರಣಿಗಳ ಸ್ವತ್ತಾಗಿದೆ. ಭ್ರಷ್ಟಾಚಾರ ಅನಿವಾರ್ಯ ಎಂದು ಸ್ವೀಕರಿಸಲು ಸಿದ್ಧರಾಗಿದ್ದ ಮಧ್ಯಮ ವರ್ಗಗಳು ಈಗ ಅದನ್ನು ಅಸಹನೀಯ ಎಂದು ಪರಿಗಣಿಸುತ್ತಿರುವುದು ಬದಲಾದ ಸಮಾಜಿಕ-ಆರ್ಥಿಕ ಸನ್ನಿವೇಶಗಳ ದ್ಯೋತಕವಾಗಿದೆ. ಇಲ್ಲಿ ಭ್ರಷ್ಟಾಚಾರವನ್ನು ಸಾಂಸ್ಥಿಕ ನೆಲೆಗಟ್ಟಿನಲ್ಲಿ ಮಾತ್ರ ವಿಶ್ಲೇಷಿಸಲಾಗುತ್ತಿರುವುದನ್ನು ಗಮನಿಸದೆ ಹೋದಲ್ಲಿ ಒಂದು ನಿರ್ದಿಷ್ಟ ಆಯಾಮವನ್ನು ಕಂಡುಕೊಳ್ಳುವುದು ಕಷ್ಟವಾದೀತು.

ವ್ಯವಸ್ಥೆ-ರಾಜಕಾರಣ-ಆಡಳಿತಾವಸ್ಥೆ

ಪ್ರಭುತ್ವ ಮತ್ತು ಸರ್ಕಾರಗಳ ನಡುವಿನ ಸೂಕ್ಷ್ಮ ಸಂಬಂಧಗಳು ಮತ್ತು ವ್ಯತ್ಯಾಸಗಳನ್ನು ಈ ಸಂದರ್ಭದಲ್ಲಿ ಕೂಲಂಕುಷವಾಗಿ ಪರಾಮರ್ಶಿಸುವುದು ಅಗತ್ಯ. ಹಜಾರೆ ಆಂದೋಲನ ಮೂಲಭೂತವಾಗಿ ಒಂದು ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ಹಾಗು ಪ್ರಭುತ್ವದ ಮೂಲ ಆಶಯಗಳನ್ನು ಸಮರ್ಥಿಸುತ್ತಾ ಹೋಗುವ ಆಳುವ ಸರ್ಕಾರದ ವಿರುದ್ಧ ಹೂಡಿದ ಪ್ರತಿರೋಧದ ಛಾಯೆ ಮಾತ್ರ. ಹಾಗಾಗಿ ಭಾರತದ ಸಾಮಾಜಿಕ-ರಾಜಕೀಯ ವ್ಯವಸ್ಥೆಗೆ ಯಾವುದೇ ಭಂಗ ಉಂಟುಮಾಡದೆ ಪ್ರಭುತ್ವ ತನ್ನ ಮೂಲ ಲಕ್ಷಣಗಳನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದೆ. ಇದರ ನೇರ ಪರಿಣಾಮವನ್ನು ಅದ್ವಾನಿಯವರ ರಥಯಾತ್ರೆ ಮತ್ತು ನರೇಂದ್ರ ಮೋದಿಯ ಸದ್ಭಾವನಾ ಉಪವಾಸ ಸತ್ಯಾಗ್ರಹದಲ್ಲಿ ಕಾಣಬಹುದು. ಹಜಾರೆ ಸೃಷ್ಟಿಸಿರುವ ಭ್ರಮಾಲೋಕದಲ್ಲಿ ಇನ್ನು ಎಲ್ಲ ರಾಜಕಾರಣಿಗಳೂ ವಿಹರಿಸಲು ಯತ್ನಿಸುತ್ತಾರೆ. ತಮ್ಮ ರಾಜಕೀಯ ಪ್ರತಿಷ್ಠೆ ಮತ್ತು ಜನಬೆಂಬಲವನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬರೂ ಗಾಂಧಿ ಪ್ರಣೀತ ಉಪವಾಸ ಸತ್ಯಾಗ್ರಹದಲ್ಲಿ ತೊಡಗುತ್ತಾರೆ.

ಈ ಅಂಶವನ್ನು ನರೇಂದ್ರ ಮೋದಿಯವರಲ್ಲಿ ಹಠಾತ್ತನೆ ಮೂಡಿರುವ ಸದ್ಭಾವನೆಯಲ್ಲಿ ಕಾಣಬಹುದು. ಜಾಗತೀಕರಣದ ಪೂಜಾರಿಗಳಿಗೆ, ನವ ಉದಾರವಾದದ ಪೋಷಕರಿಗೆ ಮೋದಿ-ನಿತೀಶ್ ಕುಮಾರ್, ಎಸ್.ಎಂ. ಕೃಷ್ಣ, ಚಂದ್ರಬಾಬುನಾಯ್ಡು ಇವರೆಲ್ಲರೂ ಅಪ್ಯಾಯಮಾನವಾಗಿ ಕಾಣುತ್ತಾರೆ. ಇವರ ಆರ್ಥಿಕ ನೀತಿಗಳು ಕಾರ್ಪೊರೇಟ್ ಔದ್ಯಮಿಕ ಹಿತಾಸಕ್ತಿಗಳನ್ನು ಕಾಪಾಡುತ್ತಲೇ ನವ ಉದಾರವಾದವನ್ನು ಪೋಷಿಸುತ್ತಾ, ಜನತೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಿರುತ್ತವೆ. ರಸ್ತೆ, ಬೀದಿದೀಪ, ನೀರು ಹೀಗೆ ಮೂಲಭೂತ ಅವಶ್ಯಕತೆಯನ್ನು ಪೂರೈಸುವ ಸರ್ಕಾರದ ಈ ಹೊತ್ತಿನ ನೀತಿಗಳು ಜನರ ಗಮನ ಸೆಳೆಯುತ್ತವೆ. ರಾಜ್ಯ-ದೇಶದ ಅಭಿವೃದ್ಧಿ ಸೂಚ್ಯಂಕ ಎರಡಂಕಿ ದಾಟುವುದೇ ಅಭಿವೃದ್ಧಿಯ ಸಂಕೇತವಾಗುತ್ತದೆ. ಆದರೆ ಈ ಅಭಿವೃದ್ಧಿ ಪಥದ ದೀರ್ಘಕಾಲಿಕ ಪರಿಣಾಮಗಳನ್ನು ಕುರಿತು ವಿಶ್ಲೇಷಣೆಯೇ ನಡೆಯುವುದಿಲ್ಲ. ಇದರಲ್ಲಿ ವಿದ್ಯುನ್ಮಾನ-ಮುದ್ರಣ ಮಾಧ್ಯಮಗಳ ಚಾಣಾಕ್ಷತನವೂ ಸಹಾಯಕವಾಗಿರುತ್ತದೆ. ಜಾಗತೀಕರಣ ನೀತಿಗನುಗುಣವಾಗಿ ಕೈಗೊಳ್ಳುವ ಯೋಜನೆಗಳ ಆರ್ಥಿಕ ವೆಚ್ಚಗಳನ್ನು ಪರಿಗಣಿಸಲಾಗುವುದೇ ಹೊರತು ಸಾಮಾಜಿಕ ಬಾಧಕಗಳನ್ನಾಗಲೀ, ದೀರ್ಘಕಾಲಿಕ ಅಪಾಯಗಳನ್ನಾಗಲೀ ಪರಿಗಣಿಸುವುದಿಲ್ಲ. ಹಾಗಾಗಿ ಮೋದಿ ಪ್ರಣೀತ ನೀತಿಗಳು ಅನುಕರಣೀಯವಾಗುತ್ತವೆ.

ಹಜಾರೆ ಹೋರಾಟದ ವೈಭವೀಕರಣದಲ್ಲಿ ಮೋದೀಕರಣವನ್ನು ಮರೆಸುವ ಮಾಧ್ಯಮಗಳ ನಿರಂತರ ಕಸರತ್ತು ಮೋದಿಯವರನ್ನು 2014ರ ಚುನಾವಣೆಯತ್ತ ಗಮನಹರಿಸುವಂತೆ ಮಾಡಿರುವುದು ಅಚ್ಚರಿಯೇನಲ್ಲ. ಹಾಗಾಗಿ ಒಂಭತ್ತು ವರ್ಷಗಳ ನಂತರ ಮೋದಿಗೆ ದಂಗೆಯಲ್ಲಿ ಮಡಿದವರ ಬಗ್ಗೆ ಸಾಂತ್ವನ ಮೂಡಿದೆ. ಈ ಸಾಂತ್ವನ ವ್ಯಕ್ತಪಡಿಸಲು ಕಳೆದ ಒಂಭತ್ತು ವರ್ಷಗಳ ಆಳ್ವಿಕೆಯಲ್ಲಿ ಗುಜರಾತ್‌ನಲ್ಲಿ ಮೋದಿ ಅನುಸರಿಸಿರುವ ಆರ್ಥಿಕ ನೀತಿಗಳು ರಕ್ಷಣಾ ಗೋಡೆಗಳಾಗಿ ಪರಿಣಮಿಸಿವೆ. ಇಲ್ಲಿ 2002ರ ದಂಗೆಗಳಿಗೆ ಮೋದಿಯೇ ಕಾರಣಕರ್ತರು ಎಂದು ಹೇಳಲಾಗುವುದಿಲ್ಲವಾದರೂ, ಒಂದು ರಾಜ್ಯದ ಮುಖ್ಯಮಂತ್ರಿಯಾಗಿ 3000 ಅಮಾಯಕ ಜನರ ಮಾರಣ ಹೋಮ

ಹಜಾರೆ ಆಂದೋಲನ ಮೂಲಭೂತವಾಗಿ ಒಂದು ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ಹಾಗು ಪ್ರಭುತ್ವದ ಮೂಲ ಆಶಯಗಳನ್ನು ಸಮರ್ಥಿಸುತ್ತಾ ಹೋಗುವ ಆಳುವ ಸರ್ಕಾರದ ವಿರುದ್ಧ ಹೂಡಿದ ಪ್ರತಿರೋಧದ ಛಾಯೆ ಮಾತ್ರ. ಹಾಗಾಗಿ ಭಾರತದ ಸಾಮಾಜಿಕ-ರಾಜಕೀಯ ವ್ಯವಸ್ಥೆಗೆ ಯಾವುದೇ ಭಂಗ ಉಂಟುಮಾಡದೆ ಪ್ರಭುತ್ವ ತನ್ನ ಮೂಲ ಲಕ್ಷಣಗಳನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಿದೆ. ಇದರ ನೇರ ಪರಿಣಾಮವನ್ನು ಅದ್ವಾನಿಯವರ ರಥಯಾತ್ರೆ ಮತ್ತು ನರೇಂದ್ರ ಮೋದಿಯ ಸದ್ಭಾವನಾ ಉಪವಾಸ ಸತ್ಯಾಗ್ರಹದಲ್ಲಿ ಕಾಣಬಹುದು. ಹಜಾರೆ ಸೃಷ್ಟಿಸಿರುವ ಭ್ರಮಾಲೋಕದಲ್ಲಿ ಇನ್ನು ಎಲ್ಲ ರಾಜಕಾರಣಿಗಳೂ ವಿಹರಿಸಲು ಯತ್ನಿಸುತ್ತಾರೆ.

ವನ್ನು ಕ್ರಿಯೆ-ಪ್ರತಿಕ್ರಿಯೆ ಸಿದ್ಧಾಂತದಡಿಯಲ್ಲಿ ಸಮರ್ಥಿಸಿದ ಒಬ್ಬ ಜನಪ್ರತಿನಿಧಿಯಾಗಿ ಮೋದಿ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾರೆ. ಈಗ ಮೋದಿ ವ್ಯಕ್ತಪಡಿಸುವ ಪಶ್ಚಾತ್ತಾಪ-ಸಾಂತ್ವನಗಳು ಮತ್ತೊಂದು ರೀತಿಯ ವೋಟ್ ಬ್ಯಾಂಕ್ ರಾಜಕಾರಣವಾಗಬಹುಷ್ಟೆ. ಅವರ ಸಭೆಗಳಲ್ಲಿ ಕೆಲವು ಮೇಲ್ವರ್ಗದ ಮುಸ್ಲಿಂ ಸಮುದಾಯ ಭಾಗವಹಿಸಿದ ಮಾತ್ರಕ್ಕೆ ಮೋದಿಯವರ ಸೌಹಾರ್ದತೆ ವ್ಯಕ್ತವಾಗುವುದಿಲ್ಲ. ಕೋಮುಗಲಭೆಗಳಲ್ಲಿ ಹೆಚ್ಚಿನ ಸಾವು ನೋವುಗಳನ್ನು ಅನುಭವಿಸುವುದು ಸಮಾಜದ ಕೆಳವರ್ಗದ ಶ್ರಮಜೀವಿಗಳೇ ಎಂಬುದನ್ನು ಇತಿಹಾಸವೇ ನಿರೂಪಿಸಿದೆ. ಹಾಗಾಗಿ ಮೋದಿ ಸಭೆಗಳಲ್ಲಿ ಕಾಣುವ ಶ್ವೇತವಸ್ತ್ರಧಾರಿ ಮಧ್ಯಮ ವರ್ಗದ ಮುಸ್ಲಿಮರು, ಮೋದಿಗೆ ಸೌಹಾರ್ದತೆಯ ಪ್ರಮಾಣಪತ್ರ ನೀಡುವ ಹಕ್ಕು ಹೊಂದಿರುವುದಿಲ್ಲ. ಆದರೆ ನವ ಉದಾರವಾದದ ಫಲಾನುಭವಿಗಳಾಗಿರುವ ಈ ವರ್ಗಗಳು ಮೋದಿಯವರ ಹೊಸ ಆರ್ಥಿಕ ನೀತಿಗಳಿಗೆ ಶರಣಾಗಿರುವುದು ಮಾತ್ರ ಸ್ಪಷ್ಟವಾಗಿ ಕಾಣುತ್ತದೆ.

ಮೋದಿ ಮಾದರಿಯ ಅಗತ್ಯತೆ

ಹಜಾರೆ ಆಂದೋಲನ, ಲೋಕಪಾಲ್ ಮಸೂದೆಗಾಗಿ ಆಗ್ರಹ, ಅದ್ವಾನಿ ರಥಯಾತ್ರೆ ಮತ್ತು ಮೋದಿ ಪ್ರಹಸನ ಇವೆಲ್ಲವನ್ನೂ 2014ರ ಚುನಾವಣೆಯ ದೃಷ್ಟಿಯಿಂದಲೇ ನೋಡುವುದಕ್ಕಿಂತ, ನವ ಉದಾರವಾಧ ಸೃಷ್ಟಿಸಿರುವ ಜಾಗತೀಕರಣ ನೀತಿಗಳ ಪುಷ್ಟೀಕರಣವಾಗಿ ನೋಡುವುದು ಒಳಿತು. ಇಂದು ಭಾರತದಲ್ಲಿ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರ ಶತಮಾನಗಳಿಂದಲೇ ಬಂದ ಬಳುವಳಿಯಾದರೂ, ನವ ಉದಾರವಾದಿ ನೀತಿಗಳು, ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸೃಷ್ಟಿಸಿರುವ ಕೆಲವು ವಿದ್ಯಮಾನಗಳ ಪರಿಣಾಮವಾಗಿ ಭ್ರಷ್ಟಾಚಾರ ವ್ಯವಸ್ಥೆಯ ಒಂದು ಅಂಶಿಕ ಭಾಗವಾಗಿ ರೂಪುಗೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹಜಾರೆ ಆಂದೋಲನದ ಮೂಲ ಬೇಡಿಕೆಯಾದ ಸಾಂಸ್ಥಿಕ ಲೋಕಪಾಲ್ ಮಸೂದೆ ಆಡಳಿತಾವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಗಟ್ಟಬಹುದೇ ಹೊರತು, ಮೂಲ ವ್ಯವಸ್ಥೆಯಲ್ಲಿನ ಭ್ರಷ್ಟ ಪರಂಪರೆಯನ್ನು ಲೆಕ್ಕಿಸುವುದೂ ಇಲ್ಲ. ಅದ್ವಾನಿ-ಮೋದಿಯವರ ಪ್ರಯತ್ನಗಳೂ ಇದೇ ನಿಟ್ಟಿನಲ್ಲಿವೆ.

ಈ ನಿಟ್ಟಿನಲ್ಲಿ ಮೂರೂ ವಿದ್ಯಮಾನಗಳ ನಡುವಿನ ಸಾಮ್ಯತೆಯನ್ನು ಗುರುತಿಸಬೇಕಾಗಿದೆ. ಹಜಾರೆ ಆಂದೋಲನ ಎಷ್ಟೇ ಜನಬೆಂಬಲ ಗಳಿಸಿದ್ದರೂ, ಅದು ಪ್ರಭುತ್ವ ಅಥವಾ ವ್ಯವಸ್ಥೆಯ ವಿರುದ್ಧವಾದ ಒಂದು ಆಂದೋಲನವಾಗಿ ರೂಪುಗೊಳ್ಳಲಿಲ್ಲ. ಕೇಂದ್ರ-ರಾಜ್ಯಗಳಲ್ಲಿ ಪ್ರಾತಿನಿಧಿಕ ಸರ್ಕಾರ ನಡೆಸುವ ಆಳ್ವಿಕರ ಇವತ್ತಿನ ಭ್ರಷ್ಟತೆಯ ವಿರುದ್ಧ ಮಾತ್ರ ದನಿ ಎತ್ತಲಾಗಿದೆ. ಇದು ಭಾರತದ ಪ್ರಭುತ್ವವನ್ನು ಪ್ರತಿನಿಧಿಸುವ ಆಳುವ ವರ್ಗಗಳಿಗೆ ವರದಾನವಿದ್ದಂತೆ. ಹಾಗಾಗಿಯೇ ಪ್ರಭುತ್ವ-ವ್ಯವಸ್ಥೆಯ ಸಮರ್ಥಕರಾದ ಕಾರ್ಪೋರೇಟ್ ಔದ್ಯಮಿಕ ಹಿತಾಸಕ್ತಿಗಳು ಮೋದಿಯವರನ್ನು ಭವಿಷ್ಯದ ರಾಷ್ಟ್ರೀಯ ನಾಯಕರನ್ನಾಗಿ ಬಿಂಬಿಸಲು ತಮ್ಮ ಮಾಧ್ಯಮಗಳ ಮೂಲಕ ಪ್ರಯತ್ನಿಸುತ್ತಿವೆ. ಕಾರಣ, ಉದಾರವಾದಿ ನೀತಿಗಳ ರಕ್ಷಣೆಗೆ ಮೋದಿ ಅಗತ್ಯವಾಗಿ ಬೇಕಾಗುತ್ತಾರೆ. ಜಾಗತೀಕರಣದ ಹಣಕಾಸು ಬಂಡವಾಳ ದೇಶದ ಶ್ರಮಿಕ ವರ್ಗಗಳ ಮೇಲೆ, ನೈಸರ್ಗಿಕ ಸಂಪನ್ಮೂಲಗಳ ಮೇಲೆ ತಮ್ಮ ಆಧಿಪತ್ಯ ಸಾಧಿಸಬೇಕಾದರೆ ಮೇಲ್ನೋಟಕ್ಕೆ ಸ್ವಚ್ಛ ಸರ್ಕಾರ ನೀಡುವ ಉದಾರವಾದದ ಪೋಷಕರು ಬೇಕಾಗುತ್ತಾರೆ. ಈ

ಹಜಾರೆ ಆಂದೋಲನ, ಲೋಕಪಾಲ್ ಮಸೂದೆಗಾಗಿ ಆಗ್ರಹ, ಅದ್ವಾನಿ ರಥ ಯಾತ್ರೆ ಮತ್ತು ಮೋದಿ ಪ್ರಹಸನ ಇವೆಲ್ಲವನ್ನೂ 2014ರ ಚುನಾವಣೆಯ ದೃಷ್ಟಿಯಿಂದಲೇ ನೋಡುವುದಕ್ಕಿಂತ, ನವ ಉದಾರವಾದ ಸೃಷ್ಟಿಸಿರುವ ಜಾಗತೀಕರಣ ನೀತಿಗಳ ಪುಷ್ಟೀಕರಣವಾಗಿ ನೋಡುವುದು ಒಳಿತು. ಇಂದು ಭಾರತದಲ್ಲಿ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರ ಶತಮಾನಗಳಿಂದಲೇ ಬಂದ ಬಳುವಳಿಯಾದರೂ, ನವ ಉದಾರವಾದಿ ನೀತಿಗಳು, ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸೃಷ್ಟಿಸಿರುವ ಕೆಲವು ವಿದ್ಯಮಾನಗಳ ಪರಿಣಾಮವಾಗಿ ಭ್ರಷ್ಟಾಚಾರ ವ್ಯವಸ್ಥೆಯ ಒಂದು ಅಂಶಿಕ ಭಾಗವಾಗಿ ರೂಪುಗೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹಜಾರೆ ಆಂದೋಲನದ ಮೂಲ ಬೇಡಿಕೆಯಾದ ಸಾಂಸ್ಥಿಕ ಲೋಕಪಾಲ್ ಮಸೂದೆ ಆಡಳಿತಾವಸ್ಥೆಯಲ್ಲಿನ ಲೋಪದೋಷಗಳನ್ನು ಸರಿ ಗಟ್ಟಬಹುದೇ ಹೊರತು, ಮೂಲ ವ್ಯವಸ್ಥೆಯಲ್ಲಿನ ಭ್ರಷ್ಟ ಪರಂಪರೆಯನ್ನು ಲೆಕ್ಕಿಸುವುದೂ ಇಲ್ಲ. ಅದ್ವಾನಿ-ಮೋದಿಯವರ ಪ್ರಯತ್ನಗಳೂ ಇದೇ ನಿಟ್ಟಿನಲ್ಲಿವೆ.

ಚಾಣಾಕ್ಷತನ ಮನಮೋಹನ್ ಸಿಂಗ್ ಅವರಿಗಿಂತಲೂ ಮೋದಿಯವರಲ್ಲಿ ಸ್ಪಷ್ಟವಾಗಿ ಕಾಣಬಹುದು.

ಹಾಗಾಗಿ ಕೋಮುವಾದ, ಮತೀಯವಾದ ಮತ್ತು ಕೋಮುದ್ವೇಷಗಳೆಲ್ಲವೂ ನೇಪಥ್ಯಕ್ಕೆ ಸರಿದು, ಎರಡಂಕಿಯ ಅಭಿವೃದ್ಧಿ ಸೂಚ್ಯಂಕವೇ ಪ್ರಧಾನವಾಗಿ ಕಾಣುತ್ತದೆ. ಲೋಕಪಾಲ್ ಮಸೂದೆ ಜಾರಿಯಾದಲ್ಲಿ ಮಧ್ಯಮ ವರ್ಗಗಳನ್ನು ಬಾಧಿಸುವ ಲಂಚಗುಳಿತನ ಕೊನೆಗಾಣಬಹುದು. ಆದರೆ ಕಾರ್ಪೋರೇಟ್ ಉದ್ಯಮಿಗಳಿಂದ ದೇಶದ ನೈಸರ್ಗಿಕ ಸಂಪತ್ತಿನ ಲೂಟಿ ನಿಲ್ಲುವುದು ಅಸಾಧ್ಯ. ಇಂದಿನ ಪೀಳಿಗೆಗೆ ಒದಗಿಬರುವ ದೈನಂದಿನ ಮೂಲಭೂತ ಅವಶ್ಯಕತೆಗಳೆಲ್ಲವೂ ಮುಂದಿನ ಪೀಳಿಗೆಗೆ ಅಲಭ್ಯವಾಗಬಹುದಾದ ಅಪಾಯವನ್ನು ಗ್ರಹಿಸದೆ ಹೋದರೆ ಮೋದಿಯ ಮಾದರಿ ದೇಶಕ್ಕೆ ಮಾರಕವಾಗು ವುದಂತೂ ಕಟ್ಟಿಟ್ಟ ಬುತ್ತಿ. ಹಾಗಾಗಿಯೇ ಹಜಾರೆಯವರೂ ಸಹ ಉದಾರವಾದಿ ನೀತಿಗಳ ಬಗ್ಗೆ ಒಮ್ಮೆಯೂ ಪ್ರಸ್ತಾಪಿಸುವುದಿಲ್ಲ. ಲಕ್ಷಾಂತರ ರೈತರ ಆತ್ಮಹತ್ಯೆ, ಸಾವಿರಾರು ಅಮಾಯಕರ ಮಾರಣಹೋಮ, ಅಣು ಸ್ಥಾವರ, ಉಷ್ಣ ವಿದ್ಯುತ್ ಸ್ಥಾವರ, ಗಣಿಗಾರಿಕೆಗಳ ಹೆಸರಿನಲ್ಲಿ ಮಿತ್ತಲ್, ವೇದಾಂತ, ಪೋಸ್ಕೋಗಳು ಸೃಷ್ಟಿಸುವ ಅಪಾಯಕಾರಿ ಸನ್ನಿವೇಶಗಳು ಮೋದಿ, ಅದ್ವಾನಿ, ಹಜಾರೆ, ಬೇಡಿಗಳನ್ನು ಬಾಧಿಸುವುದೂ ಇಲ್ಲ.

ಮೋದೀಕರಣದ ಕಸರತ್ತು

ಆಧುನಿಕ ಬಂಡವಾಳ ವ್ಯವಸ್ಥೆ ಮತ್ತು ನವ ಉದಾರವಾದ ಪೋಷಿಸುವ ಕಾರ್ಪೋರೇಟ್ ಆಳ್ವಿಕೆಗೆ ಪೂರಕವಾಗಿ ಆಡಳಿತ ನಡೆಸುವುದು ಇಂದಿನ ರಾಜಕೀಯ ಪಕ್ಷಗಳಿಗೆ ಅತ್ಯವಶ್ಯ. ಪಕ್ಷ ಯಾವುದೇ ಇರಲಿ, ಬಂಡವಾಳ ಕ್ರೋಢೀಕರಣ ಮತ್ತು ಹಣಕಾಸು ಬಂಡವಾಳದ ಮುಕ್ತ ಹರಿವು, ಇವೆರಡೇ ಅಭಿವೃದ್ಧಿಯ ಮಾನದಂಡಗಳಾಗುತ್ತವೆ. ಹಾಗಾಗಿ ಜಿಡಿಪಿ ಅಭಿವೃದ್ಧಿಯನ್ನೇ ಸರ್ಕಾರದ ಸಾಧನೆಯ ಪ್ರಮುಖ ಮಾನದಂಡವನ್ನಾಗಿ ಪರಿಗಣಿಸಲಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನರೇಂದ್ರ ಮೋದಿ ಗುಜರಾತ್‌ನಲ್ಲಿ ಅಪ್ರತಿಮ ಸಾಧನೆಗೈದಿದ್ದಾರೆ. ಗುಜರಾತ್‌ನ ಜಿಡಿಪಿ ಶೇ. 11ಕ್ಕಿಂತಲೂ ಹೆಚ್ಚಾಗಿದೆ. ಇದು ರಾಷ್ಟ್ರದಲ್ಲೇ ಪ್ರಥಮ ಎಂದೂ ಹೇಳಬಹುದು. ಉದಾರವಾದಿ ನೀತಿಗಳನ್ನೇ ಅನುಸರಿಸಿದರೂ ಮೋದಿ ಜನಸಾಮಾನ್ಯರ ದೈನಂದಿನ ಅವಶ್ಯಕತೆಗಳಿಗೂ ಹೆಚ್ಚು ಒತ್ತು ನೀಡಿದ್ದಾರೆ. ಗ್ರಾಮೀಣ ಅಭಿವೃದ್ಧಿ, ಕೃಷಿ, ನೀರಾವರಿ, ಉತ್ಪಾದನಾ ಕ್ಷೇತ್ರ, ಕೈಗಾರಿಕೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮೋದಿ ಗಣನೀಯ ಸಾಧನೆ ಮಾಡಿದ್ದಾರೆ.

ಈ ಸಾಧನೆಯ ಹಿಂದಿನ ನವ ಉದಾರವಾದದ ಅಪಾಯಗಳು ಸಾಮಾನ್ಯವಾಗಿ ಅಗೋಚರವಾಗಿಯೇ ಉಳಿಯುತ್ತವೆ. ಯಾವುದೇ ಒಂದು ಸಮಾಜದಲ್ಲಿ ಮಧ್ಯಮ ವರ್ಗಗಳನ್ನು ಸಂತುಷ್ಟಗೊಳಿಸುವ ಸಮಾಜೋ-ಆರ್ಥಿಕ ನೀತಿಗಳು ಜನತೆಗೆ ಪ್ರಿಯವಾಗಿ ಕಾಣುತ್ತವೆ. ಇಂದಿರಾಗಾಂಧಿ ಇದೇ ನೀತಿಯನ್ನು ಅನುಸರಿಸುತ್ತಿದ್ದುದನ್ನು ಇಲ್ಲಿ ಗಮನಿಸಬಹುದು. ಕಾರಣ ಮಧ್ಯಮ ವರ್ಗಗಳು ಜನಾಭಿಪ್ರಾಯವನ್ನು ತಯಾರು ಮಾಡುವ ಸಾಮರ್ಥ್ಯ ಚಾಣಾಕ್ಷ್ಯತೆ ಹೊಂದಿರುತ್ತವೆ. ಮೋದಿ ಸಹ ಇದೇ ತಂತ್ರಗಾರಿಕೆಯನ್ನು ಅನುಸರಿಸಿದ್ದಾರೆ. ಹಾಗಾಗಿ 2002ರಲ್ಲಿ ಜನತೆಯ ದುಷ್ಮನ್ ಆಗಿದ್ದ ಮೋದಿ ಈಗ ದೋಸ್ತ್ ಆಗಿ ಕಾಣತೊಡಗಿದ್ದಾರೆ. ತಮ್ಮ ಜನಸ್ನೇಹಿ ನೀತಿಗಳ ಮೂಲಕ ಹತ್ಯಾಕಾಂಡದ ಕಹಿನೆನಪುಗಳನ್ನು ಅಳಿಸಿಹಾಕುವುದರಲ್ಲಿ ಮೋದಿ ಬಹುಪಾಲು ಯಶಸ್ವಿಯಾಗಿದ್ದಾರೆ. ಮತ್ತೊಂದು ಮಹತ್ತರವಾದ ಅಂಶವೆಂದರೆ ಅನ್ಯ ರಾಜ್ಯಗಳು ಸಾಧಿಸಲಾರದ್ದನ್ನು ಮೋದಿ ಸಾಧಿಸಿದ್ದಾರೆ. ಅದು ಆರ್ಥಿಕ ಪ್ರಗತಿಯಲ್ಲಿರಬಹುದು, ಔದ್ಯಮಿಕ ಪ್ರಗತಿಯಲ್ಲಿರಬಹುದು. ಇದು ಶ್ಲಾಘನೀಯವೂ ಹೌದು. ಆದರೆ,,,,

ನೊಂದ ಜೀವಿಗಳ ಅಳಲು

2002ರ ಹತ್ಯಾಕಾಂಡದ ಮೂಲ ಕಾರಣಗಳೇನೇ ಇರಲಿ, ತಪ್ಪಿತಸ್ಥರು ಯಾರೇ ಆಗಿರಲಿ ಇಂತಹ ಒಂದು ದುರ್ಘಟನೆಯ ಬಗ್ಗೆ ಪಶ್ಚಾತ್ತಾಪದ ನುಡಿಗಳನ್ನಾಡಲು 9 ವರ್ಷಗಳು ಬೇಕಾಗಿತ್ತೇ? ಈ ಪ್ರಶ್ನೆಗೆ ಮೋದಿ ಉತ್ತರಿಸಬೇಕಿದೆ. ಮೋದಿಯವರ ಉಪವಾಸ ಸತ್ಯಾಗ್ರಹ ಪ್ರಾಯಶ್ಚಿತ್ತ ನಿಮಿತ್ತವೋ ಅಥವಾ ಅಪರಾಧಿ ಪ್ರಜ್ಞೆಯನ್ನು ತೊಡೆದುಹಾಕುವ ಪ್ರಯತ್ನವೋ ಹೇಳಲಾಗುವುದಿಲ್ಲ. ಆದರೂ ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ಉಪವಾಸ ಸತ್ಯಾಗ್ರಹ ಮಾಡುವ ಮೋದಿಯ ಶೈಲಿ ಬೆಂಕಿಯಲ್ಲಿ ಬೆಂದವರ ಮನಗಳನ್ನು ತಣಿಸಲಾರದು. ಇದರ ಒಂದು ಛಾಯೆಯನ್ನು ಹರೇನ್ ಪಾಂಡ್ಯ ಮತ್ತು ಕಾಂಗ್ರೆಸ್

ಸಂಸದೆ ಜಾಫ್ರಿಯವರ ಪತ್ನಿಯವರ ಪ್ರತಿ ರೋಧದಲ್ಲಿ ಕಾಣಬಹುದು. ಖ್ಯಾತ ನರ್ತಕಿ ಮಲ್ಲಿಕಾ ಸಾರಾಭಾಯಿ ಮೋದಿಯ ಸತ್ಯಾಗ್ರಹವನ್ನು ಪ್ರತಿಭಟಿಸಿ ಹತ್ಯಾಕಾಂಡದಲ್ಲಿ ನೊಂದ ಜನತೆಗೆ ಸಾಂತ್ವನ ಹೇಳಲು ಹೊರಟಿದ್ದು ನಾಟಕೀಯ ಎನಿಸಿದರೂ, ಅಪ್ರಸ್ತುತ ಎನಿಸುವುದಿಲ್ಲ.

ಏಕೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ಇತಿಹಾಸದ ಕಪ್ಪುಚುಕ್ಕೆಗಳನ್ನು ಮರೆಮಾಚಲಾಗುವುದಿಲ್ಲ. ಅಷ್ಟಕ್ಕೂ ದೇಶದ ಯಾವುದೇ ನ್ಯಾಯಾಲಯ ಮೋದಿಯನ್ನು ನಿರಪರಾಧಿ ಎಂದು ಹೇಳಿಲ್ಲ. ಇಲ್ಲಿ ಮೋದೀಕರಣದ ಸೂಕ್ಷ್ಮ ತರಂಗಳ ವಿಶ್ಲೇಷಣೆ ಅಗತ್ಯವಿಲ್ಲವಾದರೂ, ಜಾಗತೀಕರಣದ ವಕ್ತಾರರು, ವಿಶೇಷವಾಗಿ ಕಾರ್ಪೊರೇಟ್ ಉದ್ಯಮಿಗಳು ಕಳೆದ ಎರಡು ದಶಕಗಳಿಂದಲೂ ಮೋದಿಯವರನ್ನು ಮತ್ತು ಗುಜರಾತ್ ರಾಜ್ಯವನ್ನು ತಮ್ಮ ಚಿಮ್ಮುಹಲಗೆಯನ್ನಾಗಿ ಮಾಡಿಕೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಇದರ ನೇರ ಪರಿಣಾಮವನ್ನು ಈಗ ನಾವು ಮಾಧ್ಯಮಗಳಲ್ಲಿ ಕಾಣುತ್ತಿರುವ ಮೋದಿ ವೈಭವೀಕರಣದಲ್ಲಿ ಕಾಣಬಹುದು. ಎಲ್ಲೋ ಒಂದುಕಡೆ ವ್ಯವಸ್ಥೆಯ ಮೂಲ ಚೌಕಟ್ಟನ್ನು ರಕ್ಷಿಸುತ್ತಲೇ ಜನಸಾಮಾನ್ಯರಿಗೆ ಒಂದು ಸ್ವಚ್ಛ ಪರಿಸರದ ಭ್ರಮಾಲೋಕವನ್ನು ನಿರ್ಮಿಸುವ ಹುನ್ನಾರವನ್ನು ಈ ವಿದ್ಯಮಾನದಲ್ಲಿ ಕಾಣಬಹುದು. ಅಮೆರಿಕದ ಹಲವು ಸಂಸ್ಥೆಗಳೂ ಸಹ ಮೋದಿಯ ಆರ್ಥಿಕ ನೀತಿಗಳಿಗೆ ತಲೆಬಾಗಿರುವುದು ಮೋದೀಕರಣದ ಪ್ರಭಾವದ ಪ್ರತೀಕವಾಗಿ ಕಾಣುತ್ತದೆ.

ಆದರೆ ಮೋದಿಯ ಈ ರಾಜಕೀಯ ತಂತ್ರಗಳು ಬಿಜೆಪಿಯಲ್ಲೇ ಅಂತರಿಕ ಕಲಹ ಉಂಟುಮಾಡುತ್ತಿರುವುದು ಮತ್ತಷ್ಟು ಕುತೂಹಲ ಕೆರಳಿಸಿದೆ. ಒಂದು ಕಾಲದಲ್ಲಿ ಬಿಜೆಪಿ ಉತ್ತರ ಭಾರತದಲ್ಲಿ ನೆಲೆಯೂರುತ್ತಿದ್ದಾಗ, ರಾಮಜನ್ಮಭೂಮಿಯ ಉದ್ವೇಗ ಮತ್ತು ಅತ್ಯುತ್ಸಾಹದ ನಡುವೆಯೂ ಪ್ರಾದೇಶಿಕ ಮಟ್ಟದಲ್ಲಿ ಕಚರಿಸ್ಮಾ ಇರುವ ಕೆಲವು ನಾಯಕರು ಪಕ್ಷಕ್ಕೆ ಅಗತ್ಯವಾಗಿ ಬೇಕಾಗಿದ್ದರು. ಉಮಾಭಾರತಿ, ಯಡಿಯೂರಪ್ಪ, ರಮೇಶ್ ಪೋಕ್ರಿಯಾಲ್, ನರೇಂದ್ರ ಮೋದಿ, ಕಲ್ಯಾಣ್ ಸಿಂಗ್ ಇವರಲ್ಲಿ ಪ್ರಮುಖರು. ವಿಪರ್ಯಾಸವೆಂದರೆ ಈ ಎಲ್ಲ ನಾಯಕರನ್ನೂ ಪಕ್ಷದಲ್ಲಿ ಅಪಾಯಕಾರಿ ಎಂದೇ ಪರಿಗಣಿಸಲಾಗುತ್ತಿದೆ. ಕಾರಣ, ಈ ನಾಯಕರಿಗೆ ತಮ್ಮ ರಾಜ್ಯಗಳಲ್ಲಿ ಅಪಾರ ಜನಬೆಂಬಲ ಇದೆ ಮತ್ತು ಇವರು ಕೇಂದ್ರ ನಾಯಕತ್ವಕ್ಕೆ ಸವಾಲೆಸೆಯುವ ಸಾಮರ್ಥ್ಯ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಅತ್ಯಂತ ಪ್ರಭಾವಿ ನಾಯಕರಾಗಿ ಹೊರಹೊಮ್ಮಿರುವವರೆಂದರೆ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ.

ನರೇಂದ್ರ ಮೋದಿಗೆ ಗುಜರಾತ್ ಎಷ್ಟು ಮಹತ್ವಪೂರ್ಣವೋ ಅದ್ವಾನಿಗೂ ಅಷ್ಟೇ ಮಹತ್ವವಾದದ್ದು. ಏಕೆಂದರೆ ಅದ್ವಾನಿಯವರ ಲೋಕಸಭಾ ಕ್ಷೇತ್ರ ಗಾಂಧಿನಗರ ಇರುವುದು ಗುಜರಾತಿನಲ್ಲೇ. 2002ರ ಗೋದ್ರಾ ಘಟನೆ ಮತ್ತು ನಂತರದ ಸಾಮೂಹಿಕ ಹತ್ಯಾಕಾಂಡ ಸಂಭವಿಸಿದಾಗ ಪ್ರಧಾನಮಂತ್ರಿಯಾಗಿದ್ದ ವಾಜಪೇಯಿ ತಮ್ಮದೇ ಆದ ಮೃದು ಶೈಲಿಯಲ್ಲಿ ಮೋದಿಯ ಸಮರ್ಥನೆಗೆ ನಿಂತಿದ್ದರು. ಆದರೆ ಆಗ ಕೇಂದ್ರ ಗೃಹಮಂತ್ರಿಯಾಗಿದ್ದ ಅದ್ವಾನಿ ಮೋದಿಗೆ ತಮ್ಮ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದರು. ಕ್ರಿಯೆ-ಪ್ರತಿಕ್ರಿಯೆ ಸಿದ್ಧಾಂತವನ್ನೂ ಮೀರಿ ಮೋದಿ ಸರ್ಕಾರದ ಕ್ರಮಗಳನ್ನು ಅದ್ವಾನಿ ಸ್ವಾಗತಿಸಿದ್ದೂ ಹೌದು. ಈ ಇಬ್ಬರು ನಾಯಕರ ಸಂಬಂಧಗಳನ್ನು ನಿಯಂತ್ರಿಸುತ್ತಿದ್ದುದು ಸಂಘಪರಿವಾರ ಎಂದು ಹೇಳಬೇಕಿಲ್ಲ. ಅಯೋಧ್ಯೆಯಿಂದ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಅದ್ವಾನಿಗೂ, ಗೋದ್ರಾದ ಮೂಲಕ ಗುಜರಾತ್‌ನಲ್ಲಿ ಪಕ್ಷವನ್ನು ಸದೃಢಗೊಳಿಸಿದ ಮೋದಿಗೂ ಸಂಘಪರಿವಾರ ಋಣಿಯಾಗಿತ್ತು.

ಆದರೆ ಈ ಈಕ್ವೇಷನ್ಸ್ ಈಗ ಹಠಾತ್ತನೆ ಬದಲಾಗಿದೆ. ಇತ್ತೀಚೆಗೆ ನರೇಂದ್ರ ಮೋದಿ ಕೈಗೊಂಡ ಸದ್ಭಾವನಾ ಉಪವಾಸ ಸತ್ಯಾಗ್ರಹ ಬಿಜೆಪಿಯಲ್ಲಿನ ಆಂತರಿಕ ಕಲಹವನ್ನು ಬಯಲು ಮಾಡಿದೆ. ಒಂದು ಕಾಲದಲ್ಲಿ ಬಿಜೆಪಿನಾಯಕರು ತಮ್ಮ ಹಿಂದುತ್ವ ಸಿದ್ಧಾಂತಕ್ಕೆ ಜೋತುಬೀಳಲು ಹರಸಾಹಸ ಮಾಡುತ್ತಿದ್ದರು. ಅಯೋಧ್ಯಾ ಕಾಂಡ ಸೃಷ್ಟಿಸಿದ ಹಿಂದೂ ವೋಟ್ ಬ್ಯಾಂಕುಗಳು ಇದಕ್ಕೆ ಪ್ರೇರಣೆಯಾಗಿತ್ತು. ಕಾಂಗ್ರೆಸ್‌ನ ಖೋಟಾ ಸೆಕ್ಯುಲರಿಸಂ ವಿರುದ್ಧ ತಮ್ಮದೇ ಆದ ರಾಷ್ಟ್ರವಾದಿ ಸೆಕ್ಯುಲರಿಸಂ ಬಿಜೆಪಿ ನಾಯಕರಿಗೆ ಅಪ್ಯಾಯ ಮಾನವಾಗಿತ್ತು. ಆದರೆ ವಾಜಪೇಯಿಯಂತಹ ಮೃದು ಹಿಂದುತ್ವದ ಮುಖವಾಡವೂ ಪಕ್ಷಕ್ಕೆ ಅಧಿಕಾರ ತಂದುಕೊಡಲು ವಿಫಲವಾದಾಗ ಬಿಜೆಪಿ ನಾಯಕರಿಗೆ ತಮ್ಮ ಸೆಕ್ಯುಲರ್ ಮುಖವಾಡಗಳನ್ನು ಬದಲಾಯಿಸಿಕೊಳ್ಳು ವುದು ಅನಿವಾರ್ಯವಾಗಿತ್ತು. ಇದರ ನೇರ ಪರಿಣಾಮವೇ ಅದ್ವಾನಿಯವರ ಜಿನ್ನಾ ಪ್ರಹಸನ. ಈ ಘಟನೆಯ ನಂತರ ಸಂಘಪರಿವಾರದ ಅವಕೃಪೆಗೆ ಪಾತ್ರರಾದ ಅದ್ವಾನಿ ಬಿಜೆಪಿಯಲ್ಲಿ ಎಷ್ಟೇ ಉನ್ನತ ನಾಯಕರಾಗಿದ್ದರೂ ಸಂಘಪರಿವಾರಕ್ಕೆ ಬೇಡವಾಗಿರುವುದು ಸ್ಪಷ್ಟ. ಈ ಹಿನ್ನೆಲೆಯಲ್ಲೇ ಇತ್ತೀಚೆಗೆ ನರೇಂದ್ರ ಮೋದಿ ಕೈಗೊಂಡ ಸದ್ಭಾ ವನಾ ಉಪವಾಸ ಸತ್ಯಾಗ್ರಹ ಪಕ್ಷದಲ್ಲಿ ಅಂತರಿಕ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ.

ಮೋದಿ ಸದ್ಭಾವನಾ ಸತ್ಯಾಗ್ರಹವನ್ನು ನಡೆಸಿದ್ದು ಮತ್ತು ಬೃಹತ್ ಸಮಾವೇಶವನ್ನು ಏರ್ಪಡಿಸುತ್ತಿರುವುದು 2002ರ ಹತ್ಯಾಕಾಂಡದ ಕಪ್ಪುಚುಕ್ಕೆಗಳನ್ನು ತೊಡೆದುಹಾಕುವ ಉದ್ದೇಶದಿಂದಲೇ ಆದರೂ ಮೋದಿಯ ಮೂಲ ಉದ್ದೇಶ ಪಕ್ಷದಲ್ಲಿ ನಾಯಕತ್ವದಲ್ಲಿ ಸೃಷ್ಟಿಯಾಗಿದ್ದ ಶೂನ್ಯವನ್ನು ತುಂಬುವುದೂ ಆಗಿತ್ತು. 2014ರ ಚುನಾವಣೆಗಳಲ್ಲಿ ಬಿಜೆಪಿಯಿಂದ ಪ್ರಧಾನಮಂತ್ರಿ ಅಭ್ಯರ್ಥಿ ಯಾರೆಂದು ಈವರೆಗೂ ನಿರ್ಧಾರವಾಗಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯುನ್ಮಾನ ಮಾಧ್ಯಮಗಳ ಪ್ರಭಾವದಿಂದ, ಈ ಸ್ಥಾನಕ್ಕೆ ಮೋದಿಯೇ ಸೂಕ್ತ ಅಭ್ಯರ್ಥಿ ಎಂಬ ಅಭಿಪ್ರಾಯ ದಟ್ಟವಾಗುತ್ತಿದೆ. ಕಾರಣ ಗುಜರಾತ್‌ನಲ್ಲಿ ಕಳೆದ ಒಂಬತ್ತು ವರ್ಷಗಳಲ್ಲಿ ಸಮರ್ಪಕ ಆಡಳಿತ ನೀಡಿರುವುದು ಮತ್ತು ದೇಶದ ರಾಜ್ಯಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು. ಮೋದಿಯ ಸದ್ಭಾವನಾ ಸತ್ಯಾಗ್ರಹಕ್ಕೆ ಪೂರ್ಣ ಬೆಂಬಲ ನೀಡಿ ಹುರಿದುಂಬಿಸಿದ ಅದ್ವಾನಿ ಈಗ ಹಠಾತ್ತನೆ ಗುಜರಾತ್‌ನಿಂದಲೇ ದೂರಸರಿದಿರುವುದು ಈ ಕಾರಣಕ್ಕೇ ಎಂದು ಹೇಳಬೇಕಿಲ್ಲ.

ರಥಚಕ್ರಕ್ಕೆ ಅಡ್ಡಗಲ್ಲು

ಇಬ್ಬರು ದಿಗ್ಗಜರ ಈ ಹಗ್ಗಾಟ ಜಗ್ಗಾಟ ಈಗ ಭಾಜಪ ಪಾಳಯದಲ್ಲಿ ಬಿರುಕು ಮೂಡಿಸುವ ಹಂತ ತಲುಪಿದೆ. ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಮೂಡಿಸಿರುವ ಉತ್ಸಾಹ ಮತ್ತು ಸಂಚಲನದ ರಾಜಕೀಯ ಲಾಭ ಪಡೆಯಲು ಅದ್ವಾನಿ ಮತ್ತೊಮ್ಮೆ ರಥಯಾತ್ರೆ ಆರಂಭಿಸುತ್ತಿದ್ದಾರೆ. ಯಾತ್ರಾ ಸ್ಪೆಷಲಿಸ್ಟ್ ಅದ್ವಾನಿ ಈ ಬಾರಿ ತಮ್ಮ ಯಾತ್ರೆಗೆ ಆಯ್ದುಕೊಂಡಿರುವ ವಿಷಯ ಭ್ರಷ್ಟಾಚಾರ. ರಾಮಮಂದಿರ, ಗೋಮಾತೆ, ಪ್ರಕಾಶಿಸುವ ಭಾರತ ಇವೆಲ್ಲವೂ ವಿಫಲವಾದ ಮೇಲೆ ಅದ್ವಾನಿಯವರ ಸುವರ್ಣ ರಥ ಭ್ರಷ್ಟಾಚಾರದ ವಿರುದ್ಧ ರಣಕಹಳೆ ಮೊಳಗಿಸುತ್ತಾ ಸಾಗಲು ಸಿದ್ಧವಾಗುತ್ತಿದೆ. ಆದರೆ ಎಂದಿನಂತೆ ಅದ್ವಾನಿ ತಮ್ಮ ರಥಯಾತ್ರೆಯನ್ನು ಸೋಮನಾಥ ದೇವಾಲಯದಿಂದ ಆರಂಭಿಸುತ್ತಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ಪ್ರಪ್ರಥಮ ಬಾರಿಗೆ ಅದ್ವಾನಿ ತಮ್ಮ ಪ್ರಥಮ ಸೋಪಾನವಾದ ಸೋಮನಾಥ ರಥಯಾತ್ರೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸುತ್ತಿಲ್ಲ. ಹಾಗಾಗಿ ಸೋಮನಾಥ್‌ಗೆ ಭೇಟಿ ನೀಡುತ್ತಲೂ ಇಲ್ಲ. ಇದು ಸೋಮನಾಥನ ಮೇಲಿನ ಕೋಪದಿಂದಲ್ಲ, ಮೋದಿಯ ಮೇಲಿನ ಮತ್ಸರದಿಂದ!

ಮೋದಿಗೆ ಕಸಿವಿಸಿ ಉಂಟುಮಾಡಲೆಂದೇ ತಮ್ಮ ರಥಯಾತ್ರೆಯನ್ನು ಬಿಹಾರದಿಂದ ಆರಂಭಿಸುತ್ತಿದ್ದು, ಕಳೆದ ಚುನಾವಣೆಗಳಲ್ಲಿ ಮೋದಿ ಭೇಟಿಯನ್ನು ವಿರೋಧಿಸಿದ್ದ ನಿತೀಶ್ ಕುಮಾರ್ ಸಾನಿಧ್ಯದಲ್ಲಿ ರಥಯಾತ್ರೆ ಆರಂಭಿಸಿದ್ದಾರೆ. ಅಕ್ಟೋಬರ್ 11ರಂದು ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನದಂದು ಅವರ ಜನ್ಮಸ್ಥಾನವಾದ ಸಿತಾಬ್ದಿಯಾರಾ ಗ್ರಾಮದಿಂದ ತಮ್ಮ ರಥಯಾತ್ರೆಯನ್ನು ಕೈಗೊಂಡ ಅದ್ವಾನಿ ಆರಂಭೋತ್ಸವವನ್ನು ನಿತೀಶ್ ಕುಮಾರ್‌ಗೆ ವಹಿಸಿದ್ದು ಮೋದಿಯನ್ನು ಸ್ವಾಭಾವಿಕವಾಗಿಯೇ ಕೆರಳಿಸಿದೆ. ಮೋದಿಯೊಡನೆ ನಿಕಟ ಸಂಪರ್ಕ ಹೊಂದುವುದೇ ತಮ್ಮ ಸೆಕ್ಯುಲರ್ ವರ್ಚಸ್ಸಿಗೆ ಧಕ್ಕೆ ತರುತ್ತದೆ ಎಂಬ ಭಾವನೆ ನಿತೀಶ್ ಕುಮಾರ್ ಮಾತ್ರವಲ್ಲದೆ ಬಿಜೆಪಿಯ ಎಲ್ಲ ಮಿತ್ರಪಕ್ಷಗಳಲ್ಲೂ ಇದೆ. ಹಾಗಾಗಿಯೇ ಮೋದಿಯ ಸದ್ಭಾವನಾ ಸತ್ಯಾಗ್ರಹದ ಸಂದರ್ಭದಲ್ಲೂ ಮೋದಿಯ ರಾಷ್ಟ್ರನಾಯಕನಾಗುವ ಪ್ರಯತ್ನವನ್ನು ಜೆಡಿಯು ಸದಸ್ಯರು ಪರೋಕ್ಷವಾಗಿ ಖಂಡಿಸಿದ್ದರು. ಶತ್ರುವಿನ ಶತ್ರು ಮಿತ್ರ ಎಂಬ ಗಾದೆ ಮಾತಿನಂತೆ ನಿತೀಶ್ ಅದ್ವಾನಿಯ ರಥಯಾತ್ರೆಗೆ ಬೆಂಬಲಿಸುವ ಮೂಲಕ ತಮ್ಮ ವೋಟ್ ಬ್ಯಾಂಕಿಗೆ ಘಾಸಿ ಮಾಡುವ ಸಾಧ್ಯತೆಗಳನ್ನೂ ತಳ್ಳಿಹಾಕಲಾಗುವುದಿಲ್ಲ.

ಏತನ್ಮಧ್ಯೆ ಮೋದಿಯನ್ನು ಕಾಡುತ್ತಿರುವ ಪ್ರಶ್ನೆ ಎಂದರೆ ಅದ್ವಾನಿಯ ಬದಲಾದ ನಿರ್ಧಾರಗಳು.



ಮೊದಲು ರಥಯಾತ್ರೆಯನ್ನು ಸಾಬರಮತಿ ಅಥವಾ ಸರ್ದಾರ್ ಪಟೇಲರ ಜನ್ಮಸ್ಥಳದಿಂದ ಮೋದಿಯ ಮೂಲಕವೇ ಆರಂಭಿಸುವ ಅದ್ವಾನಿ, ಸದ್ಭಾವನಾ ಕಾರ್ಯಕ್ರಮ ಮುಗಿದ ಕೂಡಲೇ ನಿರ್ಧಾರ ಬದಲಿಸಿದ್ದು 'ರಾಜಕೀಯ ಕಾರಣಗಳಿಗಾಗಿ ಎಂಬ ಸಂಗತಿ ಮೋದಿಯನ್ನು ಬಲವಾಗಿ ಕಾಡಿರಬೇಕು. ಹಾಗಾಗಿಯೇ ಮೋದಿಯ ಬೆಂಗಾವಲಾಗಿ ನಿಂತಿರುವ ಸಂಘಪರಿವಾರ ಕೂಡಲೇ ಅದ್ವಾನಿಯನ್ನು ನಾಗಪುರಕ್ಕೆ ಕರೆಯಿಸಿ, ತಾವು ಪ್ರಧಾನಿ ಅಭ್ಯರ್ಥಿಯಲ್ಲ ಎಂದು ಹೇಳುವಂತೆ ಒತ್ತಾಯಿಸಿತ್ತು. ಆದರೆ ಅದ್ವಾನಿ ಗಿಣಿಪಾಠ ಒಪ್ಪಿಸದೆ, ತಾವು ಪ್ರಧಾನಿಯಾಗುವುದಕ್ಕಿಂತಲೂ ಸಂಘಪರಿವಾರದ ಕಾರ್ಯಕರ್ತನಾಗಿ ಹೆಚ್ಚು ಜನಬೆಂಬಲ ಗಳಿಸಿದ್ದೇನೆ ಎಂದು ಹೇಳುವ ಮೂಲಕ ತಮ್ಮ ಮನದಾಳದ ಇಂಗಿತವನ್ನು ಸ್ಪಷ್ಟಪಡಿಸಿದ್ದರು. ಮೋದಿಯನ್ನು ಪ್ರಧಾನಿ ಅಭ್ಯರ್ಥಿ ಎಂದು ಸಂಘಪರಿವಾರ ಘೋಷಿಸದೆ ಇದ್ದರೂ, ಹಿಂದುತ್ವದ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಮೋದಿ ಪ್ರಬಲ ಅಭ್ಯರ್ಥಿಯಾಗಿ ನಿಲ್ಲುವುದಂತೂ ಸತ್ಯ.

ಜಟಿಲ ಪ್ರಶ್ನೆಗಳು

ಇಲ್ಲಿ ಪ್ರಶ್ನೆ ಉದ್ಭವಿಸುವುದು ಮತ್ತದೇ ಸೆಕ್ಯುಲರ್–ಹಿಂದುತ್ವ ನಡುವಿನ ಸಂಘರ್ಷ. ಮೊದಲು ಸೆಕ್ಯುಲರ್ ಎಂದರೆ ಕಾಂಗ್ರೆಸ್ ಹಿಂದುತ್ವ ಎಂದರೆ ಬಿಜೆಪಿ ಎಂದಿತ್ತು. ಈಗ ಬಿಜೆಪಿಯಲ್ಲೇ ಈ ಎರಡು ಬಣಗಳು ಸೃಷ್ಟಿಯಾಗಿವೆ. ಮೋದಿಯನ್ನು ಎಷ್ಟೇ ವೈಭವೀಕರಿಸಿದರೂ ಅರುಣ್ ಜೈಟ್ಲಿ, ಸುಷ್ಮಾ ಸ್ವರಾಜ್ ಮುಂತಾದವರು ಇಂದಿಗೂ ಅದ್ವಾನಿಯ ಹಿಂಬಾಲಕರೇ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಉಭಯ ಸದನಗಳ ನಾಯಕರಾಗಿರುವ ಈ ಇಬ್ಬರ ನಿರ್ಧಾರ ಪಕ್ಷದಲ್ಲಿ ತನ್ನದೇ ಆದ ಪ್ರಭಾವ ಬೀರುತ್ತದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗೆ ಮೋದಿ ಗೈರುಹಾಜರಾಗಿದ್ದ ಸಂದರ್ಭದಲ್ಲೂ ಮೋದಿಗಾಗಿ ಪರಿತಪಿಸುವವರು ಯಾರೂ ಇರಲಿಲ್ಲ. ಯಶ್ವಂತ್ ಸಿನ್ಹಾ, ಶತ್ರುಘ್ನ ಸಿನ್ಹಾ ಮುಂತಾದವರು, ಬಿಜೆಪಿಯಲ್ಲಿ ಪ್ರಧಾನಿ ಪಟ್ಟಕ್ಕೆ ಅರ್ಹರಾದವರು ಹಲವು ಪ್ರಾದೇಶಿಕ ನಾಯಕರಿದ್ದಾರೆ ಎಂದು ಹೇಳುವ ಮೂಲಕ ಮೋದಿಯನ್ನು ಮೂಲೆಗುಂಪುಮಾಡುವ ಪ್ರಯತ್ನ ಮಾಡಿದ್ದನ್ನು ಇಲ್ಲಿ ಗಮನಿಸಬೇಕು.

ಈ ಭಿನ್ನಾಭಿಪ್ರಾಯಗಳೇ ಬಿಜೆಪಿಗೆ ಕಂಟಕಪ್ರಾಯವಾಗಿದೆ. 2014ರ ಚುನಾವಣೆಯ ಪ್ರಣಾಳಿಕೆಯ ಮೂಲಮಂತ್ರ ಹಿಂದುತ್ವವೋ ಭ್ರಷ್ಟಾಚಾರವೋ ಅಭಿವೃದ್ಧಿಯೋ ಎಂಬ ಜಿಜ್ಞಾಸೆಯೇ ಪಕ್ಷದ ತಳಮಳಕ್ಕೂ ಕಾರಣವಾಗಿದೆ. ತನ್ನ ಸ್ವಂತಬಲದ ಮೇಲೆ ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಸಾಮರ್ಥ್ಯವೇ ಇಲ್ಲದ ಬಿಜೆಪಿಗೆ ಮಿತ್ರಪಕ್ಷಗಳಿಲ್ಲದೆ ರಾಜಕೀಯ ಭವಿಷ್ಯವೇ ಇಲ್ಲ. ಹೀಗಿರುವಾಗ ಮೋದಿಯನ್ನು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸಿದಲ್ಲಿ ಬಹುಶಃ ಅಕಾಲಿದಳ ಹೊರತುಪಡಿಸಿ ಮತ್ತೆಲ್ಲಾ ಮಿತ್ರರನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅದ್ವಾನಿಯನ್ನೇ ಪ್ರಧಾನಿಯಾಗಿ ಬಿಂಬಿಸಿದರೆ ಪಕ್ಷದಲ್ಲಿ ಎರಡು ಬಣಗಳಾಗುವುದೂ ಖಚಿತ ಎನ್ನಲಾಗುತ್ತಿದೆ. ಏಕೆಂದರೆ ಅದ್ವಾನಿ ಸಂಘಪರಿವಾರಕ್ಕೆ ಬೇಡವಾಗಿದ್ದಾರೆ. 2014ರ ವೇಳೆಗೆ 87 ವರ್ಷ ಪೂರೈಸಲಿರುವ ಅದ್ವಾನಿಯನ್ನು ಪ್ರಧಾನಿಯಾಗಿ ಬಿಂಬಿಸುವುದು ಯುವ ಸಮುದಾಯದ ದೃಷ್ಟಿಯಿಂದ ಒಳಿತಲ್ಲ ಎನ್ನುವುದು ಒಂದು ಅಭಿಪ್ರಾಯವಾದರೆ, ಅಯೋಧ್ಯಾಕಾಂಡದ ಅವಧಿಯಲ್ಲಿ ಅದ್ವಾನಿಯವರಲ್ಲಿದ್ದ ಜೋಶ್ ಈಗ ಉಳಿದಿಲ್ಲ ಎನ್ನುವುದು ಮತ್ತೊಂದು ಅಭಿಪ್ರಾಯ.

ಮತ್ತೊಂದೆಡೆ ಮೋದಿಯ ಬಗ್ಗೆ ಇರುವ ಅನುಮಾನಗಳೂ ಪಕ್ಷವನ್ನು ಕಾಡುತ್ತಿವೆ. ಗುಜರಾತ್‌ನಲ್ಲಿ ಏನೇ ಅಭಿವೃದ್ಧಿ ಸಾಧಿಸಿದ್ದರೂ ಮೋದಿಗೆ ರಾಷ್ಟ್ರಮಟ್ಟದ ನಾಯಕನಾಗುವ ಅರ್ಹತೆಗಳೇ ಇಲ್ಲ ಎಂಬ ಅಭಿಪ್ರಾಯ ಪಕ್ಷದಲ್ಲಿ ದಟ್ಟವಾಗಿದೆ. ಹಾಗಾಗಿಯೇ ಸಂಘಪರಿವಾರವು ಮೋದಿಯನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಲು ಹಿಂಜರಿಯುತ್ತಿದೆ. ಪಕ್ಷದ ಪ್ರಭಾವಶಾಲಿ ನಾಯಕರಾದ ಅರುಣ್ ಜೈಟ್ಲಿ, ಸುಷ್ಮಾ ಸ್ವರಾಜ್, ಯಶವಂತ್ ಸಿನ್ಹಾ ಇವರಾರೂ ಮೋದಿ ಪರವಾಗಿ ನಿಲ್ಲದಿರುವುದೂ ಸಂಘಪರಿವಾರಕ್ಕೆ ತಲೆಬೇನೆಯಾಗಿದೆ. ಏನೇ ಆದರೂ ಮೋದಿ ತಮ್ಮ ಆಕಾಂಕ್ಷೆಯಿಂದ ಹಿಂದೆ ಸರಿದಿಲ್ಲ. ಇತ್ತ ಅದ್ವಾನಿಯೂ ತಮ್ಮ ಅಧಿಕಾರ ವ್ಯಾಮೋಹ ತೊರೆದಿಲ್ಲ. ಈ ಎರಡು ಮದಗಜಗಳ ಕಾದಾಟದಲ್ಲಿ ಬಿಜೆಪಿ ಹುಲ್ಲುಕಡ್ಡಿಯಂತೆ ಕಾಲಡಿಗೆ ಸಿಕ್ಕಿ ನಲುಗಿ ಹೋದರೂ ಹೆಚ್ಚೇನಿಲ್ಲ. ಮೋದಿ–ಅದ್ವಾನಿಯ ಜಟಾಪಟಿ ಹೇಗೆ ಮುಕ್ತಾಯ ಕಾಣುವುದೋ ಕಾದು ನೋಡಬೇಕು.

ಉದಾರವಾದ–ಜಾಗತೀಕರಣ ಏನೇ ಆಗಲಿ, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಭಿಪ್ರಾಯವೇ ಅಂತಿಮ. ಕಳೆದ ಹತ್ತು ವರ್ಷಗಳಲ್ಲಿ ಮೋದಿ ಗುಜರಾತ್‌ನ ಜನತೆಯ ಮನ ಹೃದಯಗಳನ್ನು ಗೆದ್ದಿದ್ದಾರೆ. ಇದು ಅವರ ಚುನಾವಣೆಯ ವಿಜಯದಲ್ಲಿ ವ್ಯಕ್ತವಾದಂತೆಯೇ ಸತ್ಯಾಗ್ರಹದ ಸಂದರ್ಭದಲ್ಲೂ ವ್ಯಕ್ತವಾಗಿದೆ. ಆಡಳಿತ ಸೂಕ್ಷ್ಮಗಳ ಮತ್ತು ಆರ್ಥಿಕ ನೀತಿಗಳ ಸೈದ್ಧಾಂತಿಕ ಸೂಕ್ಷ್ಮತೆಗಳನ್ನು ಬದಿಗಿಟ್ಟು ನೋಡಿದಾಗ ಮೋದಿ ಒಬ್ಬ ಜನಾನುರಾಗಿ ಮುಖ್ಯಮಂತ್ರಿಯಾಗಿ ಕಾಣುವುದು ಸಹಜ. ಮಾಧ್ಯಮಗಳು ಈ ಅಂಶವನ್ನೇ ವೈಭವೀಕರಿಸುತ್ತಿರುವುದೂ ಅಷ್ಟೇ ಸತ್ಯ. ಆದರೆ ಕಣ್ಣಿಗೆ ಕಾಣುವುದಷ್ಟೇ ಸತ್ಯವಲ್ಲ. ಸಮಾಜಿಕ–ಆರ್ಥಿಕ ಅಭಿವೃದ್ಧಿಯ ಸೂಚ್ಯಂಕಗಳು ಇತಿಹಾಸದ ಕಹಿ ನೆನಪುಗಳನ್ನು ಅಳಿಸಿಹಾಕುವುದು ಸಾಧ್ಯವಿಲ್ಲ. ಮೋದಿ ರಾಷ್ಟ್ರನಾಯಕರಾಗಿ ಹೊರಹೊಮ್ಮುತ್ತಾರೆಯೋ ಇಲ್ಲವೋ ಅದನ್ನು ಜನತೆಯೇ ನಿರ್ಧರಿಸಲಿದ್ದಾರೆ. ಆದರೆ ಭಾರತದ ಕಾರ್ಪೊರೇಟ್ ಶಕ್ತಿಗಳಿಗೆ ಇಂದು ಮೋದಿ ಅತ್ಯಗತ್ಯವಾಗಿ ಬೇಕಾಗಿದ್ದಾರೆ. ನವಉದಾರವಾದದ ಅಂತಃಸತ್ವವೂ ಇದರಲ್ಲೇ ಅಡಗಿದೆ. □

ಕೋಮುವಾದಿ ಹಿಂಸೆಯನ್ನು ತಡೆಗಟ್ಟುವ ಮಸೂದೆ

(23ನೇ ಪುಟದಿಂದ)

ವನ್ನು ರಾಷ್ಟ್ರವನ್ನು ಒಂದು ಘಟಕವನ್ನಾಗಿಟ್ಟುಕೊಂಡೇ ಘೋಷಿಸಬೇಕು.

2. ಈ ಮಸೂದೆಯೊಳಗಡೆ ಭಾಷಾ ಅಲ್ಪಸಂಖ್ಯಾತರ ಮತ್ತು ಎಸ್ಸಿಎಸ್ಟಿ ರಕ್ಷಣೆಯನ್ನು ಸೇರಿಸಲಾಗಿದೆ. ಈಗಾಗಲೇ ಎಸ್ಸಿಎಸ್ಟಿ ರಕ್ಷಣೆಗಾಗಿ 1989ರ ಕಾಯಿದೆ ಇದೆ. ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸುವ ಬಗ್ಗೆ ಯೋಚಿಸಬೇಕೇ ವಿನಃ ಈ ಮಸೂದೆಯಲ್ಲಿ ಅದನ್ನು ಸೇರಿಸುವ ಅಗತ್ಯವಿಲ್ಲ. ಅದರಂತೆ ಭಾಷಾ ಅಲ್ಪಸಂಖ್ಯಾತರ ಆತಂಕ ಧಾರ್ಮಿಕ ಅಲ್ಪಸಂಖ್ಯಾತರ ಆತಂಕ ಮತ್ತು ಭೀತಿಗಳಿಗಿಂತ ಭಿನ್ನವಾದದ್ದು. ಆದ್ದರಿಂದ ಈ ಮಸೂದೆಯನ್ನು ಕೇವಲ ಕೋಮುವಾದಿ ಹಿಂಸಾಚಾರದ ನಿಗ್ರಹಕ್ಕೆ ಸೀಮಿತಗೊಳಿಸಿಕೊಳ್ಳುವುದೇ ಒಳಿತು.

3. ಮೇಲಧಿಕಾರಿಯ ಜವಾಬ್ದಾರಿಯನ್ನು ನಿಗದಿಪಡಿಸುವುದು ಸೂಕ್ತವಾಗಿದೆ. ಆದರೆ ರಾಜ್ಯಮಟ್ಟದಲ್ಲಿ ವ್ಯಾಪಕ ಹಿಂಸಾಚಾರ ನಡೆಯುತ್ತಿರುವಾಗ–ಗುಜರಾತ್‌ನಲ್ಲಿ ಆದಂತೆ–ಅದರ ಜವಾಬ್ದಾರಿ ರಾಜ್ಯಮಟ್ಟದಲ್ಲಿ ಕಾರ್ಯಾಂಗದ ಮುಖ್ಯಸ್ಥನಾಗಿರುವ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಯದ್ದಾಗಿರಬೇಕು. ಅದರ ಬಗ್ಗೆ ಮಸೂದೆಯಲ್ಲಿ ಸ್ಪಷ್ಟತೆ ಇಲ್ಲ.

4. ರಾಷ್ಟ್ರೀಯ ಪ್ರಾಧಿಕಾರ ಮತ್ತೊಂದು ಹಲ್ಲಿಲ್ಲದ ಹಾವು. ಅದನ್ನು ಅನಾಮತ್ತು ಮಾನವಹಕ್ಕು ಆಯೋಗದ ನಿಯಮಾವಳಿಯ ನಕಲಿನಂತೆ ರಚಿಸಲಾಗಿದೆ. ಅದಕ್ಕೆ ಹೆಚ್ಚಿಗೆ ಅಧಿಕಾರವನ್ನು ಕೊಡಬೇಕು. ಮತ್ತು ಅದರ ಆಯ್ಕೆಯಲ್ಲಿ ನಾಗರಿಕ ಸಮಾಜದ ಪಾತ್ರವನ್ನು ಖಾತರಿಗೊಳಿಸಬೇಕು.

5. ಎಲ್ಲಕಿಂತ ಹೆಚ್ಚಾಗಿ ಈ ಪರಿಷ್ಕೃತ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಇಡುವ ಮುನ್ನ ಈ ದೇಶದ ಜನರ ನಡುವೆ ಅದರಲ್ಲೂ ಕೋಮುವಾದದಿಂದ ಸಂತ್ರಸ್ತರಾದ ಜನರ ನಡುವೆ ವಿಸ್ತೃತವಾದ ಚರ್ಚೆಗೆ ಕೊಡೊಯ್ಯಬೇಕು.

ಸಾರಾಂಶದಲ್ಲಿ ಈ ಮಸೂದೆ ಮೂಲಭೂತವಾಗಿ ಕೆಲವು ಉತ್ತಮ ಅಂಶಗಳನ್ನು ಒಳಗೊಂಡಿದ್ದು ಕೋಮುವಾದಿ ಹಿಂಸಾಚಾರವನ್ನು ನಿಗ್ರಹಿಸಲು ಈಗಾಗಲೇ ಇದ್ದ ಕಾನೂನುಗಳಿಗಿಂತಲೂ ಹೆಚ್ಚಿಗೆ ಸಹಕಾರಿಯಾಗಿದೆ. ಆದ್ದರಿಂದ ಈ ಮಸೂದೆ ಜಾರಿಗೆ ಬರಲೇಬೇಕು. ಆದರೆ ಈ ಮಸೂದೆಯ ಈಗಿರುವ ಸ್ವರೂಪದಲ್ಲಿ ಕೆಲವು ಗಂಭೀರ ಅಪ್ರಜಾತಾಂತ್ರಿಕ ಅಂಶಗಳನ್ನು ಹೊಂದಿದೆ. ಅವುಗಳನ್ನು ಕೂಡಲೇ ಕೈಬಿಡಬೇಕು. ಹಾಗೂ ಕೆಲವು ಪ್ರಮುಖ ಅಸ್ಪಷ್ಟತೆ ಮತ್ತು ಗೊಂದಲಗಳನ್ನು ಹೊಂದಿದೆ ಅವುಗಳನ್ನು ಬಗೆಹರಿಸಬೇಕು. ಆ ತಿದ್ದುಪಡಿಗಳಿಲ್ಲದೆ ಈ ಮಸೂದೆ ಜಾರಿಯಾದರೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುವ ಸಾಧ್ಯತೆ ಇದೆ.. ಆದ್ದರಿಂದ ಪ್ರಮುಖ ತಿದ್ದುಪಡಿಗಳೊಂದಿಗೆ ಈ ಮಸೂದೆಯ ಜಾರಿಗಾಗಿ ಹೋರಾಡುವುದು ಸೂಕ್ತ.

ಆದರೆ ಈ ಯಾವುದೇ ಕಾಯಿದೆಗಳು ಸಮಾಜವನ್ನು ಮತ್ತು ಪ್ರಭುತ್ವವನ್ನು ಪ್ರಜಾತಂತ್ರಗೊಳಿಸದೆ ಪರಿಣಾಮಕಾರಿಯಾಗುವುದಿಲ್ಲ. ಮತ್ತು ಅಂಥಾ ಹೋರಾಟಗಳಿಗೆ ಪರ್ಯಾಯವೂ ಆಗುವುದಿಲ್ಲ ಎಂಬ ಎಚ್ಚರವನ್ನೂ ಹೊಂದಿರುವುದು ಅತ್ಯಗತ್ಯ. □

ಹೊಸ ಸಾಹಿತ್ಯ ಚಳವಳಿ ಬೇಕೆ?

(25ನೇ ಪುಟದಿಂದ)

ಮಟ್ಟದಲ್ಲಿ ನಮ್ಮನ್ನು ಆಕರ್ಷಿಸುತ್ತದೆ. ರಾಚನಿಕೋತ್ತರವಾದ, ನಿರಚನವಾದ ಹಾಗೂ ಆಧುನಿಕೋತ್ತರವಾದಗಳು ಈ ಪ್ರಕ್ರಿಯೆಯ ತಾತ್ವಿಕ ಪ್ರಸ್ಥಾನಗಳಾಗಿವೆ. ಲ್ಯೊಟಾರ್ಡ್, ಫುಕೋ, ಡೆರಿಡಾರಲ್ಲಿ ಈ ಚಿಂತನೆಗಳು ಸ್ಫೋಟಗೊಂಡಿವೆ. ಇವು ಜ್ಞಾನಪರ್ವ ಸೃಷ್ಟಿಸಿದ ಎಲ್ಲ ಆಧುನಿಕ ಮಹಾಕಥನಗಳನ್ನು – ಸ್ವಾತಂತ್ರ್ಯ, ಸಮಾನತೆ, ವಿಚಾರವಾದ, ಮಾನವತಾವಾದ, ಪ್ರಗತಿಪರತೆ, ವೈಜ್ಞಾನಿಕತೆಗಳನ್ನು– ಶಂಕಿಸಿ ತಿರಸ್ಕರಿಸುತ್ತವೆ. ಈ ಎಲ್ಲ ವಿರಾಟ್ ಕಥನಗಳೂ ರಾಜಕೀಯವಾಗಿ ಕಟ್ಟಲ್ಪಟ್ಟ ಸಂಕಥನಗಳೇ ವಿನಾ ಅವು ವಾಸ್ತವವಲ್ಲ, ಸತ್ಯವಲ್ಲ; ಎಲ್ಲವೂ ಕಾಲ್ಪನಿಕ; ಎಲ್ಲವೂ ಮಿಥ್ಯೆ. ಇದು ಶಂಕರಾಚಾರ್ಯ ಹೇಳುವ 'ಜಗನ್ಮಿಥ್ಯಾ ಬ್ರಹ್ಮಸತ್ಯ' ಎಂಬುದಕ್ಕೆ ಸಂವಾದಿಯಾಗಿದೆ.

ಅಧಿಕಾರ ಮತ್ತು ಜ್ಞಾನ ಕೇಂದ್ರದ ಒಡಲಲ್ಲಿ ಹುಟ್ಟಿಕೊಂಡ ವೈರುಧ್ಯಗಳನ್ನು ಭಿನ್ನತೆಗಳನ್ನು ಗುರುತಿಸುವ ಫುಕೋ ಮತ್ತು ಡೆರಿಡಾ ಕೇಂದ್ರ ಮತ್ತು ಅಂಚಿನ ರಾಜಕಾರಣವನ್ನು ಬಯಲಿಗೆಳೆಯುತ್ತಾರೆ. ಪ್ರಭುತ್ವ ಮತ್ತು ಪುರುಷಾಧಿಕಾರಗಳ ಹಾಗೂ ಡಾಮಿನೆಂಟ್ ಐಡಿಯಾಲಜಿಗಳ ಕೇಂದ್ರಸ್ಥ ಕೋಶಗಳನ್ನು ನಿರಚನಗೊಳಿಸುತ್ತಾರೆ. ಕೇಂದ್ರ ಹಾಗೂ ಪರಿಧಿಗಳ ನಡವಣ ಸಾಪೇಕ್ಷ ಸಂಬಂಧವನ್ನು ಗುರುತ್ತಿಸುತ್ತಾರೆ. ಇದು ನಮಗೆ ಮೇಲ್ನೋಟಕ್ಕೆ ಅತ್ಯಂತ ಆಪ್ಯಾಯಮಾನವಾಗಿ ಬಂಡುಕೋರತನದ ಹಾಗೂ ವಿಕೇಂದ್ರೀಕರಣದ ತತ್ವವಾಗಿ ಆಕರ್ಷಿಸುತ್ತದೆ. ಅಂಚಿನಲ್ಲುಳಿದ ಎಲ್ಲ ದಮನಿತರು, ಶೋಷಿತರು, ನೊಂದವರು, ನಿರ್ಲಕ್ಷಿತರು, ಅಲ್ಪಸಂಖ್ಯಾತರು ಹಾಗೂ ಮತಧರ್ಮ–ಜಾತಿ–ವರ್ಣ–ವರ್ಗ–ಲಿಂಗ–ಭಾಷಿಕ–ಭೌಗೋಳಿಕ ಮುಂತಾದ ನೂರೆಂಟು ಭೇದ–ತಾರತಮ್ಯಗಳಗೆ ಬಲಿಯಾದವರು–ಈ ಎಲ್ಲರನ್ನೂ ಗುರುತಿಸಿ, ಅವರವರ ಐಡೆಂಟಿಟಿಗಳಿಗೆ ಪ್ರತ್ಯೇಕತೆಯನ್ನು ಅನನ್ಯತೆಯನ್ನು ಮಾನ್ಯತೆಯನ್ನು ಕೊಡುವ ಮೂಲಕ ಭ್ರಮೆಯನ್ನು ಹುಟ್ಟಿಸುತ್ತದೆ.

ಇದು ಕಿರು ಸಮುದಾಯಗಳ ಐಡೆಂಟಿಟಿ ರಾಜಕಾರಣವಾಗಿ, 'ಅನ್ಯತೆ'ಗಳು ಸದಾ ಪರಸ್ಪರ ಪ್ರತಿಸ್ಪರ್ಧೆಯಲ್ಲಿ ನಿರತವಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಬಹುಸಂಸ್ಕೃತಿಗಳನ್ನು ಬಹುಬಣಗಳನ್ನಾಗಿ ಮಾರ್ಪಡಿಸುತ್ತ, ಅವುಗಳನ್ನು ಸಮತಟ್ಟುಗೊಳಿಸಿ ಸಪಾಟು ಮಾಡುತ್ತದೆಯೇ ಹೊರತು ಅವುಗಳಲ್ಲಿ ಸಮಾನತೆಯನ್ನಾಗಲಿ ಸಾಮರಸ್ಯವನ್ನಾಗಲಿ ಹುಟ್ಟಿಸುವುದಿಲ್ಲ. ಭಾಷೆ ಎನ್ನವುದು ಒಂದು ರಚನೆಯೇ ಹೊರತು ಯಾವುದೇ ಪದ–ಶಬ್ದಕ್ಕೆ ಸಿದ್ಧ ಅರ್ಥಗಳಿರುವುದಿಲ್ಲ, ಮೌಲ್ಯಗಳಿರುವುದಿಲ್ಲ; ಹಾಗಾಗಿ ವಾಸ್ತವತೆ ಹಾಗೂ ಸಾಮಾಜಿಕ ವಾಸ್ತವತೆ ಎಂಬ ಪರಿಕಲ್ಪನೆಗಳಿಗೆ ಅಸ್ತಿತ್ವವೇ ಇಲ್ಲ. ಆಧುನಿಕೋತ್ತರವಾದಕ್ಕೆ ಚರಿತ್ರೆ ಅಥವಾ ಪರಂಪರೆಯಲ್ಲಿ ನಂಬಿಕೆ ಇಲ್ಲ. ಅದಕ್ಕೆ ಭವಿಷ್ಯ ನಿರ್ಮಾಣವೂ ಮುಖ್ಯವಲ್ಲ. ವರ್ತಮಾನದ ಯಥಾಸ್ಥಿತಿಯಷ್ಟೇ ಮುಖ್ಯ; ಅರಾಜಕತೆ ನಿರ್ಮಾಣವೇ ಅದರ ರಾಜಕೀಯ.

ವಸಾಹತುಶಾಹೀ ಅನುಭವದ ಎದುರಲ್ಲಿ ನಮ್ಮತನವನ್ನು ಶೋಧಿಸಿಕೊಳ್ಳುವ ಪ್ರಕ್ರಿಯೆ ಗಾಂಧಿಯುಗದಿಂದಲೇ ಶುರುವಾಗಿದ್ದು, 'ಸ್ವದೇಶಿ'– 'ಸ್ವರಾಜ್' ಪರಿಕಲ್ಪನೆಗಳಲ್ಲಿ ಅದು ಪ್ರತಿಫಲನಗೊಂಡಿದೆ. ದೇಶೀಯತೆ ಮತ್ತು ರಾಷ್ಟ್ರೀಯತೆಗಳ ಅಂತಃಸಂಬಂಧದಲ್ಲಿಯೇ ಕರ್ಷಣೆ–ಘರ್ಷಣೆಗಳು ಎದ್ದು ನಿಲ್ಲುತ್ತವೆ. ವಸಾಹತು ದೇಶಗಳು ಸ್ವತಂತ್ರಗೊಂಡರೂ ನಿರಂತರ ಕಾಡುವ ವಿಧಿ ಇದು ಮತ್ತು ವಸಾಹತೋತ್ತರ ದೇಶಗಳ ಬೆನ್ನು ಹತ್ತಿದ ಬೇತಾಳವಿದು. ಬಿಟ್ಟೆನೆಂದರೂ ಬಿಡದ ಮಾಯೆ. ನಮ್ಮಲ್ಲಿ ದೇಶೀಯತೆ ಎನ್ನವುದು 'ದೇಸೀಯತೆ'ಯಾಗಿ ಸ್ವಂತಿಕೆಯ ಹುಡುಕಾಟವಾಗುತ್ತದೆ. ಅಡಿಗರಲ್ಲಿ ಅದು 'ಇನ್ನಾದರೂ ಪೂರ್ವ ಮಿಮಾಂಸೆಗಳ ಬಗೆಯಬೇಕು' ಎಂಬ ಆರ್ಷೇಯ ಹಂಬಲವಾಗಿ ಬಂದರೆ, ಕೆ.ವಿ.ನಾರಾಯಣರಲ್ಲಿ ಅದು 'ಕನ್ನಡಿಗಳು ಇನ್ನು ಸಾಕು' ಎನ್ನುವ ತಡೆಗೋಡೆಯನ್ನು ಒಡ್ಡುವ ಪ್ರತಿರೋಧವಾಗಿ ನಿಲ್ಲುತ್ತದೆ. ಕಂಬಾರರಲ್ಲಿ ಅದು ವಸಾಹತುಪೂರ್ವದ ಪರ್ಯಾಯ ಸಾಂಸ್ಕೃತಿಕ ಜೀವಧಾತುಗಳನ್ನರಸುವ 'ಶಿವಾಪುರ'ವಾಗಿ, ಶಿವಪ್ರಕಾಶರಲ್ಲಿ ಅವಧೂತ–ಸೂಫಿ ಪರಂಪರೆಯ 'ಬತ್ತೀಸರಾಗ'ವಾಗಿ, ಡಿ.ಆರ್. ನಾಗರಾಜ್‌ರಲ್ಲಿ 'ಅವೈದಿಕ ದರ್ಶನ'ಗಳ ಹುಡುಕಾಟವಾಗಿ ಹಾಗೂ ಬರಗೂರರಲ್ಲಿ 'ಉಪಸಂಸ್ಕೃತಿ'ಗಳ ಹುಡುಕಾಟವಾಗಿ ಕಾಣಿಸಿಕೊಳ್ಳುತ್ತದೆ. ಇವು ಸಾಂಸ್ಕೃತಿಕ ಮಹತ್ವದ ಹೋರಾಟಗಳೇ ಆಗಿವೆ. ಆದರೆ ಪಶ್ಚಿಮವನ್ನು ಆಧುನಿಕತೆಯನ್ನು ಮತ್ತು ಅದರ ಉತ್ಪನ್ನವಾದ ವೈಚಾರಿಕತೆಯನ್ನು ತನ್ಮೂಲಕ ಸೆಕ್ಯುಲರಿಜಂನ್ನು ಹಠದಲ್ಲಿ ನಿರಾಕರಿಸುವ ಮೂಲಕವೇ ಏತದ್ದೇಸೀಯ ಮೂಲಗಳನ್ನು ಕಂಡುಕೊಳ್ಳುವ ಬಾಲಗಂಗಾಧರರಾವ್–ರಾಜರಾಮಹೆಗಡೆಯವರ 'ಸ್ಮೃತಿ–ವಿಸ್ಮೃತಿ'ವಾದಗಳೂ ಕೂಡ ಇತ್ತೀಚಿಗೆ ಆಕ್ರಮಿಸುತ್ತಿವೆ. ವಸಾಹತೋತ್ತರವಾದದ ವಿಪರೀತದಲ್ಲಿ ಅವು ಒಂದು ಕಡೆ ವಸಾಹತುಪೂರ್ವದ ಗತಕಥನಗಳನ್ನು ಕುರಿತಂತೆ ವ್ಯಾಮೋಹ ಮತ್ತು ವೈಭವೀಕರಣಕ್ಕೆ ಪಕ್ಕಾಗುವ ಸಂಭವ ಇದ್ದರೆ, ಮತ್ತೊಂದು ಕಡೆ ವಸಾಹತುಶಾಹೀ ವಿರೋಧೀ ಹಠದಲ್ಲಿ ಆಧುನಿಕತೆಯನ್ನು ನಿರಾಕರಿಸುವ ಆಧುನಿಕೋತ್ತರವಾದದ ಸುಳಿಯಲ್ಲಿ ಸಿಲುಕಿಕೊಳ್ಳುವ ಅಪಾಯಕಾರೀ ಸಂಭವವೂ ಇರುತ್ತದೆ.

'ಕಲ್ಪಿತ ವಾಸ್ತವ' ಎನ್ನುವ ಪರಿಕಲ್ಪನೆಯನ್ನು ನವ್ಯ ವಿಮರ್ಶಕರಾದ ಗಿರಡ್ಡಿ ಗೋವಿಂದರಾಜರು ಪರಿಚಯಿಸಿದ್ದಾರೆ [ನೋಡಿ: ಪ್ರಜಾವಾಣಿ–ದೇಶಕಾಲ ಸಾಹಿತ್ಯ ಪುರವಣಿ: 4.9.2011]. ಇದನ್ನು Fictive reality / Imagined reality ಎಂದಿದ್ದಾರೆ. ವಾಸ್ತವದ ನಮ್ಮ ಗ್ರಹಿ ಕೆಯ ಮಿತಿಗಳ ಬಗ್ಗೆ ಇಲ್ಲಿ ಚರ್ಚಿಸಿದ್ದಾರೆ. ಆದರೆ ಆಧುನಿಕೋತ್ತರ ಚರ್ಚೆಗಳಲ್ಲಿಯೇ ಈ ವಿಚಾರ ಯಾಕೆ ಬರುತ್ತದೆ? ಕಲ್ಪಿತ ವಾಸ್ತವ ಎಂಬ ಪರಿಕಲ್ಪನೆಗೂ ಆಧುನಿಕೋತ್ತರ ಚಿಂತನೆಗಳಿಗೂ ಇರುವ ಸಂಬಂಧವೇನು? ವಾಸ್ತವತೆ ಎನ್ನವುದೇ ಮಿಥ್ಯೆ, ಯಾವುದೇ ನಿರೂಪಣೆ ಅಥವಾ ಕಥನಗಳು ವಾಸ್ತವವಲ್ಲ; ಮನುಷ್ಯ ಕಟ್ಟಿಕೊಂಡು ಬಂದ ಸತ್ಯ, ವಾಸ್ತವ, ಪ್ರಜ್ಞೆ, ಕನಸುಗಳು, ಮೌಲ್ಯಗಳು, ಸಂಸ್ಥೆಗಳು ಎಲ್ಲವೂ ಕಲ್ಪಿತ, ಕಾಲ್ಪನಿಕ, ಭ್ರಮೆ, ಹುಸಿ ಎಂಬ ನೈರಾಶ್ಯವಾದೀ ಗ್ರಹಿಕೆಯ ಬೇರು ಆಧುನಿಕೋತ್ತರ ಚಿಂತನೆಗಳಲ್ಲಿ ಮಾತ್ರ ಯಾಕೆ ಕಾಣಿಸಿಕೊಳ್ಳುತ್ತದೆ? ಎಂಬ ಪ್ರಶ್ನೆಗಳಗೆ ಒಡ್ಡಿಕೊಳ್ಳದೆ, ಅದರ ಮೇಲ್ಮೈ ಲಕ್ಷಣಗಳನ್ನು ಇಲ್ಲಿ ವಿವರಿಸಿದ್ದಾರೆ.

ಜಾಗತೀಕರಣದ ಆರ್ಥಿಕ ನೀತಿಯನ್ನು ಯಾಕೆ ಭಾರತೀಯ ಜನತಾ ಪಕ್ಷ ತಡೆಯಲಾಗಲಿಲ್ಲವೆಂದರೆ ಅದಕ್ಕೆ ಆಧುನಿಕೋತ್ತರವಾದದ ಸಾಂಸ್ಕೃತಿಕ ತರ್ಕದ ಬೆನ್ನೆಲುಬು ಬೇಕಿತ್ತು; ಆಧುನಿಕತೆಯನ್ನು ಅಂದರೆ ಅದರ ಕುಡಿಯಾದ ಸೆಕ್ಯುಲರಿಜಂನ್ನು ಪ್ರಶ್ನಿಸುವ ಆಧುನಿಕೋತ್ತರವಾದ ಬಿಜೆಪಿಯ ಸಾಂಸ್ಕೃತಿಕ ಐಡಿಯಾಲಜಿಗೆ ಬೇಕಿತ್ತು. ಇದರಿಂದ ಸ್ಪಷ್ಟವಾಗುವ ಅಂಶ ಎಂದರೆ ಆಧುನಿಕೋತ್ತರವಾದವು ಮೂಲಭೂತವಾದಕ್ಕೆ ಆಸರೆ ನೀಡುತ್ತದೆ. ಮತಾತೀತ, ಧರ್ಮತೀತ, ಜಾತ್ಯತೀತ ನೆಲೆಗಳನ್ನು ಮೂಲಭೂತವಾದ ಹುಸಿ ವೈಚಾರಿಕತೆ ಎಂತಲೂ, ಹುಸಿ ವೈಜ್ಞಾನಿಕತೆ ಎಂತಲೂ ಅಲ್ಲಗಳೆಯುತ್ತದೆ.

'ಈಗ ಹೊಸ ಸಾಹಿತ್ಯ ಚಳವಳಿಯ ಅವಶ್ಯಕತೆಯಿದೆಯೇ?' ಎನ್ನುವ ಪ್ರಶ್ನೆಗೆ ಮತ್ತೆ ಬರೋಣ. ಶೋಷಣೆ, ಅಪಮಾನಗಳಿಂದ ಮಾನವನನ್ನು ಬಿಡುಗಡೆಗೊಳಿಸುವ ಎಲ್ಲ ಸಾಮಾಜಿಕ–ಸಾಂಸ್ಕೃತಿಕ ಹೋರಾಟಗಳನ್ನು ಶಂಕಿಸುವ–ಪ್ರಶ್ನಿಸುವ ಆಧುನಿಕೋತ್ತರವಾದವನ್ನು ಎದುರಿಸಲು ಹಾಗೂ ಪಶ್ಚಿಮದ/ ವಸಾಹತುಶಾಹಿಯ ವಿಕಲ್ಪಗಳನ್ನು ವಿಕೃತಿಗಳನ್ನು ಗುರುತಿಸುವ ನೆಪದಲ್ಲಿ ಆಧುನಿಕತೆಯ ವೈಚಾರಿಕ ಪ್ರಗತಿಪರ ನೆಲೆಗಳನ್ನೆ ಕತ್ತರಿಸುವ ವಸಾಹತೋತ್ತರ ವಿಸ್ಮೃತಿವಾದೀ ಚಿಂತನೆಗಳನ್ನು ಎದುರಿಸಲು, ಮತ್ತು ಸೆಕ್ಯುಲರಿಜಂ ಎನ್ನವ ಕಲ್ಪನೆಯಾಗಲಿ ರಿಲಿಜಿಯನ್ ಕಲ್ಪನೆಯಾಗಲಿ ನಮ್ಮದಲ್ಲ ಎನ್ನುವ ಬೌದ್ಧಿಕ ವಿತಂಡವಾದಗಳನ್ನು ಎದುರಿಸಲು, ಬಹುಸಂಸ್ಕೃತಿಗಳಲ್ಲಿ ಅಂತಸ್ಥವಾಗಿರುವ ಜೀವಪರ ಹಾಗೂ ಚಲನಶೀಲ ಜೀವಧಾತುಗಳನ್ನು ಒಗ್ಗೂಡಿಸಿ ಹೊಸ ಬದುಕನ್ನು ಕಟ್ಟುವ ಸಾಂಸ್ಕೃತಿಕ ಚಳವಳಿಯೊಂದನ್ನು ರೂಪಿಸುವಂತಹ ಹೊಸ ಸಾಹಿತ್ಯ ಚಳವಳಿ ಇಂದಿನ ಅಗತ್ಯವಾಗಿದೆ.

ಹಾಗಾದರೆ ಈ ಹೊಸ ಚಳವಳಿಯ ತಾತ್ವಿಕ ರೂಪುರೇಷೆ, ನೆಲೆಗಟ್ಟು ಏನಿರಬೇಕು ಪ್ರಶ್ನೆ ಏಳುತ್ತದೆ. ಬಂಡಾಯ ಚಳವಳಿ ನಿಷ್ಕ್ರಿಯವಾಗಿದೆ, ನಿಜ. ಹಾಗಂತ ಹೊಸ ಚಳವಳಿಯು ಬಂಡಾಯದ ನಕಲುಪ್ರತಿಯೂ ಆಗಬೇಕಾಗಿಲ್ಲ; ಹಾಗೆಯೇ ಅದು ಬಂಡಾಯದ ವೈರಿಯೂ ಆಗಬೇಕಾಗಿಲ್ಲ. ಎಲ್ಲ ಜನಪರ ಚಳವಳಿಗಳ ಜೀವಪರ ಧಾತುಗಳನ್ನು ಪಡೆದು ಹೊಸ ಚಳವಳಿ ರೂಪುಗೊಳ್ಳಬೇಕು. ವಚನ ಚಳವಳಿಯ ಸಾಂಸ್ಕೃತಿಕ ಹೋರಾಟದ ಧಾತು–ವಿನ್ಯಾಸಗಳು ಯಾವುದೇ ಜನಸಂಸ್ಕೃತಿ ಹೋರಾಟಗಳಿಗೆ ಅನನ್ಯವಾಗಿವೆ. ಹಾಗೆಯೇ ಬಂಡಾಯ ಚಳವಳಿಯ ಬುಡಕ್ಕಿದ್ದ ವಿಶಾಲ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಸಂಘಟನೆಯ ನೆಲೆ ಅಪ್ರಸ್ತುತವಲ್ಲ. ಆಧುನಿಕೋತ್ತರವಾದ ಎನ್ನುವುದು ಬಹುರೂಪಿಯಾದದ್ದು ಮತ್ತು ಇಂದ್ರಜಿತುವಿನಂತೆ ಅದೃಶ್ಯವಾದದ್ದು. ಅದನ್ನು ಒಂದೇ ಶಕ್ತಿಮೂಲದಿಂದ ಎದುರಿಸಲು ಸಾಧ್ಯವಾಗದು. ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಅಂಬೇಡ್ಕರ್‌ವಾದೀ ಶಕ್ತಿಗಳು ಹಾಗೂ ಎಲ್ಲ ಪ್ರಗತಿಪರ ಶಕ್ತಿಗಳು ಆಧುನಿಕೋತ್ತರವಾದದ ಮಾಯೆಯನ್ನು ಹಾಗೂ ಅದರ ಒಳಸುಳಿಗಳನ್ನು ಎದುರಿಸಲು ತಾತ್ವಿಕವಾಗಿ ಅವೂ ಸಹ ಸಜ್ಜುಗೊಳ್ಳಬೇಕಾಗಿದೆ. ಇದರ ಜೊತೆಗೆ ಬಂಡಾಯ ಚಳವಳಿ ಕಟ್ಟಿಕೊಂಡ ಎಲ್ಲ ಮಿತಿ–ದೌರ್ಬಲ್ಯಗಳಿಂದ ಹೊಸ ಚಳವಳಿ ಪಾಠ ಕಲಿತು, ಅವು ಮರುಕಳಿಸದಂತೆ ಮುನ್ನಡೆಯಬೇಕಾಗಿದೆ. □

ಮಹಾಕರುಣೆ

ಈ ರೀತಿ ಲಕ್ಷಯೋಜನದಾಚೆ
ಕೋಟಿಯೋಚನೆಯಾಚೆ
ನೀ ಯಾಕೆ ಕುಳಿತಿರುವಿ?
ಬಂಜೆಗಂಬನಿ ಮಣಿಯ ಯಾಕೆ
ಪೋಣಿಸುತಿರುವಿ
ಮೌನದೆಳೆ ಎಳೆ ಎಳೆಯ ರಾಟೆಯ
ಸುತ್ತಿ ಬಿಚ್ಚಿ
ಮತ್ತೆ ಸುತ್ತುತ್ತಿರುವಿ?
–ಎಚ್ ಎಸ್ ಶಿವಪ್ರಕಾಶ್
(ಸಮಗಾರ ಭೀಮವ್ವ ಪದ್ಯದ ಸಾಲು)

ಸುಡು ಸೂರ್ಯ ತಾಪ ದೇಹದಲ್ಲೊಮ್ಮೆ
ಹರಿದಾಡಿ
ನರಮಂಡಲವ ಜಗ್ಗಿ ಎಳೆದು
ಸಂಸ್ಕಾರಗಳು ಕಾರ್ಯಕಾರಣದ
ಎಳೆಗಳು ದಿಕ್ಕೆಟ್ಟು ಓಡುವಾಗ
ಮೌನದೊಳಗಲ ಮಾತು ಮೌನಕ್ಕೆ ಶರಣಾಗಿ;
ನಾಲಿಗೆ ಕಟ್ಟಿದಂತಾಗಿ
ಕಣ್ಣು ಗುಡ್ಡೆಗಳು ಅಲುಗಾಡದಂತಾಗಿ
ಮಹಾಕರುಣೆಯ ಮೊಲೆಯೂ ಅದರ ತೊಟ್ಟೂ
ಕಾಣದಂತಾಗಿ,
ಅಲ್ಲಿಂದ ಹರಿವ ಹಾಲು
ತನ್ನೊಳಗೆ ಹರಿದು
ತ್ರಾಟಕದಲ್ಲಿ ಅಣುವಿನೊಳಗಲ ಅಣುವಾಗಿ
ಗಡ್ಡ ಮೀಸೆಯ ಗಂಡು ಮೊಲೆ ಮುಡಿಯ
ಒಂದಾಗಿ
"ಕಾಯದೊಳಗೆ ಕಾಯನುಸ್ಥಿತಿಗೆ"
ಹೋದ ನಾಗಲಿಂಗನ, ಸ್ವ ಸ್ಥಿತಿಯೆ
ಇಲ್ಲವಾಗಿ;
ಮಹಾಕರುಣೆಯಲಿ ಒಂದಾಗಿ
ಸಮಗಾರ ಭೀಮವ್ವನ ಮೊಲೆಹಾಲ
ಕುಡಿಯುತ್ತಿದ್ದ ನಾಗಲಿಂಗನ ದರ್ಶನವನ್ನು
ನಾಗಲಿಂಗನಿಗೇ ಕರುಣಿಸಿತ್ತು;
ಇದಾಗಿ ಹಸಿದು ಬಳಲಿ ಬೆಂಡಾದ
ದುಃಖಿತರು ಕರುಣಾಳು ತಾಯ
ಎದೆಹಾಲಿಗೆ ಕಾಯುತ್ತಲೇ...
ಮೌನದೆಳೆಯ ಬಿಚ್ಚುತ್ತಿದ್ದಾರೆ.



○ ಅಪೂರ್ವ ಡಿ. ಸಿಲ್ವ

ಈ ಹೊತ್ತಿನ ಕನ್ನಡ ಸಾಹಿತ್ಯ: ಸೃಜನಶೀಲತೆಯ ಬಿಕ್ಕಟ್ಟುಗಳು

ಮೇಟಿ ಮಲ್ಲಿಕಾರ್ಜುನ

೧

ಪ್ರತೀ ಸಮುದಾಯದಲ್ಲಿ ಅದರದೇ ಆದ ಹಲವು ಬಗೆಯ ಸವಾಲುಗಳು ಇದ್ದೇ ಇರುತ್ತವೆ. ಕಾಲ ದೇಶಕ್ಕೆ ಅನುಗುಣವಾಗಿ ಇಂತಹ ಸವಾಲುಗಳ ಸ್ವರೂಪದಲ್ಲಿ ಬದಲಾವಣೆಗಳಾಗಬಹುದು. ಈ ಸವಾಲುಗಳನ್ನು ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಎಂಬಿತ್ಯಾದಿ ದೊಡ್ಡಮಟ್ಟದ ನೆಲೆಗಳಲ್ಲಿ ಗುರುತಿಸುತ್ತಾರೆ. ಈ ಬಗೆಯ ಸವಾಲುಗಳನ್ನು ಎದುರಿಸುವ ದಾರಿಗಳನ್ನೂ ಆಯಾ ಸಮುದಾಯಗಳೇ ಕಂಡುಕೊಳ್ಳುತ್ತವೆ ಎಂದೂ ಖಚಿತವಾಗಿ ಹೇಳಲಾಗದಿದ್ದರೂ, ಯಾವ ಸಮುದಾಯವು ಸಾಮಾಜಿಕ/ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿರುತ್ತದೆಯೋ ಅಂತಹ ಸಮುದಾಯವು ಸಾಹಿತ್ಯದ ಮೂಲಕ ಆ ಬಗೆಯ ಕ್ರಿಯಾಶೀಲತೆಯನ್ನು ಗಳಿಸಿಕೊಂಡಿರುತ್ತದೆ. ಈ ವಿಚಾರದಲ್ಲಿ ಯಾರಿಗೂ ಅನುಮಾನವಿರಲಾರದು.

ಕರ್ನಾಟಕದಂತಹ ಸಾವಿರಾರು ವರುಷಗಳ ವಯಸ್ಸಿನ ನಾಡಿನಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಪಲ್ಲಟಗಳನ್ನು ಅರ್ಥೈಸುವ ಕ್ರಮವೇ ಒಂದು ಸವಾಲಿನದು. ದಿಟ, ಎಷ್ಟು ಹೋರಾಟಗಳು, ಚಳವಳಿಗಳು, ಪ್ರತಿಭಟನೆಗಳು ನಡದಿವೆ ಎಂದು ಲೆಕ್ಕಾಚಾರ ಮಾಡಿ ಹೇಳುವುದು ದುಸ್ತರವಾದರೂ ಅಂತಹ ಯತ್ನಗಳು ಇಲ್ಲವೇ ಇಲ್ಲವೆಂದು ತಳ್ಳಿ ಹಾಕುವಂತಿಲ್ಲ. ಪ್ರತೀ ಸಮುದಾಯದ ಸಾಂಸ್ಕೃತಿಕ ಚರಿತ್ರೆ ಆಯಾ ಸಮುದಾಯಗಳು ಎದುರಿಸಿದ ಬಿಕ್ಕಟ್ಟುಗಳ ಚರಿತ್ರೆಯೂ ಆಗಿರುತ್ತದೆ. ಅದು ಬಾಯ್ದೆರೆಯ ಚರಿತ್ರೆಯಾಗಿರಬಹುದು ಅಥವಾ ಬರೆಹದ ಚರಿತ್ರೆಯಾಗಿರಬಹುದು. ಸಮುದಾಯವು ಅನುಭವಿಸಿದ ಸಂಕಟಗಳನ್ನು ಯಾವುದೇ ಮುಲಾಜಿಲ್ಲದೇ ಮುಂದುವರಿಸಿಕೊಂಡು ಬರುವ ಅಸಲಿ ಗುಣ ಚರಿತ್ರೆಗೆ ಇರುತ್ತದೆ. ತನ್ನ ಒಡಲಲ್ಲಿಯೇ ಇಂತಹ ವೈರುಧ್ಯಗಳನ್ನು ಬಚ್ಚಿಟ್ಟುಕೊಂಡಿರುತ್ತೆ ಎಂಬುದು ಗಮನಾರ್ಹ. ಆಯಾ ಸಮುದಾಯದ ಸಾಂಸ್ಕೃತಿಕ ಪಠ್ಯಗಳೇ ಇದಕ್ಕೆ ಸಾಕ್ಷಿ.

ಅದಕ್ಕಾಗಿ ಚರಿತ್ರೆ ಕೇವಲ ಘಟನೆಗಳ ಮೊತ್ತ ಮಾತ್ರವಲ್ಲ ಅದು ಒಂದು ಸಿಮಿಯಾಟಿಕ್ ಆ್ಯಕ್ಟಿವಿಟಿಯೂ ಆಗಿರುತ್ತದೆ. ಹಾಗಾಗಿಯೇ ಚರಿತ್ರೆ ಉದ್ದಕ್ಕೂ ನಡೆದಿರುವ ಎಲ್ಲ ಬಗೆಯ ಸರ್ವಾಧಿಕಾರವನ್ನು ಸಾಂಕೇತಿಕ ನೆಲೆಯಿಂದ ಕಟ್ಟಿಕೊಡುವ ಕಸುವು ಸಾಹಿತ್ಯಕ್ಕೆ ಅಚಾನಕವಾಗಿ ಸಿಕ್ಕಿದೆ ಎಂದು ಹೇಳಲು ಸಾಧ್ಯವಿಲ್ಲ. ಸಾಹಿತ್ಯವೇ ಅಂತಹವೊಂದು ಗುಣವನ್ನು ಪಡೆದುಕೊಂಡಿದೆ. ವಿಪರ್ಯಾಸವೇನೆಂದರೆ, ಸಾಹಿತ್ಯ ಎಲ್ಲಾ ಬಗೆಯ ನಿಲುವುಗಳನ್ನೂ ಪ್ರತಿನಿಧಿಸುತ್ತದೆ. ಇದು ಸಾಂಸ್ಕೃತಿಕ ರಾಜಕಾರಣದ ಪ್ರಭಾವದಿಂದಲೇ ಈಡೇರುವಂತಹದು. ಸಾಹಿತ್ಯದ ಆಶಯಕ್ಕೂ ಆಚರಣೆಗೂ ನಡುವೆ ದೊಡ್ಡ ಕಂದರವೇ ಏರ್ಪಡಲು ಇಂತಹ ಪ್ರಭಾವಗಳೇ ಕಾರಣ.

ಸಾಹಿತ್ಯವನ್ನು ಎರಡು ನೆಲೆಗಳಲ್ಲಿ ಗುರುತಿಸಬಹುದು. ಒಂದು, ಪ್ರತಿರೋಧದ ಸಾಹಿತ್ಯ. ಮತ್ತೊಂದು, ಪ್ರಭುತ್ವದ ಸಾಹಿತ್ಯ. ಈ ಡೈಕಾಟಮಿ ವಿಚಿತ್ರವಾಗಿ ಕಂಡರೂ ಅದೇ ದಿಟ. ಇಂತಹ ಡೈಕಾಟಮಿಯನ್ನು ನಾನೇನು ಹೊಸದಾಗಿ ಹುಟ್ಟು ಹಾಕಿರುವುದಲ್ಲ. ಸಾಹಿತ್ಯ ಪರಂಪರೆಯಲ್ಲಿಯೇ ಇಂತಹ ಒಡಕುಗಳಿರುವುದು ಕಣ್ಣಿಗೆ ರಾಚುತ್ತವೆ. ಈ ಹೊತ್ತಿನ ಸಾಹಿತ್ಯದಲ್ಲಿ ಇದನ್ನು ಇನ್ನೂ ನಿಚ್ಚಳವಾಗಿ ಕಾಣಬಹುದು. ಮುಖ್ಯವಾ ಹಿನಿಯ ಸಾಹಿತ್ಯವು ಪ್ರಭುತ್ವದ ಪರವಾಗಿ ಇಲ್ಲ ಅದನ್ನೇ ಪ್ರತಿ ನಿಧಿಸುವ ಮಾಧ್ಯಮವಾದರೆ, ಇಂತಹ ನಿಲುವುಗಳನ್ನು ಪ್ರಶ್ನಿಸುವ/ಪ್ರತಿರೋಧ ಒಡ್ಡುವ ಬಗೆಯಾಗಿ ಪ್ರತಿರೋಧದ ಸಾಹಿತ್ಯ ಬೆಳೆದು ಬಂದಿದೆ.

೨

ಕನ್ನಡ ಸಾಹಿತ್ಯ ಲೋಕ ತನ್ನ ಅಭಿವ್ಯಕ್ತಿ ಕ್ರಮಗಳನ್ನು ರೂಪಿಸಿಕೊಳ್ಳುವ ಬಗೆ ಯಾವುದು? ಈ ಬಗೆಯ ಸಂವೇದನೆ ಯಾರನ್ನು ಪ್ರತಿನಿಧಿಸುತ್ತದೆ? ಯಾವೆಲ್ಲ ಪ್ರಭಾವಗಳಿಗೆ ಇಂತಹ ಕ್ರಮಗಳು ಒಳಗಾಗಿರುತ್ತದೆ? ಎಂಬೆಲ್ಲ ಕೇಳ್ವಿಗಳು ಸೃಜನಶೀಲತೆಯ ಬಿಕ್ಕಟ್ಟನ್ನು ಕುರಿತು ಚರ್ಚಿಸುವಾಗ ಎದುರಾಗುತ್ತವೆ. ಸಮಕಾಲೀನ ಸವಾಲುಗಳಿಗೆ, ಸಾಹಿತ್ಯ ಮುಖಾಮುಖಿಯಾಗುವ ನೆಲೆಗಳು ಏಕರೂಪಿಯಾಗಿರಲು ಸಾಧ್ಯವಿಲ್ಲ. ದಿಟ ಸಾಹಿತ್ಯಕ್ಕೆ ಎಲ್ಲ ಬಗೆಯ ಸಂವೇದನೆಯನ್ನೂ ಸೃಜನಶೀಲ ಕ್ರಿಯೆಯಾಗಿಸುವ ಒಂದು ಅಂತರ್ಗತ ಗುಣ ಇದ್ದೇ ಇರುತ್ತದೆ. ಆದರೆ ಆಯಾ ಸಮುದಾಯಗಳು ರೂಪಿಸಿಕೊಂಡಿರುವ ಸಾಹಿತ್ಯ ಪ್ರಕಾರ, ಆಕೃತಿ, ಕಥನಕ್ರಮ, ಶೈಲಿಗಳೆಲ್ಲವೂ ಯಾವುದೇ ಅನುಭವವನ್ನು ಸಾಹಿತ್ಯಿಕ ಸಂವೇದನೆಯಾಗಿ ಸೃಜಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಗಳೇನೆಂದರೆ ಪ್ರತಿಯೊಬ್ಬರಿಗೂ ಸಾಮಾಜಿಕ-ಸಾಂಸ್ಕೃತಿಕ, ರಾಜಕೀಯ-ಆರ್ಥಿಕ, ಧಾರ್ಮಿಕ-ಶೈಕ್ಷಣಿಕ ಅನುಭವಗಳ ಸ್ವರೂಪದಲ್ಲಿಯೇ ಭಿನ್ನತೆಗಳು ಇರುತ್ತವೆ. ಕೆಲವರಿಗೆ ಈ ಭಿನ್ನತೆಗಳು ಸಾಂಸ್ಕೃತಿಕ ಸವಾಲಾಗಿ ಕಂಡರೆ, ಮತ್ತೆ ಕೆಲವರಿಗೆ ಇವು ಸಾಂಸ್ಕೃತಿಕ ಸಾಧ್ಯತೆಗಳಾಗುತ್ತವೆ. ವಾಸ್ತವಿಕತೆ ಹಾಗೂ ಅನುಭವಗಳ ನಡುವೆ ಸೃಜನಶೀಲ ಹೊಂದಾಣಿಕೆಯನ್ನು ಏರ್ಪಡಿಸುವಲ್ಲಿಯೇ ಸಾಕಷ್ಟು ಸಮಸ್ಯೆಗಳಿವೆ. ಸೃಜನಶೀಲ ಕ್ರಿಯೆಯೂ ಹೆಚ್ಚು ಅವಲಂಬಿತವಾಗಿರುವುದು ಸಾಮಾಜಿಕ-ಸಾಂಸ್ಕೃತಿಕ ಪ್ರಜ್ಞೆಯ ಮೇಲೆಯೇ ಎಂದು ಹೇಳಬಹುದು. ಅದಕ್ಕಾಗಿ ಚಾರಿತ್ರಿಕ-ಸಮಕಾಲೀನ, ನಗರ-ಹಳ್ಳಿ, ಮೇಲುವರ್ಗ-ಕೆಳವರ್ಗ ಎಂಬಿತ್ಯಾದಿ ಬಗೆಯಲ್ಲಿ ಪ್ರಜ್ಞೆಯನ್ನು ತುಂಡರಿಸಿ ನೋಡುವ ಕ್ರಮಗಳು ನೆಲೆಗೊಂಡಿವೆ. ಇಂದಿನ ಸಾಮಾಜಿಕ ರಾಜಕೀಯ ಮೂಲ ಪ್ರವೃತ್ತಿಯನ್ನು ಶೋಧಿಸುವ ನೆಲೆಯಲ್ಲಿ ಸಾಹಿತ್ಯ ಬೆಳೆಯಬೇಕೆಂಬುದು ಇಂತಹ ಪ್ರಜ್ಞೆಗಳ ಭಾಗವೇ ಆಗಿರುತ್ತದೆ. ವರ್ತಮಾನದ ಬಿಕ್ಕಟ್ಟುಗಳಿಗೆ ಭೂತದ ನೆನಪುಗಳೂ ಕಾರಣ ಎಂಬುದು ಮತ್ತೆ ಮತ್ತೆ ಸಾಬೀತು ಮಾಡುವ ಜರೂರಿಲ್ಲ. ಏಕೆಂದರೆ ಜಾತಿ, ಧರ್ಮ, ಅಸ್ಪೃಶ್ಯತೆಯಂತಹ ಪ್ರಶ್ನೆಗಳು ಎದುರಾದಾಗೆಲ್ಲ ಭೂತ ಹೇಗೆ ಬಳಕೆಯಾಗುತ್ತದೆ ಎಂಬುದು ಗಮನಾರ್ಹ.

ಚರಿತ್ರೆ ಹಾಗೂ ವರ್ತಮಾನಗಳನ್ನು ಬೆಸೆದು ನೋಡುವ, ಚರಿತ್ರೆಯನ್ನು ವರ್ತಮಾನದೊಂದಿಗೆ ಸಮೀಕರಿಸುವ ಅಥವಾ 'ಚರಿತ್ರೆ ಹಾಗೂ ವರ್ತಮಾನಗಳನ್ನು ಮುಖಾಮುಖಿಯಾಗಿಸುವ ನೆಲೆಗಳೇನೋ ಸಹಜವಾಗಿಯೇ ಸಾಹಿತ್ಯದಲ್ಲಿ ನಡೆದಿರುತ್ತವೆ. ಚರಿತ್ರೆಯು ಒಂದು ರಮ್ಯ ಕಲ್ಪನೆಯಾಗಿಯೋ ಅಥವಾ ಹಳಹಳಿಕೆಯ ಸಂಕೇತ ವಾಗಿಯೋ ಮಾತ್ರ ಕಾಣಿಸದೇ ವರ್ತಮಾನದ ಕಟುವಾಸ್ತವವನ್ನು ಕಾಣುವ ಬಗೆಯಾದಲ್ಲಿ ಚರಿತ್ರೆಗೊಂದು ಮಹತ್ವ ಸಿಗುತ್ತದೆ. ಇಂತಹ ನಡೆಗಳು ಕನ್ನಡ ಸಾರಸತ್ವ ಲೋಕದಲ್ಲಿ ನಿರ್ಭಿಡೆಯಿಂದಲೇ ನಡದಿವೆಯೆಂದು ಹೇಳಬಹುದು.

ಮುಖ್ಯವಾಹಿನಿಯ ಸಾಹಿತ್ಯವೆಂದು ಯಾವುದನ್ನು ಗುರುತಿಸುತ್ತೇವೋ ಅದು ಯಾವುದೇ ಧರ್ಮ, ಜಾತಿ ಅಥವಾ ವರ್ಗವೊಂದರ ಪ್ರಾಯೋಜಿತ ವಿದ್ಯಾಮಾನದಂತಿರುತ್ತದೆ. ಇಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕವಾಗಿ ಪ್ರಭಲವಾಗಿರುವವರ ಸಾಮಾಜಿಕ-ಧಾರ್ಮಿಕ ಮತ್ತು ರಾಜಕೀಯ ರಚನೆಗಳೇ ತಲೆಯೆತ್ತಿರುತ್ತವೆ. ಇಂತಹ ರಚನೆಗಳೇ ಸಾಮಾಜಿಕ ಮೌಲ್ಯಗಳಾಗಿ ನೆಲೆಗೊಂಡಿರುತ್ತವೆ. ಆದರೆ ತತ್ವಪದಕಾರರು, ಸೂಫಿಗಳು, ಲಾವಣಿಕಾರರು ಹಾಗೂ ಭಕ್ತಿ ಚಳವಳಿಗಳಂತ

ಕನ್ನಡ ಸಾಹಿತ್ಯ ಲೋಕ ತನ್ನ ಅಭಿವ್ಯಕ್ತಿ ಕ್ರಮಗಳನ್ನು ರೂಪಿಸಿಕೊಳ್ಳುವ ಬಗೆ ಯಾವುದು? ಈ ಬಗೆಯ ಸಂವೇದನೆ ಯಾರನ್ನು ಪ್ರತಿನಿಧಿಸುತ್ತದೆ? ಯಾವೆಲ್ಲ ಪ್ರಭಾವಗಳಿಗೆ ಇಂತಹ ಕ್ರಮಗಳು ಒಳಗಾಗಿರುತ್ತದೆ? ಎಂಬೆಲ್ಲ ಕೇಳ್ವಿಗಳು ಸೃಜನಶೀಲತೆಯ ಬಿಕ್ಕಟ್ಟನ್ನು ಕುರಿತು ಚರ್ಚಿಸುವಾಗ ಎದುರಾಗುತ್ತವೆ. ಸಮಕಾಲೀನ ಸವಾಲುಗಳಿಗೆ, ಸಾಹಿತ್ಯ ಮುಖಾಮುಖಿಯಾಗುವ ನೆಲೆಗಳು ಏಕರೂಪಿಯಾಗಿರಲು ಸಾಧ್ಯವಿಲ್ಲ. ದಿಟ ಸಾಹಿತ್ಯಕ್ಕೆ ಎಲ್ಲ ಬಗೆಯ ಸಂವೇದನೆಯನ್ನೂ ಸೃಜನಶೀಲ ಕ್ರಿಯೆಯಾಗಿಸುವ ಒಂದು ಅಂತರ್ಗತ ಗುಣ ಇದ್ದೇ ಇರುತ್ತದೆ.

ಹವು ಯಾವುದೇ ಒಂದರ ಪರವಾಗಿರದೇ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ಐಕ್ಯವನ್ನು ಬೆಸೆಯುವ ಮಾಧ್ಯಮಗಳಾಗಿ ಹುಟ್ಟಿಕೊಂಡಿರುತ್ತವೆ.

ಇವುಗಳು ಒಟ್ಟೊಟ್ಟಿಗೆ ಕೋಮುವಾದ, ಸಾಮಾಜಿಕ ಅಸಮಾನತೆ, ಶೋಷಣೆ, ವರ್ಗ ಸಂಘರ್ಷಗಳನ್ನು ವಿರೋಧಿಸುವ ಮತ್ತು ಪ್ರಭುತ್ವದ ನಿಲುವುಗಳನ್ನು ದಿಕ್ಕರಿಸುವ ಕ್ರಮಗಳಾಗಿಯೂ ರೂಪಗೊಂಡಿರುತ್ತವೆ. ಮಾನವ ಕುಲದ ಹಿರಿಮೆ ಹಾಗೂ ವಿಶ್ವಮಾನವತ್ವದಂತಹ ಮೌಲ್ಯಗಳನ್ನು ಮಂಡಿಸಿರುವ ಪಂಪ ಹಾಗೂ ಕುವೆಂಪು ನಂತವರನ್ನೂ ಅನುಮಾನದಿಂದ ನೋಡುವ ಚರ್ಚೆಗಳು ಕಾಣಿಸಿಕೊಂಡಿವೆ. ಏಕೆಂದರೆ, 'ಮನುಷ್ಯಜಾತಿ ತಾನೊಂದೆ ವಲಂ' 'ನೆಗಟ್ದಿ ಆದಿಪುರಾಣದೊಳ್ ಅಱಿವುದು ಕಾವ್ಯ ಧರ್ಮಮಂ ಧರ್ಮಮುಂ' 'ನೆನೆಯದಿರಣ್ಣ ಭಾರತ ದೋಳಿನ್ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ..' ಎಂಬಿತ್ಯಾದಿ ಮೌಲ್ಯಿಕ ಮಾತುಗಳನ್ನಾಡಿದ ಪಂಪನು ಜೈನ ಧರ್ಮದ ವಕ್ತಾರನಂತೆ ವರ್ತಿಸಿರುವನೆಂದು ಆರೋಪಿಸಲಾಗಿದೆ. ವಿಶ್ವಮಾನವತೆಯ ಸಂದೇಶವನ್ನು ಸಾರಿದ ಹಾಗೂ 'ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ' ಎಂಬಂತಹ ಸಮುದಾಯ ನಿಷ್ಠೆಯ ಮಾತುಗಳನ್ನಾಡಿದ ಕುವೆಂಪು ಕೂಡ ಮತಾಂತರದ ಬಗ್ಗೆ ಬಯಾಸ್ಡ್ ಆಗಿದ್ದರು ಎಂಬ ಮಾತುಗಳು ಕೇಳಿಬಂದಿವೆ. ದಿಟ ಈ ವಾದಗಳು ಕೇವಲ ಸಮಾಜ ಶಾಸ್ತ್ರೀಯ ಓದಿನಿಂದ ಮೂಡಿರುವ ತಿಳುವಳಿಕೆ ಮಾತ್ರವಲ್ಲ ಎಂಬ ವಾದಗಳೂ ಗಟ್ಟಿಯಾಗಿಯಾಗಿಯೇ ಇವೆ.

ಸಾಹಿತ್ಯ ಸಾಮಾಜಿಕ ಗ್ರಹಿಕೆಗಳನ್ನು ಬಿಡಿಸಿ ನೋಡುವ ನೆಲೆಯೂ ಆಗಿರುತ್ತದೆ ಎಂಬ ವಾದದಲ್ಲಿ ಭಿನ್ನಾಭಿಪ್ರಾಯವಿರಲಾರದು. ಸಾಮಾಜಿಕ ಅನ್ನುವ ಕಲ್ಪನೆ ಯಾರನ್ನು ಗುರಿಯಾಗಿಟ್ಟುಕೊಂಡು ವ್ಯಾಖ್ಯಾನಿಸಲಾಗಿರುತ್ತೇ ಅನ್ನುವುದು ವಿಶೇಷ. ಡೇವಿಡ್ ಹ್ಯೂಮ್, ಜಾರ್ಜ್ ಹೆಗೆಲ್, ಥಾಮಸ್ ಜಫರ್‌ಸನ್ ಅವರಂತಹ ತತ್ವಶಾಸ್ತ್ರಜ್ಞರ ಚಿಂತನೆಗಳನ್ನು 'ಜನಾಂಗೀಯ ವಿನ್ಯಾಸಗಳು' [ರೇಸಿಸ್ಟ್ ಫಾರ್ಮುಲೇಶನ್ಸ್] ಎಂದು ಎನ್‌ಗೂಗಿ ಬಣ್ಣಿಸಲೂ ಇದೇ ಕಾರಣವಿರಬಹುದು. ಸಾಹಿತ್ಯ ಹಾಗೂ ಸಮಾಜಗಳ ನಡುವಿನ ಅಂತರ್ಗತ ನಂಟನ್ನು ತಾತ್ವಿಕಗೊಳಿಸುವ ನೆಲೆಗಳು ಯಾವವು ಎಂಬುದೇ ನಮಗೀಗ ಸವಾಲಾಗಿ ಕಾಣುತ್ತದೆ.

೩

ಎಲ್ಲ ಬಗೆಯ ಕಂದಾಚಾರ ಮತ್ತು ಸಾಮಾಜಿಕ ತಾರತಮ್ಯಗಳಿಗೆ ಪ್ರತಿರೋಧವನ್ನು ಒಡ್ಡುವುದಕ್ಕಿರುವ ಸೂಕ್ಷ್ಮ ಆಯುಧ ಸಾಹಿತ್ಯವೇ ಆಗಿದೆ ಎಂಬ ನಂಬಿಕೆಯ ಮಾತೂ ಕೇಳಿಬರುತ್ತದೆ. ಸೋಜಿಗದ ಸಂಗತಿಯೇನೆಂದರೆ, ಎಷ್ಟೋ ಸಂದರ್ಭಗಳಲ್ಲಿ, ಎತ್ತುಗೆಗಾಗಿ ಜಾಗತೀಕರಣ, ವಿಜ್ಞಾನ, ತಂತ್ರಜ್ಞಾನ ಹಾಗೂ ಅಂತರ್-ರಾಷ್ಟ್ರೀಯ ಸಂಬಂಧ ಮತ್ತು ಸಾಂಸ್ಕೃತಿಕ ಅನ್ಯಾಯಗಳಂತಹ ರಚನೆಗಳಿಗೆ ಪ್ರತಿಕ್ರಿಯಿಸುವ ನೆಲೆಗಳು ತೀವ್ರ ಪರಿಣಾಮದಿಂದ ಮೂಡಿಬಂದವುಗಳಲ್ಲ. ಅವು ಕೇವಲ ಆ ಕ್ಷಣದ ಪ್ರತಿಕ್ರಿಯೆಗಳಾಗಿರುತ್ತವೆ ಹೊರತು, ಒಂದು ಗಟ್ಟಿ ನಂಬಿಕೆಯನ್ನು ಬೆಳೆಸುವ ಅಥವಾ ಸಾಮಾಜಿಕ ಆಂದೋಲನವನ್ನಾಗಿ ರೂಪಿಸುವ ಸಾಹಿತ್ಯಿಕ ಪ್ರತಿಕ್ರಿಯೆಗಳಾಗಿ ಬಂದಿರುವುದಿಲ್ಲ. ಇತ್ತೀಚಿನ ಕೆಲವು ವಾಗ್ವಾದಗಳಾದ ಗೋಮಾಂಸದ ನಿಷೇದ, ಮಡೇಸ್ನಾನದಂತಹ ಧಾರ್ಮಿಕ ಶೋಷಣೆ, ಜೀತ ಪದ್ಧತಿಯಂತಹ ಸಾಮಾಜಿಕ ದೌರ್ಜನ್ಯ, ಹಾಗೂ ಮಲಾಭಿಷೇಕ ಮಾಡಿಕೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ ಕ್ರೌರ್ಯಗಳನ್ನು ಸಾಹಿತ್ಯಿಕವಾಗಿ ಎದುರಾಗುವ ನೆಲೆಗಳನ್ನು ನಿಗಾಯಿಟ್ಟು ನೋಡಿದರೆ ನಿಚ್ಚಳವಾಗಿ ಕಾಣುವುದೇನೆಂದರೆ ಅವು ಕೇವಲ ತಕ್ಷಣ ಪ್ರತಿಕ್ರಿಯೆಗಳಾಗಿ ಮಾತ್ರ ಕಾಣುತ್ತವೆ.

ಸಮಕಾಲೀನ ಸವಾಲುಗಳಿಗೆ ಕನ್ನಡ ಸಾಹಿತ್ಯ ಮುಖಮಾಡಿದಿಯೋ ಬೆನ್ನುಮಾಡಿದಿಯೋ ಎಂಬುದನ್ನು ಗೆರೆಕೊರೆದು ಹೇಳಲಾಗದು. ಇಡೀ ಸಾಹಿತ್ಯ ಪರಂಪರೆಯನ್ನು ಮರುಓದು ಮಾಡಿದರೆ ಈ ಎರಡೂ ಬಗೆಯ ನಿಲುವುಗಳನ್ನು ತಾಳಿದ್ದರ ಸುಳಿವುಗಳು ಸಿಗುವುದಂತು ದಿಟ. ಯಾವ ನಿಲುವು ಯಾವಾಗ ಯಾರ ಪರವಾಗಿರುತ್ತವೆ ಅನ್ನುವುದನ್ನು ಚರ್ಚಿಸಬೇಕಿದೆ. ಯಾವುದೇ ಕೆಲವು ಆಯ್ದ ಕವಿ/ಕಾವ್ಯಗಳನ್ನಿಟ್ಟುಕೊಂಡು ತೀರ್ಮಾನಗಳನ್ನು ಕೈಗೊಳ್ಳುವುದು ಅಪಾಯವೇನೋ ಸರಿ. ಆದರೆ ಕನ್ನಡ ಸಂಸ್ಕೃತಿಗೇ ಅಪಾಯವನ್ನುಂಟುಮಾಡುವ ಇಂತಹ ಕ್ರಮಗಳು ಕಣ್ಣಿಗೆ ರಾಚುತ್ತವೆ.

ಸಾಹಿತ್ಯ ಹೀಗೆ ಒಂದು ಎಕ್ಸ್‌ಪ್ಲಿಟ್ ಸಂಕೇತವಾಗಿ ನಿರೂಪಣೆಗೊಂಡಿರುವುದನ್ನೂ ನಿರಾಕರಿಸುವಂತಿಲ್ಲ. ಎಲ್ಲವನ್ನೂ ಒಳಗೊಳ್ಳುವ ಒಂದು ಇಂಪ್ಲಿಸಿಟ್ ರಚನೆಯಾಗಿ ರೂಪಗೊಳ್ಳುವಲ್ಲಿ ಸಾಹಿತ್ಯ ಸೋಲುತ್ತದೆ ಎಂಬ ವಾದಗಳೂ ಮುಂಚೂಣೆಗೆ ಬಂದಿವೆ. ಸಾಹಿತ್ಯ ಧೋರಣೆ ಎನ್ನುವುದು ಯಾವುದೇ ಕೇಂದ್ರಸ್ಥ ನೆಲೆಯನ್ನು ನೆಚ್ಚಿಕೊಂಡರೆ ಸಮುದಾಯಕ್ಕೆ ಅದರಿಂದ ಲಾಭವಿಲ್ಲ. ಆದರೆ ಈ ಧೋರಣೆ ಸಮುದಾಯಗಳ ಆಶಯ/ಆಶೋತ್ತರಗಳನ್ನು ಪ್ರಕಟಿಸುವ ಮುನ್ನೆಗತವೂ ಆಗಬೇಕೆಂಬ ತುಡಿತ ಸಾಹಿತ್ಯಕ್ಕೆ ಇರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಾಂಸ್ಕೃತಿಕ 'ಇಡಿ' ಹಾಗೂ 'ಬಿಡಿ' ನೆಲೆಗಳ ನಡುವಣ ಸಂಘರ್ಷವನ್ನು ಈ ನಿಲುವುಗಳು ಹೇಗೆ ನಿಭಾಯಿಸುತ್ತವೆ ಎಂಬುದು ಮುಖ್ಯ. ಯಾವುದೇ ಜಾತಿ, ವರ್ಗ, ಧರ್ಮ, ವ್ಯಕ್ತಿಗಳಿಗೆ ಮಾತ್ರ ಕೇಂದ್ರಸ್ಥವಾದ ಬಿಕ್ಕಟ್ಟುಗಳನ್ನೂ ಎದುರಾಗುವ ಬಗೆಗಳು ಯಾವವು ಎಂಬುದು ಮತ್ತೊಂದು ತಾತ್ವಿಕ ಕೇಳ್ವಿಯಾಗಿದೆ. ಯಾಕೆಂದರೆ ಇವುಗಳು ಹೆಜಿಮನಿಕ್ ಚೌಕಟ್ಟೊಂದನ್ನು ಮೀರಿನಿಲ್ಲುವ ಬಗೆಗಳೂ ಆಗಬೇಕೆಂಬುದು ಗಮನಾರ್ಹ.

ಸಾಮಾಜಿಕ-ರಾಜಕೀಯ ವಸ್ತುವುಳ್ಳ ಸಾಹಿತ್ಯವು ಕೇವಲ ವಿಡಂಬನೆ ಮಾತ್ರವಾಗಿರದೇ ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಸಾಂಸ್ಕೃತಿಕ ಪಠ್ಯಗಳಾಗುವ ಜರೂರಿದೆ. ಜನವಿರೋಧಿ ನಿಲುವುಗಳನ್ನು ಸಂವೇದನೆಗೊಳಿಸುವ ದಾರಿಯಾಗಿ ಸಾಹಿತ್ಯ ನೆಲೆಯೂರಲಿ ಎಂಬುದು ಆಶಯ. ಕೆ.ವಿ.ಎನ್ ಅವರು ವಾದಿಸುವಂತೆ ಬರೆಹ ಎನ್ನುವುದು ನಮ್ಮನ್ನೇ ನಮಗೆ ತೋರಿಸುವ ದಾರಿಯೂ ಆಗಿರುತ್ತದೆ ಎಂಬುದಾಗಿದೆ. ಈ ವಾದವನ್ನು ಅವರು, "ದೀಪವೆಂದರೆ ಬೆಳಕೂ ಹೌದು ದಾರಿಯೂ ಹೌದು" ಎಂಬ ನಾಗಚಂದ್ರನ ಮಾತುಗಳಿಂದ ಇನ್ನಷ್ಟು ಗಟ್ಟಿಗೊಳಿಸುತ್ತಾರೆ.

೪

ಸಮಕಾಲೀನ ಸವಾಲುಗಳಿಗೆ ಕನ್ನಡ ಸಾಹಿತ್ಯ ಮುಖಮಾಡಿದಿಯೋ ಬೆನ್ನುಮಾಡಿದಿಯೋ ಎಂಬುದನ್ನು ಗೆರೆ ಕೊರೆದು ಹೇಳಲಾಗದು. ಇಡೀ ಸಾಹಿತ್ಯ ಪರಂಪರೆಯನ್ನು ಮರುಓದು ಮಾಡಿದರೆ ಈ ಎರಡೂ ಬಗೆಯ ನಿಲುವುಗಳನ್ನು ತಾಳಿದ್ದರ ಸುಳಿವುಗಳು ಸಿಗುವುದಂತು ದಿಟ. ಯಾವ ನಿಲುವು ಯಾವಾಗ ಯಾರ ಪರವಾಗಿರುತ್ತವೆ ಅನ್ನುವುದನ್ನು ಚರ್ಚಿಸಬೇಕಿದೆ. ಯಾವುದೇ ಕೆಲವು ಆಯ್ದ ಕವಿ/ಕಾವ್ಯಗಳನ್ನಿಟ್ಟುಕೊಂಡು ತೀರ್ಮಾನಗಳನ್ನು ಕೈಗೊಳ್ಳುವುದು ಅಪಾಯವೇನೋ ಸರಿ. ಆದರೆ ಕನ್ನಡ ಸಂಸ್ಕೃತಿಗೇ ಅಪಾಯವನ್ನುಂಟುಮಾಡುವ ಇಂತಹ ಕ್ರಮಗಳು ಕಣ್ಣಿಗೆ ರಾಚುತ್ತವೆ ಇದಕ್ಕೇನು ಹೇಳುವುದು.

ಎತ್ತುಗೆಗಾಗಿ ಇವತ್ತೀನ ಕನ್ನಡ ಸಾಹಿತ್ಯದಲ್ಲಿ ಎಸ್.ಎಲ್.ಭೈರಪ್ಪ ಹಾಗೂ ಆ ಬಗೆಯ ಮನಸ್ಥಿತಿಯನ್ನು ಹೊಂದಿದವರಿಂದ ಸಾಂಸ್ಕೃತಿಕವಾಗಿ ಅಂತಹ ಅಸೂಕ್ಷ್ಮಗಳು ಜರುಗುತ್ತಿವೆ. ಯಾವುದೇ ಜೀವವಿರೋಧಿ ಸಿದ್ಧಾಂತಕ್ಕೆ ಬದ್ಧವಾಗಿ ಬರೆಯುವುದು ಸೃಜನಶೀಲತೆಗೆ ಧಕ್ಕೆ ತರುವಂತಹದು. ಈ ವಾದದಲ್ಲಿ ಯಾರಿಗೂ ಅಪನಂಬಿಕೆ ಇರಲಾರದು. ಪ್ರತಿಯೊಂದು ಕಾಲದ ಸಾಹಿತಿ, ವಿಮರ್ಶಕ ಹಾಗೂ ಪಠ್ಯಗಳು ತಾವು ನೆಮ್ಮಿದ ತತ್ವ ಹಾಗೂ ತಮ್ಮನ್ನಷ್ಟೇ ಪ್ರತಿನಿಧಿಸಿಕೊಳ್ಳದೇ ಸಾಮುದಾಯಿಕ ಪ್ರಜ್ಞೆಯನ್ನು ನೆಲೆಗೊಳಿಸಬೇಕು. ಇಲ್ಲವಾದರೆ ಇವತ್ತೀನ ರಾಜಕೀಯ ಸವಾಲುಗಳಾದ: ಭ್ರಷ್ಟಾಚಾರ, ಜಾತೀಯತೆ, ಕೋಮುವಾದ, ಸಾಂಸ್ಕೃತಿಕ ತರತಮ ಮತ್ತು ಅಸಹನೆ, ಫ್ಯಾಸಿಸ್ಟ್ ಧೋರಣೆ ಎಲ್ಲದಕ್ಕಿಂತ ಹೆಚ್ಚಾಗಿ ಉತ್ತರದಾಯಿತ್ವವಿಲ್ಲದ ದುರಾಡಳಿತಕ್ಕೆ ಇನ್ನಷ್ಟೂ ಕುಮ್ಮಕ್ಕುಸಿಗುತ್ತದೆ.

ಇಡೀ ಸಾಹಿತ್ಯ ಸಂಕಥನವನ್ನೇ ರಾಜಕೀಯಗೊಳಿಸುವಲ್ಲಿ ಅಪಾಯಗಳಿವೆ. ರಾಜಕೀಯ ಎಂಬ ಕಲ್ಪನೆಯ ಸ್ವರೂಪದಲ್ಲಿಯೇ ವೈರುಧ್ಯಗಳಿವೆ. ಇಂತಹ ವೈರುಧ್ಯಗಳನ್ನು ಮೀರಿ, ಸಾಹಿತ್ಯವನ್ನು ಸಾಮಾಜಿಕ ಸಂಕಥನವನ್ನಾಗಿಸಬೇಕಿದೆ. ಇದು ಕೂಡ ಸೃಜನಶೀಲತೆಯು ಎದುರಿಸಬೇಕಾದ ಸವಾಲೇ ಸರಿ. ಒಬ್ಬ ವ್ಯಕ್ತಿಯೊಳಗಿನ ತಲ್ಲಣಗಳನ್ನು ಹಾಗೂ ತನ್ನ ಮನಸ್ಸಿನ ವಿರೋಧಭಾಸಗಳನ್ನು 'ಕಥನ'ಗೊಳಿಸುವ ಬಗೆಗಳು ಇನ್ನಷ್ಟೂ ತೀವ್ರವಾಗಬೇಕಿದೆ. ಸಾಹಿತ್ಯ ಕೇವಲ 'ರಸಾನುಭವ'ಕ್ಕೆ ಸೀಮಿತವಾಗುವಂತಹದಲ್ಲ. ಬದಲಾಗಿ ತನ್ನ ಕಾಲಮಾನದ ಮನೋಧರ್ಮವನ್ನು ಎತ್ತಿತೋರಿಸಬೇಕು. ಕಳೆದ ದಶಕಗಳಲ್ಲೇ ತೇಜಸ್ವಿಯವರು ಹೇಳಿದಂತೆ 'ಹೊಸ ಅಭಿವ್ಯಕ್ತಿ ವಿಧಾನಗಳ ಬಗ್ಗೆ ಗಮನ ಹರಸಿ ಹೊಸದಿಗಂತಗಳತ್ತ ಅನ್ವೇಷಣೆ ಹೊರಡಬೇಕಾಗಿದೆ' ಎಂಬ ಮಾತುಗಳು ಸರಿಯಾಗಿಯೇ ಇವೆ. ಬಹುತೇಕ ಬರೆಹಗಾರರು ಮಧ್ಯಮ/ಕೆಳಮಧ್ಯಮ ವರ್ಗದಿಂದ ಬಂದವರಾಗಿರುತ್ತಾರೆ. ಇವರು ಇಲ್ಲಿಂದ ಇನ್ನೂ ಮೇಲಕ್ಕೆ ಬರುವ ತುಡಿತದಲ್ಲಿರುತ್ತಾರೆ. ಇದೊಂದು ಖಾಲಿ ಸ್ಪೇಸ್‌ನತ್ತ ಮುಖ ಮಾಡುವುದರ ಸಂಕೇತವಾಗಿದೆ.

ಅದಕ್ಕಾಗಿ ಇವತ್ತೀನ ಹೆಚ್ಚು ಬರೆಹಗಳಲ್ಲಿ ಹಸಿವು, ಬಡತನ, ನೋವು, ಅಪಮಾನ ಮುಂತಾದವುಗಳನ್ನು

ಚಿತ್ರಿಸುವ ಸಾಮಾಜಿಕ ಮಿಡಿತಗಳಿರುವುದಿಲ್ಲ. ಬದಲಾಗಿ ಇನ್ಯಾವುದಕ್ಕೂ ಹಾತೊರೆಯುವ ಒತ್ತಾಯವಿರುತ್ತದೆ. ಇನ್ನೊಂದು ಅಪಾಯವೇನೆಂದರೆ, ಬರೆಹಗಾರರು ತಮ್ಮ ಪಾದಗಳನ್ನು ಜಾತಿ ಅಥವಾ ಧರ್ಮಗಳಲ್ಲಿಯೇ ಗಟ್ಟಿಯಾಗಿ ಊರಿರುತ್ತಾರೆ. ಇವರ ಈ ನಿಲುವು ಯಾವುದೇ ಬಗೆಯ ಎಚ್ಚರಿಕೆ ಅಥವಾ ಕ್ರಿಯಾಶೀಲತೆಯನ್ನು ಹೊಂದಿರುವುದಿಲ್ಲ. ಇದು ಕೇವಲ ಗಾಭರಿಪಡುವ ಸಂಗತಿ ಮಾತ್ರವಲ್ಲ ಬದಲಾಗಿ ಸೃಜನಶೀಲತೆಯ ಬಿಕ್ಕಟ್ಟುಗಳು ಬರೆಹಗಾರರಲ್ಲಿ ಅಥವಾ ಆ ಪ್ರಕ್ರಿಯೆಯಲ್ಲಿಯೇ ಹೇಗೆ ಹುದುಗಿರುತ್ತವೆ ಎಂಬುದನ್ನು ಅರಿಯುವ ಬಗೆಯಾಗಿದೆ.

ಕನ್ನಡದ ಮಹತ್ವದ ಕವಿಯೊಬ್ಬನ ಕಾವ್ಯಧೋರಣೆಯಿಂದ ಈ ವಾದವನ್ನು ಬೆಳಸಬಹುದು. "ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ" ತಾನು ಕಾವ್ಯ ರಚನೆ ಮಾಡುವುದಿಲ್ಲವೆಂದು ಹೇಳಿದ ಹರಿಹರನು, ಅಧಿಕಾರಸ್ಥ ಜಾಗಗಳಿಂದ ದೂರವಿರುವ ಅತ್ಯಂತ ಸಾಮಾನ್ಯ ವಿಭೂತಿ ಪುರುಷರ ಬದುಕನ್ನೇ ಕಾವ್ಯ ವಸ್ತುವನ್ನಾಗಿ ಆರಿಸಿಕೊಂಡು ಕಾವ್ಯ ರಚಿಸಿದನು. ಈ ನಡೆ ಏನನ್ನು ಸೂಚಿಸುತ್ತದೆ ಎಂದರೆ, ಯಾವುದೇ ಪ್ರಭುತ್ವದ ಹಂಗಿ ಲ್ಲದೇ ಆತ್ಮನಿಷ್ಠೆಯಿಂದ ಬದುಕು ಸಾಗಿಸುವ ಈ ಸಾಮನ್ಯರನ್ನು ಕುರಿತು ಜಗತ್ತಿಗೆ ಸಾರಿಹೇಳುವ ಈ ಉದ್ದೇಶ [ಬಹುಜನರ] ಜೀವಪರವಾದ ಚಿಂತನೆಗಳನ್ನು ಮಂಡಿಸುವುದಾಗಿರುತ್ತದೆ.

ಸಮಕಾಲೀನ ಒತ್ತಡಕ್ಕೆ ಮುಖಾಮುಖಿಯಾಗುವ ಬಗೆಗಳು ಸಾಹಿತ್ಯಿಕ ಪಠ್ಯಗಳಲ್ಲಿ ಹೇಗೆ ಅಡಕವಾಗಿರುತ್ತವೆ ಎಂಬುದಕ್ಕೆ ಹರಿಹರನೇ ಸಾಕ್ಷಿ. ಇವುಗಳನ್ನು ಸಾಮಾನ್ಯೀಕರಿಸಿದರೆ ತಪ್ಪಾಗುತ್ತದೆ. ಹೊಸ ಸಾಂಸ್ಕೃತಿಕ ಸಂದರ್ಭಕ್ಕೆ ಅನುಗುಣವಾಗಿ ಕಾವ್ಯರಚನೆಯ ಹೊಸ ಸಾಧ್ಯತೆಗಳನ್ನು ಆಯ್ಕೆ ಮಾಡುವ ಕ್ರಮವನ್ನು ಇದರಿಂದ ಗುರುತಿಸುವುದಾಗಿದೆ. ಸಮಕಾಲೀನ ಸಂದರ್ಭವನ್ನು ಗ್ರಹಿಸುವುದಕ್ಕೂ ಚಾರಿತ್ರಿಕ ಸಂದರ್ಭವನ್ನು ಗ್ರಹಿಸುವುದಕ್ಕೂ ವ್ಯತ್ಯಾಸಗಳಿವೆ. ಇಂತಹ ವ್ಯತ್ಯಾಸಗಳೇ ಬರೆಹಗಾರನನ್ನು ಜಾಗೃತಗೊಳಿಸುತ್ತವೆ ಎಂಬುದು ಗಮನಾರ್ಹ.

ಸದ್ಯದ ಸಾಮಾಜಿಕ-ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಪ್ರತಿರೋಧ ಒಡ್ಡುವ ಕಸುವು ಸಾಹಿತ್ಯಕ್ಕೆ ಹೇಗೆ ಸಾಧ್ಯವಾಗುತ್ತೇ ಅನ್ನುವುದನ್ನು ಭಕ್ತಿಪರಂಪರೆ, ತತ್ವಪದಕಾರರು, ವಚನಕಾರರು ಹಾಗೂ ಮೌಖಿಕ ಪರಂಪರೆಯಿಂದ ಕಂಡುಕೊಳ್ಳಲು ಸಾಧ್ಯ. ಭಕ್ತಿ ಮುಂತಾದ ಚಳವಳಿಗಳಿಗೆ ಅತೀ ಸಾಮಾನ್ಯರ ಅಸ್ತಿತ್ವದ ಸವಾಲುಗಳನ್ನು ಅಡ್ರೆಸ್ ಮಾಡುವ ಹೊಣೆಗಾರಿಕೆಯ ಜೊತೆಗೆ ಅವರ ಸಾಮಾಜಿಕ ಚಹರೆಗಳನ್ನು ಎತ್ತಿತೋರಿಸುವ ಅಗತ್ಯವಿತ್ತು. ರಾಜಕೀಯದ ಜೊತೆಗೆ ಆಧ್ಯಾತ್ಮಕತೆಯನ್ನು ಕಸಿ ಮಾಡುವ ಪ್ರಯತ್ನಗಳನ್ನು ಬಸವಣ್ಣನು ಮಾಡಿದ್ದು ಕೂಡ ಇದೆ ಕಾರಣಕ್ಕಾಗಿ. ಸೃಜನಶೀಲತೆ ಎಂಬುದೊಂದು ತಪಸ್ಸು.

ಈ ತಪಸ್ಸು ಕಣ್ಣಿಗೆ ಕಾಣದೇ ಇರುವ ಯಾವುದೋ ಒಂದು ಆದರ್ಶಕ್ಕೆ ಹಂಬಲಿಸುವ ಬದಲಾಗಿ ತನ್ನ ಸುತ್ತಲಿನ ತಲ್ಲಣಗಳಿಗೆ ಪ್ರತಿಕ್ರಿಯಿಸುವ ತುಡಿತವನ್ನು ಹೊಂದಬೇಕಾಗುತ್ತೆಂಬ ದನಿ ಗಟ್ಟಿಯಾಗಿ ಕೇಳಿಬರುತ್ತಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಕನ್ನಡ ಸಾಹಿತ್ಯದ ವಸ್ತು ಮತ್ತು ಆಶಯ ಗತಕ್ಕೆ ಸಂಬಂಧಿಸಿದ್ದಾಗಿದೆ. ಭೂತಕ್ಕೆ ಒತ್ತು ಕೊಟ್ಟಷ್ಟು ವರ್ತಮಾನದ ಸವಾಲುಗಳಿಗೆ ಅಷ್ಟಾಗಿ ಕೊಟ್ಟಿಲ್ಲವೆನ್ನುವುದು ನಿಚ್ಚಳವಾಗಿದೆ. ಎನ್ಕೆ ಹನುಮಂತಯ್ಯನ ಮಾತುಗಳು ಈ ವಾದವನ್ನು ಬಲಪಡಿಸುತ್ತವೆ. "ಸಮಕಾಲೀನ ಸಂದರ್ಭದಲ್ಲಿ ಬರೆಯ ತೊಡಗಿದರೆ, ಅನೇಕ ಸವಾಲುಗಳು ಎದುರಾಗುತ್ತವೆ. ಅವುಗಳಲ್ಲಿ ಪ್ರಧಾನವಾದದ್ದೆಂದರೆ ಪರಂಪರೆ ಮತ್ತು ವರ್ತಮಾನಗಳ ಪ್ರವಾಹ. ಈ ಪ್ರವಾಹಕ್ಕೆ ಸಿಕ್ಕಿ ದಡ ಸೇರುವ ಅಂತಃಸತ್ವದ ಬರೆಹ ಅತ್ಯಂತ ಕಠಿಣ" ಇದು ಅಭಿವ್ಯಕ್ತಿ ಕ್ರಮ ಮತ್ತು ವಸ್ತುವಿನ ಆಯ್ಕೆಯಲ್ಲಿನ ತೊಡಕುಗಳನ್ನು ಎದುರಿಸುವ ಸವಾಲು.

ಸದ್ಯದ ಸವಾಲುಗಳನ್ನು ಸೃಜನಶೀಲ ಚೌಕಟ್ಟಿಗೆ ತಂದುಕೊಳ್ಳುವಲ್ಲಿ ಇರಬಹುದಾದ ತೊಡಕುಗಳೇನೆಂದರೆ, ಮತ್ತೆ ಎನ್ಕೆ ಹನುಮಂತಯ್ಯನ ಮಾತುಗಳಿಂದಲೇ ನೋಡುವುದಾದರೆ "ನಾನು-ನನ್ನ ಅಸ್ಪೃಶ್ಯತೆಯ ಅನುಭವನ್ನು ಯಥಾವತ್ತಾಗಿ ನಿರೂಪಿಸಿದರೆ, ಈಗಾಗಲೇ ಎಲ್ಲ ದಲಿತರೂ ಅಭಿವ್ಯಕ್ತಿಸಿದ ಅನುಭವಗಳೇ ಆಗಿ ವಿಶೇಷವೆನಿಸಲಾರವು. ಹಾಗೆ ಬರೆದ ಬರೆಹ ಸತ್ಯವಾಗಿದ್ದರೂ ಸುಳ್ಳಿನ ಬಲೆಗೆ ಸಿಕ್ಕಿ ದನಿ ಕಳೆದುಕೊಳ್ಳುವ ಅಪಾಯವಿದೆ. ಆದ್ದರಿಂದ ನಮ್ಮ ಪ್ರಾಮಾಣಿಕ ಅನುಭವಗಳನ್ನು ಆಕ್ರಮಿಸುತ್ತಿರುವ ಏಕತಾನತೆ ಮತ್ತು ಕೃತಕತೆಯನ್ನು ಎಚ್ಚರಿಕೆಯಿಂದ ಮೀರುವ ತುರ್ತು ಎದುರಾಗುತ್ತದೆ". ಅನುಭವಗಳ 'ಸಾರ್ವತ್ರಿಕತೆ ಹಾಗೂ ನಿರ್ದಿಷ್ಟತೆ'ಗಳ ನಡುವೆ ನಿರಂತರ ಹೊಯ್ದಾಟ ಇದ್ದೇ ಇರುತ್ತದೆ ಎಂಬುದು ಗಮನಾರ್ಹ.

ಹಾಗಾಗಿ ಯಾವುದೇ ಅನುಭವವನ್ನು ಕಥನಿಸುವಾಗ ಅಭಿವ್ಯಕ್ತಿ ಕ್ರಮದಲ್ಲಿ ಹೊಸತನವಿರಬೇಕಾದದ್ದು ಅಗತ್ಯ. ಹೊಸ ಪ್ರತಿಭೆಗಳಲ್ಲಿ ಮುಖ್ಯವಾದ ಮತ್ತೊಬ್ಬ ಕವಿ ಆರಿಫ್ ರಾಜಾನ ಮಾತುಗಳು ಈ ವಾದವನ್ನು ಬಲಪಡಿಸುವಂತಿವೆ "ಹೊಸತೆನಿಸುವ 'ಫ್ರೆಶ್'ಆದ ಯಾವ ಸಂವೇದನೆಗೂ ಈಗಾಗಲೇ ಇರುವ ಮಾದರಿಗಳ ಆಕೃತಿಯಲ್ಲಿ ಎರಕ ಹೊಯ್ಯಲು ಆಗುವುದೇ ಇಲ್ಲ. ಅದರ ಜೊತೆಗೆ ಅಂಟಿಕೊಂಡು ಬರುವ ಹಲವು ರೀತಿಯ ವಾಸನೆಗಳು ರುಚಿಗಳು ಬಣ್ಣಗಳು ಅವೇ ಆಗಿ ನಿಲ್ಲುತ್ತವೆ.

"ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ" ತಾನು ಕಾವ್ಯ ರಚನೆ ಮಾಡುವುದಿಲ್ಲವೆಂದು ಹೇಳಿದ ಹರಿಹರನು, ಅಧಿಕಾರಸ್ಥ ಜಾಗಗಳಿಂದ ದೂರವಿರುವ ಅತ್ಯಂತ ಸಾಮಾನ್ಯ ವಿಭೂತಿ ಪುರುಷರ ಬದುಕನ್ನೇ ಕಾವ್ಯವಸ್ತುವನ್ನಾಗಿ ಆರಿಸಿಕೊಂಡು ಕಾವ್ಯ ರಚಿಸಿದನು. ಈ ನಡೆ ಏನನ್ನು ಸೂಚಿಸುತ್ತದೆ ಎಂದರೆ, ಯಾವುದೇ ಪ್ರಭುತ್ವದ ಹಂಗಿಲ್ಲದೇ ಆತ್ಮನಿಷ್ಠೆಯಿಂದ ಬದುಕು ಸಾಗಿಸುವ ಈ ಸಾಮನ್ಯರನ್ನು ಕುರಿತು ಜಗತ್ತಿಗೆ ಸಾರಿಹೇಳುವ ಈ ಉದ್ದೇಶ [ಬಹುಜನರ] ಜೀವಪರವಾದ ಚಿಂತನೆಗಳನ್ನು ಮಂಡಿಸುವುದಾಗಿರುತ್ತದೆ. ಸಮಕಾಲೀನ ಒತ್ತಡಕ್ಕೆ ಮುಖಾಮುಖಿಯಾಗುವ ಬಗೆಗಳು ಸಾಹಿತ್ಯಿಕ ಪಠ್ಯಗಳಲ್ಲಿ ಹೇಗೆ ಅಡಕವಾಗಿರುತ್ತವೆ ಎಂಬುದಕ್ಕೆ ಹರಿಹರನೇ ಸಾಕ್ಷಿ.

ಐಡೆಂಟಿಟಿಯ ಪ್ರಶ್ನೆ ಬಂದಾಗ 'ಅಭಿವ್ಯಕ್ತಿ'ಯ ಸಂಕಟ ಬಹಳ ಹಿಂದಿನಿಂದಲೂ ಸೃಜನಶೀಲರಿಗೆ ಕಾಡಿಕೊಂಡು ಬಂದ ಒಂದು ನೆರಳ ಬೆಳಕಿನ ಆಟವಾಗಿರುವಂತಿದೆ". ಸೃಜನಶೀಲಗೊಳ್ಳುವ/ಸೃಜನಶೀಲವಾಗಿರುವುದು ನಿರಂತರ ಒಂದೇ ಚೌಕಟ್ಟಿನಲ್ಲಿ ನೆಲೆ ನಿಲ್ಲಲು ನಿರಾಕರಿಸುತ್ತದೆ. ಹೊಸದೊಂದು ಮದರಿಯನ್ನು ಕಟ್ಟಿಕೊಳ್ಳಲು ತುಡಿಯುತ್ತದೆ. ಇದು ಸೃಜನಶೀಲತೆಗೆ ಮಾತ್ರ ಸಂಬಂಧಿಸಿದ್ದಲ್ಲ ಕಲಾತ್ಮಕತೆಗೂ ಸಂಬಂಧಿಸಿದೆ. ಮಾಧ್ಯಮಗಳ ನೇರಪ್ರಸಾರದಿಂದ ವಿಮರ್ಶೆಯ ಹೊಣೆಗಾರಿಕೆ ಬಿದ್ದು ಹೋಗಿದೆ. ದುರಂತವೇನೆಂದರೆ, ಈ ಮಾಧ್ಯಮದ 'ರೋಚಕತೆ-ನಿಷ್ಕ್ರಿಯತೆ' ಎರಡೂ ಸೃಜನಶೀಲ ನೆಲೆಗಳನ್ನು ಧ್ವಂಸ ಮಾಡುವ ಅಪಾಯಗಳಾಗಿವೆ.

ಶ್ರೀ

ವರ್ಗ, ಧರ್ಮಕೇಂದ್ರಿತ ಚಿಂತನೆಗಳೇ ಪ್ರಭಾಶಾಲಿಯಾಗಿರುವ ಇವತ್ತಿನ ದಿನಗಳಲ್ಲಿ ಸೃಜನಶೀಲತೆ ಎಂಬುದು ಸದ್ಯದ ತಲ್ಲಣಗಳಿಗೆ ಎದುರೇಟು ನೀಡುವ ಮಾನದಂಡವಾಗುವಲ್ಲಿ ಅನುಮಾನಗಳಿವೆ. ಎದುರಾಳಿ ವ್ಯವಸ್ಥೆಯ ಜೊತೆಗೆ ಮುಖಾಮುಖಿಯಾಗುವ ಬಗೆಯನ್ನು ಸಾಹಿತ್ಯ ಹೇಗೆ ನಿಭಾಯಿಸಬಲ್ಲದು ಎನ್ನುವುದನ್ನು ಬಿಡಿಸಿ ನೋಡಬೇಕಿದೆ. ಸುತ್ತಲಿನ ಕೇಡು ಮತ್ತು ವಿಕಾರಗಳ ಬಗ್ಗೆ ಗಾಢ ವಿಷಾದ ಹೊಂದಿರುವುದೇನೋ ಸರಿ. ಆದರೆ ಅವುಗಳ ಬಗ್ಗೆ ಪ್ರತಿರೋಧ ಒಡ್ಡುವ, ಸಮಾಜವನ್ನು ಕ್ರಿಯಾಶೀಲಗೊಳಿಸುವ ಹೊಣೆಗಾರಿಕೆ ಸಾಹಿತ್ಯಕ್ಕೆ ಮಾತ್ರ ಸೇರಿದ್ದು ಎನ್ನುವ ಸಾಂಸ್ಕೃತಿಕ ನಂಬಿಕೆಯೊಂದು ಬೇರು ಬಿಟ್ಟಿದೆ. ಇಂತಹ ನಂಬಿಕೆಯನ್ನು ಗಟ್ಟಿಗೊಳಿಸುವ ಅಭಿಪ್ರಾಯಗಳು ಸಾಹಿತಿಗಳಿಂದಲೇ ಕೇಳಿಬರುತ್ತವೆ.

"ನಮ್ಮ ಪ್ರತಿಕ್ಷಣದ ಸ್ವಾತಂತ್ರ್ಯದ ಹೋರಾಟವೇ ಬರೆಹ. ಅದು ನಮ್ಮ ಮರುಹುಟ್ಟಿಗಾಗಿ ನಿರಂತರ ನಡೆಸುವ ತಪ. ನಮ್ಮ ಮೇಲೆ ಆಗುವ ಭೂತ, ವರ್ತಮಾನ ಹಾಗೂ ಭವಿಷ್ಯತ್ಕಾಲಗಳ ಜೀವವಿರೋಧಿ ಆಕ್ರಮಣದ ವಿರುದ್ಧ ಆಂತರಿಕ ದಂಗೆಯೇ ಬರೆಹ. ಹಾಗಾಗಿ ಬರೆಹ ಒಂದು ರಮ್ಯ ಅಥವಾ ಪವಾಡ ಪ್ರಕ್ರಿಯೆಯಲ್ಲ" [ಎನ್ಕೆ. ಹನುಮಂತಯ್ಯ]. ಈ ಮಾತುಗಳು ವಾಸ್ತವವಾದಿ ವಿಧಾನವನ್ನು ನೆಮ್ಮಿಕೊಂಡು ಆಡಿದವುಗಳಾಗಿವೆ.

ಮಧ್ಯಮ ವರ್ಗಕೇಂದ್ರಿತವಾದ ಸಾಹಿತ್ಯವು ಆ ವರ್ಗದ ಆಶೋತ್ತರಗಳನ್ನು ಮಾತ್ರ ಬಿಂಬಿಸುವ ಮಾಧ್ಯಮವಾಗಿ ರೂಪಗೊಳ್ಳುತ್ತಲೇ ಬಂದಿದೆ. ಇದು ಒಂದು ಸಮುದಾಯದ ಸಾಂಸ್ಕೃತಿಕ ನಿಲುವುಗಳು ಹಾಗೂ ತಮ್ಮ ಚಲನಶೀಲತೆಯನ್ನು ಕಳೆದುಕೊಳ್ಳುವ ಬಗೆಯಾಗಿದೆ. ಈ ಬಿಕ್ಕಟ್ಟಿನಲ್ಲಿಯೇ ಎನ್ಕೆ. ಹನುಮಂತಯ್ಯ ಅವರು, ಸಾಹಿತ್ಯವು ದಲಿತ/ಅಂಚಿನಲ್ಲಿರುವವರ ಬಿಡುಗಡೆಯ ಅಸ್ತ್ರವಾಗುತ್ತೆಂದು ಹೇಳಿದ್ದು. ಈ ಮಧ್ಯಮ ವರ್ಗವೇ ಇಡೀ ಆಧುನಿಕ ಕನ್ನಡ ಸಾಹಿತ್ಯವನ್ನು ಪೋಷಿಸಿಕೊಂಡು ಬಂದಿದೆ ಎಂಬ ನಂಬಿಕೆಗಳೂ ಇವೆ. ಮೈಸೂರು ದಸರಾ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದಾಗ ಕೆ.ಎಸ್.ನರಸಿಂಹ ಸ್ವಾಮಿ

(49ನೇ ಪುಟಕ್ಕೆ)



ಸಮೃದ್ಧ ತೋಟಗಾರಿಕೆ
ಸಮೃದ್ಧ ಕರ್ನಾಟಕ
ಕರ್ನಾಟಕ ಮುನ್ನಡೆಯುತ್ತಿದೆ
ತೋಟಗಾರಿಕೆ ಇಲಾಖೆಯ ಯೋಜನೆಗಳು

ರಮಾಬಾಯಿ: ದಲಿತರ ಸಾಂಸ್ಕೃತಿಕ ಅಸ್ಮಿತೆ

ಪುಸ್ತಕ ಅವಲೋಕನ

ಸಂ: ಯಶವಂತ ಮನೋಹರ್
ಅನು: ಡಾ. ಎಚ್. ಟಿ. ಪೋತೆ
ಬೆಲೆ: ರೂ ೬೦/-
ಪ್ರ : ಸ್ವಪ್ನ ಬುಕ್ ಹೌಸ್, ಬೆಂಗಳೂರು

ಡಾ. ಅಪ್ಪಗೆರೆ ಸೋಮಶೇಖರ್

ಡಾ. ಯಶವಂತ ಮನೋಹರ ಅವರ ಮರಾಠಿ ಮೂಲ-**ರಮಾಬಾಯಿ** ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿರುವ ಡಾ. ಎಚ್.ಟಿ.ಪೋತೆಯವರು ನಮ್ಮ ನಡುವಿನ ಮಹತ್ವದ ಕಥೆಗಾರ, ವಿಮರ್ಶಕ ಹಾಗೂ ಚಿಂತಕರಾಗಿದ್ದಾರೆ. ಈಗಾಗಲೇ ಬಿ. ಶ್ಯಾಮಸುಂದರ್ ಅವರ– They burn, Mool Bhartie ಕೃತಿಗಳನ್ನು ಕ್ರಮವಾಗಿ–**ಬೆಂದವರು, ಮೂಲ ಭಾರತೀಯರು** ಎಂಬುದಾಗಿ ಕನ್ನಡಕ್ಕೆ ತರುವ ಮೂಲಕ ಅನುವಾದಕರಾಗಿಯೂ ಹೆಸರಾಗಿದ್ದಾರೆ. ರಮಾಬಾಯಿ ಪುಸ್ತಕದ ಅನುವಾದದಲ್ಲಿ ಪೋತೆಯವರು ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಈ ಕಾರಣದಿಂದಾಗಿ ಇಡೀ ಕೃತಿ ಎಲ್ಲಿಯೂ ಸಹ ಅನುವಾದಿತ ಕೃತಿ ಎನ್ನಿಸದೆ ಸ್ವಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ರಮಾಬಾಯಿಯವರ ಬದುಕಿನ ಅನುಭವವನ್ನು ಕನ್ನಡ ನೆಲದ ಭಾಷಾನುಭವಕ್ಕೆ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿರುವುದೇ ಪೋತೆಯವರ ಅನುವಾದದ ಹಿಂದಿರುವ ಮೌಲಿಕ ಗುಣವಾಗಿದೆ. ಪ್ರಖರವಾದ ವೈಚಾರಿಕತೆಯ ಹಿನ್ನೆಲೆಯಲ್ಲೇ ತಮ್ಮ ಅಭಿಪ್ರಾಯಗಳನ್ನು ಮಂಡಿಸಬಲ್ಲ, ಪೋತೆಯವರ ಆಲೋಚನೆಯಲ್ಲಿ ವ್ಯವಸ್ಥೆಗೆ ಮುಖಾಮುಖಿಯಾಗುವ; ಸರಿ ಕಾಣದ್ದನ್ನು ನೇರವಾಗಿ ಪ್ರಶ್ನಿಸುವ ದಿಟ್ಟತನವಿದೆ. ಇವರ ಬರಹ ಭಾಷಣಗಳ ಹಿಂದೆ; ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಬಿ. ಶ್ಯಾಮ ಸುಂದರ್–ಅವರ ಚಿಂತನೆಯ ದಟ್ಟ ಪ್ರಭಾವವನ್ನು ಗುರುತಿಸಬಹುದು. ಪೋತೆಯವರ ಬರಹ ನಮಗೆ ಬಹಳ ಮುಖ್ಯ ಅನ್ನಿಸೋದು: ಅದರ ಆಳದಲ್ಲಿ ಜೀವಂತವಾಗಿರುವ ದಲಿತ ಪ್ರಜ್ಞೆಯ ಕಾರಣದಿಂದಾಗಿ. 'ದಲಿತ ಪ್ರಜ್ಞೆ'ಯ ಎಚ್ಚರ ದೊಟ್ಟಿಗೆ; ಶೋಷಿತರ ಸಾಂಸ್ಕೃತಿಕ ಅಸ್ಮಿತೆಯ ಹುಡುಕಾಟದ 'ಅರಿವಿನ ಹಸಿವು' ಇವರ ಬರಹಕ್ಕಿದೆ. ಪ್ರಸ್ತುತ 'ರಮಾಬಾಯಿ' ಕೃತಿಯು ದಲಿತರ ಸಾಂಸ್ಕೃತಿಕ ಅಸ್ಮಿತೆಯ ಹುಡುಕಾಟದ, ಪ್ರಾಮಾಣಿಕ ಪ್ರಯತ್ನದ ಫಲವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕನ್ನಡಕ್ಕೆ ಪರಿಚಯವಾಗುತ್ತಿರುವ ಕಾಂಚ ಐಲಯ್ಯಾ, ಆನಂದ್ ತೇಲತುಂಬ್ಡೆ, ಚಂದ್ರಬಾನ್ ಪ್ರಸಾದ್, ಗೇಲ್ ಆಮ್‌ವೆಡ್ಟ್, ಧನಂಜಯ್ ಕೀರ್, ನಾನಕ್‌ಚಂದ್‌ರತ್ತು–ಮುಂತಾದವರ ಚಿಂತನೆಗಳು ದಲಿತರ ಸಾಂಸ್ಕೃತಿಕ ಅಸ್ಮಿತೆಯನ್ನು ರೂಪಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಹಿನ್ನಲೆಯಲ್ಲಿ ಭಾರತೀಯ ದಲಿತರ ಪಾಲಿಗೆ 'ಬುದ್ಧ ಮತ್ತು ಅಂಬೇಡ್ಕರ್ ಚಿಂತನೆಗಳು' ಸಾಂಸ್ಕೃತಿಕ ಅಸ್ಮಿತೆಯ ಬಹುದೊಡ್ಡ ಮೈಲುಗಲ್ಲುಗಳಾಗಿವೆ. ಇದರ ಜೊತೆಗೆ ದಲಿತರು, ಬುದ್ಧ ಮತ್ತು ಅಂಬೇಡ್ಕರ್ ಅರಿವಿನ ಎಚ್ಚರದ ಮೂಲಕ ಸಮುದಾಯದ ಅನನ್ಯವಾದ ಸಾಂಸ್ಕೃತಿಕ ಬೇರುಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಪ್ರಸ್ತುತ ಕೃತಿ–'ರಮಾಬಾಯಿ' ಮಾದರಿಯಾಗಬಲ್ಲದು.

ಮೂಲತಃ ಲೇಖಕರೇ **ರಮಾಬಾಯಿ** ಕೃತಿಯನ್ನು ಕಾದಂಬರಿ ಎಂದು ಅಧಿಕೃತವಾಗಿ ದಾಖಲಿಸಿದ್ದಾರೆ. ವಿಶೇಷವೆಂದರೆ ಕಾದಂಬರಿಯನ್ನು ಓದುತ್ತಾ ಹೋದಂತೆ, ಇಡೀ ಕೃತಿ ಆತ್ಮಕಥೆಯ ಸ್ವರೂಪವನ್ನು ಪಡೆದುಕೊಂಡು ಬಿಡುತ್ತದೆ. ಈ ಕೃತಿಯ ಓದಿನ ಅನುಭವದ ಹಿನ್ನಲೆಯಲ್ಲಿ ಹೇಳುವುದಾದರೆ: ದಲಿತ ಲೇಖಕರು ಸಾಹಿತ್ಯದ ಯಾವುದೇ ಪ್ರಕಾರದಲ್ಲಿ ಕೃತಿ ರಚಿಸಿದರೂ ಕೂಡ ಬಹುತೇಕ ಅದು ಅವರ ಆತ್ಮಕಥೆಯ ಭಾಗವೇ ಆಗಿರುತ್ತದೆ. ಹಾಗಾಗಿ ಪ್ರಸ್ತುತ ಕಾದಂಬರಿಯು ಡಾ. ಬಿ. ಆರ್. ಅಂಬೇಡ್ಕರ್ ಅವರ ಪತ್ನಿ ರಮಾಬಾಯಿಯವರ ಆತ್ಮಕಥೆಯೂ ಹೌದು ಎಂದರೆ ಅತಿಶಯೋಕ್ತಿ ಏನಲ್ಲ. ಈ ಕೃತಿಯ ಮತ್ತೊಂದು ಮಹತ್ವದ ಸಂಗತಿ ಎಂದರೆ, ರಮಾಬಾಯಿಯವರ ಆತ್ಮಕಥೆಯ ಮೂಲಕ, ಅಂಬೇಡ್ಕರ್ ಅವರ ವ್ಯಕ್ತಿತ್ವದ, ಹೋರಾಟದ ಬದುಕು, ಹಸಿವು, ಅವಮಾನ ಹಾಗೂ ಅವರಿಗಿದ್ದ ಶೋಷಿತ ಸಮುದಾಯ ಪರ ಕಾಳಜಿಯನ್ನು ದಾಖಲಿಸುವುದಾಗಿದೆ. ಇಡೀ ಕೃತಿ ರಮಾಬಾಯಿ ಹಾಗೂ ಅಂಬೇಡ್ಕರ್ ಅವರನ್ನು ಓದುಗರ ಸ್ಮೃತಿ ಪಟಲದಲ್ಲಿ 'ತ್ಯಾಗ'ದ ಪ್ರತಿಮೆಗಳನ್ನಾಗಿ ಪ್ರತಿಷ್ಠಾಪಿಸುತ್ತದೆ. ಅಸಾಧ್ಯ ಹಸಿವು, ಬಡತನ, ಅಸ್ಪೃಶ್ಯತೆಯ ಅಪಮಾನ ಹಾಗೂ ಸಂಕಟಗಳ ನಡುವೆಯೂ ಸಹ ರಮಾಬಾಯಿ ಹಾಗೂ ಅಂಬೇಡ್ಕರ್ ಅವರಿಗಿದ್ದ, ಶೋಷಿತಪರ ಕಾಳಜಿ ಹಾಗೂ ಬದ್ಧತೆ ಓದುಗನಲ್ಲಿ ತಲ್ಲಣಗಳನ್ನು ಸೃಷ್ಟಿಸದೆ ಇರಲಾರವು. ರಮಾಬಾಯಿ ಜೀವಿತದ ಕೊನೆ ಕ್ಷಣದವರೆಗೂ ತಮ್ಮ ಇಡೀ ಬದುಕನ್ನ ಅಂಬೇಡ್ಕರ್ ಅವರ ವಿದ್ವತ್ತು, ಪಾಂಡಿತ್ಯ, ಹೋರಾಟಕ್ಕಾಗಿಯೇ ತ್ಯಾಗ ಮಾಡಿದರು. ಇದಕ್ಕೆ ಪ್ರತಿಯಾಗಿ ಅಂಬೇಡ್ಕರ್ ಅವರು ಪತ್ನಿಯ ತ್ಯಾಗಕ್ಕೆ ಕೃತಜ್ಞತೆಯ ಸಂಕೇತವಾಗಿ, ತಮ್ಮ ಇಡೀ ಜೀವಿತದ ಬದುಕನ್ನೇ ಸಮಗ್ರ ದಲಿತರ ಸಂರಕ್ಷಣೆಗಾಗಿ ಮೀಸಲಿಟ್ಟರು. ಆದರೆ, ಈ ಎರಡೂ ಜೀವಗಳ ತ್ಯಾಗದ ಫಲಾನುಭವಿಗಳಾದ ಇಡೀ ಶೋಷಿತ ಸಮುದಾಯಗಳು ಮರಳಿ ಆ ಜೀವಗಳಿಗೆ ಮಾಡಿದ ತ್ಯಾಗವಾದರೂ ಏನು? ಎಂಬ ಮಹತ್ವದ ಪ್ರಶ್ನೆಯೊಂದು ಕೃತಿಯ ಓದಿನ ತರುವಾಯ ನಮ್ಮೆದುರು ಮುಖಾಮುಖಿಯಾಗುತ್ತದೆ.

ಅಂಬೇಡ್ಕರ್ ಅವರ ಆತ್ಮಕಥೆ **ವೀಸಾ ನಿರೀಕ್ಷಣೆಯಲ್ಲಿ** ದಾಖಲಾಗದ ಹಲವು ಮಹತ್ವದ ಸಂಗತಿಗಳು ಈ ಕೃತಿಯಲ್ಲಿವೆ. ಅಂಬೇಡ್ಕರ್ ಅವರ ಕೌಟುಂಬಿಕ ನೆಲೆಯ ಬಹುಮುಖ ವ್ಯಕ್ತಿತ್ವವನ್ನು ಈ ಕೃತಿ ನಿರೂಪಿಸಬಲ್ಲದಾಗಿದೆ. ಅವರ ವ್ಯಕ್ತಿತ್ವ ಬಹುಮುಖ್ಯ ಗುಣವಾದ 'ಮಾತೃ ಸಂವೇದನೆ'ಯನ್ನು ಈ ಕೃತಿ ಪ್ರಮಾಣೀಕರಿಸುತ್ತದೆ. ಕೌಟುಂಬಿಕ ಬದುಕೊಂದು; ಸಾರ್ವಜನಿಕ ಬದುಕಾಗಿ ಮಾರ್ಪಟ್ಟ ಸಂಘರ್ಷಾತ್ಮಕ ಸ್ಥಿತಿಯೊಂದನ್ನು ಈ ಕೃತಿ ಸಾಂಕೇತಿಸುತ್ತದೆ. ಭಾರತೀಯ ದಲಿತರ ಇವತ್ತಿನ ಬದುಕಿನ ಅಸ್ತಿತ್ವದ ಹಿಂದೆ ರಮಾಬಾಯಿ ಹಾಗೂ ಅಂಬೇಡ್ಕರ್ ಅವರ ತ್ಯಾಗ, ಹೋರಾಟ ಹಾಗೂ ಪರಿಶ್ರಮದ ಪರಿಣಾಮವನ್ನು ಈ ಕೃತಿ ಸಾಕ್ಷೀಕರಿಸುತ್ತದೆ.

ಅಂಬೇಡ್ಕರ್ ಅವರ ಬದುಕಿನಲ್ಲಿ ಮಹಿಳೆಯರ ಪಾತ್ರ ಕೂಡ ಬಹಳ ಮುಖ್ಯವಾದದ್ದು. ತಾಯಿ: ಭೀಮಾಬಾಯಿ, ಮಲತಾಯಿ–ಜೀಜಾಬಾಯಿ, ಸೋದರತ್ತೆ (ತಂದೆ ರಾಮ್‌ಜಿಯ ಅಕ್ಕ) – ಮೀರಾಬಾಯಿ, ಹೆಂಡತಿ–ರಮಾಬಾಯಿ, ಎರಡನೆ ಹೆಂಡತಿ–ಸವಿತಾ, ಅಮೇರಿಕನ್ ಸ್ನೇಹಿತೆ–ಮೈಲ್‌ಡ್ರೆಡ್ ಡ್ರೇಶರ್ ಇಂಗ್ಲೆಂಡ್ ಸ್ನೇಹಿತೆ – 'F' ಈ ಎಲ್ಲಾ ಮಹಿಳೆಯರಲ್ಲಿ ಅಂಬೇಡ್ಕರ್ ಅವರ ವ್ಯಕ್ತಿತ್ವ ಮತ್ತು ಬದುಕನ್ನು ರೂಪಿಸುವಲ್ಲಿ ಬಹಳ ಮುಖ್ಯವಾಗಿ ಸೋದರತ್ತೆ ಮೀರಬಾಯಿ ಹಾಗೂ ಪತ್ನಿ ರಮಾಬಾಯಿಯವರ ಪಾತ್ರ ಮಹತ್ತರವಾದದ್ದು. ಅಮೇರಿಕನ್ ಸ್ನೇಹಿತೆ 'ಮೈಲ್‌ಡ್ರೆಡ್ ಡ್ರೇಶರ್'ಳ ಮುಂಬೈ ಮನೆಯುಲ್ಲಿದ್ದಾಗ–What Gandhi and congress have Done to tge Untouchables ಕೃತಿಯನ್ನು ರಚಿಸಿದ ಅಂಬೇಡ್ಕರ್ ಆ ಕೃತಿಯನ್ನು ಇಂಗ್ಲೆಂಡ್ ಗೆಳತಿ 'F' ಗೆ ಅರ್ಪಿಸಿದ್ದಾರೆ.

'ಭಿಕೂಧುತ್ರೆ' ಹಾಗೂ 'ರುಕ್ಮಿಣಿ' ದಂಪತಿಗಳ ಮಗಳಾದ ರಮಾಬಾಯಿ ಅವರ ಬಾಲ್ಯದ ವಿವರದೊಟ್ಟಿಗೆ ಆರಂಭವಾಗುವ ಕಾದಂಬರಿಯು; ಬಾಲ್ಯದಲ್ಲೆ ತಂದೆ–ತಾಯಿಯನ್ನು ಕಳೆದುಕೊಂಡ ರಮಾಬಾಯಿಯ ಅನಾಥ ಬದುಕಿನ ಸಂಕಟ; ಅಂಬೇಡ್ಕರ್ ಅವರ ಬಾಲ್ಯ, ಶಿಕ್ಷಣ, ಬಡತನ; ರಮಾಬಾಯಿ ಮತ್ತು ಅಂಬೇಡ್ಕರ್ ಅವರ ವಿವಾಹ, ಸ್ವತಃ ಅಂಬೇಡ್ಕರ್, ಅವರ ವಿವಾಹ, ಸ್ವತಃ ಅಂಬೇಡ್ಕರ್, ಪತ್ನಿ ರಮಾಬಾಯಿ (ರಾಮು)ಗೆ ಅಕ್ಷರ ಕಲಿಸಿದ್ದು; ಹಸಿವು, ಬಡತನದ ನಡುವೆಯೂ ಅಂಬೇಡ್ಕರ್ ಅವರ ವಿದೇಶ ಪ್ರವಾಸ, ಶಿಕ್ಷಣ, ಪದವಿ; 'ಯಶವಂತ,

ರಮೇಶ, ಇಂದು, ಗಂಗಾಧರ, ರಾಜರತ್ನ' –ಮಕ್ಕಳ ಜನನ; ಯಶವಂತನೊಬ್ಬನನ್ನು ಬಿಟ್ಟು ಉಳಿದ ನಾಲ್ಕು ಮಕ್ಕಳು ಅನಾರೋಗ್ಯಕ್ಕೆ ಬಲಿಯಾದದ್ದು; ಅದಕ್ಕೆ ಕಾರಣವಾದ ಅಂಬೇಡ್ಕರ್ ಅವರ ಆರ್ಥಿಕ ದುಸ್ಥಿತಿ ಮತ್ತು ಬಡತನ; ಇಂಗ್ಲೆಂಡಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್‌ರ ಹೋರಾಟ; ಅನುಭವಿಸಿದ ಅಪಮಾನ, ವಿರೋಧಿಗಳ ಹಲ್ಲೆ ಮತ್ತು ಕೊಲೆಯ ಸಂಚಿನಿಂದ ಪಾರಾದದ್ದು. ಈ ಎಲ್ಲಾ ಸಂಗತಿಗಳ ವಿವರದೊಟ್ಟಿಗೆ ಬೆಳೆಯುತ್ತಲೇ, ೧೯೩೫ ಮೇ ೨೭ರಂದು ಕ್ಷಯರೋಗಕ್ಕೆ ಬಲಿಯಾದ 'ರಮಾಬಾಯಿ'ಯ ಸಾವಿನ ಸಂಗತಿ ಅಂಬೇಡ್ಕರ್ ಅವರಲ್ಲಿ ಸೃಷ್ಟಿಸಿದ 'ಸಂಕಟ'ದೊಂದಿಗೆ ಮುಕ್ತಾಯವಾಗುತ್ತದೆ.

ಇಡೀ ಕಾದಂಬರಿಯಲ್ಲಿ ಓದುಗನನ್ನು ಹೆಚ್ಚು ಜಿಜ್ಞಾಸೆಗೆ ಒಡ್ಡುವ ಸಂಗತಿಗಳೆಂದರೆ: ಅಂಬೇಡ್ಕರ್ ಅವರು ನ್ಯೂಯಾರ್ಕ್ ಹಾಗೂ ಇಂಗ್ಲೆಂಡಿನಲ್ಲಿದ್ದ ಸಂದರ್ಭದಲ್ಲಿ ರಮಾಬಾಯಿಗೆ ಬರೆದ ಪತ್ರಗಳು ಮತ್ತು ರಮಾಬಾಯಿ, ಅಂಬೇಡ್ಕರ್ ಅವರಿಗೆ ಬರೆದ ಪತ್ರಗಳು. ರಮಾಬಾಯಿ ಮತ್ತು ಅಂಬೇಡ್ಕರ್ ನಡುವೆ ನಡೆಯುವ ಸಂವಾದಗಳು. ಸ್ವಾಭಿಮಾನಿ ಮಹಿಳೆಯಾಗಿದ್ದ ರಮಾಬಾಯಿ, ಅಂಬೇಡ್ಕರ್ ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋದಾಗ, ಎದೆಗುಂದದೆ ಇಡೀ ಸಂಸಾರದ ಜವಾಬ್ದಾರಿ ಹೊತ್ತವರು. ಬಯಲಲ್ಲಿ ಅಲೆದಾಡಿ ಸಗಣಿ ಸಂಗ್ರಹಿಸಿ ಬೆರಣಿ ತಟ್ಟುವುದು, ಉರುವಲಿಗಾಗಿ ಸೌದೆ ಸಂಗ್ರಹಿಸುವುದು ದಿನ ನಿತ್ಯದ ಕಾಯಕವಾಗಿತ್ತು. ಎಷ್ಟೋ ದಿನಗಳು ಊಟವಿಲ್ಲದೆ ಬರೀ ನೀರು ಕುಡಿದೆ ಉಪವಾಸ ಕಳೆದದ್ದೂ ಇದೆ. ಅಂಬೇಡ್ಕರ್ ಅವರ ಯಶಸ್ಸಿಗೆ ಬೆನ್ನೆಲುಬಾಗಿ ನಿಂತ ರಮಾಬಾಯಿಯ ತ್ಯಾಗದ ವ್ಯಕ್ತಿತ್ವವನ್ನು ಈ ಕೃತಿ ಸಮರ್ಥವಾಗಿ ನಿರೂಪಿಸುತ್ತದೆ.

ಸ್ವಾಭಿಮಾನಿ ಮಹಿಳೆಯಾಗಿದ್ದ ರಮಾಬಾಯಿ, ಅಂಬೇಡ್ಕರ್ ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಹೋದಾಗ, ಎದೆಗುಂದದೆ ಇಡೀ ಸಂಸಾರದ ಜವಾಬ್ದಾರಿ ಹೊತ್ತವರು. ಬಯಲಲ್ಲಿ ಅಲೆದಾಡಿ ಸಗಣಿ ಸಂಗ್ರಹಿಸಿ ಬೆರಣಿ ತಟ್ಟುವುದು, ಉರುವಲಿಗಾಗಿ ಸೌದೆ ಸಂಗ್ರಹಿಸುವುದು ದಿನ ನಿತ್ಯದ ಕಾಯಕವಾಗಿತ್ತು. ಎಷ್ಟೋ ದಿನಗಳು ಊಟವಿಲ್ಲದೆ ಬರೀ ನೀರು ಕುಡಿದೆ ಉಪವಾಸ ಕಳೆದದ್ದೂ ಇದೆ. ಅಂಬೇಡ್ಕರ್ ಅವರ ಯಶಸ್ಸಿಗೆ ಬೆನ್ನೆಲುಬಾಗಿ ನಿಂತ ರಮಾಬಾಯಿಯ ತ್ಯಾಗದ ವ್ಯಕ್ತಿತ್ವವನ್ನು ಈ ಕೃತಿ ಸಮರ್ಥವಾಗಿ ನಿರೂಪಿಸುತ್ತದೆ.

೧೯೩೧ರಲ್ಲಿ ದುಂಡು ಮೇಜಿನ ಪರಿಷತ್ತಿನಲ್ಲಿ ಪಾಲ್ಗೊಳ್ಳಲು ಅಂಬೇಡ್ಕರ್ ಇಂಗ್ಲೇಂಡಿಗೆ ಹೊರಡುವಾಗ, ಬೀಳ್ಕೊಡಲು ಬಂದಿದ್ದ ಧಾರವಾಡದ ವಿದ್ಯಾರ್ಥಿ ವಸತಿ ನಿಲಯದ ವಾರ್ಡನ್ ಆಗಿದ್ದ ಆತ್ಮೀಯ ಗೆಳೆಯ "ವರಾಳೆ"ಗೆ ತಮ್ಮ ಜೊತೆಯಲ್ಲಿ, ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿ ರಮಾಬಾಯಿಯನ್ನು ಧಾರವಾಡಕ್ಕೆ ಕರೆದೊಯ್ಯುವಂತೆ ಹೇಳುತ್ತಾರೆ. ಹೀಗೆ ಧಾರವಾಡದ ವಿದ್ಯಾರ್ಥಿ ನಿಲಯದಲ್ಲಿ ಸ್ವಲ್ಪ ಕಾಲ ತಂಗಿದ್ದ ರಮಾಬಾಯಿ, ಒಂದು ದಿನ ಮಕ್ಕಳಿಗೆ ಊಟವಿಲ್ಲದ ವಿಚಾರ ತಿಳಿದಾಗ ತಮ್ಮ ಕೈಯಲ್ಲಿದ್ದ ಬಂಗಾರದ ಬಳೆಗಳನ್ನು ಗಿರವಿ ಇಟ್ಟು ಆ ಹಣದಿಂದ ಮಕ್ಕಳಿಗೆ ಊಟ ಹಾಕಿಸಿ ಮಾತೃ ಪ್ರೇಮವನ್ನು ಮೆರೆಯುತ್ತಾರೆ. ಒಮ್ಮೆ ರಮಾಬಾಯಿ, 'ನಾನು ಪಾಂಡುರಂಗನ ದರ್ಶನ ಮಾಡಲು ಪಂಢರಾಪುರಕ್ಕೆ ಹೋಗಬೇಕು ಎಂದು ಅಂಬೇಡ್ಕರ್ ಅವರನ್ನು ಕೇಳಿದಾಗ, ಅಂಬೇಡ್ಕರ್ ಅವರು ತಮ್ಮ ಪ್ರಖರವಾದ ವೈಚಾರಿಕ ಚಿಂತನೆಯಿಂದ: "ಕೆಳಜಾತಿಯವರಿಗೆ ಪಾಂಡುರಂಗ ದರ್ಶನ ನೀಡೋದಿಲ್ಲ. ಯಾವ ದೇವರು ಭಕ್ತರಿಗೆ ದರ್ಶನ ನಿಡೋದಿಲ್ಲವೊ ಅಂಥ ದೇವರ ಬಳಿಗೆ ನಾವು ಯಾಕೆ ಹೋಗಬೇಕು? ಹೇಳು. ನಮ್ಮ ತ್ಯಾಗದಿಂದ ಬಡವರ ಸೇವೆ ಮಾಡೋದರಿಂದ ಇಲ್ಲಿ ನಾವು ಹೊಸ ಪಂಢರಾಪುರ ಕಟ್ಟೋಣ. ಇಲ್ಲಿಗೆ ಭಕ್ತರು ಭಕ್ತಿ ಸಲುವಾಗಿ ಬರುವ ಹಾಗಿಲ್ಲ; ಕ್ರಾಂತಿ ಮಾಡೋಕೆ ಬರುತಾರ. ಅಜ್ಞಾನವೆಂಬ ಕತ್ತಲೆಯನ್ನೊಡಿ ಸೋಣ, ತಳಸಮುದಾಯದಲ್ಲಿ ಬೇರೂರಿರುವ ಕಂದಾಚಾರ, ಅಂಧಶ್ರದ್ಧೆಗಳನ್ನು ದೂರ ತಳ್ಳುವಂತಹ ಬುದ್ಧಿವಾದದ ಪಂಢರಾಪುರವನ್ನು ನಾವು ನಿರ್ಮಾಣ ಮಾಡೋಣ, ಅಲ್ಲಿಂದ ಸಮಾನತೆಯ, ಬಂಧುತ್ವದ ವಿಚಾರ ಹಳ್ಳಿಹಳ್ಳಿಗೆ, ಕೊನೆಗೆ ಇಡೀ ದೇಶಕ್ಕೆ ಹರಡುತ್ತದೆ". ಎಂದು ಹೇಳುತ್ತಾರೆ. ಹೀಗೆ ಅಂಬೇಡ್ಕರ್ ಅವರ ವಿವೇಕದ ಮಾತುಗಳ ಪ್ರಭಾವಕ್ಕೊಳಗಾದ ರಮಾಬಾಯಿ ಅಂದಿ ನಿಂದ ಪಾಂಡುರಂಗನ ಹುಸಿ ನಂಬಿಕೆಯಿಂದ ಹೊರಬರುತ್ತಾರೆ. ಜೊತೆಗೆ, "ನಾ ಇಂದಿನಿಂದ ಪಂಡ್ರಾಪೂರಕ ಹೋಗುದನ್ನ ಬಿಟ್ಟ ಬಿಡತಿನಿ. ನನ್ನ ತಲ್ಯಾಗಿಂದ ಅದನ ತಗದ ಒಗ್ದೀನಿ" ಎಂಬುದಾಗಿ ದೃಢಸಂಕಲ್ಪ ತಾಳುತ್ತಾರೆ. ಕೊನೆವರೆಗೂ ಹಾಗೇ ಬದುಕುತ್ತಾರೆ. ತಮ್ಮ ಬಿಡುವಿಲ್ಲದ ಅಧ್ಯಯನ, ಪ್ರವಾಸ, ಹೋರಾಟದ ಕಾರಣದಿಂದಾಗಿ ರಮಬಾಯಿ ಬಗ್ಗೆ ಸರಿಯಾಗಿ ಕಾಳಜಿ ವಹಿಸಿಲ್ಲ ಎಂಬ ಕೊರಗು ಅಂಬೇಡ್ಕರ್ ಅವರಿಗಿತ್ತು. ಅದಕ್ಕಾಗಿ ಅವರು ಯಾವಾಗಲೂ "ರಾಮೂನ (ರಮಾಬಾಯಿ) ಋಣ ನನ್ನ ಮೇಲೆ ಬಹಳ ಇದೆ. ಅದನ್ನು ತೀರಿಸಲಿಕ್ಕೆ ಸಾಧ್ಯವೇ ಇಲ್ಲ". ಎಂದು ಕೊರಗುತ್ತಿದ್ದರು.

ರಮಾಬಾಯಿ, ತಮ್ಮ ಇಡೀ ಬದುಕನ್ನು ಅಂಬೇಡ್ಕರ್ ಅವರ ಯಶಸ್ಸು, ಏಳ್ಗೆಗಾಗಿ ಸಮರ್ಪಿಸಿಕೊಂಡವರು. ಇದನ್ನು ಸ್ವತಃ ಅಂಬೇಡ್ಕರ್ ಅವರೇ ಒಂದು ಪತ್ರದಲ್ಲಿ ಹೀಗೆ ನಿವೇದಿಸಿಕೊಂಡಿದ್ದಾರೆ: "ರಮಾ ನನ್ನ ಬಾಳಿನಲ್ಲಿ ಬಹಳಷ್ಟು ನಿಗ್ರಹ ಮಾಡಿಕೊಂಡು ನಾನು ಬೆಳೆಯುತ್ತಿದ್ದೇನೆ. ಇದು ಸಾಧಿತವಾಗಲು ನೀನೇ ಕಾರಣ. ನೀನೇ ಇಡೀ ತನುಮನವನ್ನು ವ್ಯಾಪಿಸಿದ್ದಿ. ಜ್ಞಾನಕ್ಕಾಗಿ ನನ್ನ ಮನಸ್ಸು ತುಡಿಯುತ್ತಿದ್ದಾಗ, ಅದನ್ನು ನಿರಾಕರಿಸದೇ, ಹಠಮಾಡದೇ ಬೆಳೆಸಿದಾಕೆ ನೀನು! ನಾನು ಜ್ಞಾನದ ಬೆಂಕಿಯಲ್ಲಿ ಬಿದ್ದು, ಬೆಳಕನ್ನು ಹುಡುಕಾಡಿದೆ. ಬಹಳಷ್ಟು ಪುಸ್ತಕಗಳನ್ನು ಓದಿದೆ. ನನ್ನ ಬರವಣಿಗೆ ಕೂಡ ನಡೆದಿತ್ತು. ನನ್ನ ಒಂದು ಪುಸ್ತಕ ಪ್ರಕಟವಾದರೆ ಸಾಕು, ಮಕ್ಕಳಾದವರಿಗೆ ಆಗುವ ಆನಂದಕ್ಕಿಂತ ಹೆಚ್ಚಿನ ಆನಂದ ನನಗಾಗುತ್ತಿತ್ತು.

ನಿನ್ನ ನೋವು–ಯಾತನೆಗಳು ನನಗೆ ಕಾಣುತ್ತಿದ್ದವು. ಆದರೂ ನೀನು ಎಲ್ಲವನ್ನು ಸಹಿಸಿಕೊಂಡು ನನಗೆ ಯಾವುದೇ ಅಡೆತಡೆಯನ್ನು ಒಡ್ಡದೇ, ನನ್ನ ಬಾಳಿನ ಜ್ಯೋತಿಯಾಗಿ ಬಂದಿಯಲ್ಲ ಅಷ್ಟು ಸಾಕು! ಎತ್ತರೆತ್ತರಕ್ಕೇರುವ ನನ್ನ ಹಂಬಲಕ್ಕೆ ಇಂಬು ಕೊಟ್ಟವಳು ನೀನು. ಒಂದು ವೇಳೆ ನೀನಿರದಿದ್ದರೆ ನನ್ನ ಬಾಳಿನಲ್ಲಿ ಅವಘಡ ಘಟಿಸುತ್ತಿತ್ತು ಎಂದು ಮಾತ್ರ ಹೇಳಬಲ್ಲೆ. ನೀನು ನನ್ನ ಬಾಳಿನಲ್ಲಿ ಬರದೇ ಇದ್ದಿದ್ದರೆ, ನನ್ನ ಬದುಕು ದಡಗಳಿಲ್ಲದ ಪ್ರವಾಹದಂತೆ ಆಗುತ್ತಿತ್ತು." ಅಂಬೇಡ್ಕರ್ ಅವರ ಪ್ರಮಾಣಿಕವಾದ ಈ ಮಾತುಗಳು ರಮಾಬಾಯಿಯವರ ಆದರಣೀಯ ವ್ಯಕ್ತಿತ್ವವನ್ನು ನಮ್ಮೆದುರು ಕಡೆದು ನಿಲ್ಲಿಸುತ್ತದೆ. ಮುಂದೆ ಅಂಬೇಡ್ಕರ್ ಸವಿತಾ ಅವರನ್ನು ೨ನೇ ಮದುವೆಯಾಗುವಾಗಲೂ, ರಮಾಬಾಯಿ ಅವರ ಬಗೆಗಿನ ಈ ಎಲ್ಲಾ ವಿಚಾರಗಳನ್ನು ಪತ್ರದ ಮೂಲಕ ತಿಳಿಸಿದ್ದುಂಟು. ಸ್ವತಃ ಅಂಬೇಡ್ಕರ್ ಅವರೇ, ರಮಾಬಾಯಿಯವರನ್ನು ಕುರಿತು: "ನನ್ನ ಬಾಳಿನ ಬೆಳಕು, ನನ್ನೆಲ್ಲ ಸಾಧನೆಗೆ ಕಾರಣಕರ್ತೆ; ಕಷ್ಟ, ಬಡತನಕ್ಕೆ ಹೆದರದ ಬಲವನ್ನು ನೀಡಿದಾಕೆ; ನನ್ನ ಕನಸಿಗೆ ರೆಕ್ಕೆ ಮೂಡಿಸಿದಾಕೆ." ಎಂದು ಹೇಳಿದ್ದುಂಟು. ಒಮ್ಮೆ ಅಂಬೇಡ್ಕರ್ ಅವರು ರಮಾಬಾಯಿಗೆ ಪತ್ರ ಬರೆಯುತ್ತಾ: "ದುಃಖಗಳು ಮನುಷ್ಯನನ್ನು ದೊಡ್ಡವನನ್ನಾಗಿ ಮಾಡುತ್ತವೆ. ನಮ್ಮ ಬದುಕಿಗೆ ನಾವೇ ಸೂರ್ಯರಾಗಬೇಕು. ನಾವೇ ನಮ್ಮ ಮಾರ್ಗ ಕೂಡ ಆಗಬೇಕು. ಆ ಮಾರ್ಗದಲ್ಲಿ ದೀಪಗಳ ಸಾಲು ಕೂಡ ನಾವೇ ಆಗಬೇಕು. ನಮ್ಮ ದೇಶದಲ್ಲಿಯ ಎಲ್ಲ ಶೋಷಿತರ ಸಂಸಾರಗಳು ನನ್ನ ಕಣ್ಣ ಮುಂದೆ ಬರುತ್ತವೆ. ನಮ್ಮ ದೇಶದಲ್ಲಿರುವ ಬಡ, ಅನಕ್ಷರಸ್ಥ, ಮುಗ್ಧ ಜೀವಿಗಳನ್ನು ಮನುಷ್ಯರನ್ನಾಗಿ ಮಾಡಬೇಕಿದೆ. ಅವರಿಗೆ ನ್ಯಾಯ ದೊರಕಿಸಿಕೊಡಬೇಕಿದೆ. ಅದಕ್ಕಾಗಿಯೇ ನನ್ನ ಬೌದ್ಧಿಕ, ಮಾನಸಿಕ ಮತ್ತು ವಾಚಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ. ವಿರೋಧಿಗಳಿಗೆ ನಮ್ಮ ಕಂಡರೇನೇ ಭಯ ಹುಟ್ಟಬೇಕು! ನಮ್ಮ ಅಂಜಿಕೆ ಎಂದರೆ ಜ್ಞಾನದ ಅಂಜಿಕೆ! ದೀನ, ದುರ್ಬಲರ ಮೇಲೆ ಆಗುವ ಶೋಷಣೆಯನ್ನು ಕಂಡು ನನ್ನ ಜೀವ ಉರಿದು ಹೋಗುತ್ತದೆ. ಈ ಕಾರಣದಿಂದಲೇ ನಾನು ಅನ್ನ, ನೀರು, ಮೋಜು, ಮಸ್ತಿ ಎಲ್ಲದಕ್ಕೂ ಬೆನ್ನು ತಿರುಗಿಸಿ, ಜ್ಞಾನದ ಅಗ್ನಿ ಕುಂಡದಲ್ಲಿ ನನ್ನನ್ನು ನಾನೇ ತಳ್ಳಿಕೊಂಡಿದ್ದೇನೆ. ಸತ್ಯದ ಕಡೆ ಬೆನ್ನು ತಿರುಗಿಸಬಹುದು. ಆದರ ಸತ್ಯವನ್ನು ನಿರಾಕರಿಸಲು ಸಾಧ್ಯವೇ?" ಎಂದು ಹೇಳುತ್ತಾರೆ. ಈ ಮಾತುಗಳು ಇಡೀ ಕೃತಿಯ ಆಶಯದಂತಿದ್ದು; ಈ ಮಾತುಗಳ ಹಿನ್ನೆಲೆಯಲ್ಲಿ ಶೋಷಿತರು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುತ್ತಲೇ ಚಿಂತನೆಗೆ ಒಡ್ಡಿಕೊಳ್ಳುವ ಅಗತ್ಯವಿದೆ. ಆ ಮೂಲಕ ಇನ್ನಾದರೂ ಶೋಷಿತರು ರಮಾಬಾಯಿ ಮತ್ತು ಅಂಬೇಡ್ಕರ್ ಅವರನ್ನು ಬದುಕಿನ ಮಾದರಿಗಳನ್ನಾಗಿ ಸ್ವೀಕರಿಸಬೇಕಿದೆ.

ಶೋಷಿತರು ಅಂಬೇಡ್ಕರ್ ಮತ್ತು ರಮಾಬಾಯಿ ಅವರ ಬದುಕು, ಹೋರಾಟ, ತ್ಯಾಗ, ಬರಹಗಳನ್ನು ಆಕರವಾಗಿಸಿಕೊಂಡು ತಮ್ಮ ಬದುಕುಗಳನ್ನು ಕಟ್ಟಿಕೊಳ್ಳಬೇಕಿದೆ. ಜೊತೆಗೆ ಇಡೀ ಶೋಷಿತ ಸಮುದಾಯಕ್ಕೆ ಋಣಿಗಳಾಗಬೇಕಿದೆ. ಪ್ರಸ್ತುತ ಕೃತಿಯು 'ಸಾವು ಸಾರ್ಥಕವಾಗುವಂತೆ ಬದುಕಿ ತೋರಿಸುವಂತದ್ದೇ ನಿಜವಾದ ಬದುಕು' ಎಂಬುದನ್ನು ಅಂಬೇಡ್ಕರ್ ಮತ್ತು ರಮಾಬಾಯಿ ಅವರ ನಿಸ್ವಾರ್ಥ, ತ್ಯಾಗ, ಸಮರ್ಪಣಾ ಮನೋಭಾವದ ಪರಿಪೂರ್ಣ ಬದುಕಿನ ಮೂಲಕ ಸಾಬೀತುಪಡಿಸಿದೆ. ಇಂತಹ ಮಹತ್ವದ ಕೃತಿಯೊಂದನ್ನು ಕನ್ನಡಕ್ಕೆ ತರುವ ಮುಖೇನ, ದಲಿತ ಸಾಂಸ್ಕೃತಿಕ ಅಸ್ಮಿತೆಯ ಅರಿವನ್ನು ಎಚ್ಚರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ ಡಾ. ಎಚ್. ಟಿ. ಪೋತೆಯವರು ಓದುಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. □

ಅಂಗೈ ಹುಣ್ಣಿಗೆ ಮುಲಾಮು-
ವಿಧವಾ ವಿಮೋಚನೆ

ಡಾ|| ಎಚ್. ಎಸ್. ಅನುಪಮಾ



ಪಬ್‌ದಾಳಿ ನಡೆದು ಸ್ವಘೋಷಿತ ಧರ್ಮ ರಕ್ಷಕರು ಯುವತಿಯರನ್ನು ಹಿಗ್ಗಾಮುಗ್ಗಾ ಎಳೆದಾಡಿದ್ದ ಊರಿನಲ್ಲೇ ವಿಧವಾ ವಿಮೋಚನೆ ಹಮ್ಮಿಕೊಳ್ಳಲಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅತಿ ಕಡಿಮೆ ಬಾಲ್ಯವಿವಾಹ, ಅತಿ ಹೆಚ್ಚು ಸಾಕ್ಷರತೆ, ರಾಜ್ಯದಲ್ಲೇ ಅತಿ ಹೆಚ್ಚು ಲಿಂಗಾನುಪಾತ ಇದೆ. ಇನ್ನಿತರ ಅಭಿವೃದ್ಧಿ ಸೂಚ್ಯಂಕಗಳು, ಅಂಕಿ-ಅಂಶಗಳು ಅದನ್ನು ಪ್ರಗತಿಪರ ಜಿಲ್ಲೆಯೆಂದು ಬಿಂಬಿಸುತ್ತಿರುವಾಗಲೇ ಬಲ ಪಂಥೀಯ ಕೋಮುವಾದವು ಎಲ್ಲವೂ ಮುಂಚೆ ಇದ್ದಂತೆಯೇ ಮುಂದುವರೆಯಲಿ ಎಂಬ ಮೂಲಭೂತವಾದಿ ಧೋರಣೆ ಬೆಳೆಯಲು ಕಾರಣವಾಗಿತ್ತು. ಇಂಥ ಹೊತ್ತಿನಲ್ಲೇ ಧಾರ್ಮಿಕ ಸ್ಥಳವೊಂದು ಬದಲಾವಣೆಗೆ ಚಾಲನೆ ಕೊಟ್ಟಿರುವುದು ವಿಶೇಷವೇ.

ಅಂತೂ ಇಂತೂ ಹಿಂದೂ ಸಮಾಜಕ್ಕೆ ವಿಧವೆ ಅಮಂಗಳೆಯಲ್ಲ ಅನ್ನಿಸತೊಡಗಿದೆ! ಮಂಗಳೂರಿನ ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಾಲಯದಲ್ಲಿ ವಿಧವೆಯರಿಗೆ ಮಂಗಳ ಕಾರ್ಯದಲ್ಲಿ ಅವಕಾಶ ನೀಡಲಾಗಿದೆ.

ಭಾರತೀಯ ಸಮಾಜ ಮಹಿಳೆಯನ್ನು ಎಷ್ಟು ಹೀನಾಯವಾಗಿ ನಡೆಸಿಕೊಂಡಿದೆ ಎನ್ನುವುದು ವಿಧವೆಯರ ಸ್ಥಾನಮಾನ ನೋಡಿದರೆ ತಿಳಿಯುತ್ತದೆ. ಶಿಕ್ಷಣ, ಆಡಳಿತ, ವಾಣಿಜ್ಯ, ರಾಜಕಾರಣ, ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಪುರುಷನಿಗೆ ಸರಿಸಮಾನ ಹೆಜ್ಜೆಗಳನ್ನಿಡುತ್ತಿರುವ ಈ ಹೊತ್ತಿನಲ್ಲೂ ವಿಧವೆಯ ಕುರಿತ ನಮ್ಮ ಆಲೋಚನಾಕ್ರಮ ಬದಲಾಗಿಲ್ಲ. ವಿಧವೆಯರು ಈಗ ಸತಿ ಹೋಗುತ್ತಿಲ್ಲ, ತಲೆ ಬೋಳಿಸುತ್ತಿಲ್ಲ, ಹೌದು. ಆದರೆ ಈಗಲೂ ಅವಳು ಅಮಂಗಳೆಯೇ. ತನ್ನ ಮಕ್ಕಳ ಮದುವೆ ಮಾಡಲು ಹಸೆಮಣೆ ಏರಲಾರದಷ್ಟು, ಶುಭ ಸಂದರ್ಭಗಳಲ್ಲಿ ಮರೆಯಾಗಿ ನಿಲ್ಲುವಷ್ಟು ಅಮಂಗಳೆ. ಮರುವಿವಾಹ ಈಗಲೂ ಕಷ್ಟ. ಹೀಗಿರುತ್ತ ಕಳೆದುಕೊಂಡ ಆತ್ಮಗೌರವವನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ 'ವಿಧವಾ ವಿಮೋಚನೆ' ಒಳ್ಳೆಯ ಬೆಳವಣಿಗೆ.

ಎಲ್ಲ ಧರ್ಮದ ಅತಿ ಹೆಚ್ಚು ಪ್ರಗತಿಪರರೂ, ಅತಿ ಹೆಚ್ಚು ಕೋಮುವಾದಿಗಳೂ ತುಂಬಿಕೊಂಡಿರುವ ವಿಶಿಷ್ಟ ಜಿಲ್ಲೆ ದಕ್ಷಿಣಕನ್ನಡ. ಪಬ್ ದಾಳಿ ನಡೆದು ಸ್ವಘೋಷಿತ ಧರ್ಮರಕ್ಷಕರು ಯುವತಿಯರನ್ನು ಹಿಗ್ಗಾಮುಗ್ಗಾ ಎಳೆದಾಡಿದ್ದ ಊರಿನಲ್ಲೇ ವಿಧವಾ ವಿಮೋಚನೆ ಹಮ್ಮಿಕೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ಕಡಿಮೆ ಬಾಲ್ಯ ವಿವಾಹ, ಅತಿ ಹೆಚ್ಚು ಸಾಕ್ಷರತೆ, ರಾಜ್ಯದಲ್ಲೇ ಅತಿ ಹೆಚ್ಚು ಲಿಂಗಾನುಪಾತ ಇದೆ. ಇನ್ನಿತರ ಅಭಿವೃದ್ಧಿ ಸೂಚ್ಯಂಕಗಳು, ಅಂಕಿ-ಅಂಶಗಳು ಅದನ್ನು ಪ್ರಗತಿಪರ ಜಿಲ್ಲೆಯೆಂದು ಬಿಂಬಿಸುತ್ತಿರುವಾಗಲೇ ಬಲಪಂಥೀಯ ಕೋಮುವಾದವು ಎಲ್ಲವೂ ಮುಂಚೆ ಇದ್ದಂತೆಯೇ ಮುಂದುವರೆಯಲಿ ಎಂಬ ಮೂಲಭೂತವಾದಿ ಧೋರಣೆ ಬೆಳೆಯಲು ಕಾರಣವಾಗಿತ್ತು. ಇಂಥ ಹೊತ್ತಿನಲ್ಲೇ ಧಾರ್ಮಿಕ ಸ್ಥಳವೊಂದು ಬದಲಾವಣೆಗೆ ಚಾಲನೆ ಕೊಟ್ಟಿರುವುದು ವಿಶೇಷವೇ.

19ನೇ ಶತಮಾನದ ಪೂರ್ವ ಭಾಗದಿಂದಲೂ ಹಿಂದೂ ಸಮಾಜ ಸುಧಾರಕರು ಮಹಿಳಾ ಸಮಸ್ಯೆಗಳ ಸುಧಾರಣೆಯತ್ತ ಹೆಚ್ಚು ಗಮನ ಹರಿಸಿದ್ದರು. 1829ರಲ್ಲಿ ಸತಿ ನಿರ್ಮೂಲನಾ ಕಾಯಿದೆ, 1856ರಲ್ಲಿ ಹಿಂದೂ ಪುನರ್ವಿವಾಹ ಕಾಯಿದೆ, 1870ರಲ್ಲಿ ಹೆಣ್ಣುಶಿಶುಹತ್ಯೆ ನಿಷೇಧ ಕಾಯಿದೆ, 1929ರಲ್ಲಿ ಬಾಲ್ಯವಿವಾಹ ನಿಷೇಧ ಕಾಯಿದೆ ಹೀಗೇ ಮಹಿಳಾ ಪರವಾದ ಅನೇಕ ಕಾಯಿದೆಗಳು ಬಂದವು. ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾದ, ಹಿಂದೂ ಕೌಟುಂಬಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಯಸಿದ್ದ ಹಿಂದೂ ಕೋಡ್ ಬಿಲ್ ಅವರ ಅವಧಿಯಲ್ಲಲ್ಲದಿದ್ದರೂ ನಂತರ ಅಂಗೀಕೃತವಾಯಿತು. ಹೀಗೆ ಬ್ರಿಟಿಷ್ ಕಾಲದಲ್ಲಿ ಕ್ರಾಂತಿಕಾರಿ ಎನ್ನುವಂತಹ ಬದಲಾವಣೆಗಳು ಕಂಡುಬಂದರೂ ಪ್ರಜಾಪ್ರಭುತ್ವವಾದಿ ಸೆಕ್ಯುಲರ್ ಭಾರತ ಕಾನೂನು ಚೌಕಟ್ಟಿಗೆ ಬಂದ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತಾ ಧಾರ್ಮಿಕ ವಿಷಯಗಳ ಬಗ್ಗೆ ಮುಗುಮ್ಮಾಗಿ ಕುಳಿತಿತ್ತು. ಧರ್ಮ ಸ್ಥಾಪನೆಯ ಹೆಸರಲ್ಲಿ ದನ-ಮಠ-ದೇವಸ್ಥಾನ-ಭಾಷೆಗಳ ಜೀರ್ಣೋದ್ಧಾರದ ಮಾತನಾಡುವ ಮಠಾಧಿಪತಿಗಳು ತಮ್ಮ ಸಮುದಾಯದ ಹೆಣ್ಣುಮಕ್ಕಳಿಗೆ ಲಲಿತಾಸಹಸ್ರನಾಮ, ಲಕ್ಷ್ಮೀಪೂಜೆ, ಗೌರೀವ್ರತ ಮಾಡುವಂತೆ ಸಲಹೆ ನೀಡಿ ಧಾರ್ಮಿಕ ಪುನರುತ್ಥಾನದ ಭ್ರಮೆ ಹುಟ್ಟಿಸುತ್ತ ಲಿಂಗಸಮಾನತೆ, ತಾರತಮ್ಯದ ಬಗೆಗೆ ಚಕಾರವೆತ್ತದೇ ಇದ್ದರು.

ಹೀಗಿರುವಾಗ ಗೋಕರ್ಣನಾಥೇಶ್ವರ ದೇವಾಲಯ ಭಿನ್ನವಾಗಿ ಯೋಚಿಸಿದೆ. ಈ ದೇವಾಲಯ ಕಳೆದ ಶತಮಾನದ ಹಿಂದೂ ಸಮಾಜಸುಧಾರಕ ನಾರಾಯಣ ಗುರು ಅವರ ಪರಂಪರೆಗೆ ಸೇರಿದ್ದು. ಕೇರಳದ ನಾರಾಯಣ ಗುರು ಜಾತಿ, ಧರ್ಮ ಎಂಬ ತಾರತಮ್ಯಗಳನ್ನು ವಿರೋಧಿಸಿ, ಎಲ್ಲರೂ ಒಂದೇ ಎನ್ನುವ 'ಅದ್ವೈತ' ತತ್ವ ಪ್ರತಿಪಾದಿಸಿದವರು. ಸಂಭ್ರಮದಿಂದ ತಮ್ಮ ಮೂರ್ತಿ ಸ್ಥಾಪಿಸಹೊರಟ ಜಾತಿಬಾಂಧವರಿಗೆ 'ನನಗೆ ಜಾತಿಯಿಲ್ಲ. ನಾನು ಯಾವ ಜಾತಿ ಧರ್ಮಕ್ಕೂ ಸೇರಿದವನಲ್ಲ' ಎಂದು ಹೇಳಿದವರು. ಈ ವಿಷಯದಲ್ಲಿ ಗಾಂಧಿ ನಿಲುವಿಗಿಂತ ಭಿನ್ನವಾಗಿ ನಿಂತ ಅವರು ಕೆಳಜಾತಿಯ ಜನ ಮತಾಂತರವಾಗುವುದನ್ನೂ ಸಮರ್ಥಿಸಿಕೊಂಡಿದ್ದರು.

'Too many women
In too many countries
Speak the same language
Of silence..'

ಇವು ಅನಸೂಯಾ ಸೇನ್‌ಗುಪ್ತ ಅವರ ಕವನದ ಸಾಲುಗಳು. ಇದು ಭಾರತದ ವಿಧವೆಯರಿಗೆ ಹೆಚ್ಚು ಅನ್ವಯಿಸುತ್ತದೆ. ಮಹಿಳೆಯ ಅಸ್ತಿತ್ವವನ್ನು ಗಂಡನ ಬದುಕಿನೊಂದಿಗೆ ತಳುಕುಹಾಕುವ ವಿಧವಾ ಪದ್ಧತಿ ಮೌನವನ್ನು ಹೇರುತ್ತದೆ. ಮಾತನಾಡಲು ಕುಲಗೌರವ ಅಡ್ಡ ಬರುತ್ತದೆ. ಆದರೆ ವಿಧವಾ ಪದ್ಧತಿ ಸಹಜವಾಗಿ ಬೆಳೆದು ಬಂದಿದ್ದಲ್ಲ. ಪುರುಷ ಪ್ರಧಾನ ಸಮಾಜದ ಭಾಗವಾಗಿ ಹುಟ್ಟಿಕೊಂಡರೂ ಮಹಿಳೆ ಒಪ್ಪಿಕೊಂಡ ವ್ಯವಸ್ಥೆ ಅಲ್ಲ. ಇದನ್ನು ಬಲವಂತವಾಗಿ ಹೇರಲಾಗಿತ್ತು. ಮನೆಯೊಳಗೆ ಹಾಗೂ ಹೊರಗೆ ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. ಅದನ್ನು ರಾಜ್ಯಾಧಿಕಾರವೂ ಎತ್ತಿ ಹಿಡಿದಿತ್ತು. ಆದರೆ ಈ ಪದ್ಧತಿ ಸಮಾಜದ ಎಲ್ಲ ಜಾತಿ-ಸ್ತರಗಳಲ್ಲಿ ಒಂದೇ ತೆರನಾಗಿಲ್ಲ. ಈ ಭಿನ್ನತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಜಾತಿಪದ್ಧತಿ ಹಾಗೂ ಲಿಂಗ ಅಸಮಾನತೆ ಬೆಳೆದುಬಂದ ಹಿನ್ನೆಲೆಯನ್ನು ನೋಡಬೇಕು.

ಭಾರತೀಯ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಜಾತಿ ಶ್ರೇಷ್ಠತೆ ಹಾಗೂ ಶ್ರೇಣಿ ವ್ಯವಸ್ಥೆಯಲ್ಲಿ ಜಾತಿಯ ಸ್ಥಾನಮಾನವನ್ನು ಮುಖ್ಯವಾಗಿ ನಿರ್ಧರಿಸುವುದು ವೃತ್ತಿ, ಆಹಾರ ಪದ್ಧತಿ ಹಾಗೂ ವಿವಾಹ ಆಚರಣೆಗಳು. ಅದರಲ್ಲೂ ವಿವಾಹ ಪದ್ಧತಿ ಮತ್ತು ವಿಧವಾ ಪದ್ಧತಿ ಜಾತಿ ಏಣಿಶ್ರೇಣಿ ನಿರ್ಧರಿಸುವ ಪ್ರಮುಖ ಅಂಶಗಳು. ಕಟ್ಟುನಿಟ್ಟಾದ ಒಳವಿವಾಹ, ವಿವಾಹಿತ ಸ್ತ್ರೀಯ ಪಾತಿವ್ರತ್ಯ, ಶುದ್ಧತೆ ಇವು ಜಾತಿ ಶ್ರೇಷ್ಠತೆಯನ್ನು ಬಿಂಬಿಸುವ ಅಂಶಗಳಾದರೆ, ವಿಧವೆಯರನ್ನು ಮುಖ್ಯವಾಹಿನಿಯಿಂದ ಆಚೆ ತಳ್ಳುವುದು ಜಾತಿಯ ಸ್ಥಾನಮಾನ ಕಾಪಾಡುತ್ತದೆ! ಮೇಲ್ಜಾತಿಗಳು ವಿಧವಾ ವಿವಾಹ ಜಾರಿಗೆ ತಂದಿದ್ದೇ ಆದಲ್ಲಿ ಅವರ ಸ್ಥಾನ ಕೆಳಗಿಳಿಯುತ್ತದೆ. ಮಾಳವಾದ ರಜಪೂತರು ವಿಧವಾ ಮರುವಿವಾಹ ಮಾಡತೊಡಗಿದಾಗ ಅವರಲ್ಲಿ 'ನೈಜ' ಮತ್ತು 'ಖೊಟ್ಟಿ' ಎಂಬ ಎರಡು ಪಂಗಡಗಳು ಹುಟ್ಟಿದವು. ಹಾಗೆಯೇ ಮೇಲ್ಚಲನೆ ಬಯಸಿದ ಜಾತಿಗಳು ತಮ್ಮ ಹೆಣ್ಣುಮಕ್ಕಳ ಮೇಲೆ ಹೊಸ ರೂಢಿಗ

ಳನ್ನು ಹೇರಿದರು. ಪೂರ್ವ ಭಾರತದ ರಾಜಬನ್ಸಿಗಳು ಕ್ಷತ್ರಿಯ ಸ್ಥಾನಕ್ಕಾಗಿ ಶ್ರಮಿಸಿ, ತಮ್ಮ ಹೆಣ್ಣು ಮಕ್ಕಳು ಸಂತೆಗೆ, ಮಾರುಕಟ್ಟೆಗೆ ಹೊರಹೋಗುವುದನ್ನು ನಿಷೇಧಿಸಿದರು. ಚಾಂಡಾಲ ಜಾತಿಯ ನಾಮಶೂದ್ರರೂ ಇದನ್ನು ಅನುಸರಿಸಿದ್ದರು. ತಮ್ಮ ಜಾತಿಯ ವಿಧವೆ ಹೆಣ್ಣುಮಕ್ಕಳು ಕಟ್ಟುನಿಟ್ಟಿನ ಬ್ರಹ್ಮಚರ್ಯ ಅನುಭವಿಸುವಂತೆ ಮಾಡಿದರು.

ಮೇಲ್ಜಾತಿ ಮತ್ತು ಕೆಳಜಾತಿಗಳ ಪಿತೃಪ್ರಧಾನ ವ್ಯವಸ್ಥೆಗಳು ಬೇರೆಬೇರೆಯಾಗಿದ್ದವು. ಅದರಲ್ಲೂ ಬ್ರಾಹ್ಮಣ ಪುರುಷ ಪ್ರಧಾನತೆಯು ಜಾತಿ, ಲಿಂಗ, ಆಸ್ತಿ, ಜನ ಸಾಂಖ್ಯಿಕ ಅಂಶಗಳೆಲ್ಲವನ್ನು ಒಂದೇ ಚೌಕಟ್ಟಿನೊಳಗೆ ತಂದು ಮೇಲ್ಜಾತಿ ಮತ್ತು ಕೆಳಜಾತಿಗಳೆರಡನ್ನೂ ಒಟ್ಟಿಗೆ ನಿಯಂತ್ರಣದಲ್ಲಿಟ್ಟುಕೊಂಡಿತ್ತು. ಪಾತಿವ್ರತ್ಯ, ಅದರಲ್ಲೂ ಬ್ರಾಹ್ಮಣ ಮಹಿಳೆಯ ಪಾತಿವ್ರತ್ಯ ಅತಿ ಅಗತ್ಯ ಎಂಬುದನ್ನು ರಾಜ್ಯಾಧಿಕಾರವೂ ಎತ್ತಿಹಿಡಿದಿತ್ತು. ಹಾಗೆ ನೋಡಿದರೆ ಬ್ರಾಹ್ಮಣ್ಯದ ಪಾರಮ್ಯವನ್ನು ಎತ್ತಿ ಹಿಡಿದವರು ಬ್ರಾಹ್ಮಣ ಹೆಂಗಸರು. ಅವರು ಜಾತಿ ಶುದ್ಧತೆಗಾಗಿ, ಅದರ ಮೇಲ್ಮೆಗಾಗಿ ತಮ್ಮ ಹೆಗಲ ಮೇಲೆ ಪರಿಶುದ್ಧತೆಯ ಭಾರವನ್ನು ಹೊತ್ತವರು. ಇದು ಶ್ರೇಣಿ ವ್ಯವಸ್ಥೆಯ ಮೇಲಿನ ಎಲ್ಲ ಜಾತಿಗಳಿಗೂ ಅನ್ವಯಿಸುತ್ತದೆ. ಆದರೆ ತಳಸಮುದಾಯದ ಶ್ರಮಿಕ ಮಹಿಳೆಯರಿಗೆ ಪತಿವ್ರತಾ ಧರ್ಮದ ಹೇರಿಕೆಯಿರಲಿಲ್ಲ.

ಮೇಲ್ಜಾತಿ ಮಹಿಳೆಯ ಅಸ್ತಿತ್ವವಾದರೋ ಅವಳ ಗಂಡನ ಬದುಕಿನೊಂದಿಗೆ ನೇರವಾಗಿ ಸಂಬಂಧಿಸಿದ್ದು. ಬಾಲವಿಧವೆಯರ ದುರಂತ ಚಿತ್ರಣವನ್ನು ಕನ್ನಡದ 'ಫಣಿಯಮ್ಮ'ನಿಂದ ಹಿಡಿದು ದೀಪಾ ಮೆಹ್ತಾ ಅವರ 'ವಾಟರ್' ಚಿತ್ರದವರೆಗೆ ಎಲ್ಲವೂ ಚಿತ್ರಿಸಿವೆ. ಬಸುರಾದ ಎಳೆ ವಿಧವೆ ಮಾಡಿದ ಘನಘೋರ ಪಾಪದ ಕುರಿತು ಬಸುರು ಮಾಡಿದವನೇ ಮಠದ ಸ್ವಾಮಿಗಳಿಗೆ ಚಾಡಿ ಹೇಳಿ ಬಹಿಷ್ಕಾರ ಹಾಕಿಸುತ್ತಿದ್ದುದನ್ನು, ಹಾಗೆ ಹುಟ್ಟಿದ ಮಕ್ಕಳು ಬೇರೆಯೇ ಅಡ್ಡ ಜಾತಿಯಾಗುತ್ತಿದ್ದುದನ್ನು, ಹಾಗೂ ವಿಧವೆಯರು ಬೀದಿ ಪಾಲಾಗುತ್ತಿದ್ದ ದುರಂತವನ್ನು 'ಫಣಿಯಮ್ಮ' ಬಿಡಿಸಿಟ್ಟಿದೆ. ಬನಾರಸಿನಲ್ಲಿ ಉಳಿದ ಬದುಕು ಸವೆಸಬೇಕಾದ ಬಂಗಾಳಿ ಮೇಲ್ಜಾತಿ ವಿಧವೆಗೆ ಭಿಕ್ಷಾಟನೆ, ದೇಹ ಮಾರುವುದು ಅಥವಾ ಗಂಗಾನದಿಯೇ ಗತಿ ಎನ್ನುವ ಕಟುವಾಸ್ತವವನ್ನು ಹಲವು ಸಾಹಿತ್ಯ ಕೃತಿಗಳು ಕಟ್ಟಿಕೊಟ್ಟಿವೆ. ವೈಧವ್ಯವೆಂದರೆ ಮೇಲ್ಜಾತಿ ಹೆಣ್ಣಿನ ಮಟ್ಟಿಗೆ ಸಾವೇ. ಇನ್ನುಮುಂದೆ ಮಕ್ಕಳನ್ನು ಹೆರಲಾಗದ, ಲೈಂಗಿಕತೆಗೆ ಲಭ್ಯವಿಲ್ಲದ, ಗಂಡನಿಲ್ಲದ ಅವಳು ಕುಟುಂಬದಿಂದ ಹೊರಗೆ. ಮಕ್ಕಳಿಲ್ಲದ ವಿಧವೆ ಜೀವವಿಲ್ಲದ ಮನುಷ್ಯನಂತೆ. ಗಂಡನಿಲ್ಲದ, ಪತಿವ್ರತೆಯಾಗಲು ಸಾಧ್ಯವಿಲ್ಲದ, ಆತನ ಚಿತೆಗೆ ಹಾರದ ಹೆಂಡತಿ ಬದುಕಿದರೂ ನಿಕೃಷ್ಟರಲ್ಲಿ ನಿಕೃಷ್ಟಳು. ಧಾರ್ಮಿಕ ಆಚರಣೆಗಳ ಸಮಯದಲ್ಲಿ ಸುಮಂಗಲಿಯರ ಜೊತೆ ಅವರು ಬೆರೆಯುವಂತಿರಲಿಲ್ಲ. ಎಷ್ಟೋ 'ಫಣಿಯಮ್ಮ'ರ ದಾರುಣ ಬದುಕಿಗೆ ಈ ನಿರ್ಬಂಧಗಳೇ ಕಾರಣವಾಗಿದ್ದವು.

ಇದಕ್ಕೆ ರಾಜ್ಯಾಧಿಕಾರದ ಬೆಂಬಲವಿತ್ತು. ಇದಕ್ಕೆ ಉದಾಹರಣೆಯಾಗಿ ಪೇಶ್ವೆ ಆಡಳಿತ ಕಾಲವನ್ನು ನೋಡಬಹುದು. ಬ್ರಾಹ್ಮಣ ಪುರುಷ ಪ್ರಾಧಾನ್ಯತೆ ಆ ಕಾಲದಲ್ಲಿ ಗರಿಷ್ಠವಾಗಿತ್ತು. ವಿಧವಾ ಪದ್ಧತಿಯ ಬಗೆಗಷ್ಟೇ ಅಲ್ಲ, ಒಟ್ಟಾರೆ ಹೆಂಗಸರ ಲೈಂಗಿಕತೆಯ ಕುರಿತೇ ಕಟ್ಟುನಿಟ್ಟಾದ ನಿರ್ಬಂಧಗಳಿದ್ದವು. ಬ್ರಾಹ್ಮಣ್ಯದ ವ್ಯಾಖ್ಯೆಯಲ್ಲಿ ಕಟ್ಟುನಿಟ್ಟಾದ ಒಳವಿವಾಹ, ಕಡ್ಡಾಯ ಬಾಲ್ಯವಿವಾಹ, ಮರುವಿವಾಹ ನಿಷೇಧ, ವಿಧವೆಗೆ ಸನ್ಯಾಸಿನಿಯ ಸ್ಥಾನ ಇವೆಲ್ಲವೂ ಸೇರಿಕೊಂಡವು. ವಿಧವೆಗೆ ಮರುಮದುವೆಯ ಪ್ರಶ್ನೆಯೇ ಇಲ್ಲದಂತೆ ಕಡ್ಡಾಯ ತಲೆ ಬೋಳಿಸಲಾಯಿತು. ಉಲ್ಲಂಘಿಸಿದಲ್ಲಿ ಜಾತಿ ಬಹಿಷ್ಕಾರ ಹಾಕಲಾಯಿತು. ಇದು ಆಡಳಿತ ವ್ಯವಸ್ಥೆಯ ಭಾಗವಾಗಿಯೇ ಬಂತು. ಪೇಶ್ವೆಗಳ ರಾಜ್ಯದಲ್ಲಿ ಅತಿಹೆಚ್ಚು ಆತ್ಮಹತ್ಯೆ ಮಾಡಿಕೊಂಡವರು ವಿಧವೆಯರು. ಕೆಲವು ವಿಧವೆಯರು ಒತ್ತಾಯದ ಬ್ರಹ್ಮಚರ್ಯ ವಿರೋಧಿಸಿ ಮುಸಲ್ಮಾನ ಗಂಡಸರನ್ನು ಮದುವೆಯಾಗಿ ಅದು ಕೋಮು ಜಗಳಕ್ಕೂ ಕಾರಣವಾಯಿತು.

ಡಾ|| ಎಚ್.ಎಸ್. ಅನುಪಮಾ

ಈಚಿನ ಕನ್ನಡದ ವೈಚಾರಿಕ ಬರಹಗಾರರಲ್ಲಿ ಮಂಚೂಣಿ ಸಾಲಿನಲಿ ನಿಲ್ಲುವ ಡಾ|| ಎಚ್.ಎಸ್. ಅನುಪಮಾ ಶಿವಮೊಗ್ಗ ಜಿಲ್ಲೆಯವರು. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದು ಕಳೆದ 18 ವರ್ಷಗಳಿಂದ ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕವಲಕ್ಕಿ ಎಂಬಲ್ಲಿ ವೈದ್ಯವೃತ್ತಿ ನಡೆಸುತ್ತಿದ್ದಾರೆ.

ಕಥೆ, ಕವಿತೆ, ಅನುವಾದ, ಪ್ರವಾಸ ಕಥನ, ವೈದ್ಯಕೀಯ ಬರಹ ಹೀಗೆ ಅನುಪಮಾ ಅವರ ಸಾಹಿತ್ಯ ಕೃಷಿ ಹಲವು ಹರವಿನಲ್ಲಿ ಸಾಗಿದೆ. ಇತಿಹಾಸ, ಖಗೋಳ ಶಾಸ್ತ್ರ, ಪರಿಸರ–ಇವುಗಳ ಬಗ್ಗೆ ಆಳವಾದ ಜ್ಞಾನ ಹೊಂದಿದ್ದಾರೆ. ಅನೇಕ ಪತ್ರಿಕೆಗಳಿಗೆ ನಿರಂತರವಾಗಿ ಲೇಖನಗಳನ್ನು ಬರೆಯುತ್ತಿರುವ ಇವರು ಪ್ರಸ್ತುತ 'ಕರಾವಳಿ ಮುಂಜಾವು' ದಿನಪತ್ರಿಕೆಯಲ್ಲಿ ಸಮಕಾಲೀನ ವಿಷಯಗಳ ಕುರಿತು ಅಂಕಣ ಬರೆಯುತ್ತಿದ್ದಾರೆ.

ಉತ್ತಮ ಸಂಘಟಕಿಯೂ ಆದ ಅನುಪಮಾ ಹೊನ್ನಾವರದ 'ಮಂಥನ' ಸಾಹಿತ್ಯಕ, ಸಾಂಸ್ಕೃತಿಕ ವೇದಿಕೆ ಸಂಚಾಲಕರಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಡಾ|| ಎಚ್.ಎಸ್. ಅನುಪಮಾ 'ನೋಯುವ ಹಲ್ಲಿಗೆ ಹೊರಳುವ ನಾಲಿಗೆ' ಅಂಕಣದ ಮೂಲಕ ಈ ಸಂಚಿಕೆಯಿಂದ 'ಸಂವಾದ' ಓದುಗರೊಂದಿಗೆ ಮುಖಾಮುಖಿಯಾಗಲಿದ್ದಾರೆ.

ಯುದ್ಧದಲ್ಲಿ ಹೋರಾಡುವ ಸಮುದಾಯಗಳು ಸತಿ ಪದ್ಧತಿ ಸೃಷ್ಟಿಸಿದವು. ಗಂಡನಿಲ್ಲದೆ ಬದುಕಿಲ್ಲವೆಂದು ಒತ್ತಾಯವಾಗಿ ಒಪ್ಪಿಸಲು ಮಹಿಳೆಯನ್ನು ದೈವತ್ವಕ್ಕೇರಿಸಿ, ಅಮಾನುಷವಾದ ಸತಿ ಪದ್ಧತಿ ಜಾರಿಗೆ ಬಂತು. ರಾಜಸ್ಥಾನದ ಜೋಹರ್ ಪದ್ಧತಿ ಜನಜನಿತ. ಸತಿಪದ್ಧತಿ ಕುರಿತು ಭಾರತಕ್ಕೆ ಬಂದ ವಿದೇಶೀ ಪ್ರವಾಸಿಗಳು, ದುಬಾಯಿ ಪಾದ್ರಿಯಂತಹ ಕ್ರೈಸ್ತ ಮಿಷನರಿಗಳು, ಯೂರೋಪಿಯನ್ ಅಧಿಕಾರಿಗಳು ತಮ್ಮ ದಿಗ್ಭ್ರಮೆ ವ್ಯಕ್ತಪಡಿಸಿದ್ದರು.

17ನೇ ಶತಮಾನದ ಕೊನೆಯ ಭಾಗದಲ್ಲಿ ಕೋಲ್ಕತಾದ ಸೇಂಟ್ ವಿಲಿಯಮ್ಸ್ ಕೋಟೆ ಕಟ್ಟಿದ ಬ್ರಿಟಿಷ್ ಅಧಿಕಾರಿ ಜಾಬ್ ಚಾರ್ನಾಕ್ ಊರಹೊರಭಾಗದಲ್ಲಿ ವಾಯುಸಂಚಾರ ಹೋಗುತ್ತಿದ್ದಾಗ ಸತಿ ಹೋಗುತ್ತಿದ್ದ ಹೆಣ್ಣನ್ನು ಕಾಣುತ್ತಾನೆ. ಕಣ್ಣೆದುರೇ ಬೆಂಕಿಗೆ ಹಾರಿ ಸಾಯಲು ಹೊರಟ ಹೆಣ್ಣಿನ ಮೇಲೆ ಅತೀವ ಮರುಕ ಉಂಟಾಗಿ ಸೈನಿಕರಿಗೆ ಅವಳನ್ನು ಎತ್ತಿ ತರುವಂತೆ ಆಜ್ಞಾಪಿಸುತ್ತಾನೆ. ಮನೆಗೆ ಕರೆದೊಯ್ದು ಅವಳನ್ನು ಮದುವೆಯಾಗಿ ಹಲವು ಮಕ್ಕಳನ್ನೂ ಪಡೆಯುತ್ತಾನೆ. ಯಾವುದೋ ಕಾಯಿಲೆಯಾಗಿ ಅವಳು ಸತ್ತ ನಂತರ ಹಿಂದೂ ವಿಧಿಯಂತೆ ಅಂತ್ಯಕ್ರಿಯೆ ನಡೆಸಿ ಪ್ರತಿವರ್ಷ ಅವಳು ಸತ್ತದಿನ ಗೋರಿಯ ಬಳಿ ಒಂದು ಕೋಳಿ ಬಲಿಕೊಡುತ್ತಾನೆ.

1792ರಲ್ಲಿ ಮೈಸೂರು ರಾಜ್ಯಕ್ಕೆ ಬಂದ ಫ್ರಾನ್ಸಿಸ್ ದೂಬಾಯಿ ಎಂಬ ಪಾದ್ರಿ ಸತಿಸಹಗಮನವನ್ನು ಖುದ್ದಾಗಿ ನೋಡಿ ದಾಖಲಿಸಿದ್ದಾನೆ. 'ಗಂಡನನ್ನು ಕಳೆದುಕೊಂಡ ಹೆಂಗಸು ಚಿತೆಯ ಬಳಿ ವಿಚಿತ್ರ ಸಂಭ್ರಮದಲ್ಲಿ ಇದ್ದಂತಿತ್ತು. ಆಕೆ ಎಲ್ಲರ ಗೌರವಕ್ಕೆ ಪಾತ್ರಳಾಗಿ ಪೂಜಿಸಿಕೊಳ್ಳುತ್ತಿದ್ದಳು. ಆದರೆ ಸಹಗಮನದ ವೇಳೆ ಸಮೀಪಿಸಿದಂತೆ ದುಗುಡಗೊಳ್ಳತೊಡಗಿದಳು. ಚಿತೆ ಸಿದ್ಧವಾಗಿ ಪತಿಯ ಹೆಣವನ್ನು ಹಾಕಿ ಅವಳನ್ನು ಬೆಂಕಿಯೊಳಗೆ ಕಳಿಸಲು ಎಲ್ಲರೂ ಸಿದ್ಧವಾಗುತ್ತಿದ್ದಂತೆ ಭಯಗೊಂಡು ತಪ್ಪಿಸಿಕೊಂಡು ಓಡಲೆತ್ನಿಸಿದಳು. ಇದನ್ನು ಜನರು ನಿರೀಕ್ಷಿಸಿದ್ದಂತೆ ಅವಳನ್ನು ಹಿಡಿದು ನಿಲ್ಲಿಸಿದರು. ಆಕೆ ಸಾವಿನ ಎದುರು ಚೀತ್ಕರಿಸುತ್ತಿದ್ದರೆ ಉಳಿದವರು ಗಂಡನ ಸಾವಿನ ದುಃಖದಿಂದ ಚೀರಿಕೊಳ್ಳುತ್ತಿದ್ದಾಳೆಂದು ಭ್ರಮಿಸಿದರು.' ಎಲ್ಲರೂ ಸೇರಿ ಅವಳ ಕೈಕಾಲು ಕಟ್ಟಿಹಾಕಿ ಚಿತೆಗೆ ದಬ್ಬಿದ್ದು, ಸುಟ್ಟುಹೋಗುತ್ತಿರುವ ಚೀರುವ ಹೆಂಗಸು ಎಲ್ಲವನ್ನೂ ಪಾದ್ರಿ ಟಿಪ್ಪಣಿ ಮಾಡಿಕೊಂಡ.

ಮಹಾಸತಿಯರ ಕೆಲವು ಜನಪದ ಕಥನಗೀತೆಗಳನ್ನು ಗಮನಿಸಿದರೆ ಬೆಂಕಿಗೆ ಹಾರುವ ಅನಿವಾರ್ಯತೆಯನ್ನು ಸಮಾಜ ಹೇಗೆ ನಿರ್ಮಾಣ ಮಾಡಿತ್ತು ಎನ್ನುವುದು ತಿಳಿಯುತ್ತದೆ.

ಅಂಗಿಯ ವಲಸ್ಯಾಳು ಕಂದಮ್ಮಗಾಕ್ಯಾಳು
ಅತ್ತತ್ತ ವೋಗಿ ತಿರಿಗ್ಯಾಳು
ಅತ್ತತ್ತ ವೋಗಿ ತಿರಿಗ್ಯಾಳು / ಏನಂದಾಳು
ಕಂದಾಗು ನನಗು ರುಣವಿಲ್ಲ.

(ಮಹಾಸತಿ ತಂಗ್ಯವ್ವ)

ಕದ್ದುವೋದಾಳೆಂದು ದಿಡ್ಡಿಬಾಗುಲಾಕುಸ್ತ
ಕದ್ದುವೋಗೋರ ಮಗಳಲ್ಲ
ಕದ್ದುವೋಗೋರ ಮಗಳಲ್ಲ ಕೊಡಲಿಗೌಡ
ದಿಡ್ಡಿಬಾಗುಲ ತಗುಸಣ್ಣ

(ಕೊಂಡದ ಮಾಸ್ತ್ಯಮ್ಮ)

ಅಂಬಾರದುದ್ದಾಕೆ ಉರಿಯೆದ್ದೇಳುತಾವೆ
ನಾನೆಂಗೋಗಲಿ ಶಿವಶಿವನೆ
ನಾನೆಂಗೋಗಲಿ ಶಿವಶಿವನೆ ಏಶಿವನೆ
ರಾಯರ ಪ್ರಾಣವ ತಿರುವಯ್ಯಾ

(ಮಹಾಸತಿ ತಾಡಿನಾಗಮ್ಮ)

ಅಂಗಾಲು ಉರುದಾವೆ ಅಂಗೈ ಉರುದಾವೆ
ಉಂಗುರದ ಬೆಟ್ಟು ಉರುದಾವೆ
ಉಂಗುರದ ಬೆಟ್ಟು ಉರುದಾವೆ ನಾಗಮ್ಮಾನ
ಸಂಗಾತಿರಿಂದಾಕ ತಿರುವ್ಯಾರೆ.

(ಮಹಾಸತಿ ತಾಡಿನಾಗಮ್ಮ)

ಸತಿಹೋರಟ ವಿಧವೆಯರ ದುರಂತವನ್ನು ಕರುಳು ಕೊಯ್ಯುವಂತೆ ಈ ಕಥನಗೀತೆಗಳು ದಾಖಲಿಸಿವೆ. ಆದರೆ ಇವ್ಯಾವುವೂ ತಟ್ಟದ, ಜಡವಾಗಿ ಹೆಣ್ಣನ್ನು ದೈವತ್ವಕ್ಕೇರಿಸಿ ಪೂಜಿಸಿದ ಸಮಾಜ ನಮ್ಮದು. ಯಾವ ರಾಜನಿಗೂ, ಆಧ್ಯಾತ್ಮಿಕ ಗುರುವಿಗೂ ಇದು ಮಹಿಳೆಯ ಮೇಲಿನ ದೌರ್ಜನ್ಯ ಎನಿಸಲಿಲ್ಲ. ಸತಿಯ ವಿರುದ್ಧ ಮೊದಲ ಹೋರಾಟಕ್ಕೆ 19ನೇ ಶತಮಾನದ ಆದಿಭಾಗದಲ್ಲಿ ರಾಜಾ ರಾಮ್ ಮೋಹನರಾಯ್ ಬರುವತನಕ ಕಾಯ ಬೇಕಾಯಿತು.

ಇದಕ್ಕೆ ವಿರುದ್ಧವಾಗಿ ತಳಸಮುದಾಯಗಳಲ್ಲಿ ವಿಧವಾ ಪದ್ಧತಿ ಇರಲಿಲ್ಲ. ಗಂಡಸರಿಂದ ವಿಧವಿಧವಾದ ದೌರ್ಜನ್ಯಕ್ಕೆ ಅವರು ಒಳಗಾಗುತ್ತಿದ್ದರೂ ವಿಧವಾ ಪದ್ಧತಿಯ ಹೇರಿಕೆಯಿರಲಿಲ್ಲ. ಗೋಕರ್ಣನಾಥೇಶ್ವರ ದೇವಸ್ಥಾನ ಸ್ಥಾಪಿಸಿದ ನಾರಾಯಣ ಗುರು ವಿಧವೆಯರ ಕುರಿತು ಏನೂ ಹೇಳಿಲ್ಲ. ಅದಕ್ಕೆ ಕಾರಣ ತಳಸಮುದಾಯಗಳಲ್ಲಿ ವಿಧವಾಪದ್ಧತಿ ಇಲ್ಲದಿದ್ದುದು. ಹರಿಯಾಣದ ಜಾಟರಲ್ಲಿ, ಮರಾಠರಲ್ಲಿ ಹಾಗೂ ಭಾರತದಾದ್ಯಂತ ಕೆಲ ಮಧ್ಯಮ ಜಾತಿಗಳಲ್ಲಿ ಮೈದುನ ಅಥವಾ ಗಂಡನ ರಕ್ತ ಸಂಬಂಧಿಯ ಜೊತೆಗೆ ಮರುವಿವಾಹಕ್ಕೆ ಅವಕಾಶವಿತ್ತು. ಜಾಟರಲ್ಲಿ ಗಂಡ ಸತ್ತರೆ ಅಂಥ ದುರಂತವೇನೂ ಸಂಭವಿಸಿದಂತಲ್ಲ. ಮೇಲ್ಜಾತಿ ಮಹಿಳೆ ಸುಮಂಗಲಿಯಾಗೇ ಸಾಯಲು ಬಯಸಿದರೆ, ಜಾಟ್ ಅಮ್ಮ ಮಗಳಿಗೆ ಹೀಗೆ ಹೇಳುತ್ತಾಳೆ;

ವಸಾಹತುಶಾಹಿ ಶಕ್ತಿಗಳ ಆಗಮನದಿಂದ ಜಾತಿ ಸಮೀಕರಣಗಳು ಬದಲಾದವು. ಅದು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಪಾಶ್ಚಾತ್ಯ ಶಿಕ್ಷಣ ಪಡೆದ ಭಾರತೀಯರನೇಕರು ವಿವಾಹ ಪದ್ಧತಿಯ ಸುಧಾರಣೆಗಾಗಿ ಶ್ರಮಿಸಿದರು. ಈಶ್ವರಚಂದ್ರ ವಿದ್ಯಾಸಾಗರರು ವಿಧವಾ ವಿವಾಹಕ್ಕೆ ಕಾನೂನುಬದ್ಧ ಅನುಮತಿ ಕೊಡಬೇಕೆಂದು ಕೋರಿ ಸಾವಿರಾರು ಮಹಿಳೆಯರ ಸಹಿ ಮಾಡಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ವಿಪರ್ಯಾಸವೆಂದರೆ ಅದಕ್ಕಿಂತ ಹೆಚ್ಚು ಸಂಖ್ಯೆಯ ಮಹಿಳೆಯರು ವಿಧವಾ ವಿವಾಹಕ್ಕೆ ಅನುಮತಿ ಕೊಡಬಾರದೆಂದು ಕೋರಿ ಅರ್ಜಿ ಸಲ್ಲಿಸಿದರು! ಆದರೂ ಬ್ರಿಟಿಷ್ ಸರ್ಕಾರ 1856ರಲ್ಲಿ ವಿಧವಾ ಮರುವಿವಾಹ ಕಾಯ್ದೆಯನ್ನು ಜಾರಿಗೆ ತಂದಿತು. ಆ ಸಮಯದಲ್ಲೇ ವಿಜಯಲಕ್ಷ್ಮಿ ಎಂಬ ಬ್ರಾಹ್ಮಣ ವಿಧವೆ ಬಲಾತ್ಕಾರಕ್ಕೊಳಗಾಗಿ, ಮಗುವನ್ನು ಹೆತ್ತು ನಂತರ ಸಮಾಜ ನಿಂದನೆಗೆ ಹೆದರಿ ಅದನ್ನು ಕೊಂದು ಬಿಟ್ಟಳು. ಕೋರ್ಟ್ ಅವಳಿಗೆ ಮರಣ ದಂಡನೆ ವಿಧಿಸಿತ್ತು.

'ಬಾ ಮಗಳೆ, ದಿಬ್ಬಣಕೆ ಹೊರಡು
ಒಬ್ಬ ಸತ್ತರೇನಂತೆ ಇದ್ದಾರೆ ಹಲವರು..'

ಉತ್ತರಪ್ರದೇಶದ ರಾಜಪೂತರಲ್ಲಿ ಬಲವಂತದ ವೈಧವ್ಯ ಇದ್ದರೆ, ಅಲ್ಲಿನ ಅಸ್ಪೃಶ್ಯರಲ್ಲಿ ಬಲವಂತದ ಕೂಡಾವಳಿ ಇದೆ. ಶ್ರಮಿಕ ಜಾತಿಗಳಲ್ಲಿ ಒಂದು ಕುಟುಂಬ ಒಂದು ಹೆಣ್ಣನ್ನು ಕಳೆದುಕೊಳ್ಳುವುದೆಂದರೆ ಆ ಹೆಣ್ಣು, ಅವಳಿಗೆ ಹುಟ್ಟಿದ ಹುಟ್ಟಲಿರುವ ಮಕ್ಕಳ ಶ್ರಮದ ಸಹಾಯವನ್ನೂ ಬೇಡ ಎಂದಂತಾಗುತ್ತದೆ. ಕೃಷಿ ಕುಟುಂಬಗಳು ಹೀಗೆ ಖಾಯಂ ಕೆಲಸಗಾರರನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ವಿಧವೆಯಾದ ಹೆಣ್ಣನ್ನು ಗಂಡನ ಸಂಬಂಧಿಗಳೇ ಮದುವೆಯಾದರೆ ಆಕೆಯ ಆಸ್ತಿಯೂ ಉಳಿಯುತ್ತದೆ. ಆಕೆ, ಆಕೆಯ ಮಕ್ಕಳೂ ಕೆಲಸಕ್ಕೆ ಲಭ್ಯವಾಗುತ್ತಾರೆ. ಈ ಕಾರಣಕ್ಕೆ ಜಾತಿಯು ವಿಧವಾ ಮರುವಿವಾಹವನ್ನು ಅಡ್ಡಿಪಡಿಸುವುದಿಲ್ಲ. ಅಲ್ಲದೇ ಮೇಲ್ಜಾತಿಗಳು ತಮ್ಮಂತೆ ವಿಧವಾ ಪದ್ಧತಿಯನ್ನು ಅನುಸರಿಸಲು ಆ ಜಾತಿಗಳಿಗೆ ಬಿಡುತ್ತಿರಲಿಲ್ಲ.

ಹೀಗೆ ಒಂದೇ ಧರ್ಮದ, ಒಂದೇ ಸಮಾಜವ್ಯವಸ್ಥೆಯ ಬೇರೆಬೇರೆ ಜಾತಿಗಳು ಬೇರೆ ತೆರನ ಲಿಂಗಸಂಬಂಧ ರೂಢಿಸಿಕೊಂಡಿರುವುದು ಆಶ್ಚರ್ಯಕರವಾಗಿದೆ.

ವಸಾಹತುಶಾಹಿ ಶಕ್ತಿಗಳ ಆಗಮನದಿಂದ ಜಾತಿ ಸಮೀಕರಣಗಳು ಬದಲಾದವು. ಅದು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಪಾಶ್ಚಾತ್ಯ ಶಿಕ್ಷಣ ಪಡೆದ ಭಾರತೀಯರನೇಕರು ವಿವಾಹ ಪದ್ಧತಿಯ ಸುಧಾರಣೆಗಾಗಿ ಶ್ರಮಿಸಿದರು. ಈಶ್ವರಚಂದ್ರ ವಿದ್ಯಾಸಾಗರರು ವಿಧವಾ ವಿವಾಹಕ್ಕೆ ಕಾನೂನುಬದ್ಧ ಅನುಮತಿ ಕೊಡಬೇಕೆಂದು ಕೋರಿ ಸಾವಿರಾರು ಮಹಿಳೆಯರ ಸಹಿ ಮಾಡಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ವಿಪರ್ಯಾಸವೆಂದರೆ ಅದಕ್ಕಿಂತ ಹೆಚ್ಚು ಸಂಖ್ಯೆಯ ಮಹಿಳೆಯರು ವಿಧವಾ ವಿವಾಹಕ್ಕೆ ಅನುಮತಿ ಕೊಡಬಾರದೆಂದು ಕೋರಿ ಅರ್ಜಿ ಸಲ್ಲಿಸಿದರು! ಆದರೂ ಬ್ರಿಟಿಷ್ ಸರ್ಕಾರ 1856ರಲ್ಲಿ ವಿಧವಾ ಮರುವಿವಾಹ ಕಾಯ್ದೆಯನ್ನು ಜಾರಿಗೆ ತಂದಿತು.

ಆ ಸಮಯದಲ್ಲೇ ವಿಜಯಲಕ್ಷ್ಮಿ ಎಂಬ ಬ್ರಾಹ್ಮಣ ವಿಧವೆ ಬಲಾತ್ಕಾರಕ್ಕೊಳಗಾಗಿ, ಮಗುವನ್ನು ಹೆತ್ತು ನಂತರ ಸಮಾಜ ನಿಂದನೆಗೆ ಹೆದರಿ ಅದನ್ನು ಕೊಂದು ಬಿಟ್ಟಳು. ಕೋರ್ಟ್ ಅವಳಿಗೆ ಮರಣ ದಂಡನೆ ವಿಧಿಸಿತ್ತು. ತೀವ್ರ ಪ್ರತಿಭಟನೆಯ ಹಿನ್ನೆಲೆಯಲ್ಲಿ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಲಾಯಿತು. ನಂತರ ನ್ಯಾಯಾಧೀಶರು ಮರುಕ ಹೊಂದಿ ಐದು ವರ್ಷ ಜೈಲುವಾಸದ ನಂತರ ಅವಳನ್ನು ಬಿಡುಗಡೆ ಮಾಡಿದರು. ಈ ಘಟನೆಯಿಂದ ಪ್ರಭಾವಿತಗೊಂಡ ತಾರಾಬಾಯಿ ಶಿಂಧೆ ಎಂಬ ಮಹಿಳೆ 1881ರಲ್ಲಿ 'ಸ್ತ್ರೀ ಪುರುಷ ತುಲನ' ಎಂಬ ಬರಹವನ್ನು ಪ್ರಕಟಿಸಿದಳು. ಮೊತ್ತಮೊದಲ ಬಾರಿಗೆ ಮಹಿಳೆಯೊಬ್ಬಳು ಲಿಂಗತಾರತಮ್ಯವನ್ನು, ವಿಧವೆಯರಿಗೆ ಆಗಿರುವ ಅನ್ಯಾಯವನ್ನು ಪ್ರಶ್ನಿಸಿದ್ದ ಬರಹ ಅದಾಗಿತ್ತು. 1876ರಲ್ಲಿ ರಾಸ್ಸುಂದರಿ ದೇವಿ ಎಂಬ ಬಂಗಾಲಿ ಮಹಿಳೆ ಕದ್ದುಮುಚ್ಚಿ ಓದು ಬರಹ ಕಲಿತು 'ಅಮರ ಜೀವನ್' ಎಂಬ

1856ರಲ್ಲಿ ವಿಧವಾ ಮರುವಿವಾಹ ಕಾನೂನುಬಂದಾಗ 'ಒಪ್ಪಿಗೆ' ಪದಕ್ಕೆ ಜೀವ ಬಂತು. ವಿಧವೆ ಬಾಲವಿಧವೆಯಾ

ಗಿದ್ದು, ವಯಸ್ಕಳಾಗುವುದಕ್ಕಿಂತ ಮೊದಲೇ ವಿಧವೆಯಾಗಿದ್ದರೆ ಅವಳ ಮರುಮದುವೆಗೆ ತಾಯ್ತಂದೆಯರ ಅಥವಾ ಪೋಷಕರ (ಅಪ್ಪ,ಅಜ್ಜ,ಅಮ್ಮ,ಅಣ್ಣ ಇದೇ ಶ್ರೇಣಿಯಲ್ಲಿ ಒಬ್ಬರಲ್ಲದಿದ್ದರೆ ಇನ್ನೊಬ್ಬರು) ಒಪ್ಪಿಗೆ ಅವಳ ಮದುವೆಗೆ ಅವಶ್ಯಕ. ಆದರೆ ಆಕೆ ವಯಸ್ಕಳಾಗಿದ್ದರೆ ಅಥವಾ ಮೊದಲ ಮದುವೆಯಲ್ಲಿ ದೈಹಿಕ ಸಂಪರ್ಕ ಏರ್ಪಟ್ಟಿದ್ದರೆ ಅವಳ ಒಪ್ಪಿಗೆ ಮಾತ್ರ ಸಾಕು ಎಂದು ಪರಿಗಣಿಸಲಾಯಿತು. ಒಂದುವೇಳೆ ಆಕೆ ವಯಸ್ಕ ವಿಧವೆಯಾಗಿದ್ದು ಕನ್ಯೆಯಾಗಿದ್ದರೆ ಪಾಲಕರ ಅನುಮತಿ ಬೇಕು. ವಯಸ್ಕಳಲ್ಲದ ವಿಧವೆ ಕನ್ಯೆಯಲ್ಲದಿದ್ದರೆ ಅವಳ ಒಪ್ಪಿಗೆ ಮಾತ್ರ ಸಾಕು. ಎಂದರೆ 'ಒಪ್ಪಿಗೆ' ಕೊಡುವ ಶಕ್ತಿ ಬರುವುದು ಕನ್ಯತ್ವ ಕಳೆದುಕೊಂಡ ಮೇಲೆ ಎಂದ ಹಾಗಾಯಿತು. ಅಥವಾ ಅವಳು ಕನ್ಯೆಯಾಗಿರುವಷ್ಟು ದಿನ ಅವಳನ್ನು 'ದಾನ' ಮಾಡುವ ಹಕ್ಕು ಪೋಷಕರದ್ದು ಎಂದು ತೀರ್ಮಾನಿಸಲಾಗಿತ್ತು!

1829ರಲ್ಲಿ ಸತಿಪದ್ಧತಿ ನಿಷೇಧವಾದರೂ ಬ್ರಿಟಿಷರು ಒಮ್ಮೆಗೇ ಸ್ತ್ರೀಪರ ನಿಲುವು ಹೊಂದಲಿಲ್ಲ. ಕೌಟುಂಬಿಕ ವಿಚಾರಗಳ ಬಗೆಗೆ ಆಯಾ ಧರ್ಮ ಮತ್ತು ಜಾತಿಗಳ ವೈಯಕ್ತಿಕ ಕಾನೂನು ಅನ್ವಯವಾಗಲು ಬಿಡಲಾಗಿತ್ತು. ಹೀಗಾಗಿ ಸ್ಥಳದಿಂದ ಸ್ಥಳಕ್ಕೆ ಕಾನೂನುಗಳು ಜಾತಿ ಕುರಿತು ಭಿನ್ನ ಧೋರಣೆ ಅನುಸರಿಸಿದವು. 1856ರಲ್ಲಿ ವಿಧವಾ ಮರುವಿವಾಹ ಕಾನೂನು ಬಲವಂತವಾಗಿ ವಿಧವಾಪದ್ಧತಿಗೊಳಗಾಗುವ ಮೇಲ್ಜಾತಿ ಮಹಿಳೆಯರಿಗೆ ಪರಿಹಾರ ಕೊಡಿಸುವ ಸಲುವಾಗಿ ಹುಟ್ಟಿಕೊಂಡಿತ್ತು. ಬ್ರಾಹ್ಮಣ, ರಜಪೂತ, ಬನಿಯಾ ಮತ್ತು ಕಾಯಸ್ಥ ಜಾತಿಗಳು ತಮ್ಮ ವಿಧವೆಯರ ಮರುವಿವಾಹಕ್ಕೆ ಆಸ್ಪದ ಕೊಡುತ್ತಿರಲಿಲ್ಲ. ಈ ಕಾನೂನು ಬಾಲವಿಧವೆಯರಿಗೆ ಪರಿಹಾರ ನೀಡಿ, ಅವರು ಮರು ಮದುವೆಯಾದರೆ ಮಾತ್ರ ಗಂಡನ ಆಸ್ತಿಯಲ್ಲಿ ಪಾಲು ಸಿಗುವುದಿಲ್ಲ ಎಂದು ಹೇಳಿತು. ಈ ಕಾನೂನಿನ ಬೇರೆಬೇರೆ ಕ್ಲಾಸ್‌ಗಳನ್ನು ಬಳಸಿಕೊಳ್ಳುವಲ್ಲಿ ಬಾಂಬೆ, ಅಲಹಾಬಾದ್, ಕೋಲ್ಕತಾ ಮತ್ತು ಪಂಜಾಬ್ ಹೈಕೋರ್ಟುಗಳು ಬೇರೆಬೇರೆ ರೀತಿ ವರ್ತಿಸಿದವು.

ಪಂಜಾಬ್ ಹೈಕೋರ್ಟ್ ಲಾಹೋರಿನಲ್ಲಿತ್ತು. ಅಲ್ಲಿನ ಜಾಟರು ಕೃಷಿಕ ಹಾಗೂ ಸೈನಿಕ ಸಮುದಾಯವಾಗಿದ್ದರು. ಅಲ್ಲಿ ವಿಧವೆಯರು ಮೈದುನನನ್ನೇ ಮದುವೆಯಾಗುವ ಪದ್ಧತಿಯಿತ್ತು. ಬಹುಪಾಲು ಜಾಟ್ ತರುಣರು ಸೈನ್ಯದಲ್ಲಿದ್ದು, ಯುದ್ಧದ ಸಮಯದಲ್ಲಿ ತೀರಿಕೊಳ್ಳುತ್ತಿದ್ದುದರಿಂದ ಮೈದುನ ವಿವಾಹ ಹೆಚ್ಚುಕಡಿಮೆ ಕಡ್ಡಾಯವಾಗಿತ್ತು. ಆರ್ಥಿಕ, ಭೌಗೋಳಿಕ, ವ್ಯಾವಹಾರಿಕ ದೃಷ್ಟಿಯಿಂದ ಇದು ಸರಿ ಎಂದು ಬ್ರಿಟಿಷ್ ಜಡ್ಜ್‌ಗಳೂ ನಿರ್ಧರಿಸಿ ಅದನ್ನೇ ಎತ್ತಿ ಹಿಡಿಯುತ್ತಿದ್ದರು. ಆದರೆ ಕೆಲ ವಿಧವೆಯರು ಮೈದುನರನ್ನು ಮದುವೆಯಾಗಲು ಒಪ್ಪದೇ ಬಿಡುಗಡೆ ಬಯಸುತ್ತಿದ್ದರು. ಆಗ ತಿಕ್ಕಾಟ ಶುರುವಾಗುತ್ತಿತ್ತು. ಜಡ್ಜ್‌ಗಳು ಎಷ್ಟೋ ಬಾರಿ ಕೋರ್ಟಿನಲ್ಲೇ ಕೇಸು ಇತ್ಯರ್ಥಗೊಳಿಸಿ ಮೈದುನರ ಜೊತೆ ವಿವಾಹ ಮಾಡಿಸಿದ್ದಿದೆ. ಅಂತಹ ಮದುವೆಗಳು ದೀರ್ಘಕಾಲ ಬಾಳುತ್ತವೆಂದು ಷರಾ ಬರೆದಿದ್ದೂ ಇದೆ.

ವಿಧವೆಯರ ಕುರಿತ ಸಮಾಜದ ಇಂದಿನ ಧೋರಣೆಯ ಹಿನ್ನೆಲೆ ತಿಳಿಯಲು ಇಷ್ಟೆಲ್ಲ ಇತಿಹಾಸ ಕೆದಕಬೇಕಾಯಿತು. ನಮ್ಮ ಕಣ್ಣೆದುರು ಕಾಣುವ ಎಷ್ಟೋ ಅಸಹಾಯಕ, ಆಧುನಿಕ ಫಣಿಯಮ್ಮರನ್ನು ನೋಡಿದರೆ ಬದಲಾಗಬೇಕಾದದ್ದು ಇನ್ನೂ ತುಂಬ ಇದೆ ಎನಿಸದೇ ಇರುವುದಿಲ್ಲ. ಬದುಕಿನ ಸಂತೋಷಗಳನ್ನು ಮುಕ್ತವಾಗಿ ಅನುಭವಿಸಲೂ, ಹೇಳಿಕೊಳ್ಳಲೂ ನೂರು ಭಂಗ ಅನುಭವಿಸುವ ವಿಧವೆಯರು ಕಲಿತರೂ, ದುಡಿಯುತ್ತಿದ್ದರೂ ಸುಲಭ ಬಲಿಪಶುಗಳಾಗುವುದನ್ನು ನೋಡಬಹುದು. ಇಪ್ಪತ್ತೊಂದನೇ ಶತಮಾನದ ಭಾರತೀಯ ಸಮಾಜದಲ್ಲಿ ರೂಢಿಗತ ವ್ಯವಸ್ಥೆಗಳು ಬದಲಾವಣೆ ಕಾಣುತ್ತಿವೆ. ರೂಢಿ ಯಲ್ಲಿದ್ದ ಹಲವು ಆಚರಣೆಗಳು ಒಳ್ಳೆಯದಕ್ಕೋ ಕೆಟ್ಟ ದಕ್ಕೋ ಬದಲಾಗುತ್ತಿವೆ. ಮಹಿಳೆ ಮತ್ತು ಲೈಂಗಿಕತೆ ಕುರಿತೂ ಮುಕ್ತ ನಿಲುವನ್ನು ತಾಳಲಾಗಿದೆ. ಹೀಗಿದ್ದೂ ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಕೊಂಚವೂ ಬದಲಾಗದೇ ಇರುವುದು ಒಂದಿದೆ, ಅದು ವಿಧವಾ ವಿವಾಹ.

ನಮ್ಮ ಪರಿಚಯದ ವಿಧವೆಯರನ್ನೇ ಗಮನಿಸಿ, ಎಷ್ಟು ಜನ ಮರುಮದುವೆಯಾಗಿದ್ದಾರೆ? ಮರುಮದುವೆಯ ಸಂಖ್ಯೆ ನಗಣ್ಯ ಎನ್ನುವಷ್ಟು ಕಡಿಮೆ. ಹೆಂಡತಿ ಸತ್ತ ವರ್ಷ ದೊಳಗೇ ಗಂಡ ಮರುಮದುವೆಯಾಗುವುದು ತೀರಾ ಸ್ವಾಭಾವಿಕ ಎಂದು ಪರಿಗಣಿಸುವ ಸಮಾಜವು, ಗಂಡ ಸತ್ತ ನಾಲ್ಕಾರು ವರ್ಷಗಳ ನಂತರ ವಿಧವೆ ಮರು ಮದುವೆಯಾದರೆ ದೈಹಿಕ ಸೆಳೆತಕ್ಕೊಳಗಾದಳೆಂದು ಹೀನಾಯವಾಗಿ ಕಾಣುತ್ತದೆ. ವಿಧವೆ ಹೇಗಿರಬೇಕೆಂಬ ಬಗೆಗೆ ಎಂಥ ಅಲಿಖಿತ ಕಟ್ಟಳೆ ಇದೆಯೆಂದರೆ ಹೆಚ್ಚು ಕಡಿಮೆ ಯಾವ ವಿಧವೆಯೂ ಮರುಮದುವೆಯಾಗುವ ಧೈರ್ಯ ಮಾಡುವುದಿಲ್ಲ. ವಿಧವೆಗೆ ಬ್ರಹ್ಮಚರ್ಯ ಕಡ್ಡಾಯ ಎಂಬ ಕಟ್ಟಳೆ ಹಿಂಜರಿಕೆಯನ್ನು ಅವಳ ಮನಸ್ಸಿನಲ್ಲಿ ಬಿತ್ತಿರುತ್ತದೆ. ಅದು ಅವಳ ಅಂತರಂಗದ ಕನ್ವಿಕ್ಷನ್ ಆಗಿದೆಯೋ ಇಲ್ಲವೋ ಎಂದು ತಿಳಿದುಕೊಳ್ಳಲು ಯಾರಿಗೂ ಆಸಕ್ತಿಯಿಲ್ಲ. ವರ್ಷಗಳು ಕಳೆದಂತೆ ಒಂಟಿತನ ಕಾಡುವುದರಿಂದ ಕುಟುಂಬದ ಇತರ ಪುರುಷ ಸದಸ್ಯರ ಅಥವಾ ಪರಿಚಯದ ಪುರುಷರ ಆಕರ್ಷಣೆಗೆ ಅಂಥವರು ಬೇಗ ಒಳಗಾಗುತ್ತಾರೆ. ದುರಂತವೆಂದರೆ ಬಹುಪಾಲು ಮಹಿಳೆಯರ ದೈಹಿಕ ಇಚ್ಛೆಗೆ ಸಂಗಾತಿ ದೊರಕಬಹುದಾದರೂ ಅವಳ ಅಂತರಂಗದ ತುಮುಲ ಮತ್ತು ಒಂಟಿತನ ಇನ್ನಷ್ಟು ಹೆಚ್ಚಾಗುತ್ತದೆ. ಒಂಟಿಯಾಗಿರಲಾರದ, ಮದುವೆಯಿಲ್ಲದ, ಮತ್ತೊಂದು ಸಂಸಾರವನ್ನು ಕಟ್ಟಲೂ ಆಗದ, ಎರಡು ದೋಣಿಯಲ್ಲಿ ಕಾಲಿಟ್ಟು ಮನೋಕ್ಲೇಷಕ್ಕೆ ಒಳಗಾದ ಹಲವರು ಕಾಣಸಿಗುತ್ತಾರೆ.

ಮೊದಲೆಲ್ಲ ಶ್ರಮಿಕ ಜಾತಿಗಳು ವಿಧವೆಯರಿಗೆ ಮರುವಿವಾಹಕ್ಕೆ ಅವಕಾಶ ಇತ್ತಿದ್ದವು. ಉತ್ತರ ಮತ್ತು ದಕ್ಷಿಣ ಭಾರತ ಎರಡರಲ್ಲೂ ಮೈದುನ ವಿವಾಹ ಅಥವಾ 'ಕೂಡಿಕೆ' ಚಾಲ್ತಿಯಲ್ಲಿತ್ತು. ಅದನ್ನು ಕುಟುಂಬದ ಹಿರಿಯರೇ ನಿಂತು ಮಾಡಿಸುತ್ತಿದ್ದರು. ಗೊರವರ ಎಂಬ ಅಲೆಮಾರಿ ಜನಾಂಗದ ಬಗೆಗೆ ಮಾತನಾಡುತ್ತ ದೇವದಾಸಿಯರ ಕುರಿತು ಕೆಲಸ ಮಾಡಿರುವ ಕೆ. ನೀಲಾ ಒಮ್ಮೆ ಗಮನ ಸೆಳೆದರು. ಗೊರವರಲ್ಲಿ ವಿಧವೆಯನ್ನು ಮದುವೆ ಯಾಗಬಯಸುವಾತ ಹಣ ಕೊಡಬೇಕಿತ್ತು. ಅದನ್ನು ಮೂರು ಪಾಲು ಮಾಡಿ, ಒಂದು ಪಾಲು ವಿಧವೆಯ ಮಕ್ಕಳ ಸಲುವಾಗಿ, ಎರಡನೆಯ ಪಾಲು ವಿಧವೆಗೆ, ಮೂರನೆಯ ಪಾಲು ಗಂಡನ ಮನೆಯವರಿಗೆ ಅಥವಾ ಮಕ್ಕಳನ್ನು ನೋಡಿಕೊಳ್ಳುವವರಿಗೆ ಕೊಡಬೇಕಾಗಿತ್ತು. ಈಗ ಇದು ಸಂಭವಿಸುತ್ತಿಲ್ಲ. ವಿಧವೆಯನ್ನು ಅವಳ ಮಾವನೋ, ಗಂಡನ ಮನೆಯ ಮತ್ಯಾರೋ ಮುಂಬಯಿಯಂತಹ ನಗರಗಳ ಕೆಂಪುದೀಪ ಪ್ರದೇಶಕ್ಕೆ ಮಾರಾಟ ಮಾಡುತ್ತಾರೆ. ಯಾವ ಸಮಾಜ ಹೆಣ್ಣಿಗೆ ವಿಧವೆಯಾದಾಗ್ಯೂ ಆಯ್ಕೆಯ ಅವಕಾಶ, ಮರುಮದುವೆಯ ಅವಕಾಶ ನೀಡಿತ್ತೋ ಅಂಥ ಸಮಾಜ ಇಂದು ಮರುಮದುವೆ ನಿರಾಕರಿಸಿ, 'ಉತ್ತಮ ಸರಕಿದು ಅತಿ ಲಾಭ ತರುವಂಥ..' ಎಂದು ಮನಗಂಡು ಅವಳನ್ನು ವೇಶ್ಯಾವಾಟಿಕೆಗೆ ಮಾರುತ್ತಿದೆ.

ಹಳ್ಳಿಯ ಜನರಲ್ ಪ್ರಾಕ್ಟೀಸಿನ ನಮ್ಮ ಅನುಭವದಂತೆ ಬೇಡದ ಗರ್ಭ ಧರಿಸಿದ ವಿಧವೆಯರು ಜೀವ ಹಿಡಿಮಾಡಿಕೊಂಡು ಬರುತ್ತಾರೆ. ಕೆಲವರು ಇಲ್ಲದ ಗುಹ್ಯ ರೋಗಗಳನ್ನು ಅಂಟಿಸಿಕೊಳ್ಳುತ್ತಾರೆ. ಅಂಥವರ ದೊಡ್ಡ ಶತ್ರು ಎಚ್‌ಐವಿ. ಮರುಮದುವೆಯ ಅವಕಾಶ ಇಲ್ಲದೇ ಪುರುಷನ ಜೊತೆ ನಿಯಮಿತ ದೈಹಿಕ ಸಂಪರ್ಕ ತಪ್ಪಿದಾಗ ನೈಸರ್ಗಿಕ ಒತ್ತಡಕ್ಕೊಳಗಾಗುವ ವಿಧವೆ ಸ್ವೇಚ್ಛಾ ಮನೋಭಾವದ ಗಂಡಸರ ಮೋಹದಲ್ಲಿ ಬೀಳುವ ಸಾಧ್ಯತೆ ಹೆಚ್ಚು. ಇದು ಎಲ್ಲರಿಗೂ ಗೊತ್ತಿದೆ. ಆದರೂ ವಿಧವೆಯ ತವರಿನವರಾಗಲೀ, ಗಂಡನ ಮನೆಯವರಾಗಲೀ ಅಥವಾ ಹತ್ತಿರದ ಬಂಧುಗಳಾಗಲೀ ಮರುಮದುವೆ ಮಾಡಿಸಿದ ಉದಾಹರಣೆಗಳು ಇಲ್ಲ.

ಏಕೆ ಹೀಗಿಲ್ಲ ಎಂದು ವಿವರಿಸಲು ಸುಲಭದ ಕಾರಣಗಳಿವೆ. ಹೆಂಡತಿ ಏಳೇಳು ಜನ್ಮಕ್ಕೂ ಅದೇ ಗಂಡನ ಹೆಂಡತಿಯಾಗಲು ಬಯಸಬೇಕೆಂದು, ಸದಾ ಕಾಲವೂ ಗಂಡನ ನೆನಪಿನಲ್ಲಿ ಜೀವ ಸವೆಸಬೇಕೆಂದು ನಿರೀಕ್ಷಿಸಲಾಗುತ್ತದೆ, ಗಂಡನ ನಿಧನಾ ನಂತರವೂ ಅವನ ಮನೆಯಲ್ಲೇ ಇದ್ದು ಆಸ್ತಿ ಅನುಭವಿಸುವುದರಿಂದ ಆ ಕುಟುಂಬಕ್ಕೆ ನಿಷ್ಠವಾಗಿರಬೇಕಾಗುತ್ತದೆ, ಮಕ್ಕಳು ಬೇರೊಬ್ಬನನ್ನು ಅಪ್ಪ ಎಂದೊಪ್ಪಿಕೊಳ್ಳಲು ಕಷ್ಟವಾಗುತ್ತದೆ ಇತ್ಯಾದಿ ಸಬೂಬುಗಳು ವಿಧವೆಯ ಮರುವಿವಾಹ ನಿರಾಕರಣೆಗೆ ಒದಗಿಬರುತ್ತವೆ. ಎಲ್ಲವೂ ಹೌದು. ಆದರೆ ಸಂಗಾತಿಯ ನಿಧನಾನಂತರ ಇದೆಲ್ಲ ಗಂಡಿಗೂ ಅನ್ವಯಿಸುವುದಿಲ್ಲವೆ? ವಿಧವಾ ವಿವಾಹದ ಬಗೆಗೆ ಗ್ರಾಮೀಣ, ಸಾಂಪ್ರದಾಯಿಕ ಜನರಷ್ಟೇ ಅಲ್ಲ, ಶಿಕ್ಷಿತರೂ, ಅವರ ಶಿಕ್ಷಿತ ಅನುಕೂಲಸ್ಥ ಬಂಧುಗಳೂ ನ್ಯಾಯಯುತವಾಗಿ ಯೋಚಿಸುವುದಿಲ್ಲ. ಹೀಗಾಗಿಯೇ ಕೆಲವರಿಗೆ ವಿಧವೆಯರು ಅನಿವಾರ್ಯ ಹೊರೆಯಾಗಿ ಕಂಡರೆ ಮತ್ತೆ ಕೆಲವರಿಗೆ ಉಚಿತ ಬಳುವಳಿಯಾಗಿ ಕಾಣತೊಡಗುತ್ತಾರೆ.

ಕಾನೂನು ವಿಧವೆಗೆ ಯಾವ ಕಟ್ಟುಪಾಡನ್ನೂ ವಿಧಿಸಿಲ್ಲ. ಅದು ಅವಳಿಗೆ ಮರುಮದುವೆಯ ಅವಕಾಶವನ್ನೂ, ಆಸ್ತಿಯಲ್ಲಿ ಪಾಲನ್ನೂ ನೀಡಿದೆ. ಆದರೆ ಸಮಾಜದ ಮನೋಭಾವ ಬದಲಾಗಬೇಕಾಗಿದೆ ಅಷ್ಟೆ. ಆಧುನಿಕ ಯುಗದಲ್ಲಿ ಕಾನೂನು ಸಮಾಜ ಸುಧಾರಣೆಯ ಆತ್ಯಂತಿಕ ಉಪಕರಣ ಎಂದು ನಾವು ನಂಬಿರುವಾಗಲೂ ರೂಢಿ ಕಟ್ಟಳೆಗಳು ಅಲಿಖಿತ ಶಾಸನಗಳಾಗಿ ಮೇಲುಗೈ ಪಡೆಯುತ್ತಿರುವುದು ನಮ್ಮ ಮುಂದಿದೆ. ಜಾಗತೀಕರಣ ಬೆಳೆಸುತ್ತಿರುವ ಅತಿ ವೈಯಕ್ತಿಕತೆ ಸುಧಾರಣೆ-ಚಳುವಳಿ ಎಂಬ ಪದಗಳನ್ನೇ ಅಪಹಾಸ್ಯಕ್ಕೀಡುಮಾಡುತ್ತಿದೆ. ಇಂಥ ಕಾಲದಲ್ಲಿ ಯಾರಿಗೂ ಸಮಸ್ಯೆ ಎಂದೇ ಕಾಣದಿದ್ದ ವಿಧವಾ ವಿಮೋಚನೆ ಮತ್ತೆ ಮುನ್ನೆಲೆಗೆ ಬಂದಿರುವುದು ಹಾಗೂ ಧಾರ್ಮಿಕ ಸ್ಥಳವೊಂದು ಅದರ ಬೆನ್ನಿಗಿರುವುದು ಸುಧಾರಣೆಗೆ ವಿಶಾಲ ತಾತ್ವಿಕ ಚೌಕಟ್ಟನ್ನು ಒದಗಿಸಿರುವಂತೆ ಕಾಣುತ್ತಿದೆ.

(ಆಧಾರ: ಉಮಾ ಚಕ್ರವರ್ತಿ: ಜೆಂಡರಿಂಗ್ ಕ್ಯಾಸ್ಟ್, ತಾರಾಬಾಯಿ ಶಿಂಧೆ: ಸ್ತ್ರೀ ಪುರುಷ ತುಲನ. ವಿಲಿಯಮ್ ಡ್ಯಾಲ್‌ರಿಂಪಲ್; ವೈಟ್ ಮುಘಲ್. ಎಂ.ಕೆ. ಇಂದಿರಾ: ಫಣಿಯಮ್ಮ. ಮಾಸ್ತಿ ಕಥನ ಗೀತೆಗಳು: ಬಿ.ಯು. ಗೀತಾ)

ವಿಕ್ರಮಾರ್ಜುನ ವಿಜಯ - ಸಾಂಸ್ಕೃತಿಕ ಸಂಘರ್ಷದ ಆಯಾಮಗಳು

'ವಿಕ್ರಮಾರ್ಜುನ ವಿಜಯ'ದಲ್ಲಿ ಗುರುತಿಸಬಹುದಾದ ಸಾಂಸ್ಕೃತಿಕ ಸಂಘರ್ಷದ ಆಯಾಮಗಳನ್ನು ಸ್ಥೂಲವಾಗಿ

1. ಪ್ರಭುತ್ವ ಪ್ರಜ್ಞೆ
2. ಭಾಷಾ ಪ್ರಜ್ಞೆ
3. ಪ್ರಾದೇಶಿಕ ಪ್ರಜ್ಞೆ
4. ಕುಲ ಪ್ರಜ್ಞೆ ಹಾಗೂ
5. ಧರ್ಮ ಪ್ರಜ್ಞೆ ಎಂಬ ಅಂಶಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ವಿಕ್ರಮಾರ್ಜುನ ವಿಜಯ ರೂಪುಗೊಂಡ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಕೃತಿ ರಚಿಸುವಾಗ ಕವಿಯ ಮೇಲೆ ಉಂಟಾದ ಪ್ರಭಾವಗಳನ್ನು ಗಮನಿಸಬೇಕಾಗುತ್ತದೆ. ಕವಿ ಕೇವಲ ತನ್ನ ಕಾಲಕ್ಕೆ ಮಾತ್ರ ಸೇರಿದವನೆಂದು ಭಾವಿಸಿ ಇಂತಹ ವಿಶ್ಲೇಷಣೆ ನಡೆಸಬೇಕಾದ ಅಗತ್ಯವಿಲ್ಲ. ಆದರೆ ಒಂದು ಕಲಾಕೃತಿ ಎಷ್ಟೇ ಸಾರ್ವಕಾಲಿಕ ಮೌಲ್ಯಗಳನ್ನು ಒಳಗೊಂಡಿದೆ ಎಂದಾದಾಗಲೂ ಅದು ರಚನೆಯಾದ ಕಾಲಘಟ್ಟದ ಸಂಘರ್ಷಗಳನ್ನು ಖಂಡಿತವಾಗಿ ಪ್ರತಿಫಲಿಸಿರುತ್ತದೆ. ಸಮಾಜದೊಳಗೆ ಬೆರೆತು ಬಾಳುವ ವ್ಯಕ್ತಿಯಾದ ಕವಿ ತನ್ನ ಬದುಕಿನ ಅನುಭವಗಳನ್ನು, ಆಶಯಗಳನ್ನು ಅಭಿವ್ಯಕ್ತಿಸುವಾಗ ಸಹಜವಾಗಿ ತನ್ನ ಸಾಮಾಜಿಕ ಸಂದರ್ಭದ ಪ್ರಭಾವಕ್ಕೆ ಒಳಗಾಗುತ್ತಾನೆ. ಕೇವಲ ತನ್ನ ಸಂದರ್ಭವನ್ನು ದಾಖಲಿಸುವಷ್ಟು ಕೆಲಸವನ್ನು ಮಾತ್ರ ಮಾಡುವವನಾಗಿದ್ದರೆ ಕವಿಯನ್ನು ದ್ರಷ್ಟಾರ ಎನ್ನಲು ಸಾಧ್ಯವಾಗುತ್ತಿರಲಿಲ್ಲ. ಆತನನ್ನು ಪ್ರತಿಕೃತಿ ತಯಾರಿಸುವವ ಎಂದು ಮಾತ್ರ ಕರೆಯಬಹುದಾಗಿತ್ತು.

ತನ್ನ ಕಾಲವನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸುತ್ತಿರುವಾಗಲೇ ತನ್ನ ಪ್ರತಿಭಾ ಸಾಮರ್ಥ್ಯದಿಂದ ತನ್ನ ಮುಂದಿನ ಎಷ್ಟೋ ಕಾಲಘಟ್ಟಗಳಿಗೆ ಪ್ರಸ್ತುತವಾಗುವಂತಹ ಆಶಯಗಳನ್ನು ಕವಿ ಒಡಮೂಡಿಸಿರುತ್ತಾನೆ. ಹಾಗಾಗಿ ಪಂಪ ಕರ್ನಾಟಕದ ಹತ್ತನೆಯ ಶತಮಾನದ ಕಾಲಘಟ್ಟದಲ್ಲಿ ಬದುಕಿ 'ವಿಕ್ರಮಾರ್ಜುನ ವಿಜಯ'ದಂತಹ ಮೇರು ಕಾವ್ಯವನ್ನು ಬರೆದನೆಂಬುದು ನಿಜದ ಒಂದು ಮುಖವಾದರೆ ಈಗ ಬದುಕಿಲ್ಲವಾದ ಕಾರಣ ಪಂಪನನ್ನು ದಿವಂಗತ ಪಂಪ ಎಂದು ಕರೆಯಲು ಸಾಧ್ಯವಿಲ್ಲ ಎಂಬುದು ನಿಜದ ಇನ್ನೊಂದು ಮುಖ. ಕೃತಿಯನ್ನು ಲಿಪಿಗೊಳಿಸಿದ ಸಾಧನವಾದ ವ್ಯಕ್ತಿ ದಿವಂಗತನಾಗಿರಬಹುದು. ಆದರೆ ಕೃತಿಯಲ್ಲಿ ನುಡಿಯುವ ಕವಿ ಪಂಪ 'ವಿಕ್ರಮಾರ್ಜುನ ವಿಜಯ' ಇರುವವರೆಗೂ ಬದುಕಿರುತ್ತಾನೆ.

ಹತ್ತನೆಯ ಶತಮಾನದಲ್ಲಿ ರಚನೆಯಾದ ವಿಕ್ರಮಾರ್ಜುನ ವಿಜಯ ತನ್ನ ಕಾಲಘಟ್ಟದ ಸೆಳವುಗಳನ್ನು ಹೇಗೆ ಬಿಂಬಿಸುತ್ತಿದೆ ಹಾಗೂ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಅದು ಪರಿಶೀಲನೆಗೊಳಪಡುತ್ತಿರುವಾಗ ಯಾವ ಬಗೆಯ ಅರ್ಥಸಾಧ್ಯತೆಗಳನ್ನು ಸೂಚಿಸುತ್ತಿದೆ ಎಂಬ ಎರಡು ನೆಲೆಗಳಿಂದಲೂ ಈ ಸಾಂಸ್ಕೃತಿಕ ಸಂಘರ್ಷದ ಅಂಶಗಳನ್ನು ನಾವು ಪರಿಶೀಲಿಸುವುದು ಅಗತ್ಯ.

ಗ್ರಹಿಕೆಯ ಅನುಕೂಲಕ್ಕಾಗಿ ಮೇಲ್ಕಂಡ ಅಂಶಗಳನ್ನು ವಿಂಗಡಣೆ ಮಾಡಿಕೊಳ್ಳಲಾಗಿದೆಯೇ ಹೊರತು ಇವುಗಳ ನಡುವೆ ಅಂತರ್‌ಸಂಬಂಧ ಇರುವುದನ್ನು ಮರೆಯಲು ಸಾಧ್ಯವಿಲ್ಲ. ಉದಾಹರಣೆಗೆ ಪ್ರಭುತ್ವ ಪ್ರಜ್ಞೆ, ಭಾಷಾ ಪ್ರಜ್ಞೆ ಮತ್ತು ಪ್ರಾದೇಶಿಕ ಪ್ರಜ್ಞೆಗಳು ಒಂದು ಬಗೆಯ ಸಾಂಸ್ಕೃತಿಕ ಸಂಘರ್ಷದ ಆಯಾಮದಿಂದ ಪ್ರೇರಿತಗೊಂಡಿವೆ. ಕುಲ ಪ್ರಜ್ಞೆ ಹಾಗೂ ಧರ್ಮ ಪ್ರಜ್ಞೆಗಳು ಪರಸ್ಪರ ಪೂರಕ ನಿಲುವನ್ನು ಹೊಂದಿದ್ದು ಮತ್ತೊಂದು ಆಯಾಮದಿಂದ ಪ್ರೇರಣೆಗೊಂಡಿವೆ. ಹಾಗೆ ನೋಡಿದರೆ ಪ್ರಾದೇಶಿಕ ಪ್ರಜ್ಞೆ, ಕುಲ ಪ್ರಜ್ಞೆ ಮತ್ತು ಧರ್ಮ ಪ್ರಜ್ಞೆ ಇವುಗಳನ್ನು ಕೂಡ ಒಂದು ಆಯಾಮಕ್ಕೆ ಸೇರಿದವುಗಳೆಂದು ಗ್ರಹಿಸಲು ಅವಕಾಶವಿದೆ.

* * *

ಅಲ್ಬರೂನಿ ಮುಂತಾದ ವಿದೇಶೀ ಪ್ರವಾಸಿಗರು ನೀಡಿರುವ ಮಾಹಿತಿಯೊಂದರ ನೆರವಿನಿಂದ ನಾವು ಈ ಪರಿಶೀಲನೆಯನ್ನು ಆರಂಭಿಸಬಹುದಾಗಿದೆ. ಅಲ್ಬರೂನಿ ದಾಖಲಿಸಿರುವಂತೆ ಆಗಿದ್ದ ಶಾಸ್ತ್ರಾಚಾರಗಳ ಪ್ರಕಾರ ಕರ್ನಾಟಕ ಪ್ರವೇಶ ಬ್ರಾಹ್ಮಣರಿಗೆ ನಿಷಿದ್ಧವಾಗಿತ್ತು. ದಕ್ಷಿಣ ದಿಕ್ಕು ಬ್ರಾಹ್ಮಣರಿಗೆ ಅಶುಭ ದಿಕ್ಕಾಗಿತ್ತು. ನೀಲಿ ಬಣ್ಣ ಕೂಡ ಅವರಿಗೆ ನಿಷಿದ್ಧ.

ಒಂದು ರೀತಿಯಲ್ಲಿ ವಿಂಧ್ಯ ಪರ್ವತವನ್ನು ಗಡಿಯಾಗಿಟ್ಟುಕೊಂಡು ಶಾಸ್ತ್ರ ಸಂಹಿತೆಗಳು ಭರತವರ್ಷವನ್ನು ಆರ್ಯ ಮತ್ತು ಅನಾರ್ಯ ಭೂಮಿಗಳೆಂದು, ಯಜ್ಞ ಮತ್ತು ಅಯಜ್ಞೀಯ ಪ್ರದೇಶಗಳೆಂದು ವಿಂಗಡಿಸಿರುವುದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಕುತೂಹಲಕ್ಕೆ ವಿವೇಚಿಸುವುದಾದರೆ ಕರ್ನಾಟಕ, ದಕ್ಷಿಣ ದಿಕ್ಕು ಹಾಗೂ ನೀಲಿ ಬಣ್ಣ ಇವೆಲ್ಲವೂ ಅವುಗಳ ರೂಪಕ ನೆಲೆಯಲ್ಲಿ ದ್ರಾವಿಡ ಎಂದು ನಾವು ಈಗ ದುಂಡಾಗಿ ಕರೆಯುವ ಆರ್ಯೇತರ ಜನಾಂಗಗಳಿಗೆ ಸಂವಾದಿ ಇರುವಂತಿವೆ. ಕಪ್ಪು ಮತ್ತು ನೀಲಿ ಬಹಳ ಸಲ ಒಂದೇ ಎಂಬಂತೆ ವರ್ಣಿತವಾಗಿರುವುದು ಕೃಷ್ಣನ ಸಂದರ್ಭದಲ್ಲಿ ಸುವ್ಯಕ್ತವಾಗಿದೆ. ಮೈಬಣ್ಣದ ಮೇಲೆ ಹೇಳಬಹುದಾದರೆ ದಕ್ಷಿಣ ಭಾರತೀಯರು ಪ್ರಧಾನವಾಗಿ ಕಪ್ಪು ವರ್ಣೀಯರು.

ಹೀಗಾಗಿ ವಿಕ್ರಮಾರ್ಜುನ ವಿಜಯ ಧ್ವನಿಸುವ ಪ್ರಾದೇಶಿಕ ಪ್ರಜ್ಞೆ, ಕುಲ ಪ್ರಜ್ಞೆ, ಭಾಷಾ ಪ್ರಜ್ಞೆ, ಪ್ರಭುತ್ವ ಪ್ರಜ್ಞೆ ಮುಂತಾದವುಗಳೆಲ್ಲ ಒಂದಲ್ಲ ಒಂದು ವಿಧದಲ್ಲಿ ಅಂದಿನ ಅಖಿಲ ಭಾರತ ಚಕ್ರಾಧಿಪತ್ಯಗಳಿಗೆ ಮತ್ತು ಅಖಿಲ ಭರತ ವರ್ಷದ ವ್ಯಾಪ್ತಿ ಆರೋಪಿಸಿಕೊಳ್ಳುವ ವೈದಿಕಶಾಹಿ ಸಂಸ್ಕೃತಿಗೆ ಒಡ್ಡಿದ ಪ್ರತಿರೋಧ ಎಂಬ ನೆಲೆಯಲ್ಲಿ ಗುರ್ತಿಸಬಹುದಾಗಿದೆ. ಯಾಕೆಂದರೆ ದಕ್ಷಿಣ ಭಾರತದ ಒಂದು ಭಾಗವಾದ ಕರ್ನಾಟಕವನ್ನು ಅದರೊಳಗೆ ಒಂದು ನಾಡಾದ ಬನವಾಸಿ ಸೀಮೆಯನ್ನು ತನ್ನ ಲಕ್ಷ್ಯದ ಕೇಂದ್ರಬಿಂದುವಾಗಿ ಪರಿಗಣಿಸುವುದು, ಪ್ರತಿಷ್ಠಿತ ಸಂಸ್ಕೃತ ಭಾಷೆಯ ಬದಲಾಗಿ ಕನ್ನಡದಲ್ಲಿ ಕಾವ್ಯ ಬರೆಯುವುದು, ಸಂಸ್ಕೃತ ಮಹಾಭಾರತದಲ್ಲಿ ಇರುವ ಕಥಾ ಹಂದರವನ್ನು ಆಯ್ದುಕೊಂಡಾಗಲೂ ಅದನ್ನು ತನ್ನ ಸಮಕಾಲೀನ ರಾಜನಾದ ಅರಿಕೇಸರಿಯ ವೃತ್ತಾಂತಕ್ಕೆ ಅಳವಡಿಸಿ ಮಾರ್ಪಾಡು ಮಾಡಿಕೊಳ್ಳುವುದು, ಮಹಾಭಾರತದಲ್ಲಿ ಕಥಾನಾಯಕನಾಗಿರುವ ಕೃಷ್ಣನ ಬದಲಿಗೆ ಅರ್ಜುನನನ್ನು ಮುನ್ನೆಲೆಗೆ ತರುವುದು ಮುಂತಾದ ಅಂಶಗಳು ಈ ಸಂಘರ್ಷಾತ್ಮಕ ಆಯಾಮಗಳನ್ನು

ತನ್ನ ಕಾಲವನ್ನು ತನ್ನ ಕೃತಿಯಲ್ಲಿ ಪ್ರತಿಬಿಂಬಿಸುತ್ತಿರುವಾಗಲೇ ತನ್ನ ಪ್ರತಿಭಾ ಸಾಮರ್ಥ್ಯದಿಂದ ತನ್ನ ಮುಂದಿನ ಎಷ್ಟೋ ಕಾಲಘಟ್ಟಗಳಿಗೆ ಪ್ರಸ್ತುತವಾಗುವಂತಹ ಆಶಯಗಳನ್ನು ಕವಿ ಒಡಮೂಡಿಸಿರುತ್ತಾನೆ. ಹಾಗಾಗಿ ಪಂಪ ಕರ್ನಾಟಕದ ಹತ್ತನೆಯ ಶತಮಾನದ ಕಾಲ ಘಟ್ಟದಲ್ಲಿ ಬದುಕಿ 'ವಿಕ್ರಮಾರ್ಜುನ ವಿಜಯ'ದಂತಹ ಮೇರು ಕಾವ್ಯವನ್ನು ಬರೆದನೆಂಬುದು ನಿಜದ ಒಂದು ಮುಖವಾದರೆ ಈಗ ಬದುಕಿಲ್ಲವಾದ ಕಾರಣ ಪಂಪನನ್ನು ದಿವಂಗತ ಪಂಪ ಎಂದು ಕರೆಯಲು ಸಾಧ್ಯವಿಲ್ಲ ಎಂಬುದು ನಿಜದ ಇನ್ನೊಂದು ಮುಖ. ಕೃತಿಯನ್ನು ಲಿಪಿಗೊಳಿಸಿದ ಸಾಧನವಾದ ವ್ಯಕ್ತಿ ದಿವಂಗತನಾಗಿರಬಹುದು. ಆದರೆ ಕೃತಿಯಲ್ಲಿ ನುಡಿಯುವ ಕವಿ ಪಂಪ 'ವಿಕ್ರಮಾರ್ಜುನ ವಿಜಯ' ಇರುವವರೆಗೂ ಬದುಕಿರುತ್ತಾನೆ.

ಆಯಾಚಿತವಾಗಿ ಪ್ರತಿಬಿಂಬಿಸುತ್ತಿವೆ. ಸ್ವಂತಿಕೆಯ ಪ್ರತಿಪಾದನೆಯೆಂಬುದು ಈ ಕೃತಿ ರಚನೆಯೊಳಗೆ ನಾಡು, ನುಡಿ ಹಾಗೂ ಕವಿಯ ವ್ಯಕ್ತಿತ್ವ ಎಂಬ ಅಂಶಗಳಲ್ಲಿ ಒಡಮೂಡಿ ಹರಡಿಕೊಂಡಿದೆ. ಸ್ವಂತಿಕೆ ಪ್ರತಿಪಾದನೆಯ ಪ್ರಯತ್ನವೇ ಆಗ ಮಾನ್ಯವಾಗಿದ್ದ ಸಾಂಸ್ಕೃತಿಕಾಂಶಗಳ ನಿರಾಕರಣೆಯನ್ನು ಧ್ವನಿಸುತ್ತಿದೆ.

* * *

ಕ್ರಿ.ಶ. 7ರ ವರೆಗೆ ಪ್ರಾದೇಶಿಕ ಭಾಷೆಗಳಿಗೆ ಸ್ವಂತ ಲಿಪಿ ಎಂಬುದು ಇರಲಿಲ್ಲ. ಕ್ರಿ.ಶ. 6ರಲ್ಲಿ ಅಖಿಲ ಭಾರತ ಸಾಮ್ರಾಜ್ಯವಾಗಿದ್ದ ಗುಪ್ತ ಸಾಮ್ರಾಜ್ಯವು ಕುಸಿದ ಕಾಲಘಟ್ಟಕ್ಕೂ ಕ್ರಿ.ಶ. 7ರ ಹೊತ್ತಿಗೆ ಪ್ರಾದೇಶಿಕ ಭಾಷೆಗಳಿಗೆ ಲಿಪಿ ರೂಪುಗೊಳ್ಳುವುದಕ್ಕೂ ಹಾಗೂ ಒಂದು ಪೂರಕ ಸಂಬಂಧವಿದೆ. ಆನಂತರದಲ್ಲೇ ಪ್ರಾದೇಶಿಕವಾದ ಸಾಮ್ರಾಜ್ಯಗಳು ಭರತ ಖಂಡದಲ್ಲಿ ಹೆಚ್ಚೆಚ್ಚು ಸದೃಢೀಕರಣಗೊಳ್ಳುತ್ತಾ ನಡೆದದ್ದನ್ನು ಇತಿಹಾಸದಲ್ಲಿ ನಾವು ಗುರುತಿಸಿದ್ದೇವೆ.

ಪ್ರಾದೇಶಿಕ ನೆಲೆ ಹೊಂದಿದ ಸಾಮ್ರಾಜ್ಯಗಳ, ರಾಜಸತ್ತೆಗಳ ಬೆಳವಣಿಗೆ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಲಿಪಿ ರೂಪಗೊಂಡಿದ್ದು ಎಂಬ ಸನ್ನಿವೇಶವೇ ದೇಸೀ ಭಾಷೆಗಳ ಕಾವ್ಯ ನಿರ್ಮಾಣಕ್ಕೆ ಬೆಂಬಲವಾಯಿತೆಂಬುದನ್ನು ನಾವಿಲ್ಲಿ ಗಮನಿಸಬೇಕು. ಹೀಗೆ 'ವಿಕ್ರಮಾರ್ಜುನ ವಿಜಯ'ವು ಮೂಲದಲ್ಲಿ ವ್ಯಾಸ ವಿರಚಿತ ಮಹಾಭಾರತದ ಕಥೆಯನ್ನು ತನ್ನ ಸಾಮಗ್ರಿಯನ್ನಾಗಿ ಆರಿಸಿಕೊಂಡಿದ್ದಾಗಲೂ ಕನ್ನಡ ಭಾಷೆಯ ಮಹಾಕಾವ್ಯವಾಗಿ ಅದು ರಚಿತಗೊಳ್ಳುವುದ್ದರಲ್ಲೇ ಒಂದು ಭಿನ್ನತೆಯ ಅಥವಾ ಸ್ವಂತ ಅಸ್ಮಿತೆಯ ಪ್ರಾದೇಶಿಕ ಹಾಗೂ ಭಾಷಾ ಪ್ರಜ್ಞೆಯನ್ನು ಧ್ವನಿಸುತ್ತಿದೆ.

ಸಂಸ್ಕೃತದಲ್ಲಿ ಬಳಕೆಯಲ್ಲಿದ್ದ ಮಹಾಭಾರತ ಮಹಾಕಾವ್ಯವು ಕನ್ನಡದಲ್ಲಿ 'ವಿಕ್ರಮಾರ್ಜುನ ವಿಜಯ'ವಾಗಿ ಮೈದಳೆಯುವಾಗ ಸಾಂಸ್ಕೃತಿಕವಾಗಿ ಕೆಲವು ಪಲ್ಲಟಗಳನ್ನು ಮೈಗೂಡಿಸಿಕೊಂಡಿದೆ. ಪಂಪನ ಕಾವ್ಯಕ್ಕೆ ನಾಯಕನಾಗಿರುವವನು ಅರ್ಜುನ. ವಾಸ್ತವವಾಗಿ ಅರ್ಜುನ ಯುವರಾಜನೇ ಹೊರತು ರಾಜನಲ್ಲ. ಪಟ್ಟಾಭಿಷೇಕದ ಹಕ್ಕು ವನವಾಸಕ್ಕೆ ಮೊದಲು ಮತ್ತು ವನವಾಸದ ನಂತರ ಪಾಂಡವರ ಪೈಕಿ ಇದ್ದದ್ದು ಧರ್ಮರಾಯನಿಗೆ. ಮಹಾಭಾರತದ ಮೂಲ ಕಥೆಯಲ್ಲಿ ಕಥಾ ನಾಯಕ ಧರ್ಮರಾಯನಲ್ಲದಿದ್ದರೂ ಶ್ರೀಕೃಷ್ಣ ಅದರಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವ ಪಾತ್ರ. ಪಂಪ ತನ್ನ ಕಾವ್ಯ ರಚನೆಗೆ ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡಿದ್ದಾನೆ.

ತನ್ನ ಪ್ರಭುವಾದ ಅರಿಕೇಸರಿಯನ್ನು ಸಮೀಕರಿಸಲು ಮಹಾಭಾರತದ ಕಥೆಯಲ್ಲಿ ಅರ್ಜುನ ಸೂಕ್ತವಾದ ಪಾತ್ರವಾಗಿ ಆತನಿಗೆ ಒದಗಿದ್ದಾನೆ. ಸಮಕಾಲೀನ ವ್ಯಕ್ತಿ ಹಾಗೂ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಿಸುವಾಗ ಮಹಾಭಾರತದ ಕೆಲವು ಘಟನಾವಳಿಗಳನ್ನು ಆತ ಮಾರ್ಪಡಿಸಿಕೊಂಡಿದ್ದಾನೆ. ಮೂಲ ಮಹಾಭಾರತದೊಂದಿಗೆ ತಾಳೆ ನೋಡುತ್ತಾ ಈ ಘಟನಾವಳಿ ಬದಲಾವಣೆಯನ್ನು ಗಮನಿಸುವವರಿಗೆ ಕೆಲವು ಕಡೆ ಅಭಾಸ ಉಂಟಾಗಿರುವಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಅದರಲ್ಲೂ ಅರ್ಜುನನನ್ನು ಕೆಲವು ಕಡೆ 'ಸಾಮಂತ ಚೂಡಾಮಣಿ' ಎಂಬ ಬಿರುದಿನಿಂದಲೇ ಕರೆಯುತ್ತಾ ಪ್ರಸಂಗ ನಿರೂಪಣೆ ಮಾಡಿದಾಗ ಇಂತಹ ಅಭಾಸ ಎದ್ದು ಕಾಣುವುದುಂಟು.

> **ಮಹಾಭಾರತದ ಕಥೆ ಜನಜನಿತವಾಗಿದ್ದ ಸ್ವರೂಪದಲ್ಲಿ ಶ್ರೀಕೃಷ್ಣ ಇಡೀ ಮಹಾಭಾರತದ ಸೂತ್ರಧಾರಿ. ಅವತಾರಿ ಪಾತ್ರವಾದ ಶ್ರೀಕೃಷ್ಣ ಮಹಾಭಾರತದ ಕೇಂದ್ರ ಪಾತ್ರಧಾರಿ. ಅದನ್ನು ಬದಲಾಯಿಸಿ ಭಕ್ತ ಪ್ರಜ್ಞೆಯಿಂದ ಮಹಾಭಾರತದಲ್ಲಿ ಕಂಗೊಳಿಸುವ ಅರ್ಜುನನನ್ನು ಇಲ್ಲಿ ಕಥಾನಾಯಕನನ್ನಾಗಿ ಆರಿಸಿಕೊಂಡಿರುವುದು ಕೇವಲ ಅರಿಕೇಸರಿಯ ಸಮೀಕರಣದ ಕಾರಣಕ್ಕೆ ಎಂದು ನಾವು ಕರೆಯುವಂತಿಲ್ಲ. ಜೈನ ಧರ್ಮೀಯನಾದ ಪಂಪನಿಗೆ ವರ್ಣಾಶ್ರಮ ಪ್ರತಿಪಾದಿಸುವ ಭಗವದ್ಗೀತೆಯನ್ನು ಬೋಧಿಸಿದವನೆಂದು ಕೀರ್ತಿತನಾದ ಶ್ರೀಕೃಷ್ಣನನ್ನು ತನ್ನ ಕಥೆಯ ಕೇಂದ್ರ ಪಾತ್ರವನ್ನಾಗಿಸುವುದು ಸಮ್ಮತವಿರಲಿಲ್ಲ ಎಂದು ನಾವು ಗ್ರಹಿಸಬೇಕಾಗುತ್ತದೆ. ಆದ್ದರಿಂದಲೇ ಕಥಾನಕದಲ್ಲಿ 'ನಾರಾಯಣನಿಂದ ನರನಿಗೆ' ಪ್ರಾಮುಖ್ಯತೆ ವರ್ಗಾವಣೆ ಗೊಂಡಿದೆ. ಅದರ ಲೌಕಿಕೀಕರಣ ಪ್ರಯತ್ನ ಈ ಹಂತದಲ್ಲೂ ಕ್ರಿಯಾಶೀಲವಾಗಿದೆ.**

ಆದರೆ ಪಂಪನಿಗೆ ತಾನು ಕನ್ನಡದಲ್ಲಿ ಒಂದು ಕಾವ್ಯ ಬರೆಯುತ್ತಿರುವಾಗ ಅದನ್ನು ಸಂಸ್ಕೃತ ಮಹಾಭಾರತದ ಕನ್ನಡ ಅವತರಣಿಕೆ ಮಾಡಬೇಕೆಂಬ ಉದ್ದೇಶ ಇದ್ದಂತೆ ಕಾಣುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಅದಕ್ಕೆ 'ವಿಕ್ರಮಾರ್ಜುನ ವಿಜಯ' ಎಂಬ ಹೆಸರನ್ನಿಡುವ ಅಗತ್ಯವಿರುತ್ತಿರಲಿಲ್ಲ. ಪಂಪ ಬರೆಯಹೊರಟಿದ್ದು ಕನ್ನಡದ ಕಾವ್ಯವೊಂದನ್ನು. ಅರಿಕೇಸರಿಗೆ ಪೌರಾಣಿಕ ಪಾತ್ರ ವೊಂದರ ಸಮೀಕರಣದ ಮುಖಾಂತರ ಪ್ರಭಾವಳಿ ಯೊಂದನ್ನು ಜೋಡಿಸುವುದು ಆತನ ಉದ್ದೇಶವಿದ್ದಂತಿದೆ. ಅದಕ್ಕಾಗಿ ಮಹಾಭಾರತದ ಕಥಾ ಸರಣಿಯನ್ನು ಆರಿಸಿಕೊಂಡಿದ್ದಾನೆ. ಹೀಗೆ ಕಥಾ ಹಂದರವನ್ನು ಆಯ್ದುಕೊಂಡು ತನ್ನ ಮನೋಭೂಮಿಕೆಯಲ್ಲಿರುವ ಕಥೆಯನ್ನು ಹೇಳತೊಡಗಿರುವುದರಲ್ಲಿಯೇ ಪಂಪನಿಗಿರುವ ಕವಿ ಪ್ರಜ್ಞೆಯ ಸ್ವಾಯತ್ತತೆ ವ್ಯಕ್ತಗೊಳ್ಳುತ್ತಿದೆ.

ಮಹಾಭಾರತದ ಕಥೆ ಜನಜನಿತವಾಗಿದ್ದ ಸ್ವರೂಪದಲ್ಲಿ ಶ್ರೀಕೃಷ್ಣ ಇಡೀ ಮಹಾಭಾರತದ ಸೂತ್ರಧಾರಿ. ಅವತಾರಿ ಪಾತ್ರವಾದ ಶ್ರೀಕೃಷ್ಣ ಮಹಾಭಾರತದ ಕೇಂದ್ರ ಪಾತ್ರಧಾರಿ. ಅದನ್ನು ಬದಲಾಯಿಸಿ ಭಕ್ತ ಪ್ರಜ್ಞೆಯಿಂದ ಮಹಾಭಾರತದಲ್ಲಿ ಕಂಗೊಳಿಸುವ ಅರ್ಜುನನನ್ನು ಇಲ್ಲಿ ಕಥಾನಾಯಕನನ್ನಾಗಿ ಆರಿಸಿಕೊಂಡಿರುವುದು ಕೇವಲ ಅರಿಕೇಸರಿಯ ಸಮೀಕರಣದ ಕಾರಣಕ್ಕೆ ಎಂದು ನಾವು ಕರೆಯುವಂತಿಲ್ಲ. ಜೈನ ಧರ್ಮೀಯನಾದ ಪಂಪನಿಗೆ ವರ್ಣಾಶ್ರಮ ಪ್ರತಿಪಾದಿಸುವ ಭಗವದ್ಗೀತೆಯನ್ನು ಬೋಧಿಸಿದವನೆಂದು ಕೀರ್ತಿತನಾದ ಶ್ರೀಕೃಷ್ಣನನ್ನು ತನ್ನ ಕಥೆಯ ಕೇಂದ್ರ ಪಾತ್ರವನ್ನಾಗಿಸುವುದು ಸಮ್ಮತವಿರಲಿಲ್ಲ ಎಂದು ನಾವು ಗ್ರಹಿಸಬೇಕಾಗುತ್ತದೆ. ಆದ್ದರಿಂದಲೇ ಕಥಾನಕದಲ್ಲಿ 'ನಾರಾಯಣನಿಂದ ನರನಿಗೆ' ಪ್ರಾಮುಖ್ಯತೆ ವರ್ಗಾವಣೆಗೊಂಡಿದೆ. ಅದರ ಲೌಕಿಕೀಕರಣ ಪ್ರ0ಯತ್ನ ಈ ಹಂತದಲ್ಲೂ ಕ್ರಿಯಾಶೀಲವಾಗಿದೆ.

* * *

'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನನು ಸಮೀಕರಣಗೊಂಡಿರುವುದು ಸಾಮಂತ ಚೂಡಾಮಣಿಯಾದ ಅರಿಕೇಸರಿಯ ಜೊತೆ. ಪಂಪ ಈ ವಿಷಯದಲ್ಲೂ ಒಂದು ಪಾರಂಪರಿಕ ಮೌಲ್ಯವನ್ನು ಮುರಿದಿದ್ದಾನೆ ಎಂದು ಹೇಳಬಹುದು. ಸಾಮಾನ್ಯವಾಗಿ ಚಕ್ರವರ್ತಿಯನ್ನು ಕೀರ್ತಿಸಿ ಕಾವ್ಯ ಬರೆಯುವುದು ಚಕ್ರಾಧಿಪತ್ಯ ಅಧಿಕಾರ ಸಂರಚನೆಯ ದೃಷ್ಟಿಯಿಂದ ಹೆಚ್ಚು ಸ್ವಾಭಾವಿಕವಾದುದು. ರಾಷ್ಟ್ರಕೂಟರ ಸಾಮಂತನಾಗಿ ಒಂದು ಸೀಮೆ ಅಥವಾ ನಾಡನ್ನು ಆಳುತ್ತಿದ್ದ ಅರಿಕೇಸರಿಯನ್ನು ತನ್ನ ಕಾವ್ಯದ ಮುಖಾಂತರ ಲೋಕ ನಾಯಕನನ್ನಾಗಿ ಮಾಡಲು ಪ್ರಯತ್ನಿಸಿದ ಪಂಪನ ಕವಿ ಪ್ರಜ್ಞೆ ಕೇವಲ ಆಶ್ರಯದಾತನನ್ನು ಹೊಗಳಿ ಮೆಚ್ಚಿಸುವ ಋಣಭಾವದಿಂದ ಪ್ರೇರಣೆಗೊಂಡಿದೆ ಎನ್ನುವುದು ಬಹಳ ಸರಳ ಗ್ರಹಿಕೆಯಾಗುತ್ತದೆ. ಆ ಕಾಲಘಟ್ಟದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕೆಳಹಂತದಿಂದ ಪ್ರವರ್ಧಮಾನಕ್ಕೆ ಬರುತ್ತಿದ್ದ ಉಪಊಳಿಗಮಾನ್ಯ ವ್ಯವಸ್ಥೆ ತಾನು ಅಧೀನಗೊಂಡಿರುವ ಮೇಲು ಹಂತದ ಊಳಿಗಮಾನ್ಯತೆಗೆ ವಿಧೇಯವಾಗಿದ್ದಾಗಲೂ ತನ್ನದೇ ನೆಲೆಗಟ್ಟಿನಲ್ಲಿ ತನ್ನನ್ನು ಹೆಚ್ಚು ಸ್ವಾಯತ್ತಗೊಳಿಸಿಕೊಳ್ಳಲು, ಸಾಧ್ಯವಾದಷ್ಟು ಹೆಚ್ಚು ನಿರ್ಣಾಯಕ ಶಕ್ತಿಯಾಗಲು ಬಯಸುತ್ತಿದ್ದ ಆಶೋತ್ತರವನ್ನು ಇದು ಬಿಂಬಿಸುತ್ತಿದೆ.

'ವಿಕ್ರಮಾರ್ಜುನ ವಿಜಯ'ದಲ್ಲಿ ಚಕ್ರಾಧಿಪತ್ಯ ಶಿಷ್ಟಾಚಾರ ಕಾರಣದಿಂದಾಗಲೀ, ಪ್ರಾಸಂಗಿಕ ನಿರೂಪಣೆಯ ಕಾರಣದಿಂದಾಗಲೀ ಅರಿಕೇಸರಿಯು ಯಾವ ಚಕ್ರವರ್ತಿಯ ಬಳಿ ಸಮಂತನಾಗಿದ್ದ ಎಂಬ ಉಲ್ಲೇಖವನ್ನು ಪಂಪ ತಂದಿಲ್ಲ. ಮಹಾಭಾರತದ ಕಥೆಯ ಚೌಕಟ್ಟಿನಲ್ಲಿ ಪಾಂಡವರು ಅಥವಾ ಅವರ ಪ್ರತಿನಿಧಿಯಾಗಿ ಅರ್ಜುನ ಯಾರ ಬಳಿಯಲ್ಲೂ ಸಾಮಂತತನ ಒಪ್ಪಿಕೊಂಡಿದ್ದ ಪ್ರಸಂಗ ಇಲ್ಲವೆಂಬುದು ನಿಜವಾದರೂ ಪಂಪ ವಿವರಗಳ ನಿರೂಪಣೆಯಲ್ಲಿ ಮಹಾಭಾರತವನ್ನು ತದ್ವತ್ತಾಗಿ ಎಲ್ಲಾ ಸಂದರ್ಭಗಳಲ್ಲೂ ಅನುಸರಿಸಿದ್ದಾನೆ ಎನ್ನಲು ಸಾಧ್ಯವಿಲ್ಲ ಎಂಬುದನ್ನು ಈಗಾಗಲೇ ಪ್ರಸ್ತಾಪಿಸಿಯಾಗಿದೆ. ಹಾಗಿರುವ ಸಂದರ್ಭದಲ್ಲಿ ಅರಿಕೇಸರಿಗೆ ಚಕ್ರವರ್ತಿಯಾಗಿದ್ದ ರಾಷ್ಟ್ರಕೂಟರ ದೊರೆಯನ್ನು ಪೀಠಿಕಾ ಪ್ರಸಂಗದಲ್ಲಿ ಅಥವಾ ಬೇರೆ ಕಡೆಯಲ್ಲಿ ಪ್ರಸ್ತಾಪಿಸಲು ಅವಕಾಶ ಇತ್ತೆಂದುಕೊಂಡರೆ ತಪ್ಪಾಗುವುದಿಲ್ಲ. ಆದರೆ ಪಂಪನಿಗೆ ಅದರ ಅಗತ್ಯ ಕಂಡುಬಂದಿಲ್ಲ.

ಅಂದರೆ ಅಖಿಲ ಭಾರತ ಚಕ್ರಾಧಿಪತ್ಯಕ್ಕೆ ಅಧೀನವಾಗಿರುವುದನ್ನು ನಿರಾಕರಿಸಿದ ಪ್ರಾದೇಶಿಕ ರಾಜಸತ್ತೆಗಳು ಅಸ್ತಿತ್ವಕ್ಕೆ ಬಂದ ರೀತಿಯಲ್ಲೇ ಮತ್ತಷ್ಟು ಸ್ಥಾನಿಕವಾದ ಸೀಮೆ ಅಥವಾ ನಾಡುಗಳ ರಾಜಸತ್ತೆಗಳು ಕೂಡ ಅಸ್ತಿತ್ವಕ್ಕೆ ಬಂದಿದ್ದು, ಅವು ತಮ್ಮ ವ್ಯಾವಹಾರಿಕ ಪ್ರಜ್ಞೆಯಲ್ಲಿ ತಮ್ಮನ್ನೊಂದು ಸ್ವಾಯತ್ತ ಆಡಳಿತ ಘಟಕ ಎಂದು ಪರಿಗಣಿಸಿಕೊಳ್ಳತೊಡಗಿದ್ದ ವಿದ್ಯಮಾನವು ಆ ಚಾರಿತ್ರಿಕ ಸನ್ನಿವೇಶದಲ್ಲಿ ಏರ್ಪಟ್ಟಿದ್ದಿತು. ಅದರಿಂದಾಗಿಯೇ ತಾನು ನಿಷ್ಠೆಯನ್ನು ತೋರಿಸುತ್ತಿದ್ದ ನಾಡಿನ ಅಧಿಪತಿಯನ್ನು ಕೀರ್ತಿ

ಸುವ ಉದ್ದೇಶ, ಅದೇ ಸಂದರ್ಭದಲ್ಲಿ ತನ್ನ ನಾಡಿನ ಆಡಳಿತ ಸ್ವಾಯತ್ತತೆಯನ್ನು ಪ್ರತಿಪಾದಿಸುವ ಪ್ರಜ್ಞೆಯಾಗಿಯೊ ವ್ಯಕ್ತಗೊಂಡಿದೆ ಎನ್ನಲು ಅವಕಾಶವಾಗುತ್ತದೆ.

ಯಾವುದೇ ಸತ್ವಶಾಲಿ ಕಲಾಕೃತಿ ತನ್ನ ಕಾಲಘಟ್ಟದ ಆಶೋತ್ತರಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರತಿಬಿಂಬಿಸುತ್ತಿರುತ್ತದೆ ಎಂಬ ಮಾತನ್ನು ಈ ಊಹೆಗೆ ಆಧಾರವನ್ನಾಗಿ ಬಳಸಿಕೊಳ್ಳಬಹುದು. ಈ ಪ್ರಾದೇಶಿಕ ನಿಷ್ಠೆಯ ಪ್ರಜ್ಞೆ ಪಂಪನ ಕಾವ್ಯದಲ್ಲಿ ನಾಡಿನ ವರ್ಣನೆ ಹಾಗೂ ಅದರ ಮೇಲಿನ ಅಭಿಮಾನವಾಗಿ ಅಭಿವ್ಯಕ್ತಗೊಂಡಿರುವ ಭಾಗಗಳನ್ನು ಈ ಮಾತಿಗೆ ನಾವು ಮತ್ತೊಂದು ಆಧಾರವಾಗಿ ಗಮನಿಸಬಹುದು. 'ತ್ಯಾಗದ, ಭೋಗದ, ಅಕ್ಕರದ, ಗಾನದ, ಗೋಷ್ಠಿಗಳ ಅಕ್ಕರೆಯ ಸವಿಗೆ ನೆಲೆಯಾದ ಮನಸ್ಸುಳ್ಳವರೇ ಮನುಷ್ಯರು. ಅಂಥವರಾಗಿ ಹುಟ್ಟಲು ಏನಾದರಾಗಲಿ ಸಾಧ್ಯವೇ? ಸಾಧ್ಯವಾಗದಿದ್ದರೂ ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿ ಹುಟ್ಟಬೇಕು. ನಂದನವನ ಈ ಬನವಾಸಿ ದೇಶದಲ್ಲಿ' ಎಂಬ ಸಾಲುಗಳು ವ್ಯಕ್ತಪಡಿಸುತ್ತಿರುವುದು ಪಂಪನಿಗೆ ತನ್ನ ದೇಸೀ ಸೀಮೆಯ ಬಗೆಗಿದ್ದ ಮಮಕಾರ ಹಾಗೂ ಆತ್ಮಪ್ರತ್ಯಯವನ್ನು ಎಂದು ಗ್ರಹಿಸಲು ಹೆಚ್ಚಿನ ಅಡ್ಡಿಗಳಿರುವಂತೆ ಕಾಣುವುದಿಲ್ಲ.

'ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎನ್ನುವ ಹೇಳಿಕೆ ಕೂಡ ಇದೇ ಬಗೆಯಲ್ಲಿ ಪ್ರದೇಶ ಪ್ರೇಮವನ್ನು ಅತಿಶಯವಾಗಿ ನಿದರ್ಶಿಸುತ್ತಿದೆ. ಈ ಆತ್ಮಪ್ರತ್ಯಯವೇ ತನ್ನ ನಾಡು, ನಾಡಿನ ಜನತೆ ಹಾಗೂ ನಾಡನ್ನಾಳುವ ದೊರೆ ಇವುಗಳ ಬಗೆಗಿನ ಅಭಿಮಾನದ ಕವಿ ಮಾತಾಗಿ ಅಭಿವ್ಯಕ್ತಿಗೊಂಡಿದೆ. ಕವಿ ಪಂಪನ ನಿಷ್ಠೆ ತನ್ನ ಆಶ್ರಯದಾತನಾದ ಅರಿಕೇಸರಿಯ ಬಗ್ಗೆ ಮಾತ್ರ ವ್ಯಕ್ತಗೊಂಡಿದ್ದಿದ್ದರೆ ಅದನ್ನು ಊಳಿಗಮಾನ್ಯ ಸಂಸ್ಕೃತಿಯ ಸಹಜ ಋಣಪ್ರಜ್ಞೆಯ ವಿಷಯವನ್ನಾಗಿ ಪರಿಗಣಿಸಬಹುದಾಗಿತ್ತು. ಅದು 'ವಿಕ್ರಮಾರ್ಜುನ ವಿಜಯ'ದಲ್ಲಿ ನಾಡು, ನುಡಿ ಹಾಗೂ ನಾಡಿನ ಜನತೆಯ ಬಗೆಗಿನ ಅಭಿಮಾನವಾಗಿಯೂ ಅಭಿವ್ಯಕ್ತಗೊಂಡಿದೆ ಎಂದರೆ ಅದನ್ನು ಕೇವಲ ಊಳಿಗಮಾನ್ಯ ಸ್ವಾಮಿನಿಷ್ಠೆ ಎಂದು ಪರಿಗಣಿಸಿದರೆ ಸಮರ್ಪಕವಾಗುವುದಿಲ್ಲ.

* * *

'ವಿಕ್ರಮಾರ್ಜುನ ವಿಜಯ'ವು ಅರ್ಜುನನನ್ನು ಅರಿಕೇಸರಿಯ ಜೊತೆ ಸಮೀಕರಿಸಿಕೊಂಡು ಕಥೆಯ ನಾಯಕನನ್ನಾಗಿಸಿಕೊಂಡಿದ್ದಾಗಲೂ ಅದರ ಪ್ರತಿಪಾತ್ರವಾದ ಕರ್ಣನ ಬಗ್ಗೆ ಕವಿ ತೋರಿಸುವ ಅತಿಶಯ ಪ್ರೀತಿ ಮತ್ತು ಅಭಿಮಾನ ಮತ್ತೊಂದು ವಿವೇಚನಾರ್ಹ ಸಂಗತಿಯಾಗಿದೆ. ಕಥೆಯ ಪ್ರಜ್ಞಾಪೂರ್ವಕ ನಿರೂಪಣೆಯಲ್ಲಿ ವಿಕ್ರಮಾರ್ಜುನನ ಶೌರ್ಯ, ಪ್ರತಾಪಗಳನ್ನು ನಿರೂಪಿಸುವುದರಲ್ಲಿ ಕವಿ ಮನಸ್ಸು ತಲ್ಲೀನವಾಗಿದೆ. ಆದರೆ ಅದರ ಭಾವಕೋಶದಲ್ಲಿ ಅತ್ಯಂತ ಸಾರ್ಥಕ ಪಾತ್ರವಾಗಿ ಕರ್ಣ ನಿಂತಿದ್ದಾನೆ. 'ಒಂದೆ ಚಿತ್ತದಿಂದ ನೆನೆವೊಡೆ ಕರ್ಣನಂ ನೆನೆಯ' ಎಂಬ ಮಾತಾಗಲೀ, 'ಕರ್ಣರಸಾಯನಮಲ್ತೆ ಭಾರತಂ' ಎಂದು ಹೇಳುವುದರಲ್ಲಾಗಲೀ ಕವಿಗೆ ತುಂಬು ಮನಸ್ಸಿದೆ.

ಮಹಾಭಾರತದ ಪ್ರಶ್ನೆಗೆ ಬಂದರೆ ಕೃಷ್ಣನ ಬದಲು ಅರ್ಜುನನನ್ನು ಆದರಿಸುವ, ಅರ್ಜುನನನ್ನು ಕೀರ್ತಿಸುತ್ತಿರುವಾಗಲೇ ಅವನ ಎದುರು ಪಾಳಯದ ಮುಖಂಡನಾದ ದುರ್ಯೋಧನನ ಬಗ್ಗೆ ಮತ್ತು ಅರ್ಜುನನಿಗೆ ಪ್ರತಿನಾಯಕ ಪಾತ್ರವಾಗಿ ಬರುವ ಕರ್ಣನ ಬಗ್ಗೆ ಕವಿಯ ಮನಸ್ಸು ಇಷ್ಟು ಆರ್ದ್ರವಾಗಿ ಚಿಂತಿಸುವ ಕಾರಣವನ್ನು ವಿಸ್ತೃತವಾದ ಪರಿಶೀಲನೆಗೆ ಒಳಪಡಿಸಬೇಕಾಗಿದೆ.

ಕರ್ಣ ವಾಸ್ತವವಾಗಿ ಸೂತಪುತ್ರನಲ್ಲ. ಆದರೂ ಬೆಸ್ತನೆಂಬ ಹೆಸರಿನಲ್ಲಿ ಹಲವು ಸನ್ನಿವೇಶಗಳಲ್ಲಿ ಹೀಯಾಳಿಕೆಗೆ ಗುರಿಯಾಗುತ್ತಾನೆ. ದುರ್ಯೋಧನನ ಔದಾರ್ಯ ಮತ್ತು ಸ್ನೇಹದ ಕಾರಣದಿಂದ ಅಂಗ ರಾಜ್ಯಾಧಿಪತಿಯಾಗಿ ನೇಮಕಗೊಂಡಾದ ಮೇಲೂ ಕರ್ಣನಿಗೆ ಆಯಕಟ್ಟಿನ ಸನ್ನಿವೇಶಗಳಲ್ಲಿ ಜಾತಿ ಸಂಬಂಧವಾದ ತೆಗಳಿಕೆ ತಪ್ಪುವುದಿಲ್ಲ. ಕುರುಕ್ಷೇತ್ರ ಯುದ್ಧದ ಸೇನಾಧಿಪತಿ ಪಟ್ಟಕಟ್ಟುವ ಪ್ರಸಂಗದಲ್ಲಿ ಜಾತಿ ಅವಹೇಳನದ ಮಾತು ಮತ್ತೆ ಬರುತ್ತದೆ. ಆಗ ಕರ್ಣ 'ಛಲಂ ಕುಲಂ, ಗುಣಂ ಕುಲಂ, ಅಭಿಮಾನಂ ಕುಲಂ, ಅಣ್ಮು ಕುಲಂ' ಎಂಬ ಮಾತುಗಳ ಮುಖಾಂತರ ಕಂದಾಚಾರಿ ಜಾತಿ ತಾರತಮ್ಯದ ಪ್ರಜ್ಞೆಗೆ ಸವಾಲೆಸೆಯುತ್ತಾನೆ.

ಕುಲದ ಕೀಳ್ತನವನ್ನು ನಿರಾಕರಿಸಿ ಗುಣದಿಂದಲೇ ಶ್ರೇಷ್ಠತೆಯನ್ನು ಪಡೆದುಕೊಳ್ಳುವ ಪಾತ್ರವಾಗಿ ಕರ್ಣನ ಬಗ್ಗೆ ಪಂಪನಿಗೆ ಎರಡು ಕಾರಣಗಳಿಂದ ಮೆಚ್ಚುಗೆ ಹುಟ್ಟಿರಬಹುದೆಂದು ಊಹಿಸಬಹುದಾಗಿದೆ. ಮೊದಲ ಅಂಶ ಪಂಪನಿಗಿದ್ದ ಧರ್ಮ ಪ್ರಜ್ಞೆ. ವೈದಿಕ ಧರ್ಮದ ಜಾತಿ ಶ್ರೇಣೀಕರಣವನ್ನು ನಿರಾಕರಿಸಿ ಎಲ್ಲರ ಭ್ರಾತೃತ್ವವನ್ನು ಪ್ರತಿಪಾದಿಸುತ್ತಿದ್ದ ಜೈನ ಧರ್ಮವನ್ನು ಒಪ್ಪಿಕೊಂಡ ಕುಟುಂಬದವನಾಗಿದ್ದ ಪಂಪನಿಗೆ ತನ್ನ ಧರ್ಮದ ಆಶಯದ ಕಾರಣದಿಂದಾಗಿ ಇದೊಂದು ಸಹಜಾಭಿವ್ಯಕ್ತಿ. ಜೈನ ಧರ್ಮಾನುಯಾಯಿಯಾದುದರಿಂದ ಜಾತಿಗೆಟ್ಟವನೆಂದು ಸಂಪ್ರದಾಯವಾದಿಗಳಿಂದ ಮತ್ತೆ ಮತ್ತೆ ಅವಹೇಳನಕ್ಕೆ ಗುರಿಯಾಗುತ್ತಿದ್ದ ತನ್ನ ವ್ಯಕ್ತಿಗತ ಕಾರಣದಿಂದಾಗಿಯೂ ಪಂಪನಿಗೆ ಜಾತಿ ಶ್ರೇಷ್ಠತೆಯ ಧೋರಣೆಗಳನ್ನು ಕಂಡರೆ ವಿರೋಧವಿತ್ತೆಂದುಕೊಳ್ಳಲು ಅವಕಾಶವಿದೆ. ಹಾಗಾಗಿಯೇ ಕರ್ಣನ ಪ್ರಶ್ನೆ ಬಂದಾಗ ಪಂಪನಿಗೆ ಕೇವಲ ಪ್ರಸಂಗಾವೇಶ ಮಾತ್ರವಲ್ಲದೆ, ಭಾವಾವೇಶವೂ ಸೇರಿಕೊಂಡಂತೆ ಕಂಡುಬರುತ್ತದೆ.

ವೈದಿಕಶಾಹಿಯ ಲೋಕದೃಷ್ಟಿಗೆ ಭಿನ್ನವಾಗಿ ಜೈನ ಧರ್ಮ ಎಲ್ಲರ ಭ್ರಾತೃತ್ವವನ್ನು ಪ್ರತಿಪಾದಿಸುತ್ತದೆ. ಮೇಲು ಕೀಳುಗಳ ಶ್ರೇಣೀಕರಣವನ್ನು ಮಾನ್ಯ ಮಾಡದ ಯಾವುದೇ ದರ್ಶನ ಅಥವಾ ಸಿದ್ಧಾಂತಗಳನ್ನು ಪತಿತ ಮಾರ್ಗವೆಂದು ಹೀಯಾಳಿಸುವುದು ವೈದಿಕಶಾಹಿಯ ಅಭ್ಯಾಸ. ಹಾಗಾಗಿ ಜೈನದರ್ಶನವನ್ನು ಕೂಡ ಹಾಗೆಯೇ ಕುಲಗೆಟ್ಟ ನೀತಿಯನ್ನಾಗಿ ಖಂಡಿಸಿದೆ. ಈ ಹಿನ್ನೆಲೆಯಲ್ಲಿ ಕರ್ಣನ ಮಾತುಗಳ ಮೂಲಕ ಹೊಸ ಕುಲ ಪ್ರಜ್ಞೆಯನ್ನು ಪಂಪ ಪ್ರತಿಪಾದಿಸಬಯಸುತ್ತಿದ್ದಾನೆ. ಕರ್ಣನ ಕಥೆಗೂ, ಪಂಪನ ವ್ಯಕ್ತಿಗತ ವಾಸ್ತವಿಕತೆಗೂ ಪರೋಕ್ಷವಾಗಿ ಏರ್ಪಟ್ಟಿರುವ ಹೀಯಾಳಿಕೆಯ ನೋವು ಹಾಗೂ ಹುಟ್ಟಿನ ಆಧಾರದಲ್ಲಿ ನಿರ್ಧಾರಗೊಳ್ಳುವ ಮೇಲು ಕೀಳುಗಳನ್ನು ಅಲ್ಲಗಳೆಯಬೇಕೆಂಬ ಜೈನ ಧರ್ಮದ ತಾತ್ವಿಕತೆ ಇವೆರಡೂ ನೆಲೆಗಳು ಪಂಪನಲ್ಲಿ ಕ್ರಿಯಾಶೀಲಗೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.

* * *

ಪಂಪನ ಈ ಬಗೆಯ ಕುಲ ಶ್ರೇಷ್ಠತೆ ನಿರಾಕರಣೆಯ ಮಾತುಗಳಿಗೆ ಆಗಿನ ಸಾಮಾಜಿಕ-ರಾಜಕೀಯ ಸನ್ನಿವೇಶವೂ ಇಂಬಾಗಿತ್ತೆಂಬುದನ್ನು ನಾವೊಂದು ಪೂರಕಾಂಶವಾಗಿ ಗಮನಿಸಬಹುದಾಗಿದೆ. ಕರ್ನಾಟಕದ ಪರಂಪರೆ ಸಂಪುಟ – 1ರಲ್ಲಿ 'ಸಾಮಾಜಿಕ ಜೀವನ ಹಾಗೂ ಆರ್ಥಿಕ ಪರಿಸ್ಥಿತಿ-ರಾಷ್ಟ್ರಕೂಟ ಹಾಗೂ ಕಡೆ ಕಡೆಯ ಕಾಲದಲ್ಲಿ' ಎಂಬ ಲೇಖನದಲ್ಲಿ ಡಾ. ಎಸ್. ಸಿ. ನಂದಿಮಠ ಅವರು ಹೇಳುವ ಹಾಗೆ "ಬಹುಶಃ ತಮ್ಮ ಗೋತ್ರ ಇದೇ ಎಂದು ನಿಶ್ಚಯಿಸಿ ಹೇಳಲಾರದವರೂ ಕೂಡ (ಕರ್ನಾಟಕದಲ್ಲಿ) ರಾಜರಾಗಿ ಆಳುವವರಾದರು" ಆದ್ದರಿಂದಲೇ 8ನೆಯ ಶತಮಾನದ ಹಾಗೂ ನಂತರದ ಕರ್ನಾಟಕದ ತಾಮ್ರ ಶಾಸನ ಮತ್ತು ಶಿಲಾ ಶಾಸನಗಳಲ್ಲಿ ರಾಜರ ಗೋತ್ರಗಳ ಉಲ್ಲೇಖ ಕಂಡುಬರುವುದಿಲ್ಲ.

ಉತ್ತರ ಭಾರತದ ರಾಜವಂಶಗಳಲ್ಲಿ ಸಾಮಾನ್ಯವಾಗಿ ವರ್ಣಾಶ್ರಮಧರ್ಮದ ಅನುಸಾರವಾಗಿ ಕ್ಷತ್ರಿಯರೆಂದು ಮಾನ್ಯತೆ ಪಡೆದಿದ್ದ ದ್ವಿಜ ಜಾತಿಗಳೇ ರಾಜವಂಶಗಳಾಗಿ ಆಳ್ವಿಕೆಗೆ ತೊಡಗಿದ್ದು ಕಂಡುಬರುತ್ತದೆ. ಆದರೆ ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದ ರಾಜವಂಶಗಳು ಹೀಗೆ ಶಾಸ್ತ್ರಾಚಾರ ಬೆಂಬಲಪಡೆದ ಕ್ಷತ್ರಿಯ ಜಾತಿಗಳಾಗಿರಲಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಶೂದ್ರ ಜಾತಿಗಳೇ ರಾಜ್ಯಾಡಳಿತಕ್ಕೆ ತೊಡಗಿ ನಂತರದಲ್ಲಿ ವಂಶ ಪ್ರತಿಷ್ಠೆ ಬೆಳೆಸಿಕೊಳ್ಳುವ ಕಾರಣಕ್ಕೆ ಕ್ಷತ್ರಿಯ ಜಾತಿಯೊಂದಿಗೆ ಸಮೀಕರಣ ಸಾಧಿಸಿದ ವಂಶಪುರಾಣಗಳನ್ನು

> **ಉತ್ತರ ಭಾರತದ ರಾಜವಂಶಗಳಲ್ಲಿ ಸಾಮಾನ್ಯವಾಗಿ ವರ್ಣಾಶ್ರಮಧರ್ಮದ ಅನುಸಾರವಾಗಿ ಕ್ಷತ್ರಿಯರೆಂದು ಮಾನ್ಯತೆ ಪಡೆದಿದ್ದ ದ್ವಿಜ ಜಾತಿಗಳೇ ರಾಜವಂಶಗಳಾಗಿ ಆಳ್ವಿಕೆಗೆ ತೊಡಗಿದ್ದು ಕಂಡು ಬರುತ್ತದೆ. ಆದರೆ ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದ ರಾಜ ವಂಶಗಳು ಹೀಗೆ ಶಾಸ್ತ್ರಾಚಾರ ಬೆಂಬಲ ಪಡೆದ ಕ್ಷತ್ರಿಯ ಜಾತಿಗಳಾಗಿರಲಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಶೂದ್ರ ಜಾತಿಗಳೇ ರಾಜ್ಯಾಡಳಿತಕ್ಕೆ ತೊಡಗಿ ನಂತರದಲ್ಲಿ ವಂಶ ಪ್ರತಿಷ್ಠೆ ಬೆಳೆಸಿಕೊಳ್ಳುವ ಕಾರಣಕ್ಕೆ ಕ್ಷತ್ರಿಯ ಜಾತಿಯೊಂದಿಗೆ ಸಮೀಕರಣ ಸಾಧಿಸಿದ ವಂಶಪುರಾಣಗಳನ್ನು ಹೇಳಿಕೊಂಡ ನಿದರ್ಶನಗಳು ನಮ್ಮಲ್ಲಿ ಹೇರಳವಾಗಿವೆ. ಹೀಗಿರುವಾಗ ಅವುಗಳಿಗೆ ಹುಟ್ಟಿನ ರೀತ್ಯ ಒದಗುವ ಶ್ರೇಷ್ಠತೆಯ ಪ್ರತಿಪಾದನೆ ಅಷ್ಟು ಸಮ್ಮತವಾದುದಲ್ಲ. ಬದಲಿಗೆ ಛಲ, ಕುಲ, ಗುಣ ಇವುಗಳ ಆಧಾರದಲ್ಲಿ ನಿಜವಾದ ಶ್ರೇಷ್ಠತೆ ಒದಗುತ್ತದೆ ಎಂದು ಪ್ರತಿಪಾದಿಸುವುದು ಅವುಗಳಿಗೆ ಹೆಚ್ಚು ಅಪೇಕ್ಷಣೀಯವಾದುದು.**

ಹೇಳಿಕೊಂಡ ನಿದರ್ಶನಗಳು ನಮ್ಮಲ್ಲಿ ಹೇರಳವಾಗಿವೆ. ಹೀಗಿರುವಾಗ ಅವುಗಳಿಗೆ ಹುಟ್ಟಿನ ರೀತ್ಯ ಒದಗುವ ಶ್ರೇಷ್ಠತೆಯ ಪ್ರತಿಪಾದನೆ ಅಷ್ಟು ಸಮ್ಮತವಾದುದಲ್ಲ. ಬದಲಿಗೆ ಛಲ, ಕುಲ, ಗುಣ ಇವುಗಳ ಆಧಾರದಲ್ಲಿ ನಿಜವಾದ ಶ್ರೇಷ್ಠತೆ ಒದಗುತ್ತದೆ ಎಂದು ಪ್ರತಿಪಾದಿಸುವುದು ಅವುಗಳಿಗೆ ಹೆಚ್ಚು ಅಪೇಕ್ಷಣೀಯವಾದುದು.

ಸಾಮಂತ ಚೂಡಾಮಣಿಯಾದ ಅರಿಕೇಸರಿ ಕೂಡ ತನ್ನ ವಂಶಾವಳಿ ಮೂಲದಲ್ಲಿ ಹೀಗೆ ಭಡ್ತಿ ಪಡೆದುಕೊಂಡ ಜಾತಿಯವನಾಗಿರುವ ಶಕ್ಯತೆ ಇದೆ. ಆಗ ಚಕ್ರವರ್ತಿ ಸ್ಥಾನದಲ್ಲಿದ್ದ ರಾಷ್ಟ್ರಕೂಟರೂ ಕೂಡ ಮೊದಲಲ್ಲಿ ಮೌರ್ಯರ ಸಾಮ್ರಾಜ್ಯಾಡಳಿತದಲ್ಲಿ ಸ್ಥಳೀಯ ಆಡಳಿತಾಧಿಕಾರಿಗಳಾಗಿದ್ದುಕೊಂಡು ನಂತರದಲ್ಲಿ ಚಕ್ರಾಧಿಪತ್ಯ ಸ್ಥಾಪಿಸಿದ ಹಿರಿಮೆಯುಳ್ಳವರಾಗಿದ್ದು ಅವರ ಮೂಲವನ್ನೂ ಶೂದ್ರ ಜಾತಿಯಲ್ಲಿ ಗುರುತಿಸಲಾಗಿದೆ.

ಈ ಅರ್ಥದಲ್ಲಿ ಪಂಪ ತನ್ನ ಸಮಕಾಲೀನ ಅಳುವ ವರ್ಗಗಳ ಅಭೀಪ್ಸೆಯಾಗಿದ್ದ 'ಛಲಂ ಕುಲಂ' ಹಾಗೂ 'ಬೀರಮೆ ಕುಲಂ' ಎಂಬ ಪ್ರತಿಪಾದನೆಯನ್ನು ಮಾಡಿ ಕುಲ ಪ್ರಜ್ಞೆಗೆ ಸಮಕಾಲೀನತೆಯ ಆಯಾಮವನ್ನು ಒದಗಿಸಿದ್ದಾನೆ. ಪ್ರಧಾನವಾಗಿ ಶೌರ್ಯವನ್ನು ಆಧರಿಸಿಯೇ ಕೆಳಹಂತದ ಊಳಿಗಮಾನ್ಯ ವ್ಯವಸ್ಥೆ ರೂಪಗೊಂಡಿತು ಎಂಬುದನ್ನು ನಾವಿಲ್ಲಿ ನೆನೆದುಕೊಳ್ಳಬಹುದು. ಕ್ರಿ. ಶ. ಏಳನೆಯ ಶತಮಾನದ ನಂತರ ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಶೂದ್ರ ಜಾತಿಗಳಿಗೆ ಸೇರಿದ ಕುಶಲಕರ್ಮಿ ಮತ್ತು ಇತರ ಉತ್ಪಾದನಾಶೀಲ ಜನವರ್ಗಗಳಲ್ಲಿ ಮೇಲ್ಮುಖ ಚಲನೆಯ ಆಶೋತ್ತರವೊಂದು ಬಲಗೊಳ್ಳತೊಡಗಿತ್ತು. ಗುಪ್ತ ಸಾಮ್ರಾಜ್ಯ ಕುಸಿದು, ಅಖಿಲ ಭಾರತ ಚಕ್ರಾಧಿಪತ್ಯಗಳ ಬದಲು ಪ್ರಾದೇಶಿಕ ಸಾಮ್ರಾಜ್ಯಗಳು ಉತ್ಕರ್ಷಕ್ಕೆ ಬಂದ ಬೆಳವಣಿಗೆ, ಅಂತಹ ಸಾಮ್ರಾಜ್ಯಗಳಲ್ಲಿ ಶೂದ್ರ ಜಾತಿ ಮೂಲದ ಅರಸರು ಅಳ್ವಿಕೆಗೆ ತೊಡಗಿದ್ದು, ಪ್ರಾದೇಶಿಕವಾಗಿ ಸದೃಢೀಕರಣಗೊಳ್ಳತೊಡಗಿದ ಕೃಷಿ, ವಾಣಿಜ್ಯ ಹಾಗೂ ಉತ್ಪಾದಕ ಕಾರ್ಯಗಳ ನಡುವೆ ಜಾತಿ ಶ್ರೇಷ್ಠತೆಯ ನಿರಾಕರಣೆಯ ಮನೋಭಾವ ಗಟ್ಟಿಗೊಳ್ಳಲು ತಳಹದಿಯನ್ನು ನಿರ್ಮಿಸತೊಡಗಿದ್ದವು. ಆ ಕಾಲಘಟ್ಟದಲ್ಲಿ ಪ್ರಬಲಗೊಂಡ ಗ್ರಾಮೀಣ ಸಮುದಾಯಗಳ ಜೈನ ಮತಾವಲಂಬನೆ, ಶಾಕ್ತ್ಯ, ಕಾಳಾಮುಖ, ಕಾಪಾಲಿಕ ಮುಂತಾದ ದರ್ಶನಗಳಿಗೆ ಜನ ಮಾನ್ಯತೆ ಇವು ಈ ಬಗೆಯ ಮನೋಭೂಮಿಕೆಯ ಧಾರ್ಮಿಕ ಅಭಿವ್ಯಕ್ತಿಗಳಾಗಿದ್ದವು. ಈ ಬಗೆಯ ಬೆಳವಣಿಗೆಗಳು ಕ್ರಿ. ಶ. ೮ರಿಂದ ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಉಂಟಾದವು ಎಂಬುದನ್ನು ಸಾಮಾಜಿಕ ಇತಿಹಾಸಕಾರರು ನಮೂದಿಸಿದ್ದಾರೆ. ಜನ ಮಾನಸದಲ್ಲಿ ಗಟ್ಟಿಗೊಳ್ಳತೊಡಗಿದ್ದ ಹುಟ್ಟಿನ ಆಧಾರದ ಶ್ರೇಣೀಕರಣವನ್ನು ವಿರೋಧಿಸುವ ಮನೋಭಾವವೇ ಪಂಪನಂತಹ ಕವಿಯಲ್ಲಿ ಪ್ರತಿ-ಸಂಸ್ಕೃತಿ ಧೋರಣೆಯಾಗಿ ಅಭಿವ್ಯಕ್ತಗೊಳ್ಳುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

* * *

ಪಂಪನಿಗೆ ತಾನು ರಚಿಸುತ್ತಿರುವ ಕಾವ್ಯದಲ್ಲಿ 'ಬೆಳಗುವೆನಿಲ್ಲಿ ಲೌಕಿಕಂ' ಎಂಬ ಉದ್ದೇಶವೂ ಈಡೇರಬೇಕಾಗಿದೆ. ಲೌಕಿಕವನ್ನು ಬೆಳಗುವುದೆಂದರೆ ಕೇವಲ ಲೌಕಿಕ ವ್ಯವಹಾರದ ಕತೆ ಹೇಳುವುದು ಮಾತ್ರ ಎಂಬುದು ಪಂಪನ ಅಭಿಪ್ರಾಯವಿರಲಿಕ್ಕಿಲ್ಲ. ಲೌಕಿಕದಲ್ಲಿ ತೊಡಗಿದಾಗಲೂ ಅನುಸರಣಾಯೋಗ್ಯವಾದ ಮಾರ್ಗ ಅಥವಾ ಮೌಲ್ಯಗಳು ಏನು ಎಂಬುದನ್ನು ಪ್ರತಿಪಾದಿಸುವುದು ಪಂಪನ ಉದ್ದೇಶವಾಗಿರಬೇಕು. ಅದಕ್ಕೆ ಸೂಕ್ತವಾದ ಪಾತ್ರವಾಗಿ ಕಂಡುಬಂದಿರುವುದು ಕರ್ಣ ಎಂಬುದರಲ್ಲಿ ಹೆಚ್ಚಿನ ಅಚ್ಚರಿಯೇನೂ ಇಲ್ಲ. ಜೈನ ಧರ್ಮ ಅಧಿಕಾರಕ್ಕಿಂತ ತ್ಯಾಗವನ್ನು, ಶೌರ್ಯಕ್ಕಿಂತ ಸತ್ಯವನ್ನು, ಹುಟ್ಟಿಗಿಂತ ಗುಣ-ನಡತೆಯನ್ನು ಹೆಚ್ಚು ಪ್ರಾಮುಖ್ಯತೆ ನೀಡುವ ಸೈದ್ಧಾಂತಿಕ ತಳಹದಿಯುಳ್ಳ ಧರ್ಮವಾಗಿತ್ತು. ಭರತ ಬಾಹುಬಲಿಯ ಪ್ರಸಂಗದಲ್ಲಿ ಅಧಿಕಾರ ಮತ್ತು ತ್ಯಾಗದ ನಡುವಿನ ವ್ಯತ್ಯಾಸವನ್ನು ಅತ್ಯಂತ ಮನೋಜ್ಞವಾಗಿ ಜೈನ ಪುರಾಣಗಳು ಬಿಂಬಿಸಿವೆ.

ಜನ ಮಾನಸದಲ್ಲಿ ಗಟ್ಟಿಗೊಳ್ಳತೊಡಗಿದ್ದ ಹುಟ್ಟಿನ ಆಧಾರದ ಶ್ರೇಣೀಕರಣವನ್ನು ವಿರೋಧಿಸುವ ಮನೋಭಾವವೇ ಪಂಪನಂತಹ ಕವಿಯಲ್ಲಿ ಪ್ರತಿ-ಸಂಸ್ಕೃತಿ ಧೋರಣೆಯಾಗಿ ಅಭಿವ್ಯಕ್ತಗೊಳ್ಳುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಪಂಪನಿಗೆ ತಾನು ರಚಿಸುತ್ತಿರುವ ಕಾವ್ಯದಲ್ಲಿ 'ಬೆಳಗುವೆನಿಲ್ಲಿ ಲೌಕಿಕಂ' ಎಂಬ ಉದ್ದೇಶವೂ ಈಡೇರಬೇಕಾಗಿದೆ. ಲೌಕಿಕವನ್ನು ಬೆಳಗುವುದೆಂದರೆ ಕೇವಲ ಲೌಕಿಕ ವ್ಯವಹಾರದ ಕತೆ ಹೇಳುವುದು ಮಾತ್ರ ಎಂಬುದು ಪಂಪನ ಅಭಿಪ್ರಾಯ ವಿರಲಿಕ್ಕಿಲ್ಲ. ಲೌಕಿಕದಲ್ಲಿ ತೊಡಗಿದಾಗಲೂ ಅನುಸರಣಾಯೋಗ್ಯವಾದ ಮಾರ್ಗ ಅಥವಾ ಮೌಲ್ಯಗಳು ಏನು ಎಂಬುದನ್ನು ಪ್ರತಿಪಾದಿಸುವುದು ಪಂಪನ ಉದ್ದೇಶವಾಗಿರಬೇಕು. ಅದಕ್ಕೆ ಸೂಕ್ತವಾದ ಪಾತ್ರವಾಗಿ ಕಂಡುಬಂದಿರುವುದು ಕರ್ಣ ಎಂಬುದರಲ್ಲಿ ಹೆಚ್ಚಿನ ಅಚ್ಚರಿಯೇನೂ ಇಲ್ಲ. ಜೈನ ಧರ್ಮ ಅಧಿಕಾರಕ್ಕಿಂತ ತ್ಯಾಗವನ್ನು, ಶೌರ್ಯಕ್ಕಿಂತ ಸತ್ಯವನ್ನು, ಹುಟ್ಟಿಗಿಂತ ಗುಣ-ನಡತೆಯನ್ನು ಹೆಚ್ಚು ಪ್ರಾಮುಖ್ಯತೆ ನೀಡುವ ಸೈದ್ಧಾಂತಿಕ ತಳಹದಿಯುಳ್ಳ ಧರ್ಮವಾಗಿತು.

ಭರತನ ರಾಜ್ಯದಾಹವನ್ನು ಎದುರಿಸಿ, ಮಲ್ಲಯುದ್ಧದಲ್ಲಿ ಗೆದ್ದರೂ ರಾಜ್ಯಗ್ರಹಣ ಮಾಡದೆ ಸರ್ವಸಂಗ ವಿರಾಗಿ ಗೊಮ್ಮಟನಾಗಿ ನಿಂತ ಬಾಹುಬಲಿ ಬಹುಶಃ ಕವಿ ಪಂಪನ ಲೌಕಿಕ ಆದರ್ಶ ಮಾದರಿಯಾಗಿರಬೇಕು. ಅರ್ಜುನನಲ್ಲಿ ಶೌರ್ಯವಿದೆ, ಆದರೆ ತ್ಯಾಗವಿಲ್ಲ. ದುರ್ಯೋಧನನಲ್ಲಿ ಛಲವಿದೆ, ಆದರೆ ಸತ್ಯವಿಲ್ಲ. ಹೀಗಾಗಿ ಅತ್ತ ಕಥಾನಾಯಕನಾಗಿದ್ದರೂ ಅರ್ಜುನನನ್ನು ಮಾದರಿಯಾಗಿಸದೆ, ಪ್ರತಿನಾಯಕನಾಗಿದ್ದರೂ ಸುಯೋಧನನನ್ನು ಪ್ರತಿಪಾದಿಸದೆ, ಕರ್ಣನನ್ನು ತನ್ನ ಮಾದರಿಯನ್ನಾಗಿ ಪಂಪ ಬಿಂಬಿಸಿದ್ದಾನೆ.

ಮಹಾಭಾರತದ ಕಥಾ ಭಿತ್ತಿಯೊಳಗೆ ಕರ್ಣ ನಾಮಾಂತರಗೊಂಡ ಬಾಹುಬಲಿಯಂತೆ ಪಂಪನಿಗೆ ಭಾಸವಾಗಿದ್ದರೆ ಆಶ್ಚರ್ಯವಿಲ್ಲ. ಭರತನನ್ನು ನೆಲಕ್ಕೆ ತುಳಿದು ಗೋಣು ಮುರಿಯುವ ಅವಕಾಶವಿದ್ದಾಗಲೂ ಬಾಹುಬಲಿ ಹಾಗೆ ಮಾಡದೆ ಸೋದರ ಪ್ರೇಮವನ್ನು ಮೆರೆದವನು. ಸರ್ಪಾಸ್ತ್ರವನ್ನು ಮತ್ತೆ ಹೂಡಿದ್ದರೆ ಅರ್ಜುನನ ಪ್ರಾಣ ತೆಗೆಯಬಹುದಾಗಿತ್ತಾದರೂ ಹಾಗೆ ಮಾಡದೆ ಕುಂತಿಗೆ ಕೊಟ್ಟ ವಚನವನ್ನು ಪರಿಪಾಲಿಸಿದವನು ಕರ್ಣ.

ತಾನು ಸೂತಪುತ್ರನಲ್ಲ. ಕುಂತಿಯ ಹಿರಿಯ ಮಗ. ಮನಸ್ಸು ಮಾಡಿದರೆ ಯುದ್ಧವಿಲ್ಲದೆ ರಾಜನಾಗಬಹುದು. ದುರ್ಯೋಧನನಿಗೆ ಆಪ್ತಮಿತ್ರನಾದ ಕಾರಣ ಆತನೂ ಒಪ್ಪುತ್ತಾನೆ. ಪಾಂಡವರಿಗೆ ಜೇಷ್ಠನಾದ ಕಾರಣ ಅವರೂ ಒಪ್ಪುತ್ತಾರೆ. ರಾಜ್ಯಾಧಿಕಾರ ಪಡೆಯಲು ಇಂತಹದೊಂದು ಸುವರ್ಣಾವಕಾಶವಿದೆ ಎಂಬ ಪ್ರಸ್ತಾಪ ಬಂದಾಗಲೂ ಕರ್ಣ ಒಪ್ಪದೆ ತನ್ನನ್ನು ನಂಬಿದ ದುರ್ಯೋಧನನಿಗಾಗಿ ಕಾದಲು ನಿರ್ಣಯಿಸುತ್ತಾನೆ. ಇದು ಮೌಲ್ಯಾಧಾರಿತ ನಿಲುವು.

ಭರತನನ್ನು ಮಲ್ಲಯುದ್ಧದಲ್ಲಿ ಗೆದ್ದ ಬಾಹುಬಲಿಗೆ ಬಂದಿದ್ದ ಹಾಗೆಯೇ, ಅನಾಯಾಸವಾಗಿ ರಾಜ್ಯಗ್ರಹಣದ ಅವಕಾಶ ಕರ್ಣನಿಗೆ ಬಂದಿತ್ತು. ಆದರೆ ಬಾಹುಬಲಿ ಮತ್ತು ಕರ್ಣ ಇಬ್ಬರೂ 'ಮಹಿಯ ರಾಜ್ಯದ ಸಿರಿಗೆ ಮನಸೋಲ'ಲಿಲ್ಲ. ನೇರವಾಗಿ ಅಲ್ಲದಿದ್ದರೂ ಗುಣದಲ್ಲಿ, ಸತ್ಯ ಪರಿಪಾಲನೆಯಲ್ಲಿ, ದಾನದಲ್ಲಿ, ತ್ಯಾಗದಲ್ಲಿ ಕರ್ಣನ ವ್ಯಕ್ತಿತ್ವ ಗೊಮ್ಮಟ ಬಾಹುಬಲಿಯ ವ್ಯಕ್ತಿತ್ವದಂತೆ ಮಹೋನ್ನತವೆನಿಸಿರಬೇಕು. ಹಾಗಾಗಿಯೇ 'ಒಂದೆ ಚಿತ್ತದಿಂದ ನೆನೆವೊಡೆ ಕರ್ಣನಂ ನೆನೆಯ' ಎಂದು ಮನದುಂಬಿ ಹೇಳಿದ್ದಾನೆ.

* * *

ಪಂಪನ ಪ್ರಜ್ಞಾಕ್ರಮದಲ್ಲಿ ಈ ಬಗೆಯ ಮುರಿದು ಕಟ್ಟುವ ಹಲವು ನೆಲೆಗಳಿವೆ. ಅವುಗಳಲ್ಲಿ ಕೆಲವು ಅಂಶಗಳನ್ನು ಪರಿಚಯಾತ್ಮಕವಾಗಿ ನಾನಿಲ್ಲಿ ಚರ್ಚೆಗೆತ್ತಿಕೊಂಡಿದ್ದೇನೆ. ಪಂಪ ಒಬ್ಬ ಕವಿಯಾಗಿ ತಾನು ಬಾಳಿ ಬದುಕಿದ ಕಾಲಘಟ್ಟದ ಪ್ರಭಾವ ಹಾಗೂ ಪರಿಣಾಮಗಳ ಅಂಗವಾಗಿ ರೂಪುಗೊಂಡವನು. ಹಾಗಾಗಿ ಕರ್ನಾಟಕದ ಅಂದಿನ ರಾಜಕೀಯ-ಸಾಮಾಜಿಕ ಸಂಘರ್ಷಗಳು 'ವಿಕ್ರಮಾರ್ಜುನ ವಿಜಯ'ದಲ್ಲಿ ಕಥಾನುಸಾರಿಯಾಗಿ ವ್ಯಕ್ತಗೊಳ್ಳುವುದು ಸಹಜ.

ಹಾಗೆಯೇ 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪನು ಎದುರುಗೊಂಡಿರುವ ಸಾಂಸ್ಕೃತಿಕ ಸಂಘರ್ಷಗಳ ಹಲವು ಸೂಕ್ಷ್ಮಗಳನ್ನು ನಾವು ಇಂದಿನ ಸಂದರ್ಭದಲ್ಲಿ ಕೂಡ ಎದುರಿಸುತ್ತಿರುವಾಗ ಪಂಪನ ನಿಲುವು ಮತ್ತು ಜಿಜ್ಞಾಸೆ ಈ ಕಾಲದಲ್ಲೂ ಮರುಮೈದಳೆದು ಕವಿ ಸರ್ವಕಾಲಕ್ಕೂ ಸೇರಿದವನಾಗುತ್ತಿದ್ದಾನೆ. ಕರ್ನಾಟಕದ ಒಂದು ಕಾಲಘಟ್ಟದ ಕವಿ ಹಾಗೂ ಆತನ ಕೃತಿ ಇಂದಿನ ಕಾಲಘಟ್ಟದ ಸಂವೇದನೆಗಳಿಗೂ ಪ್ರತಿಬಿಂಬವೊದಗಿಸುತ್ತಾ ಕಾಲಕಾಲಾಂತರಗಳ ನಡುವಿನ ಸ್ಪಂದನಕ್ಕೆ ಹೀಗೆ ಸಾತತ್ಯವನ್ನು ಕಲ್ಪಿಸುತ್ತಿದೆ. □

ಕ್ರಾಂತಿಯೆ ಅಥವಾ ಪ್ರತಿಕ್ರಾಂತಿಯೇ?



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ದೆಹಲಿಯ ವಾಯುವ್ಯ ಭಾಗದಲ್ಲಿರುವ ಅಜಾದ್‌ಪುರ ಭಾರತದಲ್ಲಿಯೆ ಅತಿ ದೊಡ್ಡ ಹಣ್ಣು ಮತ್ತು ತರಕಾರಿ ಮಾರುಕಟ್ಟೆ. ಪ್ರತಿದಿನ ಮುಂಜಾನೆ ಇಲ್ಲಿಗೆ ನೂರಾರು ಟ್ರಕ್‌ಗಳು ತರಕಾರಿ ಮತ್ತು ಹಣ್ಣುಗಳನ್ನು ಹೊತ್ತು ತಂದು ಸಾಲಾಗಿ ನಿಲ್ಲುತ್ತವೆ. ಸೂರ್ಯೋದಯವಾಗುತ್ತಿದ್ದಂತೆಯೆ ಅನೇಕ ದಶಲಕ್ಷ ಬೆಲೆಯ ನಗದು ವ್ಯಾಪಾರ ಇಲ್ಲಿ ನಡೆಯುತ್ತದೆ. ಈ ಮಾರುಕಟ್ಟೆಯಲ್ಲಿ ಚೆಕ್ ಅಥವಾ ಡಿ.ಡಿ.ಗಳು ಎಂದರೆ ಏನೆಂಬುದು ತಿಳಿದಿಲ್ಲ. ನಿಶ್ಚಿತವಾಗಿ ಅಜಾದ್‌ಪುರದ ಈ ವ್ಯಾಪಾರಿಗಳ ಗುಂಪು ತೆರಿಗೆಯಿಂದ ತಪ್ಪಿಸಿಕೊಳ್ಳುವವರು.

ಆದರೆ ಅಜಾದ್‌ಪುರದ ಈ ಹಣ್ಣಿನ ವ್ಯಾಪಾರಿಗಳು ಅಣ್ಣಾ ಅವರ ಭ್ರಷ್ಟಾಚಾರ ವಿರೋಧಿ ಚಳವಳಿಯ ಕೇಂದ್ರವಾದ ರಾಮ್‌ಲೀಲಾ ಮೈದಾನಕ್ಕೆ ಬಾಳೆಹಣ್ಣಿನಿಂದ ತುಂಬಿದ ಟ್ರಕ್‌ಗಳನ್ನು ಮುಫಾತ್ತಾಗಿ ಕಳಿಸುತ್ತಿದ್ದರು. ಕಪ್ಪು ವ್ಯಾಪಾರದಿಂದಲೇ ಬೆಳೆದ ಈ ಜನ ಭ್ರಷ್ಟಾಚಾರ ವಿರೋಧಿ ಚಳವಳಿಯ ಕಡೆ ಆಕರ್ಷಿತರಾದುದು ಹೇಗೆ?

ಅಣ್ಣಾ ಹಜಾರೆಯವರು ಉಪವಾಸವಿದ್ದಾಗ ರಾಮ್‌ಲೀಲಾ ಮೈದಾನದಲ್ಲಿ ಸೇರಿದ್ದ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಮಂದಿ ಹಸಿಯಲಿಲ್ಲ. ಇಲ್ಲಿಗೆ ಉಚಿತ ಊಟ ಒದಗಿಸುವ ಕೇಂದ್ರವಾದದ್ದು ದೆಹಲಿಯ ಚಾಂದಿನಿ ಚೌಕ. ಚಾಂದಿನಿ ಚೌಕ ಈ ಭ್ರಷ್ಟಾಚಾರ ವಿರೋಧಿ ಚಳಚಳಿಗೆ ಹಿಂದೆಂದೂ ಕಾಣದಂತಹ ಬೆಂಬಲ ನೀಡಿತು. ದೆಹಲಿಯ ಚಾಂದಿನಿ ಚೌಕ ಇನ್ನೊಂದು ರೀತಿಯಲ್ಲಿ ಪ್ರಖ್ಯಾತವಾಗಿದೆ. ಅದೆಂದರೆ ಯಾವುದೇ ಬಿಲ್ಲು ಮತ್ತು ರಸೀತಿಗಳಿಲ್ಲದೆ ವ್ಯಾಪಾರ ನಡೆಸುವ ಸ್ಥಳ ಇದು. ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಅಧಿಕಾರಿಗಳನ್ನು ಕೇಳಿ. ಚಾಂದಿನಿ ಚೌಕದ ವ್ಯಾಪಾರಿಗಳು ಸಲ್ಲಿಸಿದ ತೆರಿಗೆ ಲೆಕ್ಕ ಎಷ್ಟು ಕೆಟ್ಟದಾಗಿರುತ್ತದೆ ಎಂಬುದನ್ನು ಅವರು ಹೇಳುತ್ತಾರೆ. ಹಾಗಾದರೆ ಚಾಂದಿನಿ ಚೌಕದ ಈ ವ್ಯಾಪಾರಿಗಳೂ ಭ್ರಷ್ಟಾಚಾರ ವಿರೋಧಿ ಚಳವಳಿಯನ್ನು ಬೆಂಬಲಿಸುವಂತೆ ಮಾಡಿದ್ದು ಏನು? ವಕೀಲರು ತಮ್ಮ ಫೀಸನ್ನು ಚೆಕ್ ಮತ್ತು ಡಿಡಿಯಲ್ಲಿ ತೆಗೆದುಕೊಳ್ಳುತ್ತಾರೆಯೇ ಯಾರನ್ನಾದರೂ ಕೇಳಿ. ಆದರೆ ದೆಹಲಿಯ ವಕೀಲರೂ ಸಹ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ತಮ್ಮ ಬೆಂಬಲ ಸೂಚಿಸಲು ರಾಮ್‌ಲೀಲಾ ಮೈದಾನಕ್ಕೆ ಒಟ್ಟಾಗಿ ನಡೆದು ಬಂದರು. ಇದು ಅಸಂಬದ್ಧ ನಡೆಯಲ್ಲವೆ?

ಭಾರತದ ಮಧ್ಯಮ ವರ್ಗಗಳು ಅಂದರೆ ಪ್ರಮುಖವಾಗಿ ಮೇಲ್ಜಾತಿಯವರು ಸರ್ಕಾರಕ್ಕೆ ಮೋಸಮಾಡಿ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಚಾರ್ಟರ್ಡ್ ಅಕೌಂಟೆಂಟ್ ಸೇವೆಯನ್ನು ಪಡೆಯುತ್ತಾರೆ. ಅವರೇ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಚಳಚಳಿಯ ಮುಖ್ಯ ಸಾಮಾಜಿಕ ನೆಲೆಯಾಗುತ್ತಾರೆ. ತಮ್ಮ ದೈನಂದಿನ ಜೀವನದಲ್ಲಿ ಭ್ರಷ್ಟ ನೀತಿಗಳೊಡನೆ ಹೊಂದಾಣಿಕೆ ಮಾಡಿಕೊಂಡಿರುವ ಸಾಮಾಜಿಕ ವರ್ಗವು ಏಕಾಏಕಿ ಭ್ರಷ್ಟಾಚಾರ ವಿರೋಧಿ ಕ್ರಾಂತಿಕಾರಿಯಾಗಿರುವುದು ಗಾಬರಿ ಹುಟ್ಟಿಸುವಂತಹದ್ದು! ಇದು ಹೃದಯ ಪರಿವರ್ತನೆಯೆ? ಅಥವಾ ಇದರೊಳಗಡೆ ಇನ್ನೂ ಸ್ಪಷ್ಟವಾಗದಿದ್ದುದು, ವ್ಯಕ್ತಪಡಿಸದಿದ್ದುದು ಮತ್ತು ಅಪಾಯಕಾರಿಯಾದುದು ಮತ್ತೇನಾದರೂ ಅಡಗಿದೆಯೆ?

ಅಣ್ಣಾ ಚಳವಳಿಯ ಕಥನಗಳ ಕಡೆ ಈಗ ಗಮನ ಹರಿಸೋಣ. ಅಣ್ಣಾ ತಮ್ಮ ಉಪವಾಸವನ್ನು ಕೊನೆಗೊಳಿಸುವುದಕ್ಕೆ ಮೊದಲು ಅವರ ಚಳವಳಿಯನ್ನು ಹಿಂದಿನಿಂದ ನಿರ್ದೇಶಿಸುತ್ತಿದ್ದವರು ಅಲ್ಲಿ ನೆರೆದಿದ್ದವರಿಗೆ "ನಾ ಗೂಸ್ ಲೂಂಗಾ, ನಾ ಗೂಸ್ ದೂಂಗಾ" ಅಂದರೆ "ಲಂಚ ತೆಗೆದುಕೊಳ್ಳುವುದಿಲ್ಲ ಮತ್ತು ಲಂಚ ಕೊಡುವುದಿಲ್ಲ" ಎಂದು ಪ್ರತಿಜ್ಞೆ ಕೈಗೊಳ್ಳುವಂತೆ ಕೇಳಿಕೊಂಡರು. ನೆರೆದಿದ್ದ ಗುಂಪು ಆಯಾಸಗೊಂಡವರಂತೆ ಬಹಳ ಕ್ಷೀಣ ಧ್ವನಿಯಲ್ಲಿ ಸ್ಪಂದಿಸಿತು. ಅಣ್ಣಾ ಹಜಾರೆಯವರು "ಜನಸಂಸತ್ ಈಸ್ ಬಿಗ್ಗರ್ ದೆನ್ ದೆಹಲಿ ಪಾರ್ಲಿಮೆಂಟ್", "ಜನರ ಸಂಸತ್ತು ದೆಹಲಿಯ ಸಂಸತ್ತಿಗಿಂತ ದೊಡ್ಡದು" ಎಂಬ ಘೋಷಣೆ ಕೂಗಿದಾಗ ಅದನ್ನು ಅಲ್ಲಿ ಸೇರಿದವರು ಅತ್ಯುನ್ಮಾದದಿಂದ ಚಪ್ಪಾಳೆ ಹೊಡೆಯುತ್ತಾ ಸ್ವಾಗತಿಸಿದರು.

ಭಾರತದಲ್ಲಿ ಸಂಸದಾತ್ಮಕ ಪ್ರಜಾಪ್ರಭುತ್ವ ನೆಲೆಗೊಳಿಸುವಲ್ಲಿ ಭಾರತದ ಮೇಲ್ಜಾತಿಗಳು ಬಹಳ ಮುಖ್ಯ ಪಾತ್ರವಹಿಸಿವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟವನ್ನು ಅವರು ಮುಂದೆ ನಿಂತು ನಡೆಸಿದರು ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಹುಟ್ಟುಹಾಕಲು ಸಹಾಯಕರಾದರು. ಆದರೆ ಅವರೆ ಕಟ್ಟಿದಂತ ಈ ಸಂಸದೀಯ ಪ್ರಜಾಪ್ರಭುತ್ವವನ್ನು ಈಗ ಅವರೇಕೆ ಪ್ರಶ್ನಿಸಲು ಪ್ರಾರಂಭಿಸಿದ್ದಾರೆ? ಕ್ರಾಂತಿಕಾರಿಗಳು ಪ್ರತಿಕ್ರಾಂತಿಕಾರಿಗಳಾಗಬಹುದೆ? ಹೀಗೆ ಕ್ರಾಂತಿಕಾರಿಗಳು ಪ್ರತಿಕ್ರಾಂತಿಕಾರಿಗಳಾದುದಕ್ಕೆ ಯಾವುದಾದರೂ ಅಂತರರಾಷ್ಟ್ರೀಯ ಅನುಭವದ ಉದಾಹರಣೆಯಿದೆಯೆ?

* * * * * *

1492ರಲ್ಲಿ ಕ್ರಿಸ್ಟಫರ್ ಕೊಲಂಬಸನು ಹೊಸ ಜಗತ್ತು ಅಂದರೆ ಇಂದಿನ ಅಮೆರಿಕವನ್ನು ಕಂಡುಹಿಡಿದ. ಈ ಹೊಸ ಜಗತ್ತಿನ ವಿಶಾಲ ಕೃಷಿ ಭೂಮಿಯ, ಚಿನ್ನದಿಂದ ತುಂಬಿರುವ ಬಂಡೆಗಳ ಮತ್ತು ಮಿತಿಮೀರಿದ ಖನಿಜ ಸಂಪತ್ತಿನ ವಿಚಾರ ಹೊರಬೀಳುತ್ತಿದ್ದಂತೆಯೇ ಯೂರೋಪಿನ ಕೆಳವರ್ಗದ ಜನ ದೊಡ್ಡ ದೊಡ್ಡ ಅಲೆಗಳಂತೆ ಈ ಹೊಸ ಜಗತ್ತನ್ನು ಮುತ್ತಿದರು. ಮೇ 1607ರಲ್ಲಿ ಹೀಗೆ ವಲಸೆ ಬಂದ ಜನ ಇಂದಿನ ವರ್ಜೀನಿಯಾದಲ್ಲಿ ಜೇಮ್ಸ್‌ಟೌನ್ ಎಂಬ ಮೊದಲನೆ ಪಟ್ಟಣವನ್ನು ಸ್ಥಾಪಿಸಿದರು. ನಿಧಾನವಾಗಿ ಅಮೆರಿಕ ಒಂದು ನಾಗರಿಕತೆಯಾಗಿ ವಿಕಾಸ ಹೊಂದಿತು. ಹೀಗೆ ಅಮೆರಿಕಾಕ್ಕೆ ವಲಸೆ ಬಂದವರಲ್ಲಿ ಹೆಚ್ಚು ಜನ ಬ್ರಿಟನ್ನರೆ ಇದ್ದುದರಿಂದ ಅಮೆರಿಕ ಸಂಯುಕ್ತ ಸಂಸ್ಥಾನ ಹುಟ್ಟಿನಿಂದಲೇ ಬ್ರಿಟಿಷರ ವಸಾಹತುವಾಗಿ ಪರಿವರ್ತನೆಗೊಂಡಿತು.

ಅಮೆರಿಕ ಒಂದು ಸಮೃದ್ಧ ಸಮಾಜವಾಗಿ ಪರಿವರ್ತನೆಗೊಂಡಂತೆ ಬ್ರಿಟಿಷ್ ಚಕ್ರಾಧಿಪತ್ಯದ ವಿರುದ್ಧ ಅಸಹನೆ ಕೂಡ ಬೆಳೆಯಿತು. ಜೇಮ್ಸ್‌ಟೌನ್ ಸ್ಥಾಪನೆಯಾದ 168 ವರ್ಷಗಳ ನಂತರ 1775ರಲ್ಲಿ ಅಮೆರಿಕದ ಸ್ವಾತಂತ್ರ್ಯ ಯುದ್ಧ ಪ್ರಾರಂಭವಾಯಿತು. 1783ರ ಪ್ಯಾರಿಸ್ ಒಪ್ಪಂದದಂತೆ ಯುದ್ಧ ಕೊನೆಗೊಂಡು ಅಮೆರಿಕದ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರ ಉದಯಿಸಿತು.

1789–1793ರ ಫ್ರೆಂಚ್ ಮಹಾಕ್ರಾಂತಿಯಿಂದ "ಲೈಫ್ ಅಂಡ್ ಲಿಬರ್ಟಿ "ಪ್ರಾಣ ಮತ್ತು ಸ್ವಾತಂತ್ರ್ಯ"ದ ಪವಿತ್ರತೆಯ ಕಲ್ಪನೆ ಉದಯವಾಯಿತೆಂದು ನಮಗೆ ತಪ್ಪು ಇತಿಹಾಸವನ್ನು ಬೋಧಿಸಲಾಗಿದೆ. ನಿಜವಾಗಿ ಫ್ರೆಂಚ್ ಕ್ರಾಂತಿಗೆ ಸ್ಫೂರ್ತಿ ನೀಡಿದುದೇ ಅಮೆರಿಕದ ಕ್ರಾಂತಿ.

ಅಮೆರಿಕದ ಕ್ರಾಂತಿ ಎಂದು ಕರೆಯಲ್ಪಡುವ ಅಮೆರಿಕದ ಸ್ವಾತಂತ್ರ್ಯ ಯುದ್ಧ ಮೊತ್ತ ಮೊದಲಿಗೆ "ಎಲ್ಲ ಮಾನವರೂ ಸಮಾ

ಭಾರತದಲ್ಲಿ ಸಂಸದಾತ್ಮಕ ಪ್ರಜಾಪ್ರಭುತ್ವ ನೆಲೆಗೊಳಿಸುವಲ್ಲಿ ಭಾರತದ ಮೇಲ್ಜಾತಿಗಳು ಬಹಳ ಮುಖ್ಯ ಪಾತ್ರ ವಹಿಸಿವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟವನ್ನು ಅವರು ಮುಂದೆ ನಿಂತು ನಡೆಸಿದರು ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಹುಟ್ಟುಹಾಕಲು ಸಹಾಯಕರಾದರು. ಆದರೆ ಅವರೆ ಕಟ್ಟಿದಂತ ಈ ಸಂಸದಾತ್ಮಕ ಪ್ರಜಾಪ್ರಭುತ್ವವನ್ನು ಈಗ ಅವರೇಕೆ ಪ್ರಶ್ನಿಸಲು ಪ್ರಾರಂಭಿಸಿದ್ದಾರೆ? ಕ್ರಾಂತಿಕಾರಿಗಳು ಪ್ರತಿಕ್ರಾಂತಿಕಾರಿಗಳಾಗಬಹುದೆ? ಹೀಗೆ ಕ್ರಾಂತಿಕಾರಿ ಗಳು ಪ್ರತಿಕ್ರಾಂತಿಕಾರಿಗಳಾದುದಕ್ಕೆ ಯಾವುದಾದರೂ ಅಂತರರಾಷ್ಟ್ರೀಯ ಅನುಭವದ ಉದಾಹರಣೆಯಿದೆಯೆ?

ಅಮೆರಿಕದ ಉದಾಹರಣೆ

ನವಾಗಿ ಸೃಷ್ಟಿಯಾಗಿದ್ದಾರೆ" ಎಂಬ ಕಲ್ಪನೆಯನ್ನು ಪರಿಚಯಿಸಿತು. ಬ್ರಿಟನ್‌ನಿಂದ ಅಮೆರಿಕ ಸ್ವಾತಂತ್ರ್ಯ ಪಡೆದ ನಂತರ ಥಾಮಸ್ ಜೆಫರ್‌ಸನ್ ಅವರ ನಾಯಕತ್ವದ ಐವರ ಸಮಿತಿ ಅಮೆರಿಕ ಕ್ರಾಂತಿಯ ನಿರ್ಣಯವನ್ನು ಸಿದ್ಧಪಡಿಸಿತು.

"ನಾವು ಈ ಸತ್ಯಗಳನ್ನು ಸುಸ್ಪಷ್ಟ ಎಂದು ತಿಳಿದಿದ್ದೇವೆ. ಎಲ್ಲ ಮಾನವರೂ ಸಮಾನವಾಗಿ ಸೃಷ್ಟಿಸಲ್ಪಟ್ಟಿದ್ದಾರೆ. ಅವರ ಸೃಷ್ಟಿಕರ್ತನು ಅವರಿಗೆ ಬೇರ್ಪಡಿಸಲಾಗದ ಕೆಲವು ಹಕ್ಕುಗಳನ್ನು ನೀಡಿದ್ದಾನೆ. ಅವುಗಳಲ್ಲಿ ಜೀವದ ಹಕ್ಕು, ಸ್ವಾತಂತ್ರದ ಹಕ್ಕು ಮತ್ತು ನೆಮ್ಮದಿಯ ಜೀವನಕ್ಕೆ ಪ್ರಯತ್ನಿಸುವ ಹಕ್ಕುಗಳು ಸೇರಿವೆ" ಈ ಸುವರ್ಣ ವಾಕ್ಯಗಳು ಅಮೆರಿಕದ ಪ್ರಜಾಪ್ರಭುತ್ವವನ್ನು ಮುನ್ನಡೆಸಿದವು ಮತ್ತು ಫ್ರೆಂಚ್ ಮಹಾಕ್ರಾಂತಿಯನ್ನು ಪ್ರೇರೇಪಿಸಿದವು. "ಎಲ್ಲ ಮಾನವರೂ ಸಮಾನರಾಗಿ ಸೃಷ್ಟಿಯಾಗಿದ್ದಾರೆ" ಎಂಬುದು ಪ್ರಪಂಚದಾದ್ಯಂತ ಎಲ್ಲ ಆಧುನಿಕ ಪ್ರಜಾಪ್ರಭುತ್ವಗಳ ಮೂಲ ಸಿದ್ಧಾಂತವಾಗಿ ನೆಲೆಸಿದೆ.

ಆದರೆ ಅಮೆರಿಕದ ಕರಿಯರ ವಿಚಾರ? ಅಮೆರಿಕದ ಹುಟ್ಟಿನಿಂದಲೇ ಕರಿಯರು ಅಮೆರಿಕ ನಾಗರಿಕತೆಯ ಬೇರ್ಪಡಿಸಲಾಗದ ಭಾಗವಾಗಿದ್ದಾರೆ. ಪಶ್ಚಿಮ ಆಫ್ರಿಕಾದಿಂದ ಕರಿಯರನ್ನು ಅಮೆರಿಕದ ಬಿಳಿಯರ ಗುಲಾಮರಾಗಿ ಕೆಲಸಮಾಡಲು ಕರೆತರಲಾಯಿತು.

ಜೇಮ್ಸ್‌ಟೌನ್ ಸ್ಥಾಪನೆಯ 12 ವರ್ಷಗಳ ನಂತರ 1619ರಲ್ಲಿ ಕರಿಯ ಗುಲಾಮರೇ ತುಂಬಿದ್ದ ಮೊದಲ ಹಡಗು ವರ್ಜೀನಿಯಾ ಸಮುದ್ರ ದಂಡೆಯನ್ನು ತಲುಪಿತು. ಜನಸಂಖ್ಯೆಯ ಸುಮಾರು ಶೇ. 10ಕ್ಕಿಂತ ಹೆಚ್ಚಿದ್ದ ಕರಿಯರು ಅಮೆರಿಕ ಕಟ್ಟುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. "ಎಲ್ಲ ಮಾನವರೂ ಸಮಾನವಾಗಿ ಸೃಷ್ಟಿಯಾಗಿದ್ದಾರೆ" ಎಂಬ ಸಿದ್ಧಾಂತವನ್ನು ತನ್ನ ಪ್ರಜಾಪ್ರಭುತ್ವದ ಕೇಂದ್ರ ಆಶಯವಾಗಿ ಸ್ವೀಕರಿಸಿದ ಅಮೆರಿಕ ಕ್ರಾಂತಿ ಗುಲಾಮಗಿರಿಯನ್ನು ಕೊನೆಗಾಣಿಸಲಿಲ್ಲ.

ಎಂತಹ ವಿಚಿತ್ರ ಸಂಘಟನೆ! ಭಾರತದ ಮೇಲ್ಜಾತಿಗಳು ಬ್ರಿಟಿಷರಿಂದ ಸ್ವಾತಂತ್ರ್ಯ ಕೇಳಿದರು. ಆದರೆ ದಲಿತರಿಗೆ ಜಾತಿ ಪದ್ಧತಿಯಿಂದ ವಿಮುಕ್ತಿ ನೀಡುವುದನ್ನು ಮರೆತರು. ಬ್ರಿಟನ್‌ನಿಂದ ಸ್ವಾತಂತ್ರ್ಯ ಕೇಳಿದ ಅಮೆರಿಕದ ಬಿಳಿಯರು ಕರಿಯರನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡುವುದನ್ನು ಮರೆತಂತೆ! ಅಬ್ರಹಾಂ ಲಿಂಕನ್ 1863ರಲ್ಲಿ ಗುಲಾಮಗಿರಿಯನ್ನು ಕಾನೂನುಬಾಹಿರ ಎಂದು ಘೋಷಿಸಬೇಕಾದರೆ ಇನ್ನೂ ಎಂಬತ್ತು ವರ್ಷಗಳು ಬೇಕಾಯಿತು.

1863ರ ಬಿಡುಗಡೆಯ ಘೋಷಣೆಯಾದ ಕೂಡಲೆ ಅಮೆರಿಕ ಎರಡು ರಾಷ್ಟ್ರಗಳಾಗಿ ಇಬ್ಭಾಗವಾಯಿತು. ಒಂದು ಭಾಗ ಗುಲಾಮಗಿರಿಯನ್ನು ಮುಂದುವರೆಸಬೇಕೆಂದು ಬಯಸಿದರೆ ಮತ್ತೊಂದು ಭಾಗ ಅದನ್ನು ಕೊನೆಗಾಣಿಸಲು ಇಚ್ಛಿಸಿತು. ಮೇಲ್ಜಾತಿಯ ದೊಡ್ಡದೊಂದು ಗುಂಪು ಭ್ರಷ್ಟಾಚಾರದ ವಿರುದ್ಧ ಹೋರಾಡುವ ಮುಖವಾಡ ಧರಿಸಿರುವುದರ ಹಿಂದೆ ದಲಿತರಿಂದ ಪ್ರಜಾಪ್ರಭುತ್ವವನ್ನು ಕಿತ್ತುಕೊಳ್ಳುವ ಗುರಿಯನ್ನು ಹೊಂದಿದ್ದಾರೆಯೆ?



ಅಬ್ರಹಾಂ ಲಿಂಕನ್

* * * * * *

1861ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಹನ್ನೊಂದು ದಕ್ಷಿಣದ ರಾಜ್ಯಗಳು ಅಮೆರಿಕ ರಾಜ್ಯಗಳ ಒಕ್ಕೂಟ ಎಂಬ ಹೊಸ ರಾಷ್ಟ್ರ ಸ್ಥಾಪನೆ ಮಾಡುವ ಉದ್ದೇಶದಿಂದ ಬೇರ್ಪಟ್ಟಾಗ ಅಮೆರಿಕ ಎರಡು ರಾಷ್ಟ್ರಗಳಾಗಿ ಇಬ್ಭಾಗವಾಯಿತು. 1861ರಿಂದ 1865ರವರೆಗೆ ಅವು ಎರಡು ಭಾಗಗಳಾಗಿಯೇ ಉಳಿದಿದ್ದವು.

1860ರ ಅಧ್ಯಕ್ಷೀಯ ಚುನಾವಣೆಯಲ್ಲಿ ಅಬ್ರಹಾಂ ಲಿಂಕನ್ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕರಿಯರ ಗುಲಾಮಗಿರಿಯನ್ನು ವಿಸ್ತರಿಸುವುದರ ವಿರುದ್ಧ ಮಾತನಾಡಿದರು. ಲಿಂಕನ್ನರ ಸಂದೇಶವನ್ನು ಗುಲಾಮಿ ರಾಜ್ಯಗಳು ಲಿಂಕನ್ ಅಧ್ಯಕ್ಷರಾದರೆ ಅವರು ಗುಲಾಮಗಿರಿಯನ್ನು ರದ್ದು ಮಾಡುತ್ತಾರೆ ಎಂದು ಅರ್ಥ ಮಾಡಿಕೊಂಡವು. ಈ ಗುಲಾಮಿ ರಾಜ್ಯಗಳಿಗೆ ತಮ್ಮ ಸಂದಿಗ್ಧ ಗೊತ್ತಿತ್ತು ಹಾಗಾಗಿ ಅವು ಸಂಯುಕ್ತ ಸಂಸ್ಥಾನದಿಂದ ಬೇರ್ಪಟ್ಟವು. ಸ್ವಾತಂತ್ರ್ಯದ ದೂತ ಅಬ್ರಹಾಂ ಲಿಂಕನ್ ಗುಲಾಮಗಿರಿಯಂತಹ ಮೂರ್ಖ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಿಲ್ಲ. ಲಿಂಕನ್ ಅಧ್ಯಕ್ಷನಾಗಿ ಪದಗ್ರಹಣ ಮಾಡುವ ಮೊದಲೇ ದಕ್ಷಿಣದ ಈ ರಾಜ್ಯಗಳು ದಂಗೆ ಎದ್ದುವು, ಗುಲಾಮಗಿರಿಯನ್ನು ಮುಂದುವರೆಸಿಕೊಂಡು ಹೋಗಬಹುದಾದ ಒಂದು ಹೊಸ ರಾಷ್ಟ್ರ ಸ್ಥಾಪಿಸಲು ತೀರ್ಮಾನಿಸಿದುವು.

ಸುಮಾರು ಅರ್ಧ ದಶಕ ಎರಡು ಅಮೆರಿಕಗಳಿದ್ದವು. ಈ ಅಮೆರಿಕಗಳು ತಮ್ಮ ಮಧ್ಯೆ ಬಹಳಷ್ಟು ಸಾವು–ನೋವಿನಿಂದ ಕೂಡಿದ ಯುದ್ಧ ನಡೆಸಿದವು. ಈ ಅಮೆರಿಕದ ಅಂತರ್ ಯುದ್ಧದಲ್ಲಿ ಸುಮಾರು ಒಂದು ದಶಲಕ್ಷಕ್ಕಿಂತ ಹೆಚ್ಚು ಅಂದರೆ ಅಮೆರಿಕ ಜನಸಂಖ್ಯೆಯ ಶೇ.3ರಷ್ಟು ಜನ ತಮ್ಮ ಪ್ರಾಣ ಕಳೆದುಕೊಂಡರು ಮತ್ತು ಕೆಲ ದಶಲಕ್ಷ ಜನರು ಗಾಯಾಳುಗಳಾದರು ಮತ್ತು ಸ್ಥಳಾಂತರಕ್ಕೆ ಒಳಪಟ್ಟರು. ಅಮೆರಿಕ ಸಂಯುಕ್ತ ಸಂಸ್ಥಾನ ಇಂತಹ ದುಷ್ಟ ಅಂತರ್‌ಯುದ್ಧಕ್ಕೆ ಏಕೆ ಒಳಗಾಯಿತು?

ಅಣ್ಣಾ ಹಜಾರೆಯವರ ಇತ್ತೀಚಿನ ಮೇಲ್ಜಾತಿಯ ದಂಗೆಯ ಬಗ್ಗೆ ಬೌದ್ಧಿಕ ಒಳನೋಟ ಬೇಕಾದರೆ ನಾವು ಅಮೆರಿಕದ ಅಂತರ್‌ಯುದ್ಧದ ಕಡೆಗೆ ಒಮ್ಮೆ ದೃಷ್ಟಿ ಬೀರುವುದು ಅತ್ಯವಶ್ಯಕ.

ಅಮೆರಿಕ ಸಂಯುಕ್ತ ಸಂಸ್ಥಾನದ ದಕ್ಷಿಣದ ಹನ್ನೊಂದು ರಾಜ್ಯಗಳು ತಮ್ಮ ಬೇರ್ಪಡಿಕೆಗೆ "ಹಕ್ಕುಗಳು ಮತ್ತು ತೆರಿಗೆಗಳು" ಕಾರಣವೆಂದು ಹೇಳಿಕೊಂಡಿವೆ. ಆದರೆ ಇಂದು ದಕ್ಷಿಣದ ರಾಜ್ಯಗಳ ದೂರುಗಳನ್ನು ಇತಿಹಾಸ ಹೇಗೆ ಅರ್ಥಮಾಡಿಕೊಳ್ಳುತ್ತದೆ? ಈ ಹನ್ನೊಂದು ಗುಲಾಮಿ ಪದ್ಧತಿಯನ್ನು ಮುಂದುವರೆಸಲು ಹೋರಾಡಿದ ರಾಜ್ಯಗಳು ಗುಲಾಮಿ ರಾಜ್ಯಗಳು ಎಂದೇ ಹೆಸರಾದವು. ದಕ್ಷಿಣದ ಈ ರಾಜ್ಯಗಳು ಏಕೆ ಬೇರ್ಪಟ್ಟವು ಎಂಬುದು ಇಲ್ಲೆ ಪ್ರಾರಂಭವಾಗಿ ಇಲ್ಲೇ ಕೊನೆಗಾಣುತ್ತದೆ. ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ಮತ್ತೊಂದು ಕಠಿಣ ಸತ್ಯ ಎಂದರೆ ಈ ಗುಲಾಮಿ ರಾಜ್ಯಗಳು ಅಮೆರಿಕದ ಸಂಸತ್ತಿನಲ್ಲಿ ಅಲ್ಪಸಂಖ್ಯಾತರಾಗಿದ್ದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸಂಯುಕ್ತ ಅಮೆರಿಕದಲ್ಲಿ ಅಮೆರಿಕ ಮುಖ್ಯವಾಹಿನಿ ಅಂತಿಮವಾಗಿ ಪ್ರಾಧಾನ್ಯ ಪಡೆಯುತ್ತದೆ ತಮಗೆ ಭವಿಷ್ಯವಿಲ್ಲ ಎಂದು ದಕ್ಷಿಣ ರಾಜ್ಯಗಳು ನಂಬಿದ್ದವು.

ಈಗ ಏಳುವ ಪ್ರಶ್ನೆ ಎಂದರೆ ಈ ಗುಲಾಮಿ ರಾಜ್ಯಗಳು 1861ರಲ್ಲೆ ಏಕೆ ಬೇರ್ಪಟ್ಟವು. ಅದಕ್ಕೆ ಮೊದಲು ಅವು ಏಕೆ ಬೇರ್ಪಡಲಿಲ್ಲ?

1860ರ ಅಧ್ಯಕ್ಷೀಯ ಚುನಾವಣೆಯಲ್ಲಿ ಅಬ್ರಹಾಂ ಲಿಂಕನ್ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕರಿಯರ ಗುಲಾಮಗಿರಿಯನ್ನು ವಿಸ್ತರಿಸುವುದರ ವಿರುದ್ಧ ಮಾತನಾಡಿದರು. ಲಿಂಕನ್ನರ ಸಂದೇಶವನ್ನು ಗುಲಾಮಿ ರಾಜ್ಯಗಳು ಲಿಂಕನ್ ಅಧ್ಯಕ್ಷರಾದರೆ ಅವರು ಗುಲಾಮಗಿರಿಯನ್ನು ರದ್ದು ಮಾಡುತ್ತಾರೆ ಎಂದು ಅರ್ಥ ಮಾಡಿಕೊಂಡವು. ಈ ಗುಲಾಮಿ ರಾಜ್ಯಗಳಿಗೆ ತಮ್ಮ ಸಂದಿಗ್ಧ ಗೊತ್ತಿತ್ತು ಹಾಗಾಗಿ ಅವು ಸಂಯುಕ್ತ ಸಂಸ್ಥಾನದಿಂದ ಬೇರ್ಪಟ್ಟವು.

ಗುಲಾಮಿ ರಾಜ್ಯಗಳು ಎಂದು ಕರೆಯಲ್ಪಡುತ್ತಿದ್ದುದರ ಜೊತೆಗೆ ಅಮೆರಿಕದ ದಕ್ಷಿಣದ ರಾಜ್ಯಗಳನ್ನು ಹತ್ತಿ ರಾಜ್ಯಗಳು ಎಂದೂ ಗುರುತಿಸಲಾಗಿತ್ತು. ಅಮೆರಿಕದ ಈ ಭಾಗ ಹತ್ತಿಯ ಉತ್ಪಾದನೆ ಮಾಡುತ್ತಿದ್ದುದರ ಜೊತೆಗೆ ಗೋಧಿ ಮತ್ತು ಮೆಕ್ಕೆಜೋಳವನ್ನೂ ಸಹ ಉತ್ಪಾದಿಸು

ಅಮೆರಿಕ ಏಕೆ ಇಬ್ಭಾಗವಾಯಿತು?

ತ್ತಿತ್ತು. ಆದುದರಿಂದ ಅಮೆರಿಕದ ಈ ದಕ್ಷಿಣ ಭಾಗ ಕೃಷಿ ಅವಲಂಭಿತ ಕ್ಷೇತ್ರವಾಗಿದ್ದು ಅಲ್ಲಿ ಕೆಲಸ ಮಾಡಲು ಗುಲಾಮರ ಅವಶ್ಯಕತೆಯಿತ್ತು. ಅಥವಾ ಅವರ ಕೃಷಿ ಆಧಾರಿತ ಆರ್ಥಿಕತೆಯನ್ನು ಮುಂದುವರೆಸಲು ಭಾರತದ ಅಸ್ಪೃಶ್ಯರು ಬೇಕಾಗಿತ್ತು.

ಸ್ವಾತಂತ್ರ್ಯದ ದೂತ ಅಬ್ರಹಾಂ ಲಿಂಕನ್ ಗುಲಾಮಗಿರಿಯಂತಹ ಮೂರ್ಖ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಿಲ್ಲ. ಲಿಂಕನ್ ಅಧ್ಯಕ್ಷನಾಗಿ ಪದಗ್ರಹಣ ಮಾಡುವ ಮೊದಲೇ ದಕ್ಷಿಣದ ಈ ರಾಜ್ಯಗಳು ದಂಗೆ ಎದ್ದುವು, ಗುಲಾಮಗಿರಿಯನ್ನು ಮುಂದುವರೆಸಿಕೊಂಡು ಹೋಗಬಹುದಾದ ಒಂದು ಹೊಸ ರಾಷ್ಟ್ರ ಸ್ಥಾಪಿಸಲು ತೀರ್ಮಾನಿಸಿದುವು.

ಈ ಕ್ರೂರ ಅಂತರ್‌ಯುದ್ಧ ತೀವ್ರವಾಗಿರುವಾಗಲೆ ಅಬ್ರಹಾಂ ಲಿಂಕನ್ 1862ರ ಸೆಪ್ಟೆಂಬರ್‌ನಲ್ಲಿ ಐತಿಹಾಸಿಕವಾದ ಗುಲಾಮರ ಬಿಡುಗಡೆಯ ಘೋಷಣೆಯನ್ನು ಮಾಡಿದರು. ಇದು ಭಾಗಶಃ ಬಿಡುಗಡೆಯ ಘೋಷಣೆಯಾಗಿದ್ದು ಸಂಪೂರ್ಣ ಬಿಡುಗಡೆಯ ಘೋಷಣೆ ಜನವರಿ 1863ರಲ್ಲಾಯಿತು. 1865ರಲ್ಲಿ ಅಮೆರಿಕ ಸಂಯುಕ್ತ ಪಡೆಗಳು ಜಯಶಾಲಿಗಳಾದರು. ನಂತರದ ಕೆಲ ಕಾಲದಲ್ಲಿ ಗುಲಾಮಗಿರಿ ಕೊನೆಗೊಂಡಿತು. ಅಮೆರಿಕದ ಪ್ರಜಾಪ್ರಭುತ್ವ ವಿಜೃಂಭಿಸುತ್ತಿದೆ. ಕರಿಯರೊಬ್ಬರನ್ನು ಅಧ್ಯಕ್ಷರಾಗಿ ಚುನಾಯಿಸುವ ಮೂಲಕ ಅಮೆರಿಕ ಸಮಾಜ ಪ್ರಜಾಪ್ರಭುತ್ವ ಎಂತಹ ಸುಂದರವಾದುದ್ದು ಎಂಬುದನ್ನು ದೃಢಪಡಿಸಿದೆ.

ಅಮೆರಿಕದ ಅಂತರ್‌ಯುದ್ಧ, ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನ ಮತ್ತು ಅಮೆರಿಕದ ದಕ್ಷಿಣದ ರಾಜ್ಯಗಳ ಮಧ್ಯೆ ಇರುವ ಸಮಾನ ಅಂಶಗಳ ಕಡೆ ಈಗ ನೋಡೋಣ.

ಗುಲಾಮಿ ರಾಜ್ಯಗಳು ಗುಲಾಮಗಿರಿಯನ್ನು ಉಳಿಸಿಕೊಳ್ಳುವುದು ತಮ್ಮ ಪ್ರತ್ಯೇಕತೆಗೆ ಕಾರಣ ಎಂದು ಹೇಳಿಕೊಳ್ಳಲಿಲ್ಲ. ಆದರೆ ಅದೇ ಮುಖ್ಯ ಕಾರಣವಾಗಿತ್ತು. ಅಣ್ಣಾ ಮತ್ತು ಅವರ ತಂಡ ಭಾರತದ ಸಂವಿಧಾನದಿಂದ ಮತ್ತು ಪ್ರಾತಿನಿಧಿಕ ಪ್ರಜಾಪ್ರಭುತ್ವದಿಂದ ತಾವು ಬೇಸತ್ತಿದ್ದೇವೆ ಎಂದು ಹೇಳಿಕೊಳ್ಳಲಿಲ್ಲ. ಅವರು ಭ್ರಷ್ಟಾಚಾರವನ್ನು ತಮ್ಮ ಆಂದೋಲನಕ್ಕೆ ಕಾರಣವಾಗಿ ತೋರಿಸಿದರು. ಆದರೆ ದೆಹಲಿಯ ಸಂಸತ್ತು ಅವರ ಮುಖ್ಯ ಗುರಿಯಾಗಿತ್ತು.

ಗುಲಾಮಿ ರಾಜ್ಯಗಳಿಗೆ ಅವರ ಇಕ್ಕಟ್ಟಿನ ಬಗ್ಗೆ ಅರಿವಿತ್ತು. ಅಂದರೆ ಅವರು ಅಮೆರಿಕದ ಸಂಸತ್ತಿನಲ್ಲಿ ಅಲ್ಪಸಂಖ್ಯಾತರಿದ್ದರು. ಆದುದರಿಂದ ಅವರು ಪ್ರತ್ಯೇಕಗೊಳ್ಳಬೇಕಾಯಿತು. ಭಾರತದ ಮೇಲ್ಜಾತಿಗಳೂ ಸಹ ತಮ್ಮ ಇಕ್ಕಟ್ಟನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರು ಅಲ್ಪಸಂಖ್ಯಾತರಿದ್ದು ಸಂಸತ್ತಿನ ಮೇಲೆ ಪ್ರಾತಿನಿಧಿಕ ಪ್ರಜಾಪ್ರಭುತ್ವದ ಮೂಲಕ ಇನ್ನು ಮುಂದೆ ಅವರು ಹಿಡಿತ ಸಾಧಿಸಲಾರರು.

ಆದರೆ ನನ್ನ ಸಮಸ್ಯೆ ಅಣ್ಣಾರ ಆಂದೋಲನದ ಬಗ್ಗೆ ಅಲ್ಲ. ಅದು ಹೆಚ್ಚಾಗಿ ಮೇಲ್ಜಾತಿಯ ಜನರ ನಡವಳಿಕೆಯ ಬಗೆಗಿನದು. ಬಿಳಿಯ ಅಮೆರಿಕನ್ನರ ಒಂದು ಭಾಗ ಗುಲಾಮಗಿರಿಯನ್ನು ಉಳಿಸಿಕೊಳ್ಳುವುದಕ್ಕಾಗಿ

ಅಣ್ಣಾ ಹಜಾರೆ

ಗುಲಾಮಗಿರಿಯನ್ನು ನಿರ್ಮೂಲನೆ ಮಾಡಲು ಹೋರಾಡಿತು.

ಲಕ್ಷಾಂತರ ಮೇಲ್ಜಾತಿಯ ಜನ ಉನ್ಮತ್ತರಾಗಿ ಅಣ್ಣಾ ಹಜಾರೆಯವರನ್ನು ಸೇರಿಕೊಂಡಾಗ ಅದೇ ಮೇಲ್ಜಾತಿಯ ಕೆಲ ಸಾವಿರ ಜನರಾದರೂ ಬೀದಿಗೆ ಬಂದು ಅಣ್ಣಾ ಹಜಾರೆಯವರು ಪ್ರಾತಿನಿಧಿಕ ಪ್ರಜಾಪ್ರಭುತ್ವದ ಮೇಲೆ ಹಲ್ಲೆ ಮಾಡುವುದನ್ನು ವಿರೋಧಿಸುತ್ತಾರೆ? ಎಂದು ನಾನು ಅಂದುಕೊಂಡಿದ್ದೆ. ಎಷ್ಟೇ ಆದರೂ ಎಲ್ಲ ಮೇಲ್ಜಾತಿಯ ಜನರೂ ಬೀದಿಗಿಳಿದಿರಲಿಲ್ಲ. ರಾಮ್‌ಲೀಲಾ ಮೈದಾನದಲ್ಲಿ ಗುಂಪು ಸೇರಿದ್ದ ಮೇಲ್ಜಾತಿಯ ಜನರ ನೋವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅವರು ಪ್ರಜಾಪ್ರಭುತ್ವದಿಂದ ಅತಿ ನೊಂದವರು. ಸಂವಿಧಾನ ಮತ್ತು ಪ್ರಾತಿನಿಧಿಕ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಈ ಜನ ಭಾರತದ ಸಂಪತ್ತು, ಸಂಸ್ಥೆಗಳು ಮತ್ತು ಕೆಳವರ್ಗದವರ ಮೇಲೆ ಯಜಮಾನಿಕೆ ಹೊಂದಿದ್ದರು. 1950ರ ನಂತರ ಅವುಗಳೆಲ್ಲವನ್ನೂ ದೊಡ್ಡ ರೀತಿಯಲ್ಲಿ ಅವರು ಕಳೆದುಕೊಂಡರು. ಸಂವಿಧಾನ ಮತ್ತು

> **ತಾವು ಬುದ್ಧಿಬಲದಲ್ಲಿ ಇತರರಿಗಿಂತ ಮೇಲು ಎಂದುಕೊಂಡಿರುವ ಮೇಲ್ಜಾತಿಯ ಜನರ ಒಂದು ಭಾಗ ಅಣ್ಣಾ ಹಜಾರೆಯವರ ಆಂದೋಲನ ಯಾವ ದಿಕ್ಕಿಗೆ ನಡೆದಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮೊದಲಿಗರಾಗಿರಬೇಕು. ಒಂದು ಕ್ಷಣ ಮೇಲ್ಜಾತಿಯವರು ಅಣ್ಣಾ ಅವರ ಯೋಜನೆಯನ್ನು ಅರ್ಥಮಾಡಿಕೊಳ್ಳುವಷ್ಟು ಪ್ರೌಢರಾಗಿದ್ದರು ಎಂದುಕೊಂಡರೆ ಆ ಕಾರಣಕ್ಕಾಗಿ ಅವರು ಆ ಜನಜಂಗುಳಿಯನ್ನು ವಿರೋಧಿಸಲಿಲ್ಲ ಎನ್ನುವುದು ತಿಳಿಯುತ್ತದೆ.**

ಪ್ರಾತಿನಿಧಿಕ ಪ್ರಜಾಪ್ರಭುತ್ವದಿಂದ ನೊಂದ ಅವರು ಅವುಗಳನ್ನು ಪ್ರಶ್ನಿಸುವ ಎಲ್ಲ ಹಕ್ಕುಗಳನ್ನು ಹೊಂದಿದ್ದಾರೆ.

ತಾವು ಬುದ್ಧಿಬಲದಲ್ಲಿ ಇತರರಿಗಿಂತ ಮೇಲು ಎಂದುಕೊಂಡಿರುವ ಮೇಲ್ಜಾತಿಯ ಜನರ ಒಂದು ಭಾಗ ಅಣ್ಣಾ ಹಜಾರೆಯವರ ಆಂದೋಲನ ಯಾವ ದಿಕ್ಕಿಗೆ ನಡೆದಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮೊದಲಿಗರಾಗಿರಬೇಕು. ಒಂದು ಕ್ಷಣ ಮೇಲ್ಜಾತಿಯವರು ಅಣ್ಣಾ ಅವರ ಯೋಜನೆಯನ್ನು ಅರ್ಥಮಾಡಿಕೊಳ್ಳುವಷ್ಟು ಪ್ರೌಢರಾಗಿದ್ದರು ಎಂದುಕೊಂಡರೆ ಆ ಕಾರಣಕ್ಕಾಗಿ ಅವರು ಆ ಜನಜಂಗುಳಿಯನ್ನು ವಿರೋಧಿಸಲಿಲ್ಲ ಎನ್ನುವುದು ತಿಳಿಯುತ್ತದೆ. ಆದರೆ ಸರ್ವೋಚ್ಚ ನ್ಯಾಯಾಲಯದಿಂದ ದೆಹಲಿಯ ವಕೀಲರೂ ಸಹ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ತಮ್ಮ ಬೆಂಬಲವನ್ನು ಸೂಚಿಸಲು ರಾಮ್‌ಲೀಲಾ ಮೈದಾನಕ್ಕೆ ನಡೆದಾಗ ಮೇಲ್ಜಾತಿಯ ಒಂದು ವರ್ಗಕ್ಕೆ ಏನು ನಡೆಯುತ್ತಿದೆ ಎಂಬುದು ಅರ್ಥವಾಗಬೇಕಿತ್ತು.

ದುರದೃಷ್ಟವಶಾತ್ ಮೇಲ್ಜಾತಿಗಳು ಅಬ್ರಹಾಂ ಲಿಂಕನ್ ಅವರಂತಹ ಒಬ್ಬರನ್ನಾಗಲೀ ಮತ್ತು ಉತ್ತರ ಅಮೆರಿಕದಲ್ಲಿ ನೆಲೆಸಿರುವ ಬಿಳಿಯ ಅಮೆರಿಕನ್ನರನ್ನಾಗಲಿ ಸೃಷ್ಟಿಸಲು ಎಂದಿಗೂ ಸಾಧ್ಯವಾಗಲಿಲ್ಲ. ಭಾರತದ ಪ್ರಜಾಪ್ರಭುತ್ವ ತನ್ನ ಜೀವಮಾನದ ಅತಿದೊಡ್ಡ ಸವಾಲನ್ನು ಸ್ವೀಕರಿಸಬೇಕಾದುದು ಇದರ ಫಲಿತಾಂಶ.

* * * * * *

ಜನರ ಗುಂಪೊಂದು ದೊಂಬಿಯಾದಾಗ ಅದರ ಜೊತೆ ಒಳಿತು–ಕೆಡಕುಗಳನ್ನು ಚರ್ಚಿಸುವುದರಲ್ಲಿ ಪ್ರಯೋಜನವಿಲ್ಲ. ಇತ್ತೀಚೆಗೆ ಹೊರದೇಶದ ಒಂದು ದೊಡ್ಡ ಪ್ರಕಾಶನದ ಪ್ರತಿನಿಧಿಯೊಬ್ಬರು ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನದ ಬಗ್ಗೆ ನನ್ನ ಪ್ರತಿಕ್ರಿಯೆ ಕೇಳಿದರು.

ಅವರು ವಿಷಯದ ಬಗ್ಗೆ ಚೆನ್ನಾಗಿಯೇ ತಯಾರಿ ನಡೆಸಿ ಬಂದಿದ್ದರು ಮತ್ತು ನನಗೆ ನೇರ ಪ್ರಶ್ನೆಗಳನ್ನು ಕೇಳಿದರು. ಅಣ್ಣಾ ಅವರ ಆಂದೋಲನ ಮೇಲ್ಜಾತಿಯ ಆಂದೋಲನ ಮತ್ತು ಅದು ಪ್ರಜಾಪ್ರಭುತ್ವ ವಿರೋಧಿ ಎಂದು ಹೇಳುವುದಕ್ಕೆ ನಿಮ್ಮಲ್ಲಿ ಯಾವ ಸಾಕ್ಷಿ ಇದೆ ಎಂದು ಅವರು ಕೇಳಿದರು.

ನಾನು ಆ ವಿದೇಶಿ ಪತ್ರಕರ್ತನಿಗೆ ಬೆಂಗಳೂರು ಮತ್ತು ಮುಂಬೈನ ಕಥೆಗಳನ್ನು ಹೇಳಿದೆ. ಅಣ್ಣಾರಿಂದ ಪ್ರೇರೇಪಿತರಾದ ಮೇಲ್ಜಾತಿಯ ಭ್ರಷ್ಟಾಚಾರ ವಿರೋಧಿ ಆಂದೋಲನಕಾರರು ಆ ಕಾಸ್ಮೊಪೊಲಿಟನ್ ನಗರಗಳಲ್ಲಿ ತಮ್ಮ ಕಲ್ಪನಾ ಲೋಕದಲ್ಲಿ ಹಾರಾಡಿದರು. ಅವರು ಗಾಂಧೀಜಿ, ಪಂಡಿತ್ ನೆಹರು, ಸುಭಾಷ್‌ಚಂದ್ರ ಬೋಸ್ ಇವರುಗಳ ಪೋಷಾಕಿನಲ್ಲಿ ತಮ್ಮ ಮಕ್ಕಳನ್ನು ಚಳವಳಿಯ ಸ್ಥಳಕ್ಕೆ ಕರೆತಂದು ಪ್ರದರ್ಶಿಸಿದರು. ಆದರೆ ಅಂಬೇಡ್ಕರ್ ಮತ್ತು ಮಹಾತ್ಮ ಫುಲೆ ಮಾತ್ರ ಅಲ್ಲಿ ಕಾಣಲಿಲ್ಲ.

ಹೌದು! ಮಕ್ಕಳೇ ತಾವು ಮುಂದೆ ಏನಾಗಬೇಕು ಎಂಬುದನ್ನು ನಿರ್ಧರಿಸಿರಲಿಲ್ಲ. ಮೇಲ್ಜಾತಿಯ ಅವರ

ಇದು ಮೇಲ್ಜಾತಿಗಳ ದಂಗೆಯಲ್ಲ:

ತಂದೆ ತಾಯಿಗಳೇ ಅದನ್ನು ನಿರ್ಧರಿಸಿದ್ದರು. ವಿದೇಶಿ ಪತ್ರಕರ್ತನ ಆಸಕ್ತಿ ಕೆರಳಿತು. ಆದರೆ ಅವನಿಗೆ ನಂಬಿಕೆಯಾಗಲಿಲ್ಲ. ರಾಮ್‌ಲೀಲಾ ಮೈದಾನದ ಆ ಕ್ಷಣಗಳನ್ನು ಜ್ಞಾಪಿಸಿಕೊಳ್ಳುವಂತೆ ನಾನು ಅವನಲ್ಲಿ ಕೇಳಿಕೊಂಡೆ ಇದಕ್ಕೆ ಮೊದಲು ಆ ಪತ್ರಿಕಾ ಪ್ರತಿನಿಧಿ ತಾನು ರಾಮ್‌ಲೀಲಾ ಮೈದಾನವನ್ನು ಅನೇಕ ಬಾರಿ ಸುತ್ತಿದುದಾಗಿ ಹೇಳಿದ್ದ. ನೀನು ಆ ಮೈದಾನದಲ್ಲಿ ಅಣ್ಣಾ ಹಜಾರೆಯವರು ನೆಟ್ಟಿದ್ದ ಚಿಹ್ನೆಗಳನ್ನು ಮತ್ತು ರೂಪಕಗಳನ್ನು ಜ್ಞಾಪಿಸಿಕೊಳ್ಳುತ್ತೀಯಾ? ವಿದೇಶಿ ಪತ್ರಕರ್ತನೊಡನೆ ಅವನ ಒಬ್ಬ ಭಾರತೀಯ ಸಹಪಾಠಿಯೂ ಇದ್ದ. ಅಣ್ಣಾ ತೋರಿಸುತ್ತಿದ್ದ ಆ ಚಿಹ್ನೆಗಳು ಮತ್ತು ರೂಪಕಗಳ ಬಗ್ಗೆ ಮಾತಾಡುವಾಗ ನಾನು ಅವನತ್ತ ನೋಡಿದೆ.

ನಮ್ಮ ಕಥನ ಈ ರೀತಿ ನಡೆಯಿತು. ಮೊದಲ ಕೆಲವು ದಿನಗಳು ಅಣ್ಣಾ ರಾಮ್‌ಲೀಲಾ ಮೈದಾನದ ತನ್ನ ವೇದಿಕೆಗೆ ಹಿನ್ನೆಲೆಯಾಗಿ ಭಾರತಮಾತೆಯ ಒಂದು ದೊಡ್ಡ ಪಟವನ್ನು ಇಟ್ಟಿದ್ದರು. ಈ ಭಾರತಮಾತೆಯ ಪಟದ ಬಗ್ಗೆ ನಿಮ್ಮ ಸಹಪಾಠಿಯನ್ನೇ ಕೇಳಿ ಎಂದು ನಾನು ಕೇಳಿದೆ.

ವಿದೇಶಿ ಪತ್ರಕರ್ತ ನನ್ನನ್ನು ಕ್ರಾಂತಿಕಾರಿಯೆಂದು ತಿಳಿದುಕೊಳ್ಳದೇ ಇರಲಿ ಎಂದು ನಾನು ಅವನ ಭಾರತದ ಸಹಪಾಠಿಯನ್ನು ಜೈ ಭೀಮ್, ಜೈ ಭಾರತ್ ಇವು ಏನನ್ನು ಪ್ರತಿನಿಧಿಸುತ್ತವೆ ಎಂಬುದನ್ನು ವಿವರಿಸು ಎಂದು ಕೇಳಿದೆ.

ಹೆಚ್ಚು ವೇಳೆ ದಲಿತ ಹೋರಾಟಗಾರರು ಒಬ್ಬರಿಗೊಬ್ಬರು ಶುಭ ಹಾರೈಸುವಾಗ ಜೈ ಭೀಮ್, ಜೈ ಭಾರತ್ (ಡಾ.ಭೀಮ್‌ರಾವ್ ಅಂಬೇಡ್ಕರ್ ಅವರಿಗೆ ಜಯವಾಗಲಿ, ಭಾರತಕ್ಕೆ ಜಯವಾಗಲಿ) ಎಂದು ಸಂಭೋದಿಸುತ್ತಾರೆ.

ದಲಿತರು ಬೇರೆಲ್ಲಾ ಸಾಮಾಜಿಕ ವರ್ಗಗಳಿಗಿಂತ ಭಾರತವನ್ನು, ಭಾರತದ ರಾಜ್ಯಗಳನ್ನು ಪ್ರೀತಿಸುತ್ತಾರೆ. ದಲಿತರ ಸಮಸ್ಯೆಯಿರುವುದು ಭಾರತದ ಜಾತಿಪದ್ಧತಿಯ ಬಗ್ಗೆ. ಎಲ್ಲ ಸುದ್ದಿ ಮಾಧ್ಯಮಗಳ ಮೇಲೂ ಮೇಲ್ಜಾತಿಯವರ ಹಿಡಿತವಿರುವುದರಿಂದ ದಲಿತರು ಭಾರತದ ಜಾತಿಪದ್ಧತಿಯನ್ನು ಪ್ರಶ್ನೆ ಮಾಡಿದಾಗ ಅವರು ಕಡಿಮೆ ದೇಶಭಕ್ತರು ಅಥವಾ ರಾಷ್ಟ್ರವಾದಿಗಳು ಎಂದು ಅವರನ್ನು ಪ್ರತಿಬಿಂಬಿಸಲಾಗುತ್ತದೆ. ಜಗತ್ತು ಮುಕ್ತವಾಗಿರುವಾಗ ದೇಶಪ್ರೇಮ ಮತ್ತು ರಾಷ್ಟ್ರೀಯತೆಯ ಈ ಕಲ್ಪನೆಗಳಿಗೆ ಹೊಸ ಅರ್ಥಗಳು ಬೇಕಾಗುತ್ತವೆ.

ಭಾರತಮಾತೆ ಕಲ್ಪನೆ ಒಂದು ಪ್ರತ್ಯೇಕವಾದಿ ಕಲ್ಪನೆ. ಅದು ಒಳಗೊಳ್ಳುವ ಕಲ್ಪನೆಯಲ್ಲ. ಭಾರತ ಮಾತಾ ಕಲ್ಪನೆ ಜಾತಿಪ್ರಜ್ಞೆಯುಳ್ಳ, ಧರ್ಮಪ್ರಜ್ಞೆಯುಳ್ಳ ಒಂದು ಕಲ್ಪನೆ. ಅದು ಮೇಲ್ಜಾತಿಯವರಿಗೆ ಸೇರಿದುದು. ಅದರಲ್ಲೂ ಮುಖ್ಯವಾಗಿ ಮೇಲ್ಜಾತಿಯ ಬಲಪಂಥೀಯರದು. ವಿದೇಶಿ ಪತ್ರಕರ್ತನ ಭಾರತದ ಸಹಪಾಠಿ ಸರಿ ಎಂದು ತಲೆಯಾಡಿಸಿದ. ಭಾರತಮಾತೆಯ ಕಲ್ಪನೆಯ ಬಗ್ಗೆ ಒಂದು ದೊಡ್ಡ ಇತಿಹಾಸವಿದೆ. ಅದೆಲ್ಲವನ್ನೂ ಒಂದು ಸಣ್ಣ ಬರಹದಲ್ಲಿ ವಿವರಿಸಲು ಸಾಧ್ಯವಿಲ್ಲ. ಅದಕ್ಕೆ ಒಂದು ಪುಸ್ತಕವೇ ಬೇಕು. ವಿದೇಶಿ ಪತ್ರಕರ್ತ ನನ್ನ ವಾದದ ಸಮರ್ಪಕತೆಯನ್ನು ಕಂಡ.

ಅಣ್ಣಾ ಭಾರತಮಾತೆಯ ಚಿತ್ರವನ್ನು ತೆಗೆದು ಗಾಂಧಿಯ ಚಿತ್ರವನ್ನು ಹಿನ್ನೆಲೆಯಾಗಿ ಹಾಕಿದುದರ ವಿಷಯ ಬೇರೆ.

ಗಾಂಧೀಜಿಯವರನ್ನು ಜಾತಿ ವಿರೋಧಿ ಆಂದೋಲನದಲ್ಲಿ ಯಾವಾಗಲಾದರೂ ಒಪ್ಪಿಕೊಳ್ಳಲಾಗಿತ್ತೆ? ದಲಿತರು ತಮ್ಮ ಜಾತಿವಿರೋಧಿ ಆಂದೋಲನದಲ್ಲಿ ಗಾಂಧಿಯ ಚಿತ್ರವನ್ನು ಎಂದಾದರೂ ತೋರಿಸುತ್ತಾರೆಯೆ? ಗಾಂಧೀಜಿಗೆ ಉಪವಾಸವಿರುವುದೆಂದರೆ ತುಂಬಾ ಪ್ರೀತಿ. ಜ್ಞಾಪಕವಿದೆಯೆ? ಆದರೆ ಅವರೆಂದೂ ಬ್ರಿಟಿಷರ ಆಳ್ವಿಕೆಯ ವಿರುದ್ಧ ಉಪವಾಸ ಕುಳಿತುಕೊಳ್ಳಲಿಲ್ಲ. ಅವರೆಂದೂ ಜಾತಿಪದ್ಧತಿಯ ವಿರುದ್ಧ ಉಪವಾಸ ಮಾಡಲಿಲ್ಲ. ದಲಿತರಿಗೆ ಗಾಂಧೀಜಿಯ ಬಗ್ಗೆ ಸಮಸ್ಯೆಯಿದೆ. ಇಂದೂ ಸಹ ಗಾಂಧೀಜಿ ಮೇಲ್ಜಾತಿಗಳ, ಹಿಂದೂಗಳ ಪವಿತ್ರ ಮೂರ್ತಿ. ಆದುದರಿಂದ ಅಣ್ಣಾ ರಾಷ್ಟ್ರಕ್ಕೆ ಏನನ್ನು ಹೇಳುತ್ತಿದ್ದಾರೆ?

ಯಾವುದೇ ದಲಿತ ಸಮಾರಂಭದಲ್ಲಿ ಒಂದೇ ಮಾತರಂ ಹಾಡುವುದನ್ನು ಯಾರಾದರೂ ನೋಡಿದ್ದಾರೆಯೆ? ರಾಷ್ಟ್ರಗೀತೆಗಳಲ್ಲಿ ಒಂದಾದರೂ, ಒಂದೇ ಮಾತರಂ ಸಹ ದಲಿತರಿಗೆ ಸಂಬಂಧಿಸಿದ ಮೇಲ್ಜಾತಿಯ ನುಡಿಗಟ್ಟು, ವಿದೇಶಿ ಪತ್ರಕರ್ತನಲ್ಲಿ ಇನ್ನೂ ಪ್ರಶ್ನೆಗಳಿದ್ದುವು. ಅವನಿಗೆ ಈ ಅಣ್ಣಾ ಆಂದೋಲನ ರಾಜಕೀಯ-ಸಂಸತ್ತು-ಸಂವಿಧಾನ ಇವುಗಳ ವಿರುದ್ಧದ ಮೇಲ್ಜಾತಿಯವರ ಕೂಗು ಎಂಬುದು ಇನ್ನೂ ಮನವರಿಕೆ ಯಾಗಿರಲಿಲ್ಲ. ನನ್ನ ವಾದವನ್ನು ಗೆಲ್ಲಲು ನಾನು ಮಾಧ್ಯಮದ (ಮೇಲ್ಜಾತಿಯ ಪ್ರದೇಶ) ಜೊತೆಗಿನ ನನ್ನ ಸ್ವಂತ ಅನುಭವವನ್ನು ಹೇಳಿದೆ. ವಾರ್ತಾವಾಹಿನಿಯ ಹೆಚ್ಚು ನಿರೂಪಕರು ನನ್ನನ್ನು ಇದೇ ಪ್ರಶ್ನೆ ಕೇಳಿದರು. ಅಣ್ಣಾ ಹಜಾರೆಯವರ ಆಂದೋಲನವನ್ನು ನೀವು ಹೇಗೆ ಮೇಲ್ಜಾತಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತೀರಿ?

ನಾನು ಅವರನ್ನು ಹೀಗೆ ಕೇಳುತ್ತಿದ್ದೆ. ನೀವು ಹಗಲು ರಾತ್ರಿ ಅಣ್ಣಾ ಚಳವಳಿಯ ಬಗೆಗಿನ ಬೆಳವಣಿಗೆಗಳನ್ನು ತೋರಿಸುತ್ತಿದ್ದೀರಿ. ನೀವು ಎಳೆಮಕ್ಕಳನ್ನು ಹೊತ್ತ ಹರೆಯದ ತಾಯಿಯರನ್ನು ಅವರು ಭ್ರಷ್ಟಾಚಾರ ದಿಂದ ಹೇಗೆ ನರಳುತ್ತಿದ್ದಾರೆ ಎಂದು ಸಂದರ್ಶಿಸುತ್ತೀರಿ. ಇದೇ ಪ್ರಶ್ನೆಗಳನ್ನು ನೀವು ವಿದ್ಯಾರ್ಥಿಗಳು, ಗೃಹಿಣಿಯರು, ವೃತ್ತಿಪರರು ಮುಂತಾದವರನ್ನು ಕೇಳುತ್ತೀರಿ. ಅವರೆಲ್ಲರೂ ಒಂದೇ ತರದ ಉತ್ತರವನ್ನು ನೀಡುತ್ತಾರೆ – ರಾಜಕಾರಣಿಗಳು ಭ್ರಷ್ಟರು, ಸಂಸತ್ತು ಭ್ರಷ್ಟವಾಗಿದೆ, ಸಂಸತ್ ಸದಸ್ಯರು ಜನಾಭಿಪ್ರಾಯಗಳನ್ನು ಪ್ರತಿನಿಧಿಸುವುದಿಲ್ಲ.

ನೀವು ಯಾಕೆ ಕೇಳುವುದಿಲ್ಲ ಜಾತಿ ಪದ್ಧತಿಯಿಂದ ಅವರೆಷ್ಟು ನರಳುತ್ತಿದ್ದಾರೆ ಎಂಬ ಪ್ರಶ್ನೆಯನ್ನು? ಅವರನ್ನು ಕೇಳಿ ಜಾತಿ ಭ್ರಷ್ಟಾಚಾರಕ್ಕಿಂತ ದೊಡ್ಡ ಸಮಸ್ಯೆಯಲ್ಲವೆ? ಎಂದು. ನೀವು ಯಾವಾಗಲಾದರೂ ಜಾತಿ ವಿರೋಧಿ ಆಂದೋಲನದಲ್ಲಿ ಭಾಗವಹಿಸಿರುವಿರಾ?

ನನ್ನ ಸಂದರ್ಶನ ಬೇಗ ಪ್ರಕಟವಾಗಬಹುದು. ದುಃಖದ ವಿಚಾರವೆಂದರೆ ಭಾರತದ ಮಾಧ್ಯಮ ನಿಷ್ಪಕ್ಷವಾಗಿರುವುದನ್ನು ಇನ್ನೂ ತಿರಸ್ಕರಿಸುತ್ತಿದೆ. ಮತ್ತು ಅದು ಅಣ್ಣಾರ ಇದು ಮೇಲ್ಜಾತಿಗಳ ದಂಗೆಯಲ್ಲ: ಸ್ವಂತ ಮಾಧ್ಯಮದಂತೆ ನಡೆದುಕೊಳ್ಳುತ್ತಿವೆ. □

ಈ ಹೊತ್ತಿನ ಕನ್ನಡ ಸಾಹಿತ್ಯ:

(34ನೇ ಪುಟದಿಂದ)

ಯವರು ಹೇಳಿದ ಮಾತುಗಳು ಗಮನಾರ್ಹವಾಗಿವೆ. "ಶ್ರೀಮಂತರಿಗೆ ಸಾಹಿತ್ಯ ಬೇಕಾಗಿಲ್ಲ.

ಅವರಿಗೆ ಕಾರು, ಬಂಗಲೆಯಂತಹ ವೈಭೋಗದ ವಸ್ತುಗಳು ಮೋಡಿ ಹಾಕಿವೆ. ಅವುಗಳಿಂದ ಅವರು ಬಿಡಿಸಿಕೊಂಡು ಹೊರಬರಲು ಸಾಧ್ಯವಾಗುತ್ತಿಲ್ಲ. ಬಡವರಿಗೆ ಹೊಟ್ಟೆ-ಬಟ್ಟೆಯದೇ ಸಮಸ್ಯೆಯಾಗಿರುವುದರಿಂದ ಅವರೂ ಸಾಹಿತ್ಯದಿಂದ ದೂರವಿದ್ದಾರೆ. ಆದರೆ ಮಧ್ಯಮ ವರ್ಗಕ್ಕೆ ಸುತ್ತಮುತ್ತಲಿನ ವಿದ್ಯಾಮಾನಗಳ ಬಗ್ಗೆ ಆಸಕ್ತಿ ಇರುವುದರಿಂದ ಅವರ ಬದುಕಿನಲ್ಲಿ ಸಾಹಿತ್ಯಕ್ಕೆ ಒಂದು ಸ್ಥಾನವಿದೆ" ಈಗ ಎದುರಾಗುವ ಸವಾಲುಗಳೇನೆಂದರೆ, ಕೆ.ಎಸ್.ಎನ್ ಅವರು ಬಯಸುವ ಸಂವೇದನಾಶೀಲತೆ ಮಧ್ಯಮ ವರ್ಗದಲ್ಲಿ ಉಳದಿದಿಯೇ? ಎಂಬ ಅನುಮಾನ ಬರುತ್ತದೆ. ಮಧ್ಯಮ ವರ್ಗದ ಈ ಬದ್ಧತೆ ಏನಾಗಿದೆ? ಏಕೆಂದರೆ ಮಧ್ಯಮ ವರ್ಗ ದಿನೇ ದಿನೇ ಆತ್ಮಹೀನವಾಗುತ್ತಿದೆ ಅನ್ನುವ ವಾದಗಳು ಬಲವಾಗಿಯೇ ಕೇಳಿಬರುತ್ತಿವೆ.

ಕೋಮುವಾದ ಹಾಗೂ ಬಂಡವಾಳಶಾಹಿ ಇವುಗಳೇ ಇವತ್ತು ಮಧ್ಯಮ ವರ್ಗ ಹಾಗೂ ತಳಸಮುದಾಯಗಳ ಅಸ್ತಿತ್ವವನ್ನು ಛಿದ್ರಗೊಳಿಸುತ್ತಿವೆ. ಇವು ಕರ್ನಾಟಕಕ್ಕೆ ಮಾತ್ರ ಸೀಮಿತವಾದವುಗಳಲ್ಲ. ತಮ್ಮ ಕದಂಭಬಾಹುಗಳನ್ನು ಜಗತ್ತಿನಾದ್ಯಂತ ಚಾಚಿವೆ. ಭೂತ ಚೇಷ್ಟೆಗಳು ಇವುಗಳೊಟ್ಟಿಗೆ ಕೈಜೋಡಿಸಿರುವುದರಿಂದ ಈ ಛದ್ಮರೂಪಗಳು ಜಾಗತೀಕರಣ, ಖಾಸಗೀಕರಣಗಳ ಸ್ವರೂಪದಲ್ಲಿ ಮರುಹುಟ್ಟು ಪಡದಿವೆ. ದಲಿತ, ಹಿಂದೂಳಿದವರಿಗಾಗಿ ಪಬ್ಲಿಕ್ ಸೆಕ್ಟರ್‌ಗಳಲ್ಲಿ ಸಿಗುತ್ತಿದ್ದ ಮೀಸಲಾತಿಯು, ಈ ಬಂಡವಾಳಶಾಹಿ-ಮಾಲಿಕತ್ವದಲ್ಲಿ ವೈದಿಕಶಾಹಿಯ ವಿರಾಟ ಸ್ವರೂಪದಲ್ಲಿ ಮತ್ತೆ ನೆಲೆಯೂರಿದೆ. ಕಳೆದ ದಶಕಗಳಲ್ಲಿ ಭೂಮಿಗಾಗಿ ಹೋರಾಟಗಳು ತೀವ್ರವಾಗಿ ನಡೆದವು. ಪರಿಣಾಮವಾಗಿ ಭೂ ಆಸ್ತಿಯನ್ನು ಪಡೆಯುವಂತಾಯ್ತು.

ಬಂಡವಾಳಶಾಹಿ ಹಾಗೂ ಪ್ರಭುತ್ವಗಳ ಸಂಯುಕ್ತಾಶ್ರಯದಲ್ಲಿ ರೈತರು ಭೂ ಹೀನರಾಗುತ್ತಿದ್ದಾರೆ ಮತ್ತು ಮಧ್ಯಮ ಹಾಗೂ ಕೆಳಮಧ್ಯಮ ವರ್ಗದವರು ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ತಳಸಮುದಾಯ ಹಾಗೂ ನಿರಾಶ್ರಿತರ ಗೋಳು ಹೇಳತಿರದು. ರಸ್ತೆಗಳ ಅಗಲೀಕರಣ, ಎಸ್‌ಇಝೆಡ್‌ನಂತಹ ರಾಕ್ಷಸ ಪ್ರವೃತ್ತಿಯ ನಿಲುವುಗಳು ಹುಟ್ಟಿಸುತ್ತಿರುವ ತಲ್ಲಣಗಳಿಗೆ ಎದುರಾಗುವುದೇ ಇವತ್ತೀನ ಬೌದ್ಧಿಕ ಸಂಕಟವಾಗಿದೆ. "ಧಾರವಾಡದ ಕಾಮನ ಕಟ್ಟೆಯ ಜಗಳಾನೇ ಮುಗಿದಿಲ್ಲ ನನಗೆ ಅಮೇರಿಕಾಕ್ಕೆ ಹೋಗಿ ನಾಯೇನು ಮಾಡಾಂವ ಅದೀನಿ" ಎಂಬ ಬೇಂದ್ರೆಯವರ ಮಾತುಗಳು ನಮ್ಮ ಸೃಜನಶೀಲ ಬಿಕ್ಕಟ್ಟುಗಳಿಗೆ ಕನ್ನಡಿ ಹಿಡದಿವೆ. ನಾವು ನಮ್ಮ ಒಳಜಗಳಗಳನ್ನೇ ಮುಗಿಸದೇ ರಾಷ್ಟ್ರ-ಅಂತರಾಷ್ಟ್ರ ಮಟ್ಟದ ಜಗಳಗಳಿಗೆ ಎದುರಾಗುವುದದರೂ ಹೇಗೆ?

[ಇದು ಮುಂಬೈ ಕರ್ನಾಟಕ ಸಂಘವು ದಿನಾಂಕ 5&6 ಮಾರ್ಚ್ 2011 ರಂದು ಆಯೋಜಿಸಿದ್ದ "ವರ್ತಮಾನದ ಕರ್ನಾಟಕ ಸಮಸ್ಯೆಗಳು ಮತ್ತು ಸಾಧ್ಯತೆಗಳು: ಸಾಹಿತ್ಯದ ನೆಲೆಯಿಂದ" ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂದ] □

ಮುಲ್ಲಾ ನಸ್ರುದ್ದೀನ್ ಎಂಬ ದಡ್ಡ ವಿವೇಕಿ

ನಸ್ರುದ್ದೀನ್ ಯಾರು, ಆತ ಎಲ್ಲಿ ಜೀವಿಸಿದ್ದ ಅಥವಾ ಯಾವಾಗ ಜೀವಿಸಿದ್ದ ಎನ್ನುವುದು ಯಾರಿಗೂ ಸರಿಯಾಗಿ ತಿಳಿದಿಲ್ಲ ಅಥವಾ ಆತನದು ಬರೇ ಒಂದು ಕಾಲ್ಪನಿಕ ಪಾತ್ರವೇ ಎಂಬುದೂ ಸಹ ತಿಳಿದಿಲ್ಲ. ಏನೇ ಆದರೂ ಆತನದು ದೇಶ ಕಾಲಗಳನ್ನು ಮೀರಿದ ವ್ಯಕ್ತಿತ್ವ. ಆದರೂ ಜನ ಆ ವ್ಯಕ್ತಿಗೆ ಚರಿತ್ರೆಯ ಒಂದು ಹಂದರ ಒದಗಿಸಿದ್ದಾರೆ ಹಾಗೂ ಅದೇರೀತಿ ಒಂದು ಸಮಾಧಿಯನ್ನೂ ಸಹ ನೀಡಿದ್ದಾರೆ. ತನ್ನ ಹಲವಾರು ಕತೆಗಳಲ್ಲಿ ನಸ್ರುದ್ದೀನ್ ದಡ್ಡನಂತೆ ಕಂಡು ಬರುತ್ತಾನೆ. ಆದರೆ ನಸ್ರುದ್ದೀನ್ ಒಬ್ಬ ಸೂಫಿ ಅನುಭಾವಿ, ತತ್ವಜ್ಞಾನಿ, ವಿವೇಕಿ ಮತ್ತು ಅತಿಯಾದ ಹಾಸ್ಯಪ್ರಜ್ಞೆಯುಳ್ಳ ವ್ಯಕ್ತಿಯಾಗಿದ್ದ.

ನಿನಗೆ ವಿಶೇಷ ಜ್ಞಾನದರಿವು ಬೇಕಾದಲ್ಲಿ
ಯಾರದಾದರೂ ಮುಖ ನೋಡು:
ಆಳವಾಗಿ ನೋಡು,
ಆ ವ್ಯಕ್ತಿಯ ನಗುವಿನೊಳಗೆ,
ಜ್ಞಾನದ ಅಂತಿಮ ಸತ್ಯವಿದೆ...

–ಜಲಾಲುದ್ದೀನ್ ರೂಮಿ

ಮುಲ್ಲಾ ನಸ್ರುದ್ದೀನ್ ಅಥವಾ ನಸ್ರುದ್ದೀನ್ ಖೋಜಾ ಅಥವಾ ಬರೇ ನಸ್ರುದ್ದೀನ್ ಎನ್ನುವ ಪಾತ್ರ ಜಗತ್ತಿನಾದ್ಯಂತ ಹಲವಾರು ಸಂಸ್ಕೃತಿಗಳಲ್ಲಿ ವಿಶಿಷ್ಟ ಮನರಂಜನೆಯ ಕತೆಗಳಲ್ಲಿ ರಂಜಿಸಿದ್ದಾನೆ. ಆ ಕತೆಗಳ ಉದ್ದೇಶ ಬರೇ ಮನರಂಜನೆಯಷ್ಟೇ

ಡಾ. ಜೆ. ಬಾಲಕೃಷ್ಣ

ಆಗಿಲ್ಲ. ಸೂಫಿ ದಾರ್ಶನಿಕರ ಬೋಧನಾ ಕತೆಗಳಲ್ಲಿಯಂತೆ ಅವುಗಳ ಒಳಾರ್ಥವೇ ಬೇರೆಯಾಗಿರುತ್ತದೆ. ಸೂಫಿಗಳಿಗೆ ಆ ವ್ಯಕ್ತಿ ಮುಖ್ಯವಲ್ಲ ಆದರೆ ಆತನ ಸಂದೇಶ ಮುಖ್ಯವಾದುದು. ನಸ್ರುದ್ದೀನ್ ಯಾರು, ಆತ ಎಲ್ಲಿ ಜೀವಿಸಿದ್ದ ಅಥವಾ ಯಾವಾಗ ಜೀವಿಸಿದ್ದ ಎನ್ನುವುದು ಯಾರಿಗೂ ಸರಿಯಾಗಿ ತಿಳಿದಿಲ್ಲ ಅಥವಾ ಆತನದು ಬರೇ ಒಂದು ಕಾಲ್ಪನಿಕ ಪಾತ್ರವೇ ಎಂಬುದೂ ಸಹ ತಿಳಿದಿಲ್ಲ. ಏನೇ ಆದರೂ ಆತನದು ದೇಶ ಕಾಲಗಳನ್ನು ಮೀರಿದ ವ್ಯಕ್ತಿತ್ವ. ಆದರೂ ಜನ ಆ ವ್ಯಕ್ತಿಗೆ ಚರಿತ್ರೆಯ ಒಂದು ಹಂದರ ಒದಗಿಸಿದ್ದಾರೆ ಹಾಗೂ ಅದೇ ರೀತಿ ಒಂದು ಸಮಾಧಿಯನ್ನೂ ಸಹ ನೀಡಿದ್ದಾರೆ. ತನ್ನ ಹಲವಾರು ಕತೆಗಳಲ್ಲಿ ನಸ್ರುದ್ದೀನ್ ದಡ್ಡನಂತೆ ಕಂಡುಬರುತ್ತಾನೆ. ಆದರೆ ನಸ್ರುದ್ದೀನ್ ಒಬ್ಬ ಸೂಫಿ ಅನುಭಾವಿ, ತತ್ವಜ್ಞಾನಿ, ವಿವೇಕಿ ಮತ್ತು ಅತಿಯಾದ ಹಾಸ್ಯಪ್ರಜ್ಞೆಯುಳ್ಳ ವ್ಯಕ್ತಿಯಾಗಿದ್ದ. ಹಲವಾರು ಸೂಫಿಗಳು ತಮ್ಮ ಅನುಭಾವದ 'ಹುಚ್ಚುತನ'ವನ್ನು ಮುಗ್ಧಾಳತನದ ಸೋಗಿನಲ್ಲಿ ವ್ಯಕ್ತಪಡಿಸುತ್ತಾರೆ. ನಸ್ರುದ್ದೀನನೇ ಹೇಳಿಕೊಂಡಿರುವಂತೆ ಆತನೆಂದೂ ಸತ್ಯವನ್ನು ನುಡಿದೇ ಇಲ್ಲ. ಆತನ ಕತೆಗಳು ಟರ್ಕಿಯ ಗುಡ್ಡಗಾಡು ಜನರಿಂದ ಹಿಡಿದು ಆಗಿನ ಪರ್ಷಿಯಾ, ಅರೇಬಿಯಾ, ಆಫ್ರಿಕಾ, ರಷ್ಯಾ ಹಾಗೂ 'ಸಿಲ್ಕ್ ರೂಟ್'ನ ಮೂಲಕ ಚೀನಾ ಹಾಗೂ ಭಾರತಕ್ಕೆ ಆನಂತರ ಯೂರೋಪಿಗೂ ಹರಡಿವೆ. ಸುಮಾರು ಎಂಟು ನೂರು ವರ್ಷಗಳಿಂದ ಚಾಲ್ತಿಯಲ್ಲಿರುವ ಆತನ ಕತೆಗಳು ಎಲ್ಲವೂ ಆತನವೇ ಅಲ್ಲ. ಅಲ್ಬೇನಿಯಾ, ಅರೇಬಿಕ್, ಅರ್ಮೇನಿಯ, ಬರ್ಬರ್, ಬೋಸ್ನಿಯಾ, ಬಲ್ಗೇರಿಯಾ, ಚೀನಿ, ದಾಗೇಸ್ತಾನಿ, ಗ್ರೀಕ್, ಜುಡಿಯೋ–ಅರೇಬಿಕ್, ಕುರ್ದಿಶ್, ಮಾಲ್ಟೀಸ್, ಮಾಂಡಾಯಿಕ್, ಮ್ಯಾಸಿಡೋನಿಯಾ, ಪರ್ಷಿಯಾ, ಸರ್ಬಿಯಾ, ಸಿಸಿಲಿ, ಸಿರಿಯಾ, ತಜಿಕಿಸ್ತಾನ್, ಟರ್ಕಿ, ಐಗುರ್ ಮತ್ತು ಉಜ್ಬೇಕಿಸ್ತಾನ್ ಸಂಸ್ಕೃತಿ ಮತ್ತು ಜನಪದದಲ್ಲಿ ನಸ್ರುದ್ದೀನ್‌ನ ಕತೆಗಳಿವೆ. ಬಹು ಪಾಲು ಕತೆಗಳು ಎಲ್ಲಾ ಇಸ್ಲಾಮಿಕ್ ಮತ್ತು ಏಷಿಯಾದ ಸಂಸ್ಕೃತಿಯ ಸಮಷ್ಟಿ ಹಾಸ್ಯಪ್ರಜ್ಞೆಯ ಉತ್ಪನ್ನವಾಗಿದೆ. ನಸ್ರುದ್ದೀನ್‌ನನ್ನು ಜಗತ್ತಿನ ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸುತ್ತಾರೆ– ಟರ್ಕಿಯಲ್ಲಿ ನಸ್ರೆದ್ದೀನ್ ಹೋಕಾ, ಕಜಕಿಸ್ತಾನದಲ್ಲಿ ಕೋಜಾ ನಸ್ರೆದ್ದೀನ್, ಅಜರ್‌ಬೈಜಾನ್, ಅಫ್ಘಾನಿಸ್ತಾನ ಮತ್ತು ಇರಾನ್‌ನಲ್ಲಿ ಮೊಲ್ಲಾ ಅಥವಾ ಮುಲ್ಲಾ ನಸ್ರುದ್ದೀನ್, ಗ್ರೀಕ್‌ನಲ್ಲಿ ಖೋಡ್ಜಾ ನಸ್ರೆದ್ದೀನ್, ಮಧ್ಯ ಪ್ರಾಚ್ಯ ಮತ್ತು ಉತ್ತರ ಆಫ್ರಿಕಾದ ಅರಬ್ ಜನಪದದಲ್ಲಿ ಆತನನ್ನು ಜುಹಾ ಎಂದು ಕರೆಯುತ್ತಾರೆ. ಆತನಿಗೆ ಜೋಹಾ, ಸಿ ಜೇಹಾ, ಗುಯ್‌ಫಾ, ಇಹಾ, ಐಗುಲೆ, ಗಹಾನ್, ನಸ್ತ್ರಾದಿನ್, ನಸ್ಸಾದಿ, ಹೋಜಸ್, ಜಿಹಾ, ಮಾಲಾ, ಅಪೆಂಡಿ, ಅಫಂಡಿ, ಎಫೆಂಡಿ, ಅಫಂತಿ ಎಂಬ ಹೆಸರುಗಳೂ ಇವೆ. ಆತ ಹಲವಾರು ಸಂಸ್ಕೃತಿಗಳ ಭಾಗವೇ ಆಗಿದ್ದಾನೆ. 1996ನೇ ವರ್ಷವನ್ನು ಯುನೆಸ್ಕೋ 'ನಸ್ರುದ್ದೀನ್ ಹೋಕಾ ವರ್ಷ' ಎಂದು ಗುರುತಿಸಿತ್ತು.

ನಸ್ರುದ್ದೀನನ ಕತೆಗಳ ಮೊದಲ ಲಿಖಿತ ದಾಖಲೆ 1480ರ 'ಎಬು ಅಲ್–ಖಯರ್–ಇ ರೂಮಿ–ಸಾಲ್ಟುಕ್–ನಾಮೆ'ಯಲ್ಲಿದೆ. ಆ ಪುಸ್ತಕದಲ್ಲಿನ ಉಲ್ಲೇಖಗಳಂತೆ ನಸ್ರುದ್ದೀನ್ ಈಗಿನ ಟರ್ಕಿಯ ವಾಯುವ್ಯ ದಿಕ್ಕಿನಲ್ಲಿರುವ ಅಕ್ಷೆಹಿರ್‌ನ ಸೂಫಿ ಸಂತ ಸಯ್ಯದ್ ಮಹಮ್ಮದ್ ಹಯ್ರಾನಿಯವರ ದರ್ವೇಶಿಯಾಗಿದ್ದ. ಆತನ ಬಗೆಗಿನ ಉಲ್ಲೇಖಗಳು 1531ರ ಟರ್ಕಿ ಭಾಷೆಯ ಲಾಮಿ ಸೆಲೆಬಿಯವರ ಕತೆಗಳ ಪುಸ್ತಕ 'ಲೆತಾ ಇಫ್'ನಲ್ಲಿವೆ. ಲಾಮಿ ಸೆಲೆಬಿಯವರ ಪ್ರಕಾರ ನಸ್ರುದ್ದೀನ್ 14ನೇ ಶತಮಾನದ ಸಯ್ಯದ್ ಹಂಜಾರವರ ಸಮಕಾಲೀನ. 17ನೇ ಶತಮಾನದಲ್ಲಿ ಅಕ್ಷೆಹಿರ್‌ನಲ್ಲಿದೆ ಎನ್ನಲಾಗುವ ನಸ್ರುದ್ದೀನ್‌ನ ಸಮಾಧಿಗೆ ಭೇಟಿ ನೀಡಿದ್ದ ಎವಿಲ್ಯಾ ಸೆಲೆಬೆಯವರ ಪ್ರಕಾರ ನಸ್ರುದ್ದೀನ್ ಮೊಂಗೋಲ್‌ನ ದೊರೆ ತೈಮೂರ್‌ನ ಸಮಕಾಲೀನ (1405). ನಸ್ರುದ್ದೀನ್ ಸಿವ್ರಿಹಿಸರ್ ಪ್ರದೇಶದಲ್ಲಿನ ಹೊರ್ತು ಗ್ರಾಮದಲ್ಲಿ 1208ರಲ್ಲಿ ಜನಿಸಿದ ಹಾಗೂ ತಾನು ಆನಂತರ ನೆಲೆಸಿದ್ದ ಅಕ್ಷೆಹಿರ್‌ನಲ್ಲಿ 1284ರಲ್ಲಿ ಮರಣಿಸಿದ ಎಂದು ಅಕ್ಷೆಹಿರ್‌ನ ಮುಫ್ತಿಯಾಗಿದ್ದ ಹೈಸೆಯಿನ್ ಎಫೆಂದಿ (1880) ತಮ್ಮ ಮೆಕ್‌ಮುವಾ–ಎ–ಮಾರಿಫ್‌ನಲ್ಲಿ ಹೇಳಿದ್ದಾರೆ. ಅದರಲ್ಲಿನ ಉಲ್ಲೇಖದಂತೆ ನಸ್ರುದ್ದೀನ್ ಸಿವ್ರಿಹಿಸರ್ ಮತ್ತು ಕೋನ್ಯಾದ ಶಾಲೆಗಳಲ್ಲಿ 'ನ್ಯಾಯಶಾಸ್ತ್ರ'ದ (ಫಿಖ್) ಶಿಕ್ಷಣ ಪಡೆದ. ಆನಂತರ ಜಲಾಲುದ್ದೀನ್ ರೂಮಿಯನ್ನು (1207–1273) ಭೇಟಿಯಾಗಿ ಆತನಿಂದ ಸೂಫಿಸಂನ 'ದೀಕ್ಷೆ' ಪಡೆದ. ಸಯ್ಯದ್ ಮಹಮದ್ ಹಯ್‌ರಾನಿಯವರನ್ನು ತನ್ನ ಶೇಖ್ ಆಗಿ ಸ್ವೀಕರಿಸಿ ಅವರ ಅನುಯಾಯಿಯಾದ. ಅಕ್ಷೆಹಿರ್‌ನಲ್ಲಿ ನೆಲೆಸಿ ಅಲ್ಲಿ ಮದುವೆಯಾಗಿ ತನ್ನ ದಾಂಪತ್ಯ ಜೀವನ ನಡೆಸಿದ. ಅಲ್ಲಿಯೇ ಇಮಾಮ್ ಆಗಿ ನಂತರ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸಿದ. ಅಲ್ಲಿನ ನ್ಯಾಯಾಲಯದಲ್ಲಿನ ಆತನ ನ್ಯಾಯಪಾಲನೆ ಮತ್ತು ಆತನ ಹಾಸ್ಯಪ್ರಜ್ಞೆಯಿಂದ ಆತ ಅಲ್ಲಿ ಅತ್ಯಂತ ಜನಪ್ರಿಯನಾದ. ಕೊನ್ಯಾದ ಬಳಿ ಇರುವ ಅಕ್ಷೆಹಿರ್ ನಗರದಲ್ಲಿ ಆತನ ಸಮಾಧಿಯಿದೆಯೆಂದು ಗುರುತಿಸಿದ್ದಾರೆ. ಆತನ ಸಮಾಧಿ ಇರುವ ಸ್ಥಳಕ್ಕೆ ಒಂದು ದೊಡ್ಡ ಕಬ್ಬಿಣದ ಬಾಗಿಲುಮಾಡಿ ಅದಕ್ಕೊಂದು ಬೀಗ ಹಾಕಿದ್ದಾರೆ– ಯಾರೂ ಸಮಾಧಿಗೆ ಪ್ರವೇಶಿಸಬಾರದೆಂದು ಆ ಬೀಗವಲ್ಲ, ಏಕೆಂದರೆ ಆ ಸಮಾಧಿಗೆ ಬೀಗ ವಿರುವ ಬಾಗಿಲಿದ್ದರೂ ಗೋಡೆಗಳೇ ಇಲ್ಲ! ಆ ರೀತಿಯ ಬಾಗಿಲು ಇರಿಸಿರಲು ನಸ್ರುದ್ದೀನನ ಒಂದು ಕತೆಯೇ ಕಾರಣ. ನಸ್ರುದ್ದೀನ್ ಎಲ್ಲಿ ಹೋದರೂ ತನ್ನ ಮನೆಯ ಬಾಗಿಲನ್ನು ಕೊಂಡೊಯ್ಯುತ್ತಿದ್ದನಂತೆ. ಊರವರಿಗೆ ಆತನ ನಡತೆಯಿಂದ ಆಶ್ಚರ್ಯವಾಗಿ ಏಕೆಂದು ಕೇಳಿದ್ದಕ್ಕೆ ಆತ, ತಾನಿಲ್ಲದ್ದಿ

ದ್ದಾಗ ಯಾರಾದರೂ ಮನೆಗೆ ಕಳ್ಳರು ನುಗ್ಗಬಹುದೆಂದೂ ಹಾಗೂ ಕಳ್ಳರು ಬಾಗಿಲಿನ ಮೂಲಕ ಪ್ರವೇಶಿಸುವುದರಿಂದ ಮನೆಗೆ ಬಾಗಿಲೇ ಇಲ್ಲದಿದ್ದಲ್ಲಿ ಅವರು ಹೇಗೆ ಮನೆಗೆ ನುಗ್ಗುವರು? ಎಂದು ಕೇಳಿದನಂತೆ. ಹಾಗಾಗಿ ಆತನ ಸಮಾಧಿಗೆ ದೊಡ್ಡ ಬೀಗವಿರುವ ಕಬ್ಬಿಣದ ಬಾಗಿಲು ಇಟ್ಟಿದ್ದಾರೆಯೇ ಹೊರತು ಅದಕ್ಕೆ ಗೋಡೆಗಳಿಲ್ಲ.

ನಸ್ರುದ್ದೀನನ ಕತೆಗಳು ಸೂಫಿ ಬೋಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಷ್ಟಲ್ಲದೆ ಆತನ ಕತೆಗಳು ಎಲ್ಲ ಸಂಸ್ಕೃತಿಗಳಲ್ಲೂ ಹರಡಿ ಹೋಗಿರುವುದರಿಂದ ಅವು ಜೆನ್ ಕತೆಗಳಲ್ಲಿ, ಕ್ರೈಸ್ತ ಕತೆಗಳಲ್ಲಿ ಮತ್ತು ಇತರ ಹಲವಾರು ಧಾರ್ಮಿಕ ಬೋಧನೆಗಳಲ್ಲೂ ಕಂಡುಬರುತ್ತವೆ. ನಸ್ರುದ್ದೀನನ ಹೆಸರು ಬಳಸಿಕೊಂಡು ಸೂಫಿ ಗುರುಗಳು ತಮ್ಮ ಶಿಷ್ಯರಿಗೆ ಬೋಧಿಸಲು ತಾವೇ ಕತೆಗಳನ್ನು ಕಟ್ಟುತ್ತಾರೆ.

ನಸ್ರುದ್ದೀನನ ಕತೆಗಳಲ್ಲಿ ಸೂಫಿ ತತ್ವದ ಅಂತರಾಳವಿದೆ. ಅವುಗಳಲ್ಲಿ ಜ್ಞಾನದ ಬಾಹ್ಯ ಢಂಬಾಚಾರದ, ಮೌಢ್ಯ ಶ್ರದ್ಧೆಯ ಲೇವಡಿಯಿದೆ. ಒಂದು ಕತೆಯಲ್ಲಿ ನಸ್ರುದ್ದೀನ್ ವ್ಯಾಕರಣ ಪಂಡಿತನೊಬ್ಬನನ್ನು ತನ್ನ ದೋಣಿಯಲ್ಲಿ ಕರೆದೊಯ್ಯುತ್ತಿರುತ್ತಾನೆ. ಹಾದಿಯಲ್ಲಿ ಮಾತಿನ ಮಧ್ಯದಲ್ಲಿ ನಸ್ರುದ್ದೀನನ ಯಾವುದೋ ದೋಷ ಪೂರಿತ ವ್ಯಾಕರಣದ ಮಾತನ್ನಾಡುತ್ತಾನೆ. ಆಗ ವ್ಯಾಕರಣ ಪಂಡಿತ, 'ನೀವು ವ್ಯಾಕರಣ ಕಲಿತಿಲ್ಲವೆ?' ಎಂದು ಕೇಳುತ್ತಾನೆ. ನಸ್ರುದ್ದೀನ್ ಇಲ್ಲವೆನ್ನುತ್ತಾನೆ. 'ಹಾಗಾದರೆ ನಿನ್ನ ಅರ್ಧ ಬದುಕು ವ್ಯರ್ಥವಾದಂತೆ' ಎನ್ನುತ್ತಾನೆ ಪಂಡಿತ. ಸ್ವಲ್ಪ ಹೊತ್ತಿನ ನಂತರ ಜೋರಾಗಿ ಬಿರುಗಾಳಿ ಬೀಸಿ ದೋಣಿ ಓಲಾಡತೊಡಗುತ್ತದೆ. ಆಗ ನಸ್ರುದ್ದೀನ್ ಆ ವ್ಯಾಕರಣ ಪಂಡಿತನನ್ನು 'ನೀವು ಈಜು ಕಲಿತಿಲ್ಲವೆ?' ಎಂದು ಕೇಳುತ್ತಾನೆ. ಆ ಪಂಡಿತ 'ಇಲ್ಲ, ಏಕೆ?' ಎನ್ನುತ್ತಾನೆ. ಅದಕ್ಕೆ ನಸ್ರುದ್ದೀನ್, 'ಹಾಗಾದರೆ ನಿಮ್ಮ ಇಡೀ ಜೀವನ ವ್ಯರ್ಥವಾದಂತೆ, ಏಕೆಂದರೆ ಇನ್ನೇನು ಈ ದೋಣಿ ಮುಳುಗುತ್ತದೆ' ಎಂದನಂತೆ.

ಇತರ ಸೂಫಿ ಕತೆಗಳಂತೆ ಮುಲ್ಲಾ ನಸ್ರುದ್ದೀನನ ಕತೆಗಳು ಓದಿ, ನಕ್ಕು ಮರೆತು ಬಿಡುವಂಥವಲ್ಲ. ಓದಿದ ನಂತರವೂ ನಮಗೇ ಅರಿವಾಗದಂತೆ ನಮ್ಮ ಮನಸ್ಸಿಗೆ ಜೋತು ಬೀಳುತ್ತವೆ. ಕೂತು ಆ ಕತೆಗಳನ್ನು ಮೆಲುಕು ಹಾಕುವಾಗ ಅವು ಪ್ರತಿ ಕ್ಷಣ ನಮ್ಮೆದುರಿಗೆ ತೆರೆದಿಡುವ ಹೊಸ ಹೊಸ ಆಯಾಮಗಳು ನಮಗೇ ದಿಗ್ಭ್ರಮೆ ಹುಟ್ಟಿಸುತ್ತವೆ, ನಮಗೇ ತಿಳಿದಿರದ ಹೊಚ್ಚ ಹೊಸ ಲೋಕವೊಂದನ್ನು ಪರಿಚಯಿಸುತ್ತವೆ. ನೀವೇ ಓದಿ ನೋಡಿ!

— ಡಾ. ಜೆ. ಬಾಲಕೃಷ್ಣ

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ಜೆ. ಬಾಲಕೃಷ್ಣ ಕೃಷಿ ಸೂಕ್ಷ್ಮಜೀವಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕನ್ನಡದ ಕೃಷಿ ವಿಜ್ಞಾನ ಸಾಹಿತ್ಯದ ಅಧ್ಯಯನಕ್ಕಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಡಾಕ್ಟೊರೇಟ್ ಪದವಿ ಪಡೆದಿದ್ದಾರೆ. ಜೆ. ಬಾಲಕೃಷ್ಣರವರ ಆಸಕ್ತಿಯ ವಲಯಗಳು ಜೀವವೈವಿಧ್ಯದಷ್ಟೇ ವಿಸ್ತಾರವಾದವು. ವಿಜ್ಞಾನದಿಂದ ಮೊದಲ್ಗೊಂಡು ಸಾಹಿತ್ಯ, ಸೂಫಿ, ಝೆನ್ ತತ್ವದರ್ಶನಗಳವರೆಗೆ ಹೊಕ್ಕಾಡಿದರೂ ಅಂತಿಮವಾಗಿ ಅವರ ಮನಸ್ಸು ನೆಲೆಗೊಳ್ಳುವುದು ಜೀವಕಾರುಣ್ಯದಲ್ಲೇ. ಕಾಲೂರಿದ ಲೌಕಿಕ ಬದುಕಿನ ಬೇರುಗಳಲ್ಲೇ ಅಲೌಕಿಕ ಗುಂಗು ಹೀರಬಲ್ಲರಾದರೂ ಮಣ್ಣಿನ ತಾಯಿಗುಣದಿಂದ ಅವರೆಂದೂ ದೂರವಾಗಿಲ್ಲ. ಚಿಂತನೆಗಳ ಶ್ರೇಷ್ಠತೆಗೆ ಸಹಜವಾಗಿ ತುಡಿದರೂ, ವ್ಯಸನಿಯಲ್ಲ. ಹಾಗಾಗಿಯೇ ಅವರ ಲೇಖನ ಅಭಿವ್ಯಕ್ತಿ ಸರಳತೆಯಲ್ಲೇ ಸೌಂದರ್ಯವನ್ನು ಹಿಡಿವ ಬಾಲ್ಯಸಂಭ್ರಮದ್ದು! ಖಭೌತದ ಅನಂತ ನಿಗೂಢತೆ, ನಿಸರ್ಗದ ನಿಷ್ಠುರಲಯಗಳು, ಮನುಷ್ಯರಾಳದ ಇನ್‌ಸ್ಟಿಂಕ್ಟ್‌ಗಳನ್ನು ಹಾಗೂ ಮನೋವಿಜ್ಞಾನದ ಅಜ್ಞಾತ ಪದರಗಳನ್ನು ಬಿಚ್ಚಿ ತಡವಿ ನೋಡುವ ಅವರ ಅನನ್ಯ ಪ್ರಯೋಗಗಳಿಂದಾಗಿ ಬಾಲು ಬರವಣಿಗೆಗೆ ಸಾಹಿತ್ಯೇತರವಾದ ಕೌತುಕದಾಯಾಮಗಳೂ ದಕ್ಕುತ್ತವೆ.

ಸೂಫಿ ಬೋಧನೆಯಲ್ಲಿ ಪ್ರಮುಖ ಪಾತ್ರವಹಿಸುವ ಮುಲ್ಲಾ ನಸ್ರುದ್ದೀನನ ಕತೆಗಳನ್ನು ಬಾಲಕೃಷ್ಣ ಸಮರ್ಥವಾಗಿ ಕನ್ನಡ ಭಾಷೆಗೆ ತರ್ಜುಮೆಗೊಳಿಸಿದ್ದಾರೆ. ಓದುಗರನ್ನು ಗಾಢ ಚಿಂತನೆಗೆ ಹಚ್ಚುವ ಅವು 'ಸಂವಾದ'ದ ಈ ಸಂಚಿಕೆಯಿಂದ ಪ್ರಕಟಗೊಳ್ಳಲಿವೆ.

ತೈಮೂರನ ಕೊಡುಗೆ-೧

ತೈಮೂರನ ಸೈನ್ಯ ಇಡೀ ಮಧ್ಯ ಏಷಿಯಾವನ್ನು ಕೊಳ್ಳೆ ಹೊಡೆಯುತ್ತಿತ್ತು ಹಾಗೂ ತೈಮೂರ್ ಸ್ವತಃ ತನ್ನ ಸೈನ್ಯದೊಂದಿಗೆ ಮುಲ್ಲಾನ ಹಳ್ಳಿಯೆಡೆಗೆ ಬರುತ್ತಿದ್ದಾನೆಂಬ ವದಂತಿಗಳಿದ್ದವು. ಅದನ್ನು ಕೇಳಿದ ಮುಲ್ಲಾ ನಸ್ರುದ್ದೀನ್ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆ ಮಾಡುವಾಗ ನೆರೆದಿದ್ದವರಿಗೆಲ್ಲಾ, 'ತೈಮೂರ್ ಈ ಗ್ರಾಮಕ್ಕೆ ಕಾಲಿಡುವ ಮುನ್ನವೇ ಸತ್ತುಹೋಗಲೆಂದು ನಾವೆಲ್ಲಾ ಒಟ್ಟಿಗೆ ಪ್ರಾರ್ಥಿಸೋಣ' ಎಂದ. ಎಲ್ಲಾ ಗ್ರಾಮಸ್ಥರು ಒಪ್ಪಿದರು. ಆಗ ಒಬ್ಬ ವ್ಯಕ್ತಿ ಗುಂಪಿನಲ್ಲಿ ಎದ್ದುನಿಂತು, 'ನೀನು ತೈಮೂರ್‌ನನ್ನು ನೋಡಿದ್ದೀಯಾ?' ಎಂದು ಕೇಳಿದ. ಅದಕ್ಕೆ ನಸ್ರುದ್ದೀನ್, 'ಇಲ್ಲಾ ನೋಡಿಲ್ಲ. ಆದರೆ ನೀನು ಯಾರೋ ಹೊಸಬನಿರುವಂತಿದೆ. ನಾನು ನಿನ್ನನ್ನೂ ಈ ಮೊದಲು ನೋಡಿಲ್ಲ' ಎಂದ.

ಅದಕ್ಕೆ ಆ ವ್ಯಕ್ತಿ 'ನಾನೇ ತೈಮೂರ್' ಎಂದ. ನಸ್ರುದ್ದೀನ್ ಹಾಗೂ ಇತರ ಗ್ರಾಮಸ್ಥರು ಆ ಮಾತಿನಿಂದ ಗಾಬರಿಯಾದರು ಹಾಗೂ ಜೀವಭಯದಿಂದ ತತ್ತರಿಸಿದರು. ಆದರೂ ಅದನ್ನು ತೋರಗೊಡದ ನಸ್ರುದ್ದೀನ್ ತನ್ನ ಮಾತು ಮುಂದುವರಿಸಿ ಗ್ರಾಮಸ್ಥರಿಗೆ, 'ನಾವು ನಮ್ಮ ಪ್ರಾರ್ಥನೆ ಮುಂದುವರೆಸೋಣ, ಆದರೆ ಈಗ ನಾವು ನಮ್ಮ ಜನಾಜಾ (ಅಂತ್ಯಸಂಸ್ಕಾರದ ಪ್ರಾರ್ಥನೆ) ಮಾಡೋಣ.'

ಅದನ್ನು ಕೇಳಿದ ತೈಮೂರ್, 'ಅಯ್ಯೋ ದಡ್ಡ, ನೀನು ಬದುಕಿರುವಾಗ ನೀನು ಹೇಗೆ ನಿನ್ನ ಜನಾಜಾ ಮಾಡಲು ಸಾಧ್ಯ? ಜನಾಜಾವನ್ನು ಬದುಕಿರುವವರು ಸತ್ತವರಿಗಾಗಿ ಮಾಡುವುದಲ್ಲವೆ?' ಎಂದು ಕೇಳಿದ.

'ಹೌದು ದೊರೆ, ಆದರೆ ಏನು ಮಾಡುವುದು? ನೀವು ಈಗಾಗಲೇ ನಮ್ಮ ಗ್ರಾಮಕ್ಕೆ ಬಂದುಬಿಟ್ಟಿದ್ದೀರಿ. ಇನ್ನು ಸ್ವಲ್ಪ ಹೊತ್ತಿನಲ್ಲಿ ನಮ್ಮ ಗ್ರಾಮದಲ್ಲಿ ನಮಗೆ ಜನಾಜಾ ಹೇಳಲು ಯಾರೂ ಬದುಕಿರುವುದಿಲ್ಲ. ಹಾಗಾಗಿ ನಮ್ಮ ಜನಾಜಾ ವ್ಯವಸ್ಥೆಯನ್ನು ನಾವೇ ಮಾಡಿಕೊಳ್ಳಬೇಕಲ್ಲವೆ' ಎಂದ ನಸ್ರುದ್ದೀನ್. ಅವನ ಮಾತು ಕೇಳಿದ ತೈಮೂರ್ ಮನಸಾರೆ ನಕ್ಕು ಮುಲ್ಲಾನನ್ನು ಕ್ಷಮಿಸಿ ಆ ಗ್ರಾಮಕ್ಕೆ ತೊಂದರೆ ಕೊಡಲಿಲ್ಲ ಹಾಗೂ ಅವರಿಗೆ ಆನೆಯೊಂದನ್ನು ಕೊಡುಗೆಯಾಗಿ ಕೊಟ್ಟ. □

'SAMVADA' Kannada Monthly, Novrmber 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month